



ಮೈತ್ರೀ



ಬಿ. ಹೆಚ್. ಶ್ರೀಧರ



— ಮಾತೃಶ್ರೀ —

ಮಾತೃಶ್ರೀ

* * *

ಪ್ರಥಮ ಮುದ್ರಣ :
2000 ಪ್ರತಿಗಳು.
21—2—1975
97 ನೇ ಶ್ರೀ ಮಾತಾ ಜನ್ಮ ದಿನ.

* * *

ಬೆಲೆ : 6–00

* * *

ಮುದ್ರಕರು :

ದೀಪಕ್ ಪ್ರಿಂಟರ್ಸ್,
ಅಶೋಕ ರೋಡ್ : : ಶಿವಮೊಗ್ಗ–577201

ಮೂಲ : ಪಶುಪತಿ

ಅನುವಾದ: ಶ್ರೀ ಬಿ. ಹೆಚ್. ಶ್ರೀಧರ

ಅರ್ಪಣೆ : ಶ್ರೀ ನವಜಾತರಿಗೆ



ಸತ್ಯದ ಆವಿರ್ಭಾವಕ್ಕೆ ನಮನ

ಪ್ರಕಾಶಕರ ಮಾತು

ಇಂದು ಶ್ರೀ ಅರವಿಂದ ಸೊಸೈಟಿಯ ಶಿವಮೊಗ್ಗ ಶಾಖೆಯು ಆಶ್ರಮದ ಅಧಿಷ್ಠಾತ್ರಿ ಶ್ರೀ ಮಾತೆಯನ್ನು ಕುರಿತು ಮೂಲ ಪಶುಪತಿಯವರ ಗ್ರಂಥದ ಕನ್ನಡ ಅನುವಾದವನ್ನು ಜನತೆಗೆ ಅರ್ಪಿಸುತ್ತೇವೆ.

ಕನ್ನಡ ನಾಡಿನಲ್ಲಿ ಚಿರಪರಿಚಿತರಾದ ಪ್ರಾಚಾರ್ಯ ಶ್ರೀ ಬಿ. ಹೆಚ್. ಶ್ರೀಧರರು ನಮಗೆ ಈ ಸುಯೋಗ ಒದಗಿಸಿ ಉಪಕಾರ ಮಾಡಿದ್ದಾರೆ.

ಸಮಗ್ರ ಶ್ರೀ ಅರವಿಂದ ವಾಙ್ಮಯವನ್ನು ಆಳವಾಗಿ ಅಭ್ಯಾಸಮಾಡಿ ಶ್ಲೋಕ ಕವನ ಮತ್ತು ಪ್ರಬಂಧಗಳ ಮೂಲಕವೂ ಗಂಭೀರ ವಿಷಯಗಳನ್ನು ಸುಬೋಧ ಶೈಲಿಯಲ್ಲಿ ತಿಳಿಸಿ ಹೇಳುವ ಯೋಗ್ಯ ಭಾಷಣಕಾರನಾಗಿಯೂ ನಾಡಿನಲ್ಲಿ ಪರಿಚಿತರಾಗಿದ್ದಾರೆ. ಅವರು ಹಲಸಂಗಿಯಲ್ಲಿ ಎರಡು ತಾಸುಗಳವರೆಗೆ ವಿಶೇಷ ಶಿಬಿರದಲ್ಲಿ ಸುಪ್ರಮಾನಸ ದರ್ಶನದ ಮೇಲೆ ಮಾಡಿದ ಭಾಷಣಕ್ಕೆ ಅಂದಿನ ಮಂತ್ರಮುಗ್ಧ ಶ್ರೋತೃಗಳೇ ಸಾಕ್ಷಿ. ಈಗ ಅವರು ಸಿದ್ದಾಪುರದಲ್ಲಿ ದಕ್ಷ ಪ್ರಿನ್ಸಿಪಾಲರಾಗಿದ್ದಾರೆ.

ಶ್ರೀಧರರ ಜನ್ಮಸ್ಥಳ ಬಮಾಡಿ(ದ.ಕ.). ಪ್ರೌಢಶಿಕ್ಷಣ ಸೊರಬ-ಸಾಗರದಲ್ಲಿ ಆಗಿ; ಮೈಸೂರಿನಲ್ಲಿ ಬಿ. ಎ.(ಆನರ್ಸ್) ಸಂಸ್ಕೃತ ಮೇಜರಾಗಿ, ಇಡೀ ಸಂಸ್ಥಾನದಲ್ಲಿ ಪ್ರಥಮ ತೇರ್ಗಡೆ. ಸಂಸ್ಕೃತ ಪ್ರತಿಭೆಗೆ ಬಂಗಾರದ ಪದಕ ಪ್ರಾಪ್ತಿ. ೧೯೪೭ರ ಕನ್ನಡ ಪ್ರಭಂದಲ್ಲಿ ಪ್ರಥಮ ಬಹುಮಾನ. ಅದೇ ವರುಷ ಸಂಸ್ಕೃತ ಮೇಜರೊಂದಿಗೆ ಎಂ. ಎ. ಆದರು.

ಅವರ ಪ್ರತಿಭೆಗೆ ಈ ಕೆಳಗಿನ ಗ್ರಂಥಗಳೇ ಸಾಕ್ಷಿ.

ಪದ್ಮಶ್ರೀ ಬೇಂದ್ರೆಯವರ ಸಾಹಿತ್ಯದ ಕುರಿತು ಬರೆದ ಪ್ರಭಂದ ಜನಪ್ರಿಯವಾಗಿದೆ. ರಸಯಜ್ಞ — ದೇವರಾಜ ಬಹದ್ದೂರ ಪ್ರಥಮ ಬಹುಮಾನ. ಕಾವ್ಯಸೂತ್ರ-ಮೈಸೂರು ವಿಶ್ವ ವಿದ್ಯಾಲಯದ ಪ್ರೋ. ಪು.ತಿ.

ಶ್ರೀಕಂಠ ಸ್ಮಾರಕ ಬಹುಮಾನ. ರಾಜ್ಯ ಸಾಹಿತ್ಯ ಅಕಾಡೆಮಿಯ ಪ್ರಥಮ ಮೆಚ್ಚು. ಜ್ಞಾನಸೂತ್ರ-ಲೋಕಶಿಕ್ಷಣ ಸಂಸ್ಥೆಯ ಬಹುಮಾನ. ರಾಜ್ಯ ಸರಕಾರದ ಸಹಾಯಾರ್ಥ ಪ್ರಾಪ್ತಿ. ಇನ್ನೂ ಅನೇಕ ಸಂಸ್ಕೃತ ಕವನ ಪ್ರಭಂದಗಳ ಅಮೂಲ್ಯ ಕಾಣಿಕೆಗಳು.

ಇಂಥವರ ಲೇಖನಿಯಿಂದ ಶ್ರೀ ಸಾಹಿತ್ಯ ವಾಹಿನಿಯು ಹರಿದು ನಾಡಿನ ಜನಜಾಗ್ರತಿಗೆ ನೆರವಾಗಿ ಸರ್ವರಿಗೂ ಮಂಗಳಪ್ರದವಾಗಲೆಂದು ಹಾರೈಸುತ್ತೇವೆ. ಕನ್ನಡ ನಾಡಿಗೆ ಇನ್ನೂ ಹೆಚ್ಚಿನ ಅವಕಾಶ ಒದಗುವಂತಾಗಲೆಂದು ಅಪೇಕ್ಷಿಸಿ ಈ ಹೊತ್ತಿಗೆಯನ್ನು ಒಪ್ಪಿಸುತ್ತೇವೆ.

ಈ ಸದಂರ್ಭದಲ್ಲಿ ಸಹಕರಿಸಿದ ಸರ್ವರನ್ನೂ ಕೃತಜ್ಞತೆಯೊಂದಿಗೆ ಸ್ಮರಿಸುತ್ತೇವೆ.

ಇತಿ ಮಾತೃಸೇವೆಯಲ್ಲಿ ನಿಮ್ಮ,

ಶ್ರೀ ಅರವಿಂದ ಸೊಸೈಟಿ

ದಿನಾಂಕ : ೨೧-೨-೧೯೭೫ ಶಿವಮೊಗ್ಗ ಶಾಖೆ.

ಮುನ್ನುಡಿ

ಮನುಷ್ಯರಿಗೆ ಮೇಲಿದ್ದು ಕಾಣುವಂಥ ಅಂತರ್ಜೀವನವಿಲ್ಲದಾಗ ಯಾರೂ ಆತ್ಮಚರಿತ್ರೆಯನ್ನು ಬರೆಯಲಾರರೆಂದು ಒಮ್ಮೆ ಶ್ರೀ ಅರವಿಂದರು ಹೇಳಿದ್ದುಂಟು. ಮಾತೃಶ್ರೀಯ ವಿಷಯದಲ್ಲಿಂತೂ ಇದು ಇನ್ನಷ್ಟು ಹೆಚ್ಚು ನಿಜ. ಏಕೆಂದರೆ, ಆಕೆ ಆಶ್ರಮದ ಅಧಿಷ್ಠಾತ್ರಿಯಾಗಿ, ಆಶ್ರಮದ ಒಳ ಆಡಳಿತವಲ್ಲಷ್ಟೇ ಅಲ್ಲದೆ, ಇತರ ಹೊರ ಚಟುವಟಿಕೆಗಳಲ್ಲೂ ಮಗ್ನೆಯಾಗಿದ್ದರೂ ಮತ್ತು ತಾನು ಯಾರ ಭೌತಿಕ ಹಾಗೂ ಆಧ್ಯಾತ್ಮಿಕ ಹೊರೆಯನ್ನು ಹೊತ್ತಿದ್ದಳೋ ಆ ಸಾಧಕವಲ್ಲಿ ಪ್ರತಿಯೊಬ್ಬರ ಜೀವನದಲ್ಲಿ ಮುಳುಗಿದ್ದರೂ ತನ್ನ ಭೌತಜೀವನದ ಬಗೆಗಾಗಲಿ, ತನ್ನ (ಬಾಳ) ಮೊದಲ ದಿನಗಳ ಬಗೆಗಾಗಲೀ, ಹೇಳಿದ್ದೇ ಇಲ್ಲವೆನ್ನಬಹುದು. ಈ ದಿಶೆಯ ಎಲ್ಲ ಶೋಧವನ್ನೂ ಆಕೆ ಕಡೆಗಣಿಸ ಹೇಳುತ್ತಿದ್ದಳು. ಈ ಅಸಹಾಯಕತೆಗಂಜದೆ ಶ್ರೀ ಪಶುಪತಿ ಭಟ್ಟಾಚಾರ್ಯರು ಮಹಾಮಾತೆಯ ಬರಹ ಹಾಗೂ ಮಾತುಗಳಿಂದ ಏನೆಲ್ಲವನ್ನೂ ಸಂಗ್ರಹಿಸಬಹುದೋ ಅದೆಲ್ಲವನ್ನೂ ಸಂಗ್ರಹಿಸಿ ಬಂಗಾಳೀಭಾಷೆಯಲ್ಲಿ "ಕೇಯೀಮಾ" ಎಂಬ ಗ್ರಂಥವನ್ನು ರಚಿಸಿದರು. ಆ ಗ್ರಂಥವು ಬಹಳ ಜನಪ್ರಿಯವಾಗಿ ಅನೇಕ ಬಾರಿ ಪುನರ್ಮುದ್ರಣವನ್ನು ಕಂಡಿತು. ಹೆಚ್ಚುತ್ತಿರುವ ಬೇಡಿಕೆಯನ್ನು ಕಂಡು ಗ್ರಂಥಕರ್ತರೇ ಸ್ವತಃ ಅದನ್ನು ಇಂಗ್ಲೀಷಿಗೆ ಭಾಷಾಂತರಿಸಿ "On The Mother Divine" ಎಂಬ ಅಂಕಿತದಲ್ಲಿ ಪ್ರಕಟಿಸಿದರು. ಆ ಆಂಗ್ಲ ಭಾಷಾಂತರಕ್ಕೆ ಆಗಿಂದಾಗ (ಎಲ್ಲ ಕಡೆಯಿಂದಲೂ) ಸ್ವಾಗತ ಸಿಕ್ಕಿತು.

ಈ ಔಚಿತ್ಯವನ್ನು ಮನಗಂಡೇ ನಮ್ಮ ಶಿವಮೊಗ್ಗದ ಮಿತ್ರರು ಉಕ್ತ ಜನಪ್ರಿಯ ಗ್ರಂಥದ ಕನ್ನಡ ಆವೃತ್ತಿಯನ್ನು ಹೊರತಂದಿದ್ದಾರೆ. ಈ ಪ್ರಕಟನೆಯು ಮಾತೃಶ್ರೀಯ 97 ನೆಯ ವರ್ಧಂತಿಯ ಸ್ಮಾರಕವಾಗಿದೆ. ಕನ್ನಡಿಗರಿಗೆ ಹೊಸದಾಗಿ ಪರಿಚಯ ಮಾಡಿಕೊಡುವ ಆಗತ್ಯವಿಲ್ಲದ ವಿದಗ್ಧರಾದ ಪ್ರಾಚಾರ್ಯ ಬಿ. ಎಚ್. ಶ್ರೀಧರರಿಂದ ಗ್ರಂಥದ ಭಾಷಾಂತರ

ವಾಗಿದೆ. ಅವರ ಭಕ್ತಿಯ ಶ್ರಮವು ಮೂಲಗ್ರಂಥಕ್ಕೆ ಹೆಚ್ಚು ನ್ಯಾಯವನ್ನು ತೋರಿದೆ: ಅದು ಮೂಲದಂತೆಯೇ ಇದೆ. ಹಾಗಿರುವುದು ಪ್ರಾಮಾಣಿಕ ಅನುವಾದದ ಮುಖ್ಯ ಲಕ್ಷಣ.

ಕಾಲೋಚಿತವಾದ ಈ (ಅನುವಾದ) ಗ್ರಂಥವನ್ನು ಕನ್ನಡಿಗರಿಮುಂಟ್ಟ ಪ್ರಾಚಾರ್ಯ ಶ್ರೀಧರರನ್ನೂ ಶಿವಮೊಗ್ಗದ ಶ್ರೀ ಅರವಿಂದ ಕೇಂದ್ರದವರನ್ನೂ ನಾನು ಅಭಿನಂದಿಸುತ್ತೇನೆ, ಮತ್ತು ಅವರ (ಈ) ಪ್ರಯತ್ನವು ಸಾಮಾನ್ಯರಿಗೆ ಮತ್ತು ವಿಶೇಷತಃ ಮಾತೃಶ್ರೀಯ ಬಹು ಸಂಖ್ಯಾತ ಭಕ್ತರಿಗೆ ಒಂದು ಸ್ಫೂರ್ತಿಯ ಆಕರವನ್ನು ಒದಗಿಸುವ ಗ್ರಂಥವಾಗುವುದರ ಮೂಲಕ ಸಫಲವಾಗುವುದೆಂದು ನಾನು ದೃಢವಾಗಿ ನಂಬುತ್ತೇನೆ.

8-11-1974

ಶ್ರೀ ಅರವಿಂದಾಶ್ರಮ,
ಪಾಂಡಿಚೇರಿ

ಎಂ. ಪಿ. ಪಂಡಿತ

ಆಕೆ ಯಾರು?

ಅರವಿಂದಾಶ್ರಮದ ತಾಯಿಯ ಬಗೆಗಿನ ಈ ಪುಸ್ತಕ ಸುಮಾರು ಹತ್ತು ವರ್ಷಗಳ ಹಿಂದೆ ಬಂಗಾಳಿಯಲ್ಲಿ ಮೊದಲ ಬಾರಿಗೆ ಪ್ರಕಟವಾದಾಗ ನಾನಿನ್ನೂ ಆಕೆಯನ್ನು ನೋಡಿದ್ದಿಲ್ಲ. ಈ ನಡುವೆ ಈ ಪುಸ್ತಕವು ಮೂರು ಮುದ್ರಣಗಳನ್ನು ಕಂಡಿತು.

ಈ ಪಾಠವನ್ನು ತಯಾರಿಸಲು, ಆಂಗ್ಲ ಮುದ್ರಣ ಅಗತ್ಯವೆಂಬ ಅಂಶ, ಸ್ವಲ್ಪ ಹೆಚ್ಚಿನ ವಿವರಗಳಿಂದ ಕೂಡಿದ ಮುಕ್ತ ಭಾಷಾಂತರ ಬೇಕೆಂಬ ಅಂಶ, ಪ್ರೇರಕಗಳಾದವು. ನನಗೆ ಭಾಷಾಸಾಮರ್ಥ್ಯ ಸಾಕಷ್ಟಿಲ್ಲವಾದರೂ ಕೆಲಮಟ್ಟಿಗೆ ನನ್ನ ಈ ಆಂಗ್ಲಾನುವಾದ ಉಪಯುಕ್ತವಾದೀತೆಂದು ನನ್ನ ಪ್ರತ್ಯಾಶೆ. ಆಕೆಯನ್ನು ಪ್ರತ್ಯಕ್ಷ ನೋಡದೆಯೇ ನಾನು ಹೇಗೆ ಅಂಥ ಮಹಾ ವ್ಯಕ್ತಿಯ ಬಗೆಗೆ ಬರೆಯಬಲ್ಲೆ ? ಪುಸ್ತಕ ಬರೆದು ಕೆಲ ವರ್ಷಗಳು ಕಳೆದ ಮೇಲೆ ನಾನು ಆಕೆಯನ್ನು ಭೇಟಿಯಾಗಿ ಹಲವಾರುಸಲ ಆಕೆಯ ಆಶೀರ್ವಾದಗಳನ್ನು ಪಡೆದೆ. ಆದರೆ ಅದೆಲ್ಲಾ ಸಂಭವಿಸುವ ಮೊದಲು ನಾನು ಪುಸ್ತಕವನ್ನು ಹೇಗೆ ಬರೆಯಲು ಶಕ್ತನಾದೆ? ನಾನು ಅದನ್ನೆಲ್ಲಾ ಪೂರ್ತಿಯಾಗಿ ಏಕೆ, ಎಷ್ಟುಮಟ್ಟಿಗಾದರೂ ವಿವರಿಸಬಲ್ಲೆನೆ? ನನಗರಿಯದು.

ಚಿಕ್ಕಂದಿನಿಂದಲೂ ದೊಡ್ಡ ಅನುಭವಿಕ ರಾಜಕೀಯ ಮುಖಂಡರೆಂದು ನಾನು ಶ್ರೀ ಅರವಿಂದರನ್ನು ಬಲ್ಲೆ. ಅವರು ಆಮೇಲೆ ಪಾಂಡಿಚೇರಿಗೆ ಹೋಗಿ ಯೋಗದಲ್ಲಿ ಮುಳುಗಿದರೆಂಬುದೂ ನನಗೆ ಗೊತ್ತಿತ್ತು. ಅದರಲ್ಲಿ ನನಗೆ ಆಸಕ್ತಿ ಇದ್ದಿರಲಿಲ್ಲ. ಆದರೆ ಅವರ ಕಾರ್ಯದಲ್ಲಿ ಮಾರ್ಗದರ್ಶನ

ನನ್ನೊಪ್ಪ ಮಾಡಲಿಲ್ಲವೆಂದರೂ ಆ ಯೋಗದಲ್ಲಿ ಭಾಗ ವಹಿಸುತ್ತಿದ್ದ ತಾಯಿ ಒಬ್ಬಳಿದ್ದಳೆಂಬುದು ನನಗೆ ಗೊತ್ತೇ ಇರಲಿಲ್ಲ.

ನನಗೆ 50 ತುಂಬಿದ ಮೇಲೆ ನನ್ನ ಜೀವನ ಮಾರ್ಗದಲ್ಲೊಂದು ಆಕಸ್ಮಿಕ ಬದಲಾವಣೆಯುಂಟಾಯಿತು. ನನ್ನ ತಾಯಿಯೂ ಅಜ್ಜನೂ ತೀರಿ ಹೋದರು. ತೊಂದರೆಗಳು ಉದ್ಭವಿಸಿದವು. ಎಲ್ಲವೂ ಎದೆಗುದಿಗೀಡಾದವು. ನಾನು ಹೆದರಿದೆ, ನಿರಾಶನಾದೆ. ಕ್ಷುಬ್ಧನಾದೆ. ನನಗೆ ಮುಕ್ತಿಮಾರ್ಗವಿಲ್ಲ ವೆನಿಸಿತು, ಶಾಂತಿಸಿಗದೆಂದೆನಿಸಿತು, ಪರಿಸ್ಥಿತಿ ಮತ್ತಷ್ಟು ಕೆಡುವುದೆಂದು ತೋರಿತು.

ನನ್ನ ದುಃಖ-ಗಾಬರಿಗಳು ವಿಚಿತ್ರರೀತಿಯಿಂದ ಒಮ್ಮೆ ಕೊನೆಗೊಂಡವು. ಒಂದು ದಿನ ಮಧ್ಯಾಹ್ನ ರಸ್ತೆಯಂಚಿನಲ್ಲಿ ನಾನು ಒಂದು ಕಲ್ಲಿನ ಮೇಲೆ ಕುಳಿತು ಆಕಾಶದತ್ತ ನೋಡುತ್ತಿದ್ದಾಗ ಮೋಡಗಳ ಹಿಂದಿನಿಂದ ಅಪೂರ್ವವಾದ ಸೂರ್ಯಕಿರಣಗಳ ಬೆಳಕೊಂದು ನನ್ನತ್ತ ಸನ್ನೆ ಮಾಡುವಂತೆ ತೋರಿತು. ಕೆಲ ಕಾಲಾನಂತರ ಆ ಬೆಳಕು ಮೇಘಗಳಲ್ಲಿ ಅದೃಶ್ಯವಾಯಿತು. ಈ ವಿಚಿತ್ರ ಘಟನೆಯು ಹೇಗೋ ನನ್ನ ಮನಸ್ಸನ್ನು ತಣಿಸಿತು.

ಘಟನೆಗಳು ಒಂದರ ಮೇಲೊಂದು ನಡೆದು ಹೋದವು. ನಾನು ದೈವಕೃಪೆಯ ಬಗೆಗೆ ಚಿಂತಿಸತೊಡಗಿದೆನು. ಕೆಲದಿನಗಳ ಅನಂತರ ರಾಮಕೃಷ್ಣಾಶ್ರಮದಿಂದ ಒಬ್ಬ ಸಾಧುವು ಯಾವುದೋ ಒಂದು ಕೆಲಸಕ್ಕಾಗಿ ನನ್ನ ಬಳಿಗೆ ಬಂದನು. ಆನುಷಂಗಿಕವಾಗಿ ನಾನವನನ್ನು ಕೇಳಿದೆ, "ನಿನಗೆ ದೇವರ ಬಗೆಗೆ ಏನಾದರೂ ಸ್ವಲ್ಪ ಗೊತ್ತಿದೆಯೇ?" ಎಂದು. ಆತ ಮುಗುಳ್ನಗೆ ನಕ್ಕು ಹೇಳಿದ. "ಅದನ್ನು ಅಷ್ಟು ಸುಲಭವಾಗಿ ಹೇಳಲಸಾಧ್ಯ; ಅದನ್ನು ಯಾವನಾದರೂ ತನ್ನೊಳಗೇ ಅನುಭವಿಸಬೇಕು; ನೀನು ಆಧ್ಯಾತ್ಮ ಪುರುಷರಾದ ರಾಮಕೃಷ್ಣರು ವಿವೇಕಾನಂದರು ಬರೆದುದನ್ನು ಓದು; ಅವರಿಂದ ನಿನಗೆ ಅದರ ಕಲ್ಪನೆ ಕೆಲಮಟ್ಟಿಗೆ ಆಗಬಲ್ಲದು; ನಾನು ನಿನಗೆ ಕೆಲ ಪುಸ್ತಕಗಳನ್ನು ಕೊಡುವೆನು". ಆತ ನನಗೆ ಓದಲೆಂದು ಕೆಲ ಪುಸ್ತಕಗಳನ್ನು ಕೊಟ್ಟ.

ಅವುಗಳನ್ನೆಲ್ಲ ಓದಿದೆ; ಇನ್ನೂ ಎಷ್ಟೋ ಗ್ರಂಥಗಳನ್ನು ಓದಿಮುಗಿಸಿದೆ. ನನಗೆ ಆಸಕ್ತಿಯುಂಟಾಯಿತು; ಆದರೆ ತೃಪ್ತಿ ಸಿಗಲಿಲ್ಲ. ನನ್ನ ಪ್ರಶ್ನೆಗಳಿಗೆ ಉತ್ತರಗಳು ದೊರಕಲಿಲ್ಲ. ರಾಮಕೃಷ್ಣರು ಹೇಳಿದ್ದು ನಿಜವಾಗಿಯೂ ಸರಳವೂ ಪ್ರಶಸ್ತವೂ ಆಗಿತ್ತು. "ತಾನು ದಿವ್ಯಮಾತೆ ಕಾಳಿಯನ್ನು ಕಂಡಿದ್ದೇನೆ. ನೀನೂ ನಿಜಭಕ್ತಿಯಿಂದ ಕರೆದರೆ ಅವಳನ್ನು ನೋಡಬಲ್ಲೆ". ರಾಮಕೃಷ್ಣ ಪರಮಹಂಸರು ನಿಜವಾಗಿಯೂ ಆಕೆಯನ್ನು ಕಂಡಿದ್ದರು; ಆದರೆ ಮಿಕ್ಕವರು ಹಾಗೆ ಕಂಡಿದ್ದೇವೆಂದು ಹೇಳಿದ್ದು ನನಗೆ ಖಾತ್ರಿಯೆನ್ನಿಸಲಿಲ್ಲ.

ಒಂದು ದಿನ ಪುಸ್ತಕದ ಅಂಗಡಿಯಲ್ಲಿ ನಾನೊಂದು ಹೊಸಹೊತ್ತಿಗೆಯನ್ನು ಕಂಡೆ. ಅದರ ಹೆಸರು, "ಅರವಿಂದರ ಓಲೆಗಳು—ಪ್ರಥಮಭಾಗ". ಆ ಓಲಿಗಳನ್ನವರು ತಮ್ಮ ಶಿಷ್ಯರಿಗೆಬರೆದದ್ದು. ಈ ಪುಸ್ತಕ ನನ್ನಲ್ಲಿ ಆಸಕ್ತಿಯನ್ನುಂಟು ಮಾಡಿತು; ನಾನದನ್ನು ಕೊಂಡುಕೊಂಡೆ.

ನನ್ನ ವಿರಾಮ ವೇಳೆಯಲ್ಲಿ ಈ ಪುಸ್ತಕವನ್ನು ಆಗೀಗ ಓದತೊಡಗಿದೆ. ಅದನ್ನು ತೆರೆದು ಎಲ್ಲಿಂದಾದರೂ ಶುರುಮಾಡಿ ನಾನು ಓದಲಾರಂಭಿಸಿದೆ. ಅದರಲ್ಲಿ ಬೆಳಗಿನಿಂದ ನನ್ನ ತಲೆಯನ್ನು ತಿನುತ್ತಿದ್ದ ಪ್ರಶ್ನೆಗೆ ತಕ್ಕ ಉತ್ತರ ಇತ್ತು; ನನ್ನ ಪ್ರಶ್ನೆಯನ್ನು ಉತ್ತರಿಸಲೆಂದು ಬರೆದ ಹಾಗಿತ್ತು ಆ ಕಾಗದ. ಮರುದಿನವೂ ಹಾಗೇ ಓದಿದೆ; ಅದರ ಮಾರನೆಯ ದಿನವೂ ಓದಿದೆ. ಪ್ರತಿ ದಿನವೂ ಅಂಥ ಕಾಕತಾಳೀಯ ಕೂಡಿಬಂತು. ಅದೇ ಪ್ರಕಾರ ಆ ಕಾಗದಗಳಲ್ಲಿ ನನ್ನ ಬೇಗಿನ ಒಂದೊಂದು ಪ್ರಶ್ನೆಗೂ ತಕ್ಕ ಉತ್ತರವನ್ನು ನಾನು ಕಂಡೆ. ಆ ಓಲೆಗಳಲ್ಲಿ ವಿವಿಧ ವಿಷಯಗಳ ವಿವೇಚನೆಗಳಿದ್ದವು. :- ಕೆಲವು ಆಧ್ಯಾತ್ಮಿಕ. ಕೆಲವು ಮಾನಸ ಶಾಸ್ತ್ರೀಯ. ಅವೆಲ್ಲವೂ ಶ್ರೀ ಅರವಿಂದರು ತಮ್ಮ ಶಿಷ್ಯರು ಕೇಳಿದ ಪ್ರಶ್ನೆಗಳಿಗೆ ಉತ್ತರವಾಗಿ ಸರಳರೀತಿಯಿಂದ ಬರೆದವುಗಳಾಗಿದ್ದವು.

ನನಗೀಗ ತೃಪ್ತಿಯಾಯಿತು. ಹಿಂದೆಂದೂ ದೊರಕದಿದ್ದ ಶಾಂತಿಯ ಅನುಭವ ನನಗಾಯಿತು. ಈ ಸಾಲುಗಳು, ವಿಶೇಷವಾಗಿ, ನನಗೆ

ಸಮಾಧಾನವನ್ನು ತಂದವು—"ಪ್ರತಿಯೊಂದೂ ಈ ಬಾಳಿನಲ್ಲಿ ಮನುಷ್ಯನನ್ನು ನಿರಾಶೆಗೊಳಿಸುತ್ತವೆ; ದೇವರೊಬ್ಬನು ಮಾತ್ರ ಹಾಗೆ ಮಾಡುವುದಿಲ್ಲ :- ದೇವರ ಕಡೆಗೆ ಮನುಷ್ಯನು ಸಂಪೂರ್ಣವಾಗಿ ತಿರುಗಿದರೆ". ಇದು ಎಂಥ ಸಮಾಧಾನಕರವಾದ, ತೇಜಃಪುಂಜವಾದ, ಧೀರ ಉದ್ಗಾರ!

ಈ ಓಲೆಗಳನ್ನು ಬಂಗಾಳಿಗೆ ಭಾಷಾಂತರಿಸಬೇಕೆಂಬ ಪ್ರಲೋಭನೆಗೆ ನಾನು ಒಳಗಾದೆ; ಇದಕ್ಕೆ ನನಗೆ ಅನುಜ್ಞೆ ಬೇಕಾಗಿತ್ತು. ಶ್ರೀ ಅರವಿಂದರನ್ನು ಕಾಣುವುದು ಹೇಗೆ? ಅವರ ಆಶ್ರಮದಲ್ಲಿ ನನ್ನ ಹಳೆಯ ಗೆಳೆಯ ನಲಿನೀ ಕಾಂತ ಸರಕಾರ ಉಳಿದುಕೊಂಡದ್ದು ನನಗೆ ನೆನಪಾಯಿತು. ಆದದ್ದೆಲ್ಲವನ್ನೂ ನಾನವನಿಗೆ ಬರೆದೆ; ನನ್ನ ಆಗಿನ ಮನಃಪ್ರಣಾಲಿಯನ್ನು ಅರುಹಿದೆ ಮತ್ತು ಈ ಕಾಗದಗಳನ್ನು ಭಾಷಾಂತರಿಸಲು ಅನುಜ್ಞೆ ಬೇಕೆಂದು ಕೊನೆಯದಾಗಿ ಬೇಡಿದೆ.

ಉತ್ತರ ಸಾವಕಾಶವಾಗಿ ಬಂತು. ನಲಿನಿ ಬರೆದ, "ನಿನ್ನ ಕಾಗದವನ್ನು ಅರವಿಂದರಿಗೆ ಓದಿಹೇಳಲಾಯ್ತು. ಅವರು ಭಾಷಾಂತರಿಸಬಹುದೆಂಬ ಅನುಜ್ಞೆಯೊಡನೆ ನಿನಗೆ ಆಶೀರ್ವಾದಗಳನ್ನು ಕೊಟ್ಟಿದ್ದಾರೆ. ಆದರೆ ಇದರೊಟ್ಟಿಗೆ ಮನಃಪೂರ್ವಕವಾಗಿ ಕೊಟ್ಟ ಮಾತೃಶ್ರೀಆಶೀರ್ವಾದಗಳನ್ನೂ ನಾನು ನಿನಗೆ ಕಳಿಸುತ್ತಿದ್ದೇನೆ. ಇನ್ನೂ ನಿನಗೆ ಮಾತೆಯ ಪರಿಚಯವಾಗಿಲ್ಲ. ಆದರೆ ಆಮೇಲೆ ನಿನಗೆ ಆಕೆಯ ಗುರುತಾಗುವುದು. ಇಲ್ಲಿ ಎಲ್ಲೆಲ್ಲೂ ಆಕೆಯೇ — ಆಕೆಯೇ ಸೂತ್ರಚಾಲಿಕೆ. ವಾಸ್ತವಿಕವಾಗಿ ನೋಡಿದರೆ, ಶ್ರೀ ಅರವಿಂದರೂ ಮಾತೃಶ್ರೀಯೂ ಅವಿಭಾಜ್ಯರು — ಅವರಿಬ್ಬರೂ ಬೆಂಕಿ-ಹೊಗೆಗಳಂತೆ ಅವಿನಾಭಾವಿಗಳಾಗಿದ್ದಾರೆ".

ನಾನೇನೋ ಬಹಳ ಸಂತೋಷಪಟ್ಟೆ. ಅದರೆ ಬಗಟಿನಲ್ಲಿ ಸಿಕ್ಕಿಕೊಂಡಂತಾದೆ. ಮಾತೃಶ್ರೀಯ ಆಶೀರ್ವಾದಗಳನ್ನು ನಾನು ಬೇಡದೆ ಪಡೆದಿದ್ದರೂ ಆಕೆ ಯಾರಾಗಿರಬಹುದೆಂಬ ಕಲ್ಪನೆ ನನಗಿರಲಿಲ್ಲ.

ನಾನು ಕೆಲ ಓಲೆಗಳನ್ನು ಭಾಷಾಂತರಿಸಿ ಪಾಂಡಿಚೇರಿಗೆ ಕಳಿಸಿದೆ. ಅವು ಸಮ್ಮತಿ ಪಡೆದವು ಮತ್ತು ಆಶ್ರಮದ "ಬಾರ್ತಿಕ" ಎಂಬ ನಿಯತ-

ಕಾಲಿಕವೊಂದರಲ್ಲಿ ಮುದ್ರಿತವಾದವು. ಇನ್ನೂ ಭಾಷಾಂತರಿಸೆಂದು ನನಗೆ ಪ್ರೋತ್ಸಾಹ ನೀಡಲಾಯಿತು.

ಆದರೀಗ ನನಗದು ಅಪರ್ಯಾಪ್ತವಾಗಿ ಕಂಡಿತು; ಇನ್ನೂ ಆಳವಾದ ಅಭ್ಯಾಸಕ್ಕಿಳಿಯಬೇಕೆಂದು ನನಗನ್ನಿಸಿತು. ಅಧ್ಯಾತ್ಮ ಮಾರ್ಗದಲ್ಲಿ ಇನ್ನೂ ಹೆಚ್ಚಿನ ಮಾರ್ಗದರ್ಶನ ಬೇಕೆಂದು ನನ್ನಲ್ಲಿ ಲವಲವಿಕೆಯುಂಟಾಗಿದೆಯೆಂದು ನಾನು ನಲಿನಿಗೆ ಬರೆದೆ. ಅರವಿಂದರ ಕಾರ್ಯದರ್ಶಿ ಶ್ರೀ ನಲಿನೀ ಗುಪ್ತರಿಗೆ ಬರೆ ಎಂದು ನನಗವನು ಉತ್ತರ ಕೊಟ್ಟ. ಆ ಪ್ರಕಾರ ನಾನು ಅವರಿಗೆ ಬರೆದೆ. ಉತ್ತರವಾಗಿ ಅವರು ನನಗೆ ಒಂದು ಸ್ವಾರಸ್ಯಕರ ಟಿಪ್ಪಣಿಯನ್ನು ಈ ಸಲಹೆಯೊಂದಿಗೆ ಕಳಿಸಿದರು: "ನಿನ್ನ ಈಗಿನ ಕಾಹಿಲೆಗೆ ಒಂದೇ ಒಂದು ಮದ್ದಿದೆ: ಅದೆಂದರೆ, ನಿಶ್ಚಿತವಾಗಿ ಹಾಗೂ ಕೊನೆಯದಾಗಿ ದೇವರನ್ನು ಪ್ರೀತಿಸತೊಡಗುವುದು. ದೇವರಿಗೊಲಿಯುವುದು ತುಂಬ ಕಷ್ಟ. ಆದರೆ ಶ್ರೀ ಅರವಿಂದರಿಗೆ ನೀನೊಲಿಯಬಹುದು, ಮಾತೃಶ್ರೀಯಲ್ಲಿ ಭಕ್ತಿಯನ್ನು ನೆಲೆ ನಿಲ್ಲಿಸಬಹುದು—ಆಗ ನೀನು ಉದ್ಧಾರವಾಗುವೆ. ಆ ಪ್ರಕಾರ ಉದ್ಧಾರವಾದವರನ್ನು ನಾವು ನೋಡಿದ್ದೇವೆ".

ಅಪೂರ್ವ ಬುದ್ಧಿವಾದ— ಒಲಿಯತೊಡಗುವುದು—ಅದರಲ್ಲೂ ಶ್ರೀ ಅರವಿಂದರಲ್ಲಿ! ಅವರಲ್ಲಿ ನಂಬಿಗೆ ನನಗಿದ್ದುದ್ದರಿಂದ ಅದೊಮ್ಮೆ ಸಾಧ್ಯವಾದೀತೆಂದು ನಂಬಿದರೂ ನನಗೆ, ಏನೂ ಗೊತ್ತಿಲ್ಲದ ಮಾತೃಶ್ರೀಯಲ್ಲಿ ಭಕ್ತಿದೋರುವುದು ಹೇಗೆಂಬುದು ನನಗೆ ತೋರಲಿಲ್ಲ. ಅದೆಂದಾದರೂ ಸಾಧ್ಯವೇ? ಎಂಬ ಪ್ರಶ್ನೆ ನನ್ನನ್ನು ಕಾಡಿಸತೊಡಗಿತು.

ಶ್ರೀ ಅರವಿಂದರಲ್ಲಿ ನನ್ನ ಶ್ರದ್ಧೆಯನ್ನೂ ಅವಲಂಬನೆಯನ್ನೂ ಗಟ್ಟಿ ಮಾಡಿಕೊಂಡೆ. ಅವರ ಪುಸ್ತಕಗಳನ್ನೋದಿದೆ; ಅವರ ಉಪದೇಶಗಳನ್ನು ಅರಿತು ಆಚರಿಸಲು ಪ್ರಯತ್ನಿಸಿದೆ. ಆದರೆ ಒಂದು ವರ್ಷ ಮುಗಿಯುವುದರೊಳಗೇ ಅನಿರೀಕ್ಷಿತವಾಗಿ ಘಟನೆಯೊಂದು ನಡೆಯಿತು. ಶ್ರೀ ಅರವಿಂದರು ಇಲ್ಲವಾದರು, ಅವರು ನಮ್ಮನ್ನೆಲ್ಲ ಬಿಟ್ಟು ಹೋದರು. ನನ್ನ ಬಲಿಷ್ಠ ಆಧಾರ ಅಡಗಿತು, ನನ್ನ ಪ್ರತ್ಯಾಶೆಗಳೆಲ್ಲ ಮಾಯವಾದವು.

ಕೆಲ ತಿಂಗಳುಗಳು ಕಳೆದವು. ನನ್ನ ಅಸಹಾಯಕ ಅವಸ್ಥೆಯ ಬಗೆಗೆ ಆಶ್ರಮದಲ್ಲಿದ್ದ ನನ್ನ ಗೆಳೆಯನಿಗೆ ಪತ್ರ ಬರೆಯದೆ ಉಳಿಯಲಾರದಾದೆ. ಅವನು ಉತ್ತರ ಬರೆದ: "ಅವರು ಹೋದರೆಂದು ಬಹಳ ಚಿಂತಿಸಬೇಡ: ಮಾತೃಶ್ರೀ ಇಲ್ಲಿ ಇದ್ದಾಳೆ. ಆಕೆಯ ಉಪಸ್ಥಿತಿಯೊಂದೇ ಸಮಾಧಾನದ ಸೂತ್ರ. ಆಕೆ ಅಘಟಿತ ಘಟನೆಗಳನ್ನು ನಡೆಸುತ್ತಿದ್ದಾಳೆ. ಇಲ್ಲಿ ಬಾ ಮತ್ತು ಹಾಗೆ ಬಂದು ನೀನೇ ನೋಡಿಕೊಂಡು ಹೋಗು".

ಆದರೆ ಆಗ ನನಗೆ ಅಲ್ಲಿಗೆ ಹೋಗಲು ಸಾಧ್ಯವಾಗಲಿಲ್ಲ. ಆದುದರಿಂದ ಆಶ್ರಮದ ಇನ್ನೊಬ್ಬ ಹಳೆಯ ಶಿಷ್ಯನಾಗಿದ್ದ ಅನಿಲ್‌ಬರನ್ ಅವರಿಗೆ ಬರೆದೆ. ದಯೆಯಿಟ್ಟು ಮಾತೃಶ್ರೀಯ ಪರಿಚಯ ಬರೆದು ಕಳಿಸಿರಿ ಮತ್ತು ಸಾಧ್ಯವಾದರೆ ಆಕೆಯ ಭಾವಚಿತ್ರವೊಂದನ್ನು ಕಳಿಸಿಕೊಡಿರಿ—ಎಂದು. ಅವರು ಭಾವಚಿತ್ರವನ್ನು ಕಳಿಸಿ ಹೀಗೆ ಬರೆದರು "ಶ್ರೀ ಅರವಿಂದರು ನಿನ್ನನ್ನು ಸ್ವೀಕರಿಸಿದ್ದರು. ಅವರು ನಿನ್ನ ಗುರುಗಳು. ಅವರೀಗ ಮಾತೃಶ್ರೀಯಲ್ಲಿದ್ದಾರೆ. ನಮಗೆಲ್ಲರಿಗೂ ಅರವಿಂದರೂ ಮಾತೆಯೂ ಒಂದೇ—ಒಬ್ಬರೇ—ಆಗಿದ್ದಾರೆ. ಆದ್ದರಿಂದ ಈಗ ಮಾತೃಶ್ರೀ ನಿನ್ನ ಗುರು. ಅವಳಿಂದ ನಿನಗೆ ಬೇಕಾದಾಗಲೆಲ್ಲ ಸಾಧ್ಯವಾದ ಎಲ್ಲ ಬಗೆಯ ನೆರವೂ ಸಿಕ್ಕುವುದು".

ನಾನು ಭಾವಚಿತ್ರವನ್ನು ನೋಡಿದೆ. ಅದು ಒಬ್ಬ ಯೂರೋಪೀಯ ಮಹಿಳೆಯ ಚಿತ್ರವಷ್ಟೇ ಆಗಿತ್ತು. ನನ್ನ ಪೂರ್ವಗ್ರಹಾವಿಷ್ಟ ಮನಸ್ಸಿಗೆ ಆಕೆಯನ್ನು ತಾಯಿಯೆಂದು ಸ್ವೀಕರಿಸಲು ಒಲ್ಲೆನೆಂದಿತು. ಮುಚ್ಚುಮರೆಯಿಲ್ಲದೆ ನಾನೀ ಸಂಗತಿಯನ್ನು ಅನಿಲ್‌ಬರನ್ ಅವರಿಗೆ ಬರೆದು ತಿಳಿಸಿದೆ.

ಅವರು ಉತ್ತರ ಬರೆದರು: "ದಿವ್ಯಮಾತೆಯ ಹೊರ ರೂಪವನ್ನು ನೋಡಿ ಅವಳ ದಿವ್ಯತೆಯನ್ನು ಗುರುತಿಸಲು ನಿನಗೀಗ ಸಾಧ್ಯವಿಲ್ಲ. ನೀನೀಗ ನಂಬುವೆನೆಂಬ ಮನಃಸಂಕಲ್ಪವನ್ನು ಮಾಡಬೇಕು. ಶ್ರೀ ಅರವಿಂದರು ಆಕೆಯನ್ನು ದಿವ್ಯಮಾತೆಯೆಂದು ಸಾರಿದ್ದನ್ನು ನಂಬಬೇಕು. ಅವರು ಹೇಳಿದ ಮೇಲೆ ಅದು ಸತ್ಯವಾಗಿರಬೇಕು. ಅವರ ಕಂಠೋಕ್ತವಾದ

ಪೇಕ್ಷೆಯು ಪ್ರಮಾಣವೆನ್ನಿಸಲು ಸಾಕು. ಶ್ರೀ ಅರವಿಂದರ ಕೃಪೆಗೆ ಪಾತ್ರನಾಗಬೇಕೆಂದಿದ್ದರೆ ಮಾತೃಶ್ರೀಗೆ ಶರಣಾಗತನಾಗು—ಅದೊಂದೇ ಮಾರ್ಗ. ಇದನ್ನು ಆಚರಿಸಲು ಕಲಿ: ಎಲ್ಲಾ ಸರಿಯಾಗುತ್ತದೆ”.

ಆಗ ಶ್ರೀ ಅರವಿಂದರಿಂದ ಈ ಮಾತು ನೆನಪಾಯ್ತು—ಮೇಲು ಮೇಲೆ ತೋರುವ ಸಂಗತಿಗಳಿಂದ ಗಡಿಬಿಡಿಯಲ್ಲಿ ಮಾಡಿದ ನಿರ್ಣಯಗಳನ್ನು ನಂಬದಿರುವುದನ್ನು ಪ್ರತಿಯೊಬ್ಬನೂ ಕಲಿಯಬೇಕು—ಇದು ನಿಜ ಜ್ಞಾನದ ಪ್ರಥಮ ನಿಕಷವಲ್ಲವೇ?” ನಾನೆಂಥ ದಡ್ಡತನದ ಅಪರಾಧವನ್ನೆಸಗಿಬಿಟ್ಟೆನೆಂಬುದೀಗ ನನಗೆ ಅರ್ಥವಾಯ್ತು. ನನಗೆ ಪದೇ ಪದೇ ಮಾತೃಶ್ರೀಯ ವಿಷಯವನ್ನು ತಿಳಿಸಲಾಗುತ್ತಿತ್ತು. ಆಕೆ ಕೃಪೆಮಾಡಿ, ಸ್ವತಃ ನಾನು ಬೇಡದಿದ್ದಾಗಲೂ, ತನ್ನ ಆಶೀರ್ವಾದಗಳನ್ನು ಕಳಿಸಿ ಕೊಟ್ಟಿದ್ದಳು. ಇಷ್ಟಾದರೂ ಬಾಹ್ಯರೂಪದಲ್ಲಾಕೆ ಯೂರೋಪೀಯ ಮಹಿಳೆ ಎಂಬಷ್ಟರಿಂದ ನಾನು ಆ ಯಾವುದನ್ನೂ ಗಮನಿಸದೆ ಹೋದೆ! ದಿವ್ಯಮಾತೆಗೆ ಯೂರೋಪೀಯ ಮಹಿಳೆಯ ಅವತಾರವನ್ನು ತಾಳುವುದು ಅಸಾಧ್ಯವೇನು? ಮಾತೃಶ್ರೀಯು ವಿಶ್ವವ್ಯಾಪಿಕೆ, ಆಕೆ ತನಗೆ ಇಷ್ಟವಾದ ಯಾವ ರೂಪವನ್ನೂ ತಾಳಬಲ್ಲಳು.

ನಾನು ನಂಬಲು ದೃಢಸಂಕಲ್ಪ ಮಾಡಿದೆ ಹಾಗೆ ಮಾಡುವುದು ಅಷ್ಟೇನೂ ಸುಲಭವಾಗಲಿಲ್ಲ. ಅದು ನಿಧಾನವಾಗಿ ಬೆಳೆಯಿತು. ಮಾತೃಶ್ರೀಯೇ ಸ್ವತಃ ಹೇಳಿದ ಮತ್ತು ಬರೆದ ಸಂಗತಿಗಳನ್ನು ನಾನು ಶೋಧಿಸಿದೆ. “ಪ್ರಾರ್ಥನೆಗಳು ಮತ್ತು ಪ್ರಣಿಧಾನಗಳು” ಎಂಬ ಆಕೆ ಬರೆದ ಪುಸ್ತಕ ನನಗೆ ಸಿಕ್ಕಿತು. ಅದು ಆಕೆ ತನ್ನ ಜೀವನದ ವಿವಿಧ ಅವಧಿಗಳಲ್ಲಿ ಬರೆದ ಒಂದು ವಿಧದ ಆಂತರಿಕ ದಿನಚರಿಯಾಗಿತ್ತು. ಅದನ್ನೋದುತ್ತಿದ್ದ ಹಾಗೆ ಆಕೆ ತನ್ನ ಚಿಕ್ಕಂದಿನಿಂದಲೂ ನಿಜವಾಗಿ ಎಲ್ಲರ ತಾಯಿಯಾಗಿದ್ದಳು ಎಂದು ನನಗೆನ್ನಿಸಿತು. ಇದಕ್ಕೆ ಆಧಾರವಾಗಿ ನಾನು ಆಕೆ ಭಾರತಕ್ಕೆ ಬರುವುದಕ್ಕೆ ಬಹಳ ಹಿಂದೆಯೇ 17-6-1913 ರಲ್ಲಿ ತನ್ನ ದಿನಚರಿ ಗ್ರಂಥದಲ್ಲಿ ಬರೆದಿಟ್ಟಿದ್ದ ಪಂಕ್ತಿಗಳನ್ನು ಉದ್ಧರಿಸುತ್ತೇನೆ:

"ಓ ದೇವರೇ. ನನ್ನನ್ನು ಬೆಳಕು ಬೀರುವ ಮತ್ತು ಬೆಚ್ಚಗೆ ಮಾಡುವ ಬೆಂಕಿಯಂತೆ, ಬಾಯಾರಿಕೆ ಪರಿಹರಿಸುವ ಬುಗ್ಗೆಯಂತೆ, ನೆರಳೀಯುವ ಮತ್ತು ರಕ್ಷಣೆ ನೀಡುವ ಮರದಂತೆ ರೂಪಿಸು. .... ಜನರೆಲ್ಲಾ ಅಷ್ಟು ಸುಖಿಗಳು, ಅಷ್ಟು ಅಜ್ಞಾನಿಗಳು — ಅವರಿಗೆ ಅಷ್ಟು ನೆರವು ಬೇಕು".

ಇಂಥ ಕಾರುಣ್ಯದ ಮಾತುಗಳನ್ನು ವಿಶ್ವವ್ಯಾಪಕವಾದ ಮಾತೃ ಹೃದಯವೊಂದೇ ಆಡಬಲ್ಲದು. ತನಗಾಗಿಯೇ ಅವಳು ದೇವರಿಂದ ಏನನ್ನೂ ಬೇಡಳು; ಜಗತ್ತಿನಲ್ಲಿರುವ ಮೂಢ ಮನುಷ್ಯರಿಗೆ ರಕ್ಷಣೆ ನೀಡುವ ಶಕ್ತಿಯನ್ನು ಕೊಡೆಂದು ದೇವರನ್ನು ಬೇಡುತ್ತಾಳೆ.

ಆಕೆಯ ಬಗೆಗೆ ಶ್ರೀ ಅರವಿಂದರು ಬರೆದುದೆಲ್ಲವನ್ನೂ ಓದಿದೆ. ಇಲ್ಲಿ ಅಂಥ ಒಂದು ವಾಕ್ಯವನ್ನು ಉದ್ಧರಿಸಿ ಬರೆಯುತ್ತೇನೆ:

"ಮಾತೃಶ್ರೀ ದೇಹಧಾರಣೆ ಮಾಡಿರುವುದು ಭೌತಿಕ ಸ್ವರೂಪದ (ಭೌತಿಕ ಪ್ರಪಂಚದಲ್ಲೊಂದು) ಬದಲಾವಣೆಯನ್ನು ಆಕೆ ಮಾಡಬೇಕಾಗಿರುವುದರಿಂದ".

ನನಗೆ ಕಟ್ಟ ಕಡೆಗೆ ಸಮಾಧಾನವಾಯಿತು. ಸಂಶಯ-ಪ್ರಶ್ನೆಗಳೆಲ್ಲವೂ ಕ್ರಮೇಣ ಅದೃಶ್ಯವಾದವು. ನನ್ನ ಮತ್ತು ಇತರರ ಮಾತೇಕೆ — ಶ್ರೀ ಅರವಿಂದರೇ ಸ್ವತಃ ಆಕೆ ದಿವ್ಯಮಾತೆಯೆಂದು ಪದೇ ಪದೇ ಸಮರ್ಥಿಸಿದ್ದರು.

ವಾಸ್ತವಿಕವಾಗಿ ಕಂಡರೆ, ಪ್ರತಿಯೊಂದು ಸಂಗತಿಯೂ ಆಕೆ ದಿವ್ಯ ಮಾತೆಯೆಂಬುದನ್ನು ದೃಢಪಡಿಸುತ್ತದೆ. ಕಷ್ಟದಲ್ಲಿದ್ದ ಜನರು ನೆರವಿಗಾಗಿ ಆಕೆಯನ್ನು ಪ್ರಾರ್ಥಿಸಿದಾಗ ಅವಳ ನೆರವು ಯಾವಾಗಲೂ ಅಲ್ಲಿ ಇದ್ದೇ ಇರುತ್ತದೆ. ಶ್ರೀ ನಳಿನೀಕಾಂತಗುಪ್ತರು ಸರಿಯಾಗಿ ಹೇಳಿದಹಾಗೆ. "ಆಕೆ ನಿಜವಾಗಿಯೂ ತಾಯಿ -ಆದರೆ ಎಂಥ ತಾಯಿ ?- ದೇವಲೋಕದ ತಾಯಿ! ಬಹಳ ದೂರದಲ್ಲಿ ತಾನೇತಾನಾಗಿ ತನ್ನಷ್ಟಕ್ಕೆ ಅತೀಂದ್ರಿಯ ಬ್ರಹ್ಮನಂತೆ ಉದಾಸೀನತೆಯಿಂದ ತಣ್ಣಗಿದ್ದಾಳೆ- ಎಂಬ ಅರ್ಥದಲ್ಲಾಕೆ ದಿವ್ಯೆಯಲ್ಲ.

ಜಗನ್ಮಾತೆಯು ಮಾನವ ಮಾತೆಯರೆಲ್ಲರಿಗೂ ಮೀರಿದ ಮಾತೃತ್ವ ಉಳ್ಳವಳು" ಯಾವ ಮಾನವನೂ ಮುಕ್ತನಲ್ಲದ ಕಷ್ಟ ಕಾರ್ಪಣ್ಯಗಳಲ್ಲಿ ನಾನು ಸಿಲುಕಿದಾಗ ಈ ಮಾತನ್ನು ಸ್ವತಃ ಪರೀಕ್ಷಿಸಿ ಅದರ ಸತ್ಯವನ್ನು ಅರಿತೆ. ಇತರರೂ ಹೀಗೇ ಅರಿತಿರಬೇಕು.

ಆದರೆ ಮಾತೃಶ್ರೀಯು ಕೇವಲ ಸಹಾಯಿಕೆ, ರಕ್ಷಿಕೆ ಮಾತ್ರವಲ್ಲ; ನನಗೆ ಅರವಿಂದರು ಹೇಳಿದ್ದರ ಅರ್ಥವಾಗತೊಡಗಿತು.

"ಮಾತೃಶ್ರೀ ಸ್ವತಃ ಮುಕ್ತಿಧಾಮ; ಎಲ್ಲವೂ ಆಕೆಯಲ್ಲಿದೆ. ಅವಳನ್ನು ಸಾಕ್ಷಾತ್ಕರಿಸಿಕೊಂಡಾಗ ನಿಮಗೆ ಎಲ್ಲದರ ಸಾಕ್ಷಾತ್ಕಾರವೂ ಆಗುವುದು".

****

ದಿವ್ಯ ಮಾತೆ ಎಂದರೇನು ?

ಸುದೈವದಿಂದ ಶ್ರೀ ಅರವಿಂದರು ನಮಗಾಗಿ ಈ ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೆ. "ದಿವ್ಯ ಮಾತೆಯೆಂದರೆ ದೇವರ ಚೈತನ್ಯ ಮತ್ತು ಶಕ್ತಿ. ಅಥವಾ ಆಕೆ ದೇವರ ಚಿಚ್ಛಕ್ತಿ (ಚೈತನ್ಯಶಕ್ತಿ, ಪ್ರಜ್ಞಾಬಲ)". ಶ್ರೀ ಅರವಿಂದರನ್ನು ಪುನಃ ಪುನಃ ಮೂರು ಪ್ರಶ್ನೆಗಳನ್ನು ಕೇಳಲಾಗುತ್ತಿತ್ತು.

"ನಿಮ್ಮ 'ಮಹಾತಾಯಿ' ಎಂಬ ಪುಸ್ತಕದಲ್ಲಿ ನಮ್ಮ ಮಾತೃಶ್ರೀಯನ್ನು ಸೂಚಿಸಿಲ್ಲವೇ?" ಉತ್ತರ: "ಹೌದು".

ಮತ್ತೆ ಅವರನ್ನು ಕೇಳಲಾಯ್ತು :

"ಅವಳೇ ಇರುವಿಕೆಯ ಉಭಯ ಮಾರ್ಗಗಳ ಶಕ್ತಿಯ ವೈಯಕ್ತಿಕ ಆವಿರ್ಭಾವ- ಅತೀಂದ್ರಿಯ ಮತ್ತು ವಿಶ್ವಜನೀನ ಅಲ್ಲವೇ? ಪುನರುತ್ತರ: "ಹೌದು".

ಕೊನೆಯದಾಗಿ, ಅವರನ್ನು ಕೇಳಲಾಗಿತ್ತು:

"ನಮ್ಮ ಮೇಲಿನ ಆಳವೂ ಹಿರಿಯದೂ ಆದ ಪ್ರೇಮ ದಿಂದ ಅವಳೇ (ನಮ್ಮ ನಡುವೆ) ಈ ಅಂಧಕಾರ, ಭ್ರಮೆ ಮತ್ತು ಮೃತ್ಯುಗಳ ಪ್ರಪಂಚದೊಳಗೆ ಅವತರಿಸಿ ಬಂದವಳಲ್ಲವೇ?"

ಅದೇ ಉತ್ತರ: "ಹೌದು".

ಆದರೆ ದಿವ್ಯ ಮಾತೆಯು ಮಾತೆತ್ತಿದಾಗ ಅವಳಿಂದ ಭಿನ್ನವಾದ ದಿವ್ಯಪಿತನೂ ಇದ್ದಾನೆ ಎಂದು ಸೂಚಿತವಾಗುವುದಿಲ್ಲವೇ? ಅಂಥ ಅನಿವಾರ್ಯತೆಯೇನೂ ಇಲ್ಲ. ಆಧ್ಯಾತ್ಮಿಕ ಅನುಭವದಲ್ಲಿ ಮತ್ತು ಅಭಿವ್ಯಕ್ತಿಯಲ್ಲಿ ಅವನು ಮತ್ತು ಅವಳು, ಸರ್ವೋಚ್ಚ ಅಸ್ತಿತ್ವ ಮತ್ತು ಸರ್ವಾಧಿಕ ಚಿಚ್ಛಕ್ತಿ, ಪುರುಷ ಮತ್ತು ಪ್ರಕೃತಿ, ಈಶ್ವರ ಮತ್ತು ಈಶ್ವರಿ, ಶಿವ ಮತ್ತು ಪಾರ್ವತಿ. ನಾರಾಯಣ ಮತ್ತು ಲಕ್ಷ್ಮಿ ಎಂಬ ಈ ದಂಪತಿಗಳು ಏಕಮೇವಾದ್ವಿತೀಯ ಬ್ರಹ್ಮದ ನಿಷ್ಕ್ರಿಯ ಮತ್ತು ಉತ್ಕ್ರಿಯ ಎಂಬ ಉಭಯ ಲಕ್ಷಣಗಳು- ನಿಷ್ಕ್ರಿಯವು ಅಕ್ರಿಯಾಶೀಲ, ಉತ್ಕ್ರಿಯವು ಕ್ರಿಯಾಶೀಲ- ಅವೇ ದೇವರು ಮತ್ತು ಅವನ ಶಕ್ತಿ. ಶ್ರೀ ಅರವಿಂದರ ಪ್ರಕಾರ ಕೇವಲಿಯಾದ (ನಿರಪೇಕ್ಷನಾದ) ಪರಮಾತ್ಮನ (ಪರಬ್ರಹ್ಮದ) ಮಾತೃಲಕ್ಷಣವು ಅವನ ಇತರ ಲಕ್ಷಣಗಳ ಬೆಂಬಲವನ್ನಾಧರಿಸಿ ಈ ಎಲ್ಲ ಸೃಷ್ಟಿಯಲ್ಲಿಯೂ ಸಕ್ರಿಯವಾಗಿ ಅಭಿವ್ಯಕ್ತವಾಗಿದೆ. ಆದುದರಿಂದ ಆತ್ಯಂತಿಕ ಪರತತ್ವವನ್ನು ಪಡೆಯಲು ನೀವು ಮಾತೃಶ್ರೀಯ ಮೂಲಕವೇ ಹೋಗಬೇಕು. ಈ ಸಕ್ರಿಯ ಶಕ್ತಿದೇವತೆಯ ಕೃಪೆಯಿಂದಲೇ ನೀವು ನಿಮ್ಮ ಆತ್ಯಂತಿಕ ಪರಮಾರ್ಥವನ್ನು ತಲುಪಬಲ್ಲಿರಿ.

ಈ ಶಕ್ತಿಮಾತೆಗೆ ಅವಳದೇ ಆದ ಯಾವ ಆಕಾರವೂ ಇಲ್ಲ. ಆದರೂ ಆಕೆ ತನ್ನ ಅಭಿವ್ಯಕ್ತಿಗಾಗಿ ಅನೇಕ ವಿವಿಧ ರೂಪಗಳನ್ನು ಧರಿಸಬಲ್ಲಳು. ಶ್ರೀ ಅರವಿಂದರ ಪ್ರಕಾರ. ತನ್ನ ಉದ್ದೇಶ ಸಾಧನೆಗಾಗಿ ಅವಳು ನಾಲ್ಕು ವಿವಿಧ ಮುಖ್ಯ ಅವತಾರಗಳನ್ನು ತಾಳಿದ್ದಾಳೆ — ಅವು ಅನುಕ್ರಮವಾಗಿ, ಮಹೇಶ್ವರಿ, ಮಹಾಲಕ್ಷ್ಮಿ, ಮಹಾಕಾಲಿ ಮತ್ತು ಮಹಾಸರಸ್ವತಿ — ಎಂದು. ಈ ನಾಲ್ಕು ರೂಪಗಳಿಗೆ ಅವವುಗಳಿಗೇ ಪ್ರತ್ಯೇಕವಾದ ವ್ಯಕ್ತಿತ್ವಗಳೂ ವಿಶಿಷ್ಟ ಕರ್ತವ್ಯಗಳೂ ಇವೆ. "ಮಹಾತಾಯಿ" ಎಂಬ ಅವರ ಪುಟ್ಟ ಪ್ರಶಸ್ತ ಗ್ರಂಥದಲ್ಲಿ ಅವುಗಳ ಕರ್ತವ್ಯಗಳನ್ನು ವಿವರವಾಗಿ ವಿವೇಚಿಸಿದ್ದಾರೆ.

ಮಹೇಶ್ವರಿಯು ವಿವೇಕದ ಸಾಕಾರ ದೇವತೆ. ಅವಳು ನಾಲ್ಕರಲ್ಲಿ ಅತಿ ಹೆಚ್ಚಿನ ದೇವತೆ. ಅವಳು ನಾಲ್ಕು ದೇವತೆಗಳಲ್ಲೂ ಅತ್ಯುದಾತ್ತೆ

"ಅವಳು ಬಲಿಷ್ಠೆ ಮತ್ತು ವಿವೇಕ ಸಂಪನ್ನೆ. ಅವಳು ನಮಗೆ ಅತಿಮಾನಸ (ಸುಪ್ರಮಾಣಸ) ಅಪ್ರಮೇಯತೆಗಳನ್ನೂ ವಿಶ್ವವಿಸ್ತಾರವನ್ನೂ ತೆರೆದಿಡುವವಳು. ....ಅವಳಿಗೆ ತಿಳಿಯಬೇಕೆನ್ನಿಸಿದ್ದೆಲ್ಲಾ ತಿಳಿಯುತ್ತದೆ; ಯಾವುದೂ ಅವಳ ಅರಿವಿನ ಹೊರಗಲ್ಲ; ಎಲ್ಲ ವಸ್ತುಗಳನ್ನೂ ಇರವುಗಳನ್ನೂ ಅವುಗಳ ಸ್ವಭಾವಗಳನ್ನೂ, ಯಾವುದು ಅವುಗಳನ್ನು ಪ್ರೇರಿಸುವುದೆಂಬುದನ್ನೂ ಜಗದ್ಧರ್ಮವನ್ನೂ ಅದರ ಕಾಲಾವಧಿಗಳನ್ನೂ ಎಲ್ಲವೂ ಹೇಗಿದ್ದುವು—ಇವೆ ಇರಬೇಕು ಎಂಬುದನ್ನೂ ಅವಳು ಅರಿತಿರುವಳು. ಅವಳ ಹತ್ತಿರ ಒಂದು ಶಕ್ತಿಯಿದೆ. ಅದು ಪ್ರತಿಯೊಂದನ್ನೂ ಎದುರಿಸುತ್ತದೆ ಮತ್ತು ತನ್ನ ವಶಪಡಿಸಿಕೊಳ್ಳುತ್ತದೆ. ಅವಳ ವಿಸ್ತಾರವಾದ ಗೂಢ ವಿವೇಕ ಮತ್ತು ಶಾಂತ ಶಕ್ತಿಗಳನ್ನು ಕೊನೆಯದಾಗಿ ಯಾರೂ ಒತ್ತಾಯಕ್ಕೊಳಪಡಿಸಲಾರರು.... ಅವಳು ಸರ್ವೋನ್ನತೆ, ಯಾವುದರಿಂದಲೂ ಬದ್ಧಳಲ್ಲ, ಜಗತ್ತಿನ ಯಾವುದಕ್ಕೂ ಅಂಟಿಕೊಂಡವಳಲ್ಲ. ಆದರೂ ಅವಳಿಗೆ ಎಲ್ಲರಿಗಿಂತಲೂ ಹೆಚ್ಚಿನ ವಿಶ್ವ ಮಾತೃತ್ವದ ಹೃದಯವಿದೆ. ಏಕೆಂದರೆ, ಅವಳ ಕಾರುಣ್ಯಕ್ಕೆ ಗಡಿಮಿತಿಯಿಲ್ಲ ಮತ್ತು ಅದು ಅಕ್ಷಯ್ಯ: ಅವಳ ದೃಷ್ಟಿಯಲ್ಲಿ ಎಲ್ಲರೂ ಮಕ್ಕಳು ಮತ್ತು ಆ ಏಕಮೇವಾದ್ವಿತೀಯ ಬ್ರಹ್ಮದ ಅಂಶಗಳು........ ಆದರೆ ಅವಳ ದಯೆಯು ಅವಳ ವಿವೇಕದ ಕಣ್ಣನ್ನು ಕುರುಡು ಮಾಡದು ಅಥವಾ ಅಜ್ಞಪ್ತ ಮಾರ್ಗದಿಂದ ಅವಳ ಕಾರ್ಯವನ್ನು ಅಡ್ಡ ತಿರುಗಿಸದು."

ಮಹಾಕಾಲಿಯ ಸ್ವಭಾವವೇ ಬೇರೆ. ಅವಳ ಸ್ವಭಾವ ಅವಳದ್ದೇ. ಅವಳು ಪರಮಾವಧಿಕ ಶಕ್ತಿ ಹಾಗೂ ಕಾರ್ಯೋತ್ಸಾಹಗಳ ಮೂರ್ತಿ. "ಅವಳಲ್ಲಿ ಸರ್ವಾತಿರಿಕ್ತ ಪ್ರಣೋದವಿದೆ, ಕೆಲಸ ಸಾಧಿಸುವ ಬಲಿಷ್ಠ ಸಾಮರ್ಥ್ಯೋದ್ರೇಕವಿದೆ, ಪ್ರತಿಯೊಂದು ಗಡಿಯನ್ನೂ ಅಡ್ಡಿಯನ್ನೂ ಪುಡಿ ಪುಡಿ ಮಾಡುವ ಒಂದು ದಿವ್ಯ ಆಕ್ರಾಮಕತೆ ಅಥವಾ ಸರ್ವಭೇದಕ ಶಕ್ತಿ ಇದೆ—ಅವಳು ಯುದ್ಧದಿಂದ ಎಂದೂ ಹಿಂದಕ್ಕೆ ಓಡಿಬಾರದ ಜಾಗತಿಕ ಯೋಧೆ....ಅವಳೂ ದಿವ್ಯಮಾತೆಯೇ, ಮಹಾಮಾತೆಯೇ ಮತ್ತು ಅವಳ ಪ್ರೇಮವು ಅವಳ ಕ್ರೋಧದಷ್ಟೇ ನಿಬಿಡವಾದದ್ದು. ಅವಳಲ್ಲಿ ಆಳವೂ ಆವೇಶ ನಿರ್ಭರವೂ ಆದ ದಯೆಯಿದೆ.... ಅವಳಿಲ್ಲದೆ ಹೋಗಿದ್ದರೆ ಒಂದು

ದಿನವಲ್ಲಾಪ ಕೆಲಸಕ್ಕೆ ಶತಮಾನಗಳು ಬೇಕಾಗುತ್ತಿದ್ದವು. ....ದೇವರ ಜಯಶೀಲ ಶಕ್ತಿಯು ಅವಳ ಹತ್ತಿರ ಇದೆ: ಮತ್ತು ಅವಳ ತೇಜಸ್ಸಿನ ಆವೇಶದ ಮತ್ತು ವೇಗದ ದಯೆಯಿಂದಲೇ ಮುಂದಿಗಿಂತ ಇಂದೇ ಮಹತ್ಕಾರ್ಯ ಸಾಧನೆ ಸಾಧ್ಯವಾಗಬಲ್ಲದು.

ಮಹಾತಾಯಿಯ ದಿವ್ಯವಿವೇಕವನ್ನು ಮಹೇಶ್ವರಿಯೂ ದಿವ್ಯಶಕ್ತಿ, ಯನ್ನು ಮಹಾಕಾಲಿಯೂ ಪ್ರತಿನಿಧಿಸುತ್ತಾರೆ. ಆದರೆ ಮಹಾಲಕ್ಷ್ಮಿಯು ಅವಳ ಸೌಂದರ್ಯವನ್ನು ಸಾಮರಸ್ಯತ್ಯವನ್ನೂ ಪ್ರತಿನಿಧಿಸುತ್ತಾಳೆ. ಮಾತೃಶ್ರೀಯ ಈ ಲಕ್ಷಣವು ಮಾನವ ಜೀವಿಗಳಿಗೆ ಬಹು ಆಕರ್ಷಕವಾಗಿದೆ. "ಮಹೇಶ್ವರಿಯು ಬಹುಶಾಂತೆ, ಬಹೂನ್ನತೆ ಮತ್ತು ಬಹುದೂರಸ್ಥೆಯಾಗಿ ತೋರಿಯಾಳು; ಮಹಾಕಾಲಿಯು ಬಹುವೇಗವತಿಯೂ ಬಲಿಷ್ಠೆಯೂ ಆಗಿ ಕಾಣಿಸಿಯಾಳು ಆದರೆ ಎಲ್ಲರೂ ಹರ್ಷದಿಂದ ಮತ್ತು ಆಸಕ್ತಿಯಿಂದ ಮಹಾಲಕ್ಷ್ಮಿಯ ಕಡೆಗೆ ನೋಡುತ್ತಾರೆ.... ಅವಳ ಸಮೀಪದಲ್ಲಿರುವುದು ಮಹಾಸುಖಕರ ಮತ್ತು ಹೃದಯದಲ್ಲಿ ಅನುಭವಿಸುವುದು ಎಂದರೆ ಇರವನ್ನೆ ಒಂದು ಆನಂದವನ್ನಾಗಿಯೂ ಅಪ್ಸುತವನ್ನಾಗಿಯೂ ಮಾರ್ಪಡಿಸುವುದು: ಸೂರ್ಯನಿಂದ ಬೆಳಕು ಹರಿಯುವಂತೆ ಅವಳಿಂದಪ್ರಸಾದ, ಮೋಹಕತೆ ಮತ್ತು ಮಾರ್ದವಗಳು; ಹರಿದುಬರುತ್ತವೆ....ಆದರೆ ಕುರೂಪ.ಕೃಪಣ, ಕೀಳು, ದರಿದ್ರ, ಅನಾಗರಿಕ, ಕೊಳಕು, ಪಾಶವ ಮತ್ತು ಒರಟು ಎನ್ನಿಸಿದವುಗಳು ಅವಳ ಬರವನ್ನು ಪ್ರತಿ ಭಟಿಸುತ್ತವೆ. ಪ್ರೇಮ–ಸೌಂದರ್ಯಗಳಿಲ್ಲದಲ್ಲಿ ಅಥವಾ ಹುಟ್ಟಲು ಇಷ್ಟವಿಲ್ಲದವು ಗಳಾಗಿರುವಲ್ಲಿ ಅವಳು ಬಾರಳು.... ಅವಳಿಗೆ ತಾಪಸ ಆಕಿಂಚನತೆಯೂ ನಿರ್ದಯತೆಯೂ ಪ್ರಿಯವೆನ್ನಿಸವು– ಹಾಗೇ ಹೃದಯದಲ್ಲಿಯ ಗಂಭೀರ ಭಾವನೆಗಳನ್ನು ದಮಿಸುವುದೂ ಅವಳಿಗೆ ಸೇರದು.... ಏಕೆಂದರೆ ಪ್ರೇಮ ಮತ್ತು ಸೌಂದರ್ಯಗಳ ಮೂಲಕ ಅವಳು ಮಾನವರ ಮೇಲೆ ದೇವರ ನೊಗವನ್ನು ಇಡುವಳು".

ನಾಲ್ಕು ಜನ ದೇವಿಯರಲ್ಲಿ ಮಹಾಸರಸ್ವತಿಯು ಚಿಕ್ಕವಳು. ಅವಳು ಕ್ರಮಬದ್ಧತೆ ಮತ್ತು ಪೂರ್ಣತೆಗಳ ಅವತಾರ, ಅವಳು ಕಸಬುದಾರಿಕೆಯಲ್ಲಿ ಅತ್ಯಂತ ಕುಶಲೆ. "ವಸ್ತುಗಳ (ತಯಾರಿಕೆಯ) ವಿಜ್ಞಾನ ಕಸಬುದಾರಿಕೆ

ಮತ್ತು ತಂತ್ರಗಳು ಮಹಾಸರಸ್ವತಿಯ ಕಾರ್ಯಕ್ಷೇತ್ರ.... ಈ ಶಕ್ತಿಯು ಬಲಿಷ್ಠ, ನಿರಾಯಾಸ, ಎಚ್ಚರಿಕೆಯುಳ್ಳ ಮತ್ತು ದಕ್ಷನಿರ್ಮಾಪಕ, ಸಂಘಟಕ, ಆಡಳಿತಗಾರ, ತಾಂತ್ರಿಕ ಶಿಲ್ಪಿ ಮತ್ತು ಜಗತ್ತುಗಳ ವರ್ಗೀಕರಣಕಾರರಲ್ಲಿ ಇರುತ್ತದೆ. ಎಷ್ಟು ಚಿಕ್ಕದು ಅಥವಾ ನೋಡಲು ಕೆಲಸಕ್ಕೆ ಬಾರದುದು ಎನ್ನಿಸಿದ್ದೂ ಅವಳ ಲಕ್ಷ್ಯಕ್ಕೆ ಹೊರಗಲ್ಲ. ಕೈಗೆಸಿಕ್ಕದ ಅಥವಾ ರೂಪ ಮರೆಸಿಕೊಂಡ ಇಲ್ಲವೆ ಸುಪ್ತ ಎನ್ನಿಸಿದ ಯಾವವಸ್ತುವೂ ಅವಳ ಕಣ್ಣನ್ನು ತಪ್ಪಿಸಲಾರದು.... ಮಹಾತಾಯಿಯ ಎಲ್ಲ ಶಕ್ತಿಗಳಲ್ಲಿ ಅವಳು ಮಾನವನ ಸಾವಿರಾರು ನ್ಯೂನತೆಗಳಲ್ಲಿ ಸಿಕ್ಕಿ ಅತಿ ಹೆಚ್ಚುಕಾಲ ನರಳುವವಳು ... ಅವಳು ನಮ್ಮ ಬೇಕುಗಳಿಗೆ ತಾಯಿ, ಕಷ್ಟಕಾಲದಲ್ಲಿ ನಮ್ಮ ಸ್ನೇಹಿತೆ, ಎಡೆಬಿಡದೆ ಶಾಂತವಾಗಿ ನಮಗೆ ಬುದ್ಧಿವಾದ ಹೇಳುವವಳು ಮತ್ತು ಅನುಭವಸ್ಥ ಸಲಹೆಗಾರ್ತಿ.... ನಮ್ಮ ಆಳವೂ ಸತತವೂ ಆದ, ಉಚ್ಚಸ್ವಭಾವದ ಸಾಮಗ್ರ್ಯದತ್ತ ಹೊರಟ, ಪ್ರವೃತ್ತಿ ಮತ್ತು ಪ್ರಚೋದಗಳಲ್ಲಿ ಅವಳು ತನ್ನ ಮಿಂಚುವ ಮುಗುಳ್ನಗೆಯಿಂದ ಖೇದಮೋಘಗಳನ್ನೂ ಸಾಫಲ್ಯ-ನಿರ್ವೇದಗಳನ್ನು ಓಡಿಸುತ್ತಾಳೆ; ಅಲ್ಲದೆ, ಸದಾ ಸಿದ್ಧವಾಗಿರುವ ತನ್ನ ನೆರವನ್ನು ಅವಳು ನಮ್ಮ ನೆನಪಿಗೆ ತಂದುಕೊಡುತ್ತಾಳೆ".

ಇವುಗಳಲ್ಲದೆ ಆ ಮಹಾತಾಯಿಗೆ (ಜಗನ್ಮಾತೆಗೆ), ಇನ್ನೂ ಅನೇಕ ಭಿನ್ನ ಭಿನ್ನ ಶಕ್ತಿಗಳೂ ವ್ಯಕ್ತಿತ್ವದ ಆಕೃತಿಗಳೂ ಇವೆ. ಆದರೆ ಅವಳು ನಮ್ಮೊಡನೆ ಹಾಗೂ ನಮ್ಮ ಪ್ರಪಂಚದೊಡನೆ ವ್ಯವಹರಿಸುವುದು ಮುಖ್ಯವಾಗಿ ಈ ನಾಲ್ಕು ರೂಪಗಳಿಂದ. ಅವಳ ಈ ನಾಲ್ಕು ಅವತಾರಗಳಲ್ಲಿ ಯಾವುದಾದರೂ ಒಂದನ್ನಾಗಲಿ, ಎಲ್ಲವನ್ನಾಗಲಿ- ಯಾರು ಬೇಕಾದರೂ ಆರಾಧಿಸಬಹುದು. ಅತಿಮಾನಸ ರಾಜ್ಯದಲ್ಲಿ ಈ ನಾಲ್ಕೂ ಒಂದಾಗಿರುತ್ತವೆ. ಅವಳೇ ಸರ್ವಾಶ್ಲೇಷಿಣಿಯಾದ ಮಹಾಶಕ್ತಿ ಅಥವಾ ಆದ್ಯಶಕ್ತಿ ಅಥವಾ ದಿವ್ಯಮಾತೆ.

ಸಂಕ್ಷಿಪ್ತವಾಗಿ ಮಹಾತಾಯಿಯ ತತ್ವದ ಬಗೆಗೆ ಇಷ್ಟನ್ನು ಹೇಳಬಹುದು. ಈಗ ನಾವು ಅವಳ ಮಾನವ್ಯ, ಸಕಾಯ ಲಕ್ಷಣದತ್ತ ತಿರುಗೋಣ.

ಒಂದು ಸಂಕ್ಷಿಪ್ತ ಜೀವನ ಚಿತ್ರ

ಮಾತೃಶ್ರೀಯು ಪ್ಯಾರಿಸ್ಸಿನಲ್ಲಿ 1878ನೆಯ ಇಸವಿಯ ಫೆಬ್ರುವರಿ ತಿಂಗಳ 21ನೆಯ ದಿನಾಂಕವಂದು ಹುಟ್ಟಿದಳು. ಅವಳು ಹುಟ್ಟಿದ್ದು ಒಂದು ಶ್ರೀಮಂತ ಕುಟುಂಬದಲ್ಲಿ. ಅವಳ ತಂದೆ ಪ್ಯಾರಿಸ್ಸಿನಲ್ಲೊಬ್ಬ ಪ್ರವ್ಯವ್ಯವಹಾರಿ (ಬ್ಯಾಂಕರ್) ಯಾಗಿದ್ದ. ಮೂಲತಃ ಆ ಮನೆಯವರು ಫ್ರೆಂಚರಾಗಿದ್ದಿಲ್ಲ. ಐಗುಪ್ತ ದೇಶದ ಯಾವುದೋ ಒಂದು ಊರಿನಿಂದ ಈ ಕುಟುಂಬ ವಲಸೆ ಬಂದು ಪಾರಿಸ್ಸಿನಲ್ಲಿ ನೆಲಸಿತ್ತಂತೆ.

ಭಾರತಕ್ಕೆ ಬರುವ ಮೊದಲಿನ ಮಾತೃಶ್ರೀ ಚರಿತ್ರೆ ಅಲ್ಪಜ್ಞಾತ. ಆದರೆ ತರಗತಿಗಳಲ್ಲಿ ಆಕೆ ಕಾಲ ಕಾಲಕ್ಕೆ ಸ್ವೇಚ್ಛೆಯಿಂದ ತನ್ನ ಚಿಕ್ಕಂದಿನ ಅನುಭವದ ಕಥೆಗಳನ್ನು ಹೇಳುತ್ತಿದ್ದಳು. ಅವನ್ನು ಕೆಲ ವಿದ್ಯಾರ್ಥಿಗಳು ಬರೆದುಕೊಂಡಿದ್ದಾರೆ. ಕಾಲಾನುಕ್ರಮದಲ್ಲಿಲ್ಲದಿದ್ದರೂ ಕೆಲವನ್ನಿಲ್ಲಿ ಪುನಃ ಪಠನ ಮಾಡುತ್ತೇನೆ:

(1) "ಏಳನೆಯ ವರ್ಷವಯಸ್ಸಿನಲ್ಲಿ ನನಗೆ ಓದು–ಬರೆಹ ಬರುತ್ತಿರಲಿಲ್ಲ, ಏಕೆಂದರೆ ನಾನು ಅವನ್ನು ಕಲಿತಿರಲಿಲ್ಲ. ಆದರೆ ನಾನು ನನ್ನ 4ನೆಯ ವರ್ಷ ವಯಸ್ಸಿನಿಂದಲೇ ಯೋಗಾಭ್ಯಾಸವನ್ನು ಆರಂಭಿಸಿದ್ದೆ. ನನಗೊಂದು ಸಣ್ಣ ಕುರ್ಚಿಯಿತ್ತು. ಅದರಲ್ಲಿ ಶಾಂತವಾಗಿ ಕುಳಿತು ನಾನು ನನ್ನ ಧ್ಯಾನದಲ್ಲಿ ಮಗ್ನಳಾಗುತ್ತಿದ್ದೆ. ನನ್ನ ತಲೆಯ ಮೇಲೆ ಆಗ ಒಂದು ಉಜ್ವಲ ಬೆಳಕು ಬಂದು ಕುಳಿತು ಮಿದುಳಿನಲ್ಲಿ ಒಂದು ವಿಧದ ಗಲಿಬಿಲಿಯನ್ನುಂಟುಮಾಡುತ್ತಿತ್ತು. ನನಗೇನೂ ಗೊತ್ತಾಗುತ್ತಿರಲಿಲ್ಲವೆಂಬುದೇನೋ

ನಿಜ. ಅದು ಅರ್ಥಮಾಡಿಕೊಳ್ಳುವ ವಯಸ್ಸಲ್ಲ. ಆದರೆ ಯಾರೂ ತಿಳಿದಿರದಂಥ ಒಂದು ಅದ್ಭುತವಾದ ಮಹತ್ಕಾರ್ಯವನ್ನು ನಾನು ಮಾಡಬೇಕಾಗುವುದೆಂದು ಕ್ರಮೇಣ ನನಗೆನ್ನಿಸತೊಡಗಿತು.... ಆದರೆ ನನ್ನ 7ನೆಯ ವರ್ಷ ವಯಸ್ಸಿನಲ್ಲಿ ನನ್ನ ಸೋದರನ ಜೊತೆಗೆ ಬೀದಿಯಲ್ಲಿ ಹೋಗುತ್ತಿದ್ದಾಗ ಲಿಖಿತಫಲಕವೊಂದು ಕಾಣಿಸಲು ಅದರಲ್ಲಿ ಏನು ಬರೆದಿದೆ ಎಂದು ಅವನನ್ನು ಕೇಳಿದೆನು. ಅವನು ಆಶ್ಚರ್ಯದಿಂದ ನೀನೇ ಅದನ್ನು ಓದಲಾರೆಯಾ? ಎಂದು ಕೇಳಿದನು. ನಾನು ಓದಲು ಕಲಿತಿಲ್ಲ, ಓದಲಾರೆ- ಎಂದೆ.— ಇದಕ್ಕಾಗಿ ಅವನು ನನ್ನನ್ನು ಗೇಲಿಮಾಡಿದನು. ಮನೆಗೆ ಹಿಂದಿರುಗಿದೊಡನೆಯೇ ನಾನು ಅಕ್ಷರಾಭ್ಯಾಸಮಾಡಲಾರಂಭಿಸಿದೆ. ಅನಂತರ ನನ್ನನ್ನೊಂದು ಶಾಲೆಗೆ ಸೇರಿಸಲಾಯಿತು. ಪರೀಕ್ಷೆಗಳಲ್ಲಿ ನಾನು ಮೊದಲನೆಯವಳಾಗಿ ಉತ್ತೀರ್ಣೆಯಾಗುತ್ತ ಬಂದೆ; ನನಗೆ ಬಹುಮಾನಗಳೂ ದೊರೆತವು. 14ನೆಯ ವರ್ಷದಲ್ಲಿ ವರ್ಣ ಹಾಗು ರೇಖಾಚಿತ್ರಕಲೆಗಳನ್ನು ಕಲಿಯಲು ನಾನೊಂದು ಚಿತ್ರಶಾಲೆಗೆ ಹೋದೆ. ಆದರೆ ನಾನಾಗ ಬಹಳ ಗಂಭೀರೆಯಾಗಿದ್ದೆ; ಯಾರೊಡನೆಯೂ ಹೆಚ್ಚು ಮಾತಾಡುತ್ತಿರಲಿಲ್ಲ. ಜೊತೆಗಿದ್ದ ಅಭ್ಯಾಸಿಗಳು ನಾನು ನಿಷ್ಪಕ್ಷಪಾತಿನಿಯೆಂದು ಭಾವಿಸಿದರು. ಆದುದರಿಂದ ಅವರು ನಾನಾ ಕಲಹಗಳನ್ನು, ನಾನು ಮಧ್ಯಸ್ಥಿಕೆವಹಿಸಿ ನಿಷ್ಪಕ್ಷಪಾತ ನಿರ್ಣಯ ಕೊಡಬೇಕೆಂದು, ನನ್ನೆಡೆಗೆ ತರುತ್ತಿದ್ದರು".

(2) ನನಗೆ 12 ಆದಾಗ ಪ್ಯಾರಿಸ್ಸಿನ ಸನಿಹದಲ್ಲಿರುವ ಫ್ರೊಂಟೆನೆಬ್ಲು ಕಾಡಿಗೆ ಏಕಾಂತ ಪರ್ಯಟನಕ್ಕಾಗಿ ಹೋಗುತ್ತಿದ್ದೆ. ಅದೊಂದು ಬಹಳ ಹಳೆಯ ಅಡವಿಯಾಗಿತ್ತು. ಅದರಲ್ಲಿ 2000 ವರ್ಷ ವಯಸ್ಸಿನ ಮರಗಳೂ ಇದ್ದವು. ನಾನು ತೆಪ್ಪಗೆ ಒಂದು ಮರದ ಕೆಳಗೆ ಕುಳಿತು ಕೊಳ್ಳುತ್ತಿದ್ದೆ ಮತ್ತು ಆಳವಾದ ಧ್ಯಾನದಲ್ಲಿ ಇಳಿದುಬಿಡುತ್ತಿದ್ದೆ. ನನಗೆ ಸಂತೋಷವನ್ನು ಉಂಟುಮಾಡಿದ ಆ ಮರಗಳಲ್ಲಿ ನನಗೆ ಬಹಳ ಆಸಕ್ತಿಯುಂಟಾಯಿತು. ನನ್ನ ಚೈತನ್ಯವು ಆ ಮರಗಳೊಂದಿಗೆ ಭಾವೈಕ್ಯವನ್ನು ತಳೆಯಿತು. ಆ ಮರಗಳಲ್ಲಿದ್ದ ಅಳಿಲುಗಳು ಮತ್ತು ಹಕ್ಕಿಗಳು ಕೂಡ ನಿರ್ಭಯವಾಗಿ ಸಮೀಪಿಸಿ (ಸಂತೋಷದಿಂದ) ಲೀಲಾಭಾವದಿಂದ ನನ್ನ ಸುತ್ತ



ಬಾಲ್ಯದಲ್ಲಿ

ಓಡಾಡುತ್ತಿದ್ದವು. ಆ ಅಭ್ಯಾಸವನ್ನು ಹಿಡಿದರೆ ಅದೇ ತರಹದ ಅನುಭವ ನಿಮಗೂ ಉಂಟಾಗುವುದು. ಏಕಾಂತವಾಗಿ ಒಂದು ಮರದಕೆಳಗೆ ಸುಮ್ಮನೆ ಕುಳಿತು ಕೊಳ್ಳಿರಿ. ಅದರ ಕಾಂಡಕ್ಕೆ ಬೆನ್ನು ಚಾಚಿ ಶಾಂತವಾಗಿರಿ. ಆಗ ಕ್ರಮೇಣ ನಿಮಗೆ ಆ ಮರದ ಜೀವಸ್ಪಂದ ಮತ್ತು ಚೈತನ್ಯಗಳು ಅನುಭವಕ್ಕೆ ಬರುವುವು. ನಮ್ಮಂಥ ಮಾನವಜೀವಿಗಳೊಡನೆ ಸ್ನೇಹ ಬೆಳೆಯಿಸ ಬೇಕೆಂದು ಅವು ಬಯಸುತ್ತವೆ ಎಂಬುದೂ ನಿಮಗೆ ಗೊತ್ತಾಗುವುದು. ಅವಕ್ಕೂ ಪ್ರೀತಿ, ಸಹಾನುಭೂತಿಗಳಿವೆ; ನಮಗೆ ನೆರಳೀಯುವಷ್ಟು ನೇರ್ನಡೆ ಅವುಗಳಲ್ಲಿದೆ. ತಮ್ಮದೇ ಆದ ರೀತಿಯಲ್ಲಿ ಅವು ಅನುಭವ ಪಡೆದುಕೊಳ್ಳಬಲ್ಲವೆಂಬುದು ಸ್ಪಷ್ಟ. ಒಮ್ಮೆ ಒಂದು ಮುದಿಮರವನ್ನು ಕಡಿಯುವ ಮಾತುಕತೆ ನಡೆದಿತ್ತು. ನಾನದರ ಕೆಳಗೆಹೋದೆ. ಆ ಮರಕ್ಕೆ ತನಗೊದಗಲಿದ್ದ ಅಪಾಯದ ಅರಿವಾಗಿ ಅದು ಹೇಗಾದರೂ ಮಾಡಿ ಆ ಕ್ರೌರ್ಯದಿಂದ ತನ್ನನ್ನು ಮುಕ್ತಗೊಳಿಸೆಂದು ನನ್ನನ್ನು ಬೇಡುತ್ತಿತ್ತೆಂಬುದು ನನಗೆ ಸ್ಪಷ್ಟವಾಗಿ ತಿಳಿದುಬಂತು”.

(3) ಈ ಶತಮಾನದ ಆದಿಯಲ್ಲಿ ಉತ್ತರ ಆಫ್ರಿಕದಲ್ಲಿರುವ ಆಲ್ಜೀರಿಯದ ಕ್ಲೆಮ್ಸೆಲ್ ಎಂಬ ನಗರಕ್ಕೆ ಹೋದೆ. ಈ ನಗರದ ಉತ್ತರಕ್ಕೆ ಆಲ್ಜೀರಿಯದ ಗಡಿ ಶುರುವಾಗುತ್ತದೆ; ಇದರ ದಕ್ಷಿಣಕ್ಕೆ ಸಹರ ಮರುಭೂಮಿ, ಪಶ್ಚಿಮಕ್ಕೆ ಮೊರೊಕ್ಕೊ ಮತ್ತು ಪೂರ್ವಕ್ಕೆ ಟ್ಯೂನಿಸಿಯಗಳಿವೆ. ಬೇಸಿಗೆಯಲ್ಲಿ ಅಲ್ಲಿ ಹೆಚ್ಚುವ ಉಷ್ಣತೆಯನ್ನು ನೀವು ಊಹಿಸಲಾರಿರಿ. ಬಹುಶಃ ಪೋಲೆಂಡಿನ ಯಹೂದಿಯಾಗಿರಬಹುದಾದ ಮೊಂಜರ್ ಫಿಯೋನ್ ಎಂಬವನಲ್ಲಿಗೆ ನಾನು (ಮಾಟ) ಮೋಡಿವಿದ್ಯೆಯನ್ನು ಕಲಿಯಲೆಂದು ಹೋಗಿದ್ದೆ. ನಡುಹಗಲಿನ ಉರಿಯಲ್ಲಿ ನಾನು ಒಂದು ಆಲಿವ್ ಮರದಕೆಳಗೆ ಪ್ರತಿದಿನವೂ ಧ್ಯಾನಕ್ಕಾಗಿ ಕುಳಿತುಕೊಳ್ಳುತ್ತಿದ್ದೆ. ಆ ಬಿಸಿಲ ಝಳವನ್ನು ನಾನು ಸುಖವಾಗಿ ಸಹಿಸಬಲ್ಲವನಾಗಿದ್ದೆ. ಒಂದು ದಿನ ಆಳವಾದ ಧ್ಯಾನದಲ್ಲಿದ್ದಾಗ ನನಗೆ ಒಮ್ಮಿಂದೊಮ್ಮೆ ತಳಮಳ ಆರಂಭವಾಯ್ತು; ಕಣ್ತೆರೆದಾಗ ನನ್ನೆದುರು 6-7ಅಡಿ ಉದ್ದದ ಒಂದು ನಾಗರಹಾವು ಬುಸ್ಸೆಂದು ಹೆಡೆಯೆತ್ತಿ ಅಲ್ಲಾಡಿಸುತ್ತಾ ನಿಂತಿತ್ತು. ಆ ಊರಲ್ಲಿ ಅಂಥ ಹಾವುಗಳನ್ನು

ನಾಗಗಳೆಂದು ಕರೆಯುತ್ತಿದ್ದರು, ಅವುಗಳ ಮಾರಕವಿಷವು ಆಗಿಂದಾಗ ಕಚ್ಚಿದವರನ್ನು ಸಾಯಿಸಿ ಬಿಡುತ್ತದೆ. ನನ್ನ ಬಗೆಗೆ ಆ ಹಾವು ಅಷ್ಟೇಕೆ ಕೆರಳಿತೆಂಬುದು ನನಗೆ ಮೊಟ್ಟಮೊದಲು ಗೊತ್ತಾಗಲಿಲ್ಲ. ನಾನು ಅದರ ಜಲವನ್ನು ಮರೆಮಾಡಿ ಕುಳಿತಿರಬೇಕೆಂಬ ಆಲೋಚನೆ ಆಮೇಲೆ ಹೊಳೆಯಿತು ನಾನು ಕುಳಿತಲ್ಲಿಂದ ಹಿಂದೆಯೇ ಆ ಮರದಲ್ಲಿ ಒಂದು ಪೊಟ್ಟರೆಯಿತ್ತು. ಆದರೆ ನಾನು ಈಗ ಏನುಮಾಡಲಿ? ನಾನು ಸ್ವಲ್ಪ ಹರಿದಾಡಿದರೆ ನನ್ನನ್ನದು ಕಚ್ಚಿಬಿಡುತ್ತದೆ. ನಾನು ಹರಿದಾಡದೆ ಕುಳಿತೆ: ಹೆದರಲೂ ಇಲ್ಲ. ಸ್ಥಿರವಾಗಿ ನಾನದನ್ನು ದಿಟ್ಟಿಸಿ ನನ್ನ ಇಚ್ಛಾಶಕ್ತಿಯನ್ನು ಬಲವಾಗಿ ಪ್ರಯೋಗಿಸಿದೆ. ಕೆಲಹೊತ್ತಾದಮೇಲೆ ಬುಸುಗುಟ್ಟುವುದು ನಿಂತಿತು, ಅದು ಸ್ವಲ್ಪ ಮೃದುವಾದಂತೆ ತೋರಿತು. ಆಗ ಅದರ ಮೇಲಿಟ್ಟ ನೆಟ್ಟದೃಷ್ಟಿಯನ್ನು ಚಲಿಸದೆಯೇ ಮತ್ತು ಇಚ್ಛಾಶಕ್ತಿಯನ್ನು ಪ್ರಯೋಗಿಸುತ್ತಲೇ ನಾನು ನನ್ನ ಕಾಲುಗಳನ್ನು ಒಂದಾದಮೇಲೊಂದರಂತೆ ಮಾರಸರಿಸಿದೆ. ಕಟ್ಟಕಡೆಗೆ ಆ ಮುಷ್ಟನಾಗ ಒಮ್ಮೆಲೇ ತನ್ನ ಹೆಡೆಯನ್ನು ತಗ್ಗಿಸಿ ಹಿಂದಿರುಗಿ ಹತ್ತಿರದಲ್ಲಿದ್ದ ಕೆರೆಯ ನೀರಿಗೆ ಹಾರಿತು. ಆ ಮೇಲೆ ನಾನು ಥಿಯೋನಸಸಿಗೆ ಈ ಘಟನೆಯನ್ನು ತಿಳಿಸಿದೆ. ಅವನು- ಆ ಹಾವು ಆ ಮರದ ಪೊಟ್ಟರೆಯಲ್ಲಿರುವುದು ನಮಗೆಲ್ಲ ಗೊತ್ತಿದ್ದ ಸಂಗತಿ. ಮರದಮೇಲೆ ಅದು ತನ್ನ ಬಿಲಕ್ಕೆ ಹೋಗಬೇಕೆಂದು ಬಯಸಿತು. ಆದರೆ ನೀನು ಅದರ ದಾರಿಯನ್ನು ಅಡ್ಡಗಟ್ಟಿದೆ. ಆದ್ದರಿಂದ ಅದು ನಿನ್ನಮೇಲೆ ಸಿಟ್ಟುಮಾಡಿತು. ಸ್ವಲ್ಪ ಹಾಲು ಕೊಟ್ಟರೆ ಅದು ಕೂಡಲೇ ನಿನ್ನ ಗೆಳೆಯನಾಗಿ ಬಿಡುತ್ತದೆ- ಎಂದು ಹೇಳಿದನು. ಅಂದಿನಿಂದ ನನಗೆ ಹಾವಿನಭಯ ಹೊರಟೇಹೋಯ್ತು. ಅದಕ್ಕಿಂತ ಮೊದಲು ಹಾವು ಬಂದರೆ ಹೆದರಿ ಮುರುಟಿ ಹೋಗುತ್ತಿದ್ದೆ; ನನ್ನಸಂಯಮವನ್ನು ಮೀರಿದ ತೀವ್ರ ದ್ವೇಷ ಹಾವುಗಳ ಬಗೆಗೆ ನನ್ನಲ್ಲಿತ್ತು. ಬಳಿತಿಗಾಗಿ ಅದು ನನ್ನನ್ನು ಬಿಟ್ಟು ಹೋಯ್ತು".

(4) ಕ್ಲೆವ್ಸ್‌ಲ್ಲಿನಲ್ಲಿ ಮೊಂಜರ್‌ಥಿಯೋನನಿದ್ದ ಸ್ಥಳದಲ್ಲಿ ಒಂದು ಪಿಯಾನೋ ಇತ್ತು. ಅದನ್ನು ತಿಳಿದಿದ್ದ ನಾನು ನನ್ನ ಸಂಗೀತ ಸ್ವರಮೇಳದ ಪುಸ್ತಕವನ್ನು ಅನೇಕಬಾರಿ ಅಲ್ಲಿಗೆ ತೆಗೆದು ಕೊಂಡುಹೋಗಿ

ಅವನ್ನು ಬಾರಿಸುತ್ತಿದ್ದೆ- ಒಂದುದಿನ ಒಂದು ಇಡಿ ರಾಗವನ್ನು ಬಾರಿಸಿ ನಿಲ್ಲಿಸಿದೊಡನೆಯೇ ಅಕಸ್ಮಾತ್ತಾಗಿ 'ಪಟರ್' ಎಂಬ ಸದ್ದು ನನಗೆ ಕೇಳಿಸಿತು. ಆ ಸದ್ದೆಲ್ಲಿಂದ ಬಂತು? ಸುತ್ತಲೂ ನೋಡಿದಾಗ ಬಾಗಿಲೆದುರು ವಿಲಕ್ಷಣ ನಾದ ಹೊಸ ಅತಿಥಿಯೊಬ್ಬ ಕಾಣಿಸಿದ- ಅವನಾರು ಗೊತ್ತೇ? ನನ್ನತ್ತ ಗುಂಬಳಗಣ್ಣಿಂದ ನೋಡುತ್ತ ಕುಳಿತಿದ್ದ ಒಂದು ಹೆಗ್ಗಪ್ಪೆ! ಅದರತ್ತ ನೋಡಿದಕೂಡಲೇ ಅದು ಪಟಗುಟ್ಟಿತು. ಆ ಪಟಗುಟ್ಟುವಿಕೆಯ ಅರ್ಥ ನನಗೆ ಚೆನ್ನಾಗಿ ಗೊತ್ತಾಯ್ತು: 'ಹಾಗೆ ಪಯೋನವನ್ನು ಬಾರಿಸು'- ಎಂಬುದೇ ಆ ಅರ್ಥ. ಅದ್ದರಿಂದ ಇನ್ನಷ್ಟು ಹೊತ್ತು ಪಯೋನವನ್ನು ಬಾರಿಸಿದೆ. ಅದು ಅಲ್ಲೇಕುಳಿತು ಸ್ವೈರಿತು ಕೇಳಿತು. ಆಮೇಲೆ ನಾನು ಪಯಾನೋವನ್ನು ಬಾರಿಸಿದಾಗಲೆಲ್ಲ ಎಲ್ಲಿಂದಲೋ ಆ ಕಪ್ಪೆ ಬಂದುಬಿಡು ತ್ತಿತ್ತು. ಮತ್ತು ಹಾಗೆ ಬಂದು ತನ್ನ ಹೆಗ್ಗಣ್ಣುಗಳಿಂದ ನನ್ನನ್ನು ದಿಟ್ಟಿಸಿ ನೋಡುತ್ತ ಅದು ಸಂಗೀತವನ್ನು ಕೇಳುತ್ತಿತ್ತು; ಅಲ್ಲದೆ, ನಾನು ಬಾರಿಸುವು ದನ್ನು ನಿಲ್ಲಿಸಿದಾಗ 'ಪಟರ್' ಎನ್ನುತ್ತಿತ್ತು".

(5) ನಾನು ಕ್ಲೆವ್ಸನಲ್ಲಿನಿಂದ ಎರಡನೆಯಸಲ ತಿರುಗಿ ಬರುತ್ತಿದ್ದಾಗ ಯೂರೋಪಿನ ಯಾತ್ರೆ ಮಾಡಲೆಂದು ಥಿಯೋನನು ನನ್ನೊಡನೆ ಬಂದನು. ಸಮುದ್ರದಲ್ಲಿ ನಾವಿದ್ದಾಗ ಒಂದು ದೊಡ್ಡ ಬಿರುಗಾಳಿ ನಮ್ಮನ್ನೆದುರಿಸಿತು. ಕಡಲು ಬಹಳ ಒರಟೊರಟಾಯ್ತು. ಉತ್ತುಂಗ ತರಂಗಗಳು ನಮ್ಮಹಡಗನ್ನು ಮೇಲು ಕೆಳಗು ಮಾಡುತ್ತಿದ್ದವು. ಏನಾದರೊಂದು ಅಪಾಯ ಸಂಭವಿಸೀತೆಂದು ಎಲ್ಲರೂ ಭಾವಿಸಿದರು. ಹಡಗಿನಲ್ಲಿದ್ದ ಪಯಣಿಗರು ಭೀತರಾದರು; ಕೆಲವರು ಅತ್ತುಕೂಗಲಾರಂಭಿಸಿದರು. ಹಡಗಿನ ಸಾರಥಿಯೇ ಸ್ವತಃ ಕಂಗಾಲಾಗಿ ಪಯಣಿಗರಿಗೆ ಅಪಾಯವುಂಟಾದೀತೆಂದು ಹೇಳಿದನು. ಥಿಯೋನನು ನನ್ನತ್ತ ನೋಡಿ 'ಹೋಗು ಅದನ್ನು ನಿಲ್ಲಿಸು' ಎಂದನು. ನೌಕಾಚೋದಕನು ಆಶ್ಚರ್ಯಪಟ್ಟ; ಅವನಿಗೆ ಅದೇನೆಂದು ಅರ್ಥವಾಗಲಿಲ್ಲ- ನನಗಾಯ್ತು. ನಾನು ನನ್ನ ಕಿರುಮನೆಗೆ ಹೋಗಿ ಮಲಗಿದೆ. ನನ್ನದೇಹ ವನ್ನು ಅಲ್ಲಿಬಿಟ್ಟು ನಿರಾತಂಕವಾಗಿ ನಾನು ಕಡಲಲ್ಲಿಳಿದೆ. ಅಸಂಖ್ಯಾತ ನೀರೂಪ ಜೀವಿಗಳಲ್ಲಿ ನೀರಮೇಲೆ ಯದ್ವಾತದ್ವಾ ಹತ್ತಿ ಹಾರಿ ಗಲಾಟೆ

ಮಾಡುತ್ತಿದ್ದವು. ಆಗ ಸಮೀಪಿಸಿ, "ಈ ಬಡವರನ್ನು ಚಿತ್ರಹಿಂಸಗೆ ಗುರಿ ಪಡಿಸಿದ್ದರಿಂದ ನಿಮಗೇನು ಸಿಗುತ್ತದೆ?". ಎಂದು ಕೇಳಿ ನಾನು ನಮ್ರತೆ ಯಿಂದ ಮಧುರವಾಗಿ ಆ ತುಂಟಾಟವನ್ನು ನಿಲ್ಲಿಸಲು ವಿನಂತಿಸಿದೆ: "ದಯೆಯಿಟ್ಟು ಶಾಂತರಾಗಿ ಇವರ ಜೀವಗಳನ್ನು ಉಳಿಸಿರಿ" ಎಂದೆ. ಅರ್ಧ ಗಂಟೆಯವರೆಗೆ ನಾನು ಅವುಗಳ ತುಂಟಾಟ ಸರಿಯಲ್ಲವೆಂದು ವಾದಿಸುತ್ತ ಮತ್ತು ಬೇಡಿಕೊಳ್ಳುತ್ತ ನಿಂತೆ. ಅನಂತರ ಅವು ತಮ್ಮ ಚಟುವಟಿಕೆ ಗಳನ್ನು ನಿಲ್ಲಿಸಿದವು. ಅಲ್ಲೋಲಕಲ್ಲೋಲವಾಗಿದ್ದ ಸಮುದ್ರವಾಗ ಶಾಂತವಾಯ್ತು, ಆ ಮೇಲೆ ನಾನು ನನ್ನ ದೇಹವನ್ನು ಪುನಃ ಹೊಕ್ಕು ಕಿರುಮನೆಯಿಂದ ಹೊರಬಂದೆ. ಹಡಗಿನ ಉಪ್ಪರಿಗೆಯನ್ನು ಹತ್ತಿನೋಡಿ ದಾಗ ಅಲ್ಲಿ ಎಲ್ಲರೂ ಸಂತೋಷದ ಮಾತುಗಳನ್ನಾಡುತ್ತ ಸುಖವಾಗಿದ್ದು ದನ್ನು ಕಂಡೆ".

ಸಾಮಾನ್ಯವಾಗಿ ಮಾತೃಶ್ರೀಯು ತನ್ನ ಹಿಂದಿನ ಜೀವನದ ಬಗೆಗೆ ಏನನ್ನೂ ಹೇಳುವುದಿಲ್ಲ; ಯಾರಾದರೂ ಕೇಳಿದರೂ ಸುಮ್ಮನಿದ್ದು ಬಿಡುತ್ತಿ ದ್ದಳು. ಆದರೆ 1920ರಲ್ಲಿ ಯಾರೋ ಕೇಳಿದರು- 'ಹಿಂದೂಸ್ಥಾನಕ್ಕೆ ಬಂದದ್ದೇಕೆ? ಅರವಿಂದರ ಪರಿಚಯ ಹೇಗಾಯಿತು?- ಎಂದು. ಈ ಪ್ರಶ್ನೆ ಗಳಿಗಾಕೆ ಲಿಖಿತ ಉತ್ತರ ಕೊಟ್ಟಳು:

"ದೇವರ ವಿಶಿಷ್ಟ ಕಾರ್ಯದಲ್ಲಿ ಸೇವೆಸಲ್ಲಿಸಲೆಂದು ನಾನೀಲೋಕಕ್ಕೆ ಕಳಿಸಲ್ಪಟ್ಟಿದ್ದೇನೆ ಎಂದು ಯಾವಾಗ ನನಗೆ ಗೊತ್ತಾಯಿತು? ಮತ್ತು ಅರವಿಂದರು ನನಗೆ ಹೇಗೆ ಸಿಕ್ಕಿದರು? ಎಂಬ ಪ್ರಶ್ನೆಗಳಿಗೆ ನಾನು ನಿಮಗೆ ಸಂಕ್ಷೇಪವಾಗಿ ಉತ್ತರ ಕೊಡುತ್ತೇನೆ.

"ನನಗೆ ಮೊದಲೇ ವಿಧಾಸಲಾಗಿದ್ದ ಕಾರ್ಯದ ಬಗೆಗಿನ ಎಚ್ಚರ ನನಗೆ ಇಂಥ ದಿನವೇ ಆಯಿತೆಂದು ಸರಿಯಾಗಿ ಹೇಳುವುದು ಕಷ್ಟ, ಬಹುಶಃ ಹುಟ್ಟುವಾಗಲೇ ನನಗೆ ಅಂಥ ಜಾಗರವಿತ್ತೆಂದು ತೋರುತ್ತದೆ; ಅದು ಮನಸ್ಸು-ಬುದ್ಧಿಗಳು ಬೆಳೆಯುತ್ತ ಬಂದ ಹಾಗೆ ಸ್ಪಷ್ಟ, ಸ್ಪಷ್ಟತರವಾಗುತ್ತ ಬಂದಿತೆಂದು ತೋರುತ್ತದೆ.

"11 ರಿಂದ 13 ವರ್ಷ ವಯಸ್ಸಾಗುವುದರೊಳಗೆ ಬಹುಬೇಗ ಸೇರಿಂದ ಮೇಲೆ ನನಗುಂಟಾದ ಆಧ್ಯಾತ್ಮಿಕ ಅನುಭವಗಳ ದೆಸೆಯಿಂದ ದೇವರು ಖಂಡಿತವಾಗಿ ಇದ್ದಾನೆ. ದೇವರಲ್ಲಿ ಐಕ್ಯಹೊಂದುವುದು ಮಾನವನಿಗೆ ಸಾಧ್ಯ. ಮನುಷ್ಯನ ಚೈತನ್ಯ ಹಾಗೂ ಕಾರ್ಯಗಳಲ್ಲಿ ಅವನ (ದೇವರ) ಅನುಭವವನ್ನು ಪಡೆಯುವುದು ಶಕ್ಯ ಮತ್ತು ಮಾನವನ ದಿವ್ಯಜೀವನದಲ್ಲಿ ದೇವರನ್ನು ಒಡಮೂಡಿಸುವುದು ಕೂಡ ಅಸಾಧ್ಯವಲ್ಲ- ಎಂಬುದು ನನಗೆ ಸ್ಪಷ್ಟವಾಯಿತು. ಈ ಅನುಭವ ಮತ್ತು ಧ್ಯೇಯಗಳನ್ನು ಪಾರ್ಥಿವ ಜೀವನದಲ್ಲಿ ವಾಸ್ತವಿಕವಾಗಿ ಪ್ರಯೋಗಿಸುವ ಬಗೆ ಹೇಗೆ ಎಂಬ ಬಗೆಗೆ ನಿದ್ರಾವಸ್ಥೆಯಲ್ಲಿ ನನಗೆ ಅನೇಕ ಗುರುಗಳು ಒಂದು ಬಗೆಯ ತರಬೇತು ಕೊಡುತ್ತಿದ್ದರು. ಅನಂತರ ಈ ಗುರುಗಳಲ್ಲಿಷ್ಟೋ ಜನರು ಹೊರಜಗತ್ತಿನಲ್ಲಿ ನನಗೆ ಭೇಟಿಯಾದರು. ನಾನು ಸ್ವಲ್ಪ ಪ್ರಬುದ್ಧಾವಸ್ಥೆಗೆ ಬಂದ ಮೇಲೆ ಈ ಗುರುಗಳಲ್ಲೊಬ್ಬರು ನನಗೆ ಹೆಚ್ಚು ನಿಕಟ ಪರಿಚಯದವರಾದರು. ಅವರೊಡನೆ ನನಗೆ ಆಳವಾದ ಆಧ್ಯಾತ್ಮಿಕ ಸಂಬಂಧ ಉಂಟಾಯಿತು. ನನಗಾಗ ಭಾರತದ ತತ್ವಜ್ಞಾನ ಮತ್ತು ಮತಧರ್ಮಗಳ ತಿಳುವಳಿಕೆ ಅತ್ಯಲ್ಪವಾಗಿತ್ತು; ಆದರೆ ಈ ಗುರುಗಳನ್ನು ನಾನು ಕೃಷ್ಣನೆಂದು ಕರೆಯುತ್ತಿದ್ದೆ ಮತ್ತು ಇವರನ್ನು ಒಂದುದಿನ ಎಲ್ಲಾದರೂ ಭೇಟಿಮಾಡಬೇಕೆಂದು ಎನ್ನಿಸಿತು. ಅಲ್ಲದೆ ಇವರೊಂದಿಗೆ ಒಟ್ಟಾಗಿ ದೇವರ ಉದ್ದೇಶವನ್ನು ಪೂರಯಿಸಬೇಕೆಂದು ತೋರಿತು. ಭಾರತವನ್ನು ನನ್ನ ತಾಯಿನಾಡೆಂದೇ ತಿಳಿದು ನಾನು ಪ್ರೀತಿಸುತ್ತಿದ್ದೆ. ಅನಂತರ 1914 ರಲ್ಲಿ ಈ ದೇಶಕ್ಕೆ ಬರುವ ಸುದೈವ ಒದಗಿ ಬಂತು. ಇಲ್ಲಿ ನನಗೆ ಶ್ರೀ ಅರವಿಂದರು ಕಂಡರು ಮತ್ತು ಆ ಕೂಡಲೇ ಇವರೇ ನನಗೆ ಹಿಂದೆ ನಿದ್ರಾವಸ್ಥೆಯಲ್ಲಿ ಕಾಣಿಸಿಕೊಂಡ ಗುರುಗಳೆಂದೂ ಇವರನ್ನೇ ನಾನು ಕೃಷ್ಣನೆಂದು ಕರೆದುದೆಂದೂ ಗುರುತಿಸಿದೆ. ಈ ಸಾಲುಗಳಿಂದ ಇಲ್ಲಿಯೇ ನನಗೆ ಕೆಲಸದ ಸ್ಥಳವಿದೆ ಮತ್ತು ಇವರೊಟ್ಟಿಗೇ ನಾನು ಕೆಲಸಮಾಡಬೇಕು ಎಂಬುದನ್ನು ನಾನು ಹೇಗೆ ದೃಢಪಡಿಸಿಕೊಂಡೆ ಎಂಬುದು ನಿಮಗೆ ಗೊತ್ತಾಗುತ್ತದೆ".

ಅನಂತರವೂ ಶ್ರೀ ಅರವಿಂದರಿಗೆ- ಆಕೆ ಮನುಷ್ಯೆಯಾಗಿದ್ದಳು, ಆದರೀಗ ದಿವ್ಯಮಾತೆಯ ಸ್ವರೂಪವನ್ನು ತಾಳಿದ್ದಾಳೆ- ಎಂಬಂಥ ಪ್ರಶ್ನೆಯನ್ನು ಯಾರೋ ಹಾಕಿದರು. ಇದಕ್ಕೆ ಶ್ರೀ ಅರವಿಂದರು ತಮ್ಮ ಸತತ ದಾರ್ಢ್ಯ ಸಂಪನ್ನ ಉತ್ತರವನ್ನು ಹೀಗೆ ಕೊಟ್ಟರು: ದೇವರು ಮಾನವ ರೂಪ (ಆಭಾಸ)ವನ್ನು ತಾಳುತ್ತಾನೆ- ದಾರಿನಡೆದು ಮನುಷ್ಯರಿಗೆ ತೋರಿಸಲೆಂದು ಆತನು ಹೊರಪ್ರಕೃತಿಯ ಸ್ವರೂಪವನ್ನು ತಾಳುತ್ತಾನೆ- ಆದರವನೆಂದೂ ತನ್ನ ದೇವತ್ವವನ್ನು ಕಳೆದುಕೊಳ್ಳುವುದಿಲ್ಲ. ಇಲ್ಲಿ ಆಗುವುದೊಂದು ಅವತಾರ—ಬೆಳೆಯುತ್ತಿರುವ ದೇವಪ್ರಜ್ಞೆಯ ಅವತಾರ; ಹಾಗಲ್ಲದೆ ಇದು ಮಾನವ್ಯವು ದಿವ್ಯವಾಗುವುದಲ್ಲ. ಬಾಲ್ಯದಲ್ಲಿಯೇ ಮಹಾತಾಯಿಯು ಒಳಗಿಂದೊಳಗೆ ಅತಿಮಾನವತೆಯ ಮಟ್ಟದಲ್ಲಿದ್ದಳು: ಆದುದರಿಂದ ಅವಳು ಮೊದಲು ಮಾನವಿಯಾಗಿದ್ದು ಆಮೇಲೆ ದೇವಿ ಯಾದಳೆಂಬ ಬಹುಜನರ ಅಭಿಮತವು ತಪ್ಪು.

* * *

ಮಹಾಮಾತೆಯ ಸಾಧನೆ

ಮಹಾಮಾತೆ (ಮಾತೃಶ್ರೀ) ದೇವೀಪ್ರಜ್ಞೆಯೊಂದಿಗೆ ಹುಟ್ಟಿದವಳು. ಅವಳು ಮಾಡಬೇಕಾಗಿದ್ದ ಸಾಧನೆಯೆಲ್ಲವೂ ಆ ಪ್ರಜ್ಞೆಯನ್ನು (ಚೈತನ್ಯವನ್ನು) ಪೂರ್ಣತೆಗೊಯ್ದು ಮುಟ್ಟಿಸುವುದಕ್ಕಾಗಿಯೇ. ಸಾಮಾನ್ಯವಾಗಿ ಆಧ್ಯಾತ್ಮಿಕ ಜೀವನವನ್ನು ಹೊಕ್ಕವರೆಲ್ಲರೂ ಕಠಿನವೂ ಕ್ಲೇಶಕರವೂ ಆದ ಒಂದು ಅವಧಿಯನ್ನು ಕಳೆಯ ಬೇಕಾಗುತ್ತದೆ- ಕೆಲವುಸಲ ಗುರುವಿನ ಅಂಕೆಯಲ್ಲಿ, ಕೆಲ ಬಾರಿ ಗುರುಗಳಿಲ್ಲದೆ. ಇದು ಮಹಾಚಾರ್ಯರ ಹಾಗೂ ಅವತಾರ ಪುರುಷರ ಜೀವನದಲ್ಲಿ ಕೂಡ ತಪ್ಪಿದ್ದಲ್ಲ. ಬುದ್ಧನಂತೆಯೇ ಚೈತನ್ಯ. ರಾಮಕೃಷ್ಣ, ವಿವೇಕಾನಂದ, ಅರವಿಂದರೆಲ್ಲರೂ ತಪಸ್ಸುಮಾಡಿದರು. ಆದರೆ ಮಾತೃಶ್ರೀಯು ಯಾರಿಂದಲೂ ಯಾವ ಉಪ ಶಿಕ್ಷಣವನ್ನೂ ಪಡೆಯಲಿಲ್ಲ- ಧ್ಯಾನ ಹೇಗೆ ಮಾಡಬೇಕೆಂಬುದರ ಬಗೆಗೆ ಕೂಡ. ಶೈಶವದಿಂದ ಅವಳೇ ಸ್ವತಃ ಅವನ್ನು ಮಾಡುತ್ತಿದ್ದಳು. ಆ ಬಗೆಗೆ ಶ್ರೀ ನೀರದ್‌ಬರನ್ ಬರೆದಿದ್ದಾರೆ:

"ಮಾತೃಶ್ರೀ ಹೇಳಿವ ಅಲ್ಪಸಲ್ಪ ಸಂಗತಿಗಳಿಂದಲೇ ನನಗೆ ಸ್ಪಷ್ಟವಾಗಿ ಗೊತ್ತಾಯಿತು- ನಮ್ಮಂತೆ ಈಕೆ ಪಾರ್ಥಿವ ಪುತ್ರಿಯಲ್ಲ- ಎಂದು. ಮಕ್ಕಳಾಟಿಕೆಯ ಕಾಲದಿಂದಲೇ ಅವಳಲ್ಲಿ ದಿವ್ಯಜ್ಞಾನ ಮೂಡುತ್ತಿತ್ತು. ಅಂದೇ ಆಕೆಗೆ ತನ್ನನ್ನು ವಿಸ್ತಾರವಾದ ಚಿಚ್ಛಕ್ತಿಯೊಂದು ಸುತ್ತುವರಿದಿದೆ ಮತ್ತು ಅದ್ಭುತವಾದ ಉಜ್ವಲ ಪ್ರಭೆಯು ತನ್ನ ತಲೆಯ ಮೇಲೆ ನೇತು ಬಿದ್ದಿದೆ- ಎಂದು ಪದೇ ಪದೇ ಅನುಭವಕ್ಕೆ ಬರುತ್ತಿತ್ತು. ಅವನ್ನರಿಯಹೋದರೆ ಅವಳಿಗೇನೂ ಗೊತ್ತಾಗುತ್ತಿರಲಿಲ್ಲ. ಏಕೆಂದರೆ ಅವಳ ವಯಸ್ಸು ಅಷ್ಟು ಸಣ್ಣದಾಗಿತ್ತು. ಏಳನೆಯ ವರ್ಷದಿಂದ ಆಕೆ ಧ್ಯಾನ

ಯೋಗಿನಿಯಾಗತೊಡಗಿದಳು- ಧ್ಯಾನವೆಂದರೇನೆಂಬುದು ಗೊತ್ತಿಲ್ಲದೆಯೇ! ತನಗಾಗಿಯೇ ಒಂದು ಸಣ್ಣ ಕುರ್ಚಿಯನ್ನು ಮಾಡಿಸಿಕೊಂಡು ಅದರಲ್ಲಿವಳು ಗಂಟೆಗಟ್ಟಲೆ ಧ್ಯಾನಮಗ್ನೆಯಾಗಿರುತ್ತಿದ್ದಳು. ಅವಳ ತಾಯಿ ಅಮೂಲಾಗ್ರವಾಗಿ ವಿಚಾರ ವಾದಿನಿಯಾಗಿದ್ದಳು. ಅವಳಿಗೆ ತನ್ನ ಮಗಳ ಮನಃಪ್ರಣಾಲಿ ರುಚಿಸುತ್ತಿರಲಿಲ್ಲ. ತನ್ನ ಮಕ್ಕಳು ಚುರುಕಾದವರೂ ಪ್ರಾಪಂಚಿಕರೂ ಆಗಿರಬೇಕೆಂಬುದು ಅವಳ ಅಪೇಕ್ಷೆಯಾಗಿತ್ತು. ಅವರು ಆಧ್ಯಾತ್ಮಿಕರಾಗುವುದು ಅವಳಿಗೆ ಬೇಡವಾಗಿತ್ತು. ಆದುದರಿಂದ ತನ್ನ ಮಗಳೊಳಗೊಳಗೆ ಏನಾಗುತ್ತಿತ್ತೆಂಬುದನ್ನರಿಯದೆ ಸ್ವಾಭಾವಿಕವಾಗಿ ಅವಳು ಮಾತೃಶ್ರೀಯ ಈ ಬಗೆಯನ್ನು ಕಂಡು ಸಹಿಸದವಳಾಗಿದ್ದಳು. ಒಂದು ದಿನ ಅವಳನ್ನು ಅವಳತಾಯಿ ಜೋರಾಗಿ ಕೇಳಿದಳು: 'ಯಾವಾಗಲೂ ಇಡೀ ಜಗತ್ತಿನ ಭಾರವೇ ನಿನ್ನ ಹೆಗಲಿನ ಮೇಲಿದೆ ಎನ್ನುವಂತೆ ಅದೇಕೆ ಮುಖಬಿಗಿದುಕೊಂಡು ಬಿಮ್ಮನೆ ಕುಳಿತಿರುತ್ತೀಯೆ?' ಮಾತೃಶ್ರೀ ಗಂಭೀರವಾಗಿ ಉತ್ತರವಿತ್ತಳು: 'ಹೌದು, ಹಾಗೇ ಸರಿ. ಇಡಿ ಜಗತ್ತಿನ ದುಃಖವನ್ನು ನಾನು ಹೊತ್ತುಕೊಳ್ಳಬೇಕಾಗಿದೆ: ಅದರಿಂದಲೇ ನಾನು ಇಷ್ಟು ಗಂಭೀರವಾಗಿ ಕರ್ತವ್ಯದ ಬಿಗುವಿನಲ್ಲಿ ಇದ್ದೇನೆ'. ಹುಡುಗಿಗೆ ಹುಚ್ಚು ಹಿಡಿದಿದೆಯೆಂದು ಅವಳಮ್ಮ ತಿಳಿದುಕೊಂಡಳು".

ತನ್ನ ಮುಂದಿನ ಕಾರ್ಯಗಳಿಗಾಗಿ ಮಾತೃಶ್ರೀಗೆ ಉಪ ಶಿಕ್ಷಣ ದೊರಕಿದ್ದು ಬಹಳ ಹಿಂದೆಯೇ ಬರಲಾರಂಭಿಸಿದ್ದ ಅವಳ ಸ್ವಪ್ನಗಳಿಂದ. ಅವಳು ಕನಸಿನಲ್ಲಿ ಹಲವಾರು ಗುರುಗಳನ್ನು ಸಂದರ್ಶಿಸಿದಳು ಮತ್ತು ಪ್ರತಿರಾತ್ರಿಯೂ ಆಕೆ ತನ್ನ ಸ್ವಪ್ನದಲ್ಲಿ ಒಂದಾಗುತ್ತಿದ್ದಳು. ಸರಿಯಾಗಿ ಏನಾಗಿದೆಯೋ ಅದನ್ನಾಕೆ ತನ್ನ ದಿನಚರಿಯಲ್ಲಿ ಬರೆದಿಟ್ಟಿದ್ದಾಳೆ.

"ನಾನು ಕೂಸಾಗಿದ್ದಾಗ- ಸುಮಾರು 13 ಹಿಡಿದಾಗ- ಸುಮಾರು ಒಂದು ವರ್ಷದ ವರೆಗೆ ನಾನು ಹಾಸಿಗೆಯಲ್ಲಿರುವಾಗಲೇ ಪ್ರತಿರಾತ್ರಿಯೂ ನನ್ನ ದೇಹವನ್ನು ಬಿಟ್ಟು, ನೆಟ್ಟಗೆ ಮನೆ, ಪಟ್ಟಣಗಳೆಲ್ಲವನ್ನೂ ಹತ್ತಿ ಮತ್ತೂ ಮೇಲೆ ಹೋಗುತ್ತಿದ್ದೇನೆ ಎನ್ನಿಸುತ್ತಿತ್ತು. ಆಗ ನಾನು ನನಗಿಂತ

ಉನ್ನತವಾದ ಒಂದು ಥಳಥಳಿಸುವ ಬಂಗಾರದ ಉಡುಪನ್ನು ಧರಿಸಿರುವಂತೆ ತೋರುತ್ತಿತ್ತು ಮತ್ತು ನಾನು ಮೇಲೆ ಮೇಲೆ ಹೋದಂತೆ ನನ್ನ ಉಡುಪು ಕೆಳಗಿಳಿದು ವೃತ್ತಾಕಾರದ ದೊಡ್ಡ ಮೇಲ್ಛಾವಣಿಯಾಗಿ ಪಟ್ಟಣವನ್ನು ಮುಸುಕುವಂತೆ ಕಾಣುತ್ತಿತ್ತು. ಆಮೇಲೆ ಎಲ್ಲ ದಿಕ್ಕುಗಳಿಂದಲೂ ಗಂಡಸರು, ಹೆಂಗಸರು, ಮಕ್ಕಳು, ಮುದುಕರು, ಕಾಯಿಲೆ ಬಡಿಕರು ಮತ್ತು ದುಃಖಿಗಳು ತಮ್ಮ ದೇಹಗಳಿಂದ ಹೊರಬರುತ್ತಿರುವುದನ್ನು ಕಾಣುತ್ತಿದ್ದೆ ಅವರೆಲ್ಲರೂ ಹರಡಿದ ನನ್ನ ಆ ಬಂಗಾರದ ಉಡುಪಿನ ಕೆಳಗೆ ಸೇರಿ ತಮ್ಮ ದುಃಖ, ತಾಪ, ನೋವು, ನರಿ, ನರಳಿಕೆಗಳನ್ನು ಹೇಳಿಕೊಂಡು ಸಹಾಯ ಯಾಚಿಸುತ್ತಿರುವಂತೆ ತೋರುತ್ತಿತ್ತು. ಅದಕ್ಕೆ ಉತ್ತರವಾಗಿ ಆ ಚುರುಕೂ ಸಜೀವವೂ ಆದ ಉಡುಪು ಅವರಲ್ಲಿ ಒಬ್ಬೊಬ್ಬರನ್ನೇ ಹಾಸಿ ಸಮೀಪಿಸುತ್ತಿತ್ತು. ಅದನ್ನು ಮುಟ್ಟಿದೊಡನೆಯೇ ಅವರಿಗೆ ಗುಣವಾಗಿ ಸಮಾಧಾನವಾಗಿ ಮೊದಲಿಗಿಂತ ಹೆಚ್ಚು ಸುದೃಢರೂ ಸುಖಿಗಳೂ ಆಗಿ ಸ್ವದೇಹಗಳನ್ನು ಹೊಗುತ್ತಿದ್ದರು. ಇನ್ನಾಗ್ಯೂ ನನಗೆ ಇಷ್ಟು ಸುಂದರ, ಇಷ್ಟು ಸುಖಕರ ಎನ್ನಿಸುತ್ತಿದ್ದಿಲ್ಲ. ದಿನದ ಚಟುವಟಿಕೆಗಳೆಲ್ಲವೂ ನಿರ್ಜೀವ, ಜಿಗುಪ್ಸಾಜನಕ ಎನ್ನಿಸುತ್ತಿತ್ತು. ಬಣ್ಣವಿಲ್ಲದ ಬೋಳಿಂದು ತೋರುತ್ತಿತ್ತು. ಮೇಲೆ ಹೇಳಿದ ರಾತ್ರಿಯ ಚಟುವಟಿಕೆಯು ಮುಂದೆ ಅದೆಲ್ಲ ಸಪ್ಪೆ. ಇರುಳ ಬಾಳೇ ನಿಜವಾದ ಬಾಳು ಎಂದು ಕಾಣುತ್ತಿತ್ತು. ಹಾಗೆ ನಾನು ತೇಲುತ್ತಿದ್ದಾಗಲೆಲ್ಲ ನನ್ನ ಎಡಕ್ಕೆ ಒಬ್ಬ ಮುದುಕ ಕಾಣಿಸುತ್ತಿದ್ದ ಅವನು ತಪಸ್ವಿಯೂ ಜಟಿಲನೂ ಆಗಿ ನನ್ನತ್ತ ನೋಡಿ ದಯಾಘನ ವಾತ್ಸಲ್ಯದಿಂದ ಉಪಸ್ಥಿತನಾಗಿರುವುದರ ಮೂಲಕ ನನ್ನನ್ನು ಪ್ರೋತ್ಸಾಹಿಸುತ್ತಿರುವಂತೆ ಕಾಣುತ್ತಿತ್ತು. ದಟ್ಟವಾದ ಬದನೆಬಣ್ಣದ ಬಟ್ಟೆಯುಟ್ಟ ಆ ಮುದುಕನು **ದುಃಖ ಪ್ರಶಮ** ಎಂಬುದು ಆಮೇಲೆ ನನಗೆ ತಿಳಿದುಬಂತು".

" ಈ ಆಳವಾದ ಅನುಭವವು ಅವರ್ಣನೀಯವೆಂದೇ ಹೇಳಬೇಕು. ನನ್ನ ಮಿದುಳು ಈ ಸತ್ಯವನ್ನು ಇತರ ಭಾಗಗಳ ಮೂಲಕ ಅನುವಾದ ಮಾಡಿಕೊಂಡದ್ದು ಹೀಗಿದೆ;

"ಹಗಲಲ್ಲಿ ಮತ್ತು ಇರುಳಲ್ಲಿ ಬಹಳಸಲ ನನಗೆನ್ನಿಸಿದ್ದು ಈ ಬಗೆಯಾಗಿ- ನಾನೆಂದರೆ ನನ್ನ ಶುದ್ಧ ಚೇತನ. ಅದು ನನ್ನ ಹೃದಯದಲ್ಲಿ ಸಂಪೂರ್ಣ ಏಕಾಗ್ರವಾಗಿ ನೆಲೆಸಿದೆ, ಆ ಹೃದಯವು ಒಂದು ಅವಯವವೇ ಅಲ್ಲ- ಅದೊಂದು ಭಾವನೆ ಕೂಡ ಅಲ್ಲ- ಅದು ದಿವ್ಯಪ್ರೇಮ. ಅದು ಅವೈಯಕ್ತಿಕ, ಅಶರೀರ, ನಿತ್ಯ. ನಾನಿಂಥ ಪ್ರೇಮಸ್ವರೂಪವಾದಾಗ ಇಡೀ ಭೂಮಿಯ ಮೇಲಿರುವ ಪ್ರತಿಯೊಂದು ಪದಾರ್ಥದ ಕೇಂದ್ರ ಬಿಂದುವಿನಲ್ಲಿ ಬದುಕಿರುವಂತೆ ಅನುಭವವಾಗುತ್ತಿತ್ತು. ಜೊತೆಗೆ ನನ್ನೆದೆ ವಿಶ್ವಕ್ಕಿಂತ ವಿಶಾಲವಾಗಿತ್ತು; ಆದ್ದರಿಂದ ನಾನು ನನ್ನ ಅನಂತ ಬಾಹುಗಳನ್ನು ಚಾಚಿ ಅಮಿತ ಕೋಮಲತೆಯಿಂದ ಎಲ್ಲ ಜೀವಿಗಳನ್ನೂ ಆವರಿಸಿ, ಗುಂಪುಗೂಡಿಸಿ, ಅಪ್ಪಿಕೊಂಡು ಎದೆಗಿಟ್ಟು ಸಮಾಧಾನ ಪಡಿಸುವಂತೆ ತೋರುತ್ತಿತ್ತು.... ಶಬ್ದಗಳು ಬಡಪಾಯಿಗಳು ಮತ್ತು ಹೊಲೆಗೆಟ್ಟಂಥವು, ಎಲೈ ದಿವ್ಯ ಗುರುವೇ, ಮಾನಸಿಕ ಭಾಷಾಂತರಗಳು ಯಾವಾಗಲೂ ಬಾಲಿಶ...."

ಆ ಚಿಕ್ಕವಯಸ್ಸಿನಲ್ಲಿ ಈ ಸ್ವಪ್ನಗಳ ಅರ್ಥವನ್ನು ಚೆನ್ನಾಗಿ ಮಾಡಿಕೊಳ್ಳಲಾಗದಿದ್ದರೂ ಮಾತೃಶ್ರೀಯು ಅವುಗಳ ಅಂತಃಪ್ರಭಾವವನ್ನು ಎಂದೂ ಮರೆಯಲಾರದಾದಳು. ಆದರೆ ವಯಸ್ಸು ಹಾಗೂ ಅನುಭವ ಹೆಚ್ಚುತ್ತ ಹೋದಹಾಗೆ ಅವಳಿಗೆ ತಾನು ಮಾಡತಕ್ಕ ಕೆಲಸ ಇದೇ ಎಂಬುದು ದೃಢಪಟ್ಟಿತು ಮತ್ತು ಈಗಲೂ ಅದನ್ನೇ ಮಾಡುತ್ತಿದ್ದಾಳೆ. ವಿಶಾಲ ವಿಶ್ವದ ಎಲ್ಲೆಡೆಯಲ್ಲಿರುವ ಅಸಂಖ್ಯಾತ ಮಕ್ಕಳಿಗೆ ಉದಾರವಾಗಿ ಆಕೆ ಆಶ್ರಯ ನೀಡುತ್ತಿದ್ದಾಳೆ, ದುಃಖಿಗಳಿಗೆ ನೆರವೀಯುತ್ತಿದ್ದಾಳೆ, ತನ್ನ ಹರಕೆಗಳನ್ನು ಅನುಗ್ರಹವನ್ನೂ ನೀಡುತ್ತಿದ್ದಾಳೆ.

ಆದರೆ ದಿವ್ಯವಾಗಿದ್ದರೂ ಆಕೆಯ ಬಾಳೆಲ್ಲಾ ಸುಗಮವಾಗಿ ಸಾಗಿಲ್ಲ. ಅನೇಕ ಕಷ್ಟಗಳಲ್ಲವಳು ಹೊಕ್ಕು ಹೊರಡಬೇಕಾಯಿತು: ಅಗ್ನಿ ದಿವ್ಯಗಳಲ್ಲಿ ಸತ್ವ ಪರೀಕ್ಷೆಗಳಲ್ಲಿ ಸಿಲುಕ ಬೇಕಾಯಿತು. ಅನೇಕಾನೇಕ ಪ್ರತಿ ಸನ್ನಿವೇಶಗಳೊಡನೆ ವೀರೆಯಂತೆ ಹೋರಾಡ ಬೇಕಾಯಿತು. ಅವಳ ಸುದೀರ್ಘ ಸಾಧನಾವಧಿಯಲ್ಲಿ ಅವಳೆಷ್ಟು ಕಷ್ಟ, ಕಾರ್ಪಣ್ಯ, ಆಪತ್ತು, ಅಪಾಯ,

ದುಃಖ, ದುಮ್ಮಾನ, ನೋವು, ನರಳಿಕೆಗಳನ್ನು ಅನುಭವಿಸಬೇಕಾಯಿತೋ ನಮಗರಿಯದು. ಆದರೆ ಅರವಿಂದರಿಗೆಲ್ಲಾ ತಿಳಿದಿತ್ತು. ಅವರು ತಮ್ಮ ಒಂದು ಪತ್ರದಲ್ಲಿ ಕೆಲ ಸೂಚನೆ ಮಾಡಿದ್ದಾರೆ: ಮಹಾತಾಯಿಗೂ ನನಗೂ ಸರ್ವತೋಮುಖ ಸಂಕಷ್ಟಗಳನ್ನು ದಾಟಬೇಕಾಗಿತ್ತು: ನಮ್ಮ ಪೂರ್ವಜರಲ್ಲಿ ಯಾರೂ ಮಾಡಿರದಷ್ಟು ಮಟ್ಟಿಗೆ ನಾವು ಕಠಿನತರ ಪರಿಸ್ಥಿತಿಗಳನ್ನೆದುರಿಸಿ, ಕಠಿನತರ ಯುದ್ಧಗಳನ್ನು ಮಾಡಿ, ಕ್ರೂರತರ ಗಾಯಗಳನ್ನು ಸಹಿಸಿಕೊಂಡು, ಕಾಲಿಡಲು ತೆರವಿಲ್ಲದಂಥ ಅರಣ್ಯಗಳಲ್ಲಿ ಹೊಕ್ಕು ಹೊರಟು, ಸುಡುವ ಮರುಭೂಮಿಯಲ್ಲಿ ಕಾಲಿಟ್ಟು, ಎತ್ತಿ, ದ್ವೇಷಾವಿಷ್ಟ ಶತ್ರುಕೋಟಿಸ್ತೋಮಗಳನ್ನು ಗೆದ್ದು ಬಂದಿರುವೆವು".

ಇದು ಬಹಳ ವಿಷಯಗಳನ್ನು ವಿವರಿಸುತ್ತದೆ. ಮಾತೃಶ್ರೀಯ ದಿನಚರಿಯಿಂದಲೂ ನಮಗೆ ಎಷ್ಟೋ ಸಂಗತಿಗಳು ತಿಳಿದು ಬರುತ್ತವೆ. ಆಕೆ ಬಾಹ್ಯವಿಷಯಗಳ ಬಗೆಗೆ ಏನನ್ನೂ ಹೇಳಿರದಿದ್ದರೂ ಇವೆಲ್ಲವೂ ಆಕೆಯ ವಿವಿಧ ಪ್ರಾರ್ಥನೆಗಳ ಮೂಲಕ ವ್ಯಕ್ತವಾಗುತ್ತವೆ. ಇವೆಲ್ಲವನ್ನೂ ಮೂಲತಃ ಫ್ರೆಂಚ್ ಭಾಷೆಯಲ್ಲಿ ಬರೆದಿಡಲಾಗಿತ್ತು. ಅನಂತರ ಇವನ್ನು "ಮಹಾತಾಯಿಯ ಪ್ರಾರ್ಥನೆಗಳು ಮತ್ತು ಪ್ರಣಿಧಾನಗಳು" ಎಂಬ ಹೆಸರಿನಲ್ಲಿ ಇಂಗ್ಲೀಷಿಗೆ ಭಾಷಾಂತರಿಸಲಾಯಿತು. ಮೊದಲಿನಿಂದಲೂ ಆಕೆ ತನ್ನ ದೇವರಿಗೆ ಎಷ್ಟು ಪ್ರಾಮಾಣಿಕವಾಗಿಯೂ ಸಂಪೂರ್ಣವಾಗಿಯೂ ಭಕ್ತಿನಿಷ್ಠಳಾಗಿದ್ದಳು ಎಂಬುದನ್ನಿದು ಸ್ಪಷ್ಟವಾಗಿ ನಿದರ್ಶಿಸುತ್ತದೆ. ಪ್ರತಿ ಪುಟದಲ್ಲಿಯೂ ಅವಳು ದೇವರನ್ನು ಸಂಬೋಧಿಸಿರುವುದನ್ನು ನಾವು ಕಾಣುತ್ತೇವೆ: ಅವಳು ಆತನೊಡನೆ ಮಾತಾಡುವುದನ್ನು ಮತ್ತು ಅವನಿಂದ ಉತ್ತರವನ್ನು ಕೂಡ ಪಡೆಯುವುದನ್ನು- ಅಲ್ಲದೆ, ಆ ಉತ್ತರವನ್ನು ಕೂಡಲೇ ಬರೆದುಕೊಂಡಿರುವುದನ್ನು ಅದರಲ್ಲಿ ನೋಡುತ್ತೇವೆ. ಅವಳು ಯಾರನ್ನು ಕರೆದಳೋ ಅವನು ಅವಳೆದುರೇ ಇದ್ದಾನೆ ಎಂಬಂತೆ ಆ ಪ್ರಾರ್ಥನಾಗ್ರಂಥ ಪಡಿಮೂಡಿಸಿದೆ. ಪ್ರಾರ್ಥಿಸುವುದು ಹೇಗೆಂಬುದನ್ನು ತಿಳಿದುಕೊಂಡು ಉಪಕೃತರಾಗಲಿ ಎಂದೀಗ ಆಕೆ ಈ ಪುಸ್ತಕವನ್ನು

ಸಾರ್ವಜನಿಕರಿಗೆ ಕೊಟ್ಟಿದ್ದಾಳೆ. ಅದೊಂದು ಗ್ರಂಥರತ್ನ. ಅವಳ ಮಧುರತನ ವಾಣಿಯನ್ನು ನಾವದರಲ್ಲಿ ಕೇಳಬಹುದು.

ದಿನಚರಿಯಿಂದ ಖಂಡಿತವಾಗಿ ನಾವು ಹೆಚ್ಚಿನ ಸಂಗತಿಯನ್ನು ಕಲಿಯಬಹುದು. ಅದು ಸಂಪೂರ್ಣ ಸಮರ್ಪಣೆಯ ಗ್ರಂಥವಷ್ಟೇ ಅಲ್ಲ: ಅದರಲ್ಲಿ ತನ್ನ ಬಾಳಿನ ಭಿನ್ನ ಭಿನ್ನ ಅವಧಿಗಳಲ್ಲಿ ಅವಳು ಎಂಥ ಕಷ್ಟಕರ ಆವಿರ್ಭಾವಗಳಲ್ಲಿ ಮತ್ತು ಸಾಧನೆಯ ಎಷ್ಟು ವಿವಿಧ ಹಂತಗಳಲ್ಲಿ ಹೊಕ್ಕು ಹೊರಟಳು ಎಂಬುದನ್ನು ನಾವು ನೋಡಬಲ್ಲೆವು.

ದಿನಚರಿಯು 1912ರ ನವೆಂಬರ್ 2ರಿಂದ ಆರಂಭವಾಗಿ 1931ರ ನವೆಂಬರ್ 24ರಲ್ಲಿ ಮುಗಿಯುತ್ತದೆ. ಉದ್ಧೃತಾಂಶಗಳು ತೋರಿಸುವಂತೆ ಅದರಲ್ಲಿ ಏಳು ಬೀಳುಗಳೆಷ್ಟೋ ಇವೆ. ಒಂದನ್ನಿಲ್ಲಿ ನಾವು ಉದ್ಧರಿಸುತ್ತೇವೆ.

"ಓ ಉದಾತ್ತ ಈಶ್ವರನೇ, ನೀನು ಎಲ್ಲ ವಸ್ತುಗಳಲ್ಲಿಯೂ ಅವುಗಳ ಪ್ರಾಣ, ಬೆಳಕು ಮತ್ತು ಪ್ರೇಮ ಎನ್ನಿಸಿರುವೆ, ಸೈದ್ಧಾಂತಿಕವಾಗಿ ನನ್ನ ಇಡೀ ಇರವೂ ನಿನಗೆ ಸಮರ್ಪಿತವಾಗಿದ್ದರೂ ಈ ಸಮರ್ಪಣೆಯನ್ನು ವಿವರ ಪೂರ್ವಕವಾಗಿ ಆಚರಣೆಗೆ ತರುವುದು ಈಗಲೂ ಕಷ್ಟಕರವೆನ್ನಿಸಿದೆ. ಈ ಲಿಖಿತ ಧ್ಯಾನದ (ಪ್ರಣಿಧಾನದ) ಕಾರಣ ಅಥವಾ ಸಮರ್ಥನೆಯು ನಿನಗೆ ಅದನ್ನು ನಿತ್ಯವೂ ಸಂಬೋಧಿಸುವುದರಲ್ಲೇ ಇದೆ ಎಂಬುದನ್ನು ತಿಳಿಯಲು ನನಗೆ ಹಲವಾರು ವಾರಗಳು ಬೇಕಾದವು. ಈ ಪ್ರಕಾರ ಪ್ರತಿದಿನವೂ ನಿನ್ನೊಡನೆ ಪದೇ ಪದೇ ಮಾಡಿದ ಸಂಭಾಷಣೆಯಲ್ಲಿ ಸ್ವಲ್ಪವನ್ನು ಭೌತಿಕ ರೂಪಕ್ಕೆ ಇಳಿಸುತ್ತೇನೆ. ಸಾಧ್ಯವಾದಷ್ಟು ಚೆನ್ನಾಗಿ ನಾನು ನಿನಗೆ ನನ್ನ ತಪ್ಪೊಪ್ಪಿಗೆಯನ್ನು ಸಲ್ಲಿಸುತ್ತೇನೆ; ನಿನಗೇನನ್ನಾದರೂ ನಾನು ಹೇಳಬಲ್ಲೆನೆಂದು ನಾನು ಹಾಗೆ ಮಾಡುವುದಿಲ್ಲ- ಏಕೆಂದರೆ. ನೀನೇ ಸ್ವತಃ ಸರ್ವ- ಆದರೆ ನಾವು ನೋಡುವ ಕೃತಕವೂ ಬಾಹ್ಯವೂ ಆದ ರೀತಿಯು, ಒಂದೊಮ್ಮೆ ಹಾಗೆ ಹೇಳಬಹುದಾದರೆ, ನಿನಗೆ ಅಪರಿಚಿತ -ನಿನ್ನ ಸ್ವಭಾವಕ್ಕೆ ವಿರುದ್ಧ. ಆದರೂ ನಿನ್ನತ್ತ ತಿರುಗುವುದರಿಂದ, ಈ ವಿಷಯಗಳನ್ನೆಲ್ಲ ವಿವೇಚಿಸುವಾಗ ನಾನು ನನ್ನನ್ನು ನಿನ್ನ ಬೆಳಕಿನಲ್ಲಿ ಮುಳುಗಿಸುವುದರಿಂದ,

ಮೆಲ್ಲಮೆಲ್ಲನೆ ಅವುಗಳು ನಿಜವಾಗಿಯೂ ಎಂಥವು ಎಂಬುವನ್ನು ಹೆಚ್ಚುಹೆಚ್ಚಾಗಿ ಕಂಡುಕೊಳ್ಳುವೆನು– ಅದು ಎಲ್ಲಿಯವರೆಗೆ? ನಿನ್ನೊಳಗೆ ನಾನು ಐಕ್ಯನಾಗುವ ದಿನದವರೆಗೆ. ಆಗ ನಿನಗೆ ಹೇಳತಕ್ಕದ್ದೇನೂ ನನ್ನಲ್ಲಿ ಉಳಿಯದು; ಏಕೆಂದರೆ ಆಗ ನಾನು ನೀನಾಗಿ ಹೋಗಿರುತ್ತೇನೆ. ನಾನು ಮುಟ್ಟಬೇಕೆಂದಿರುವ ಗುರಿ ಇದು; ಈ ಜಯದತ್ತ ನನ್ನೆಲ್ಲ ಯತ್ನಗಳೂ ಹೆಚ್ಚುಹೆಚ್ಚಾಗಿ ಒಲಿಯುವುವು. ನಾನೆಂದು ಮುಂದೆಂದೂ ಹೇಳಲಾಗದಿರುವ ದಿನವನ್ನು ನಾನು ಬಯಸುತ್ತೇನೆ– ಏಕೆಂದರೆ, ಆ ದಿನ ನಾನು ನೀನಾಗಿರುವೆನು.

“ಪ್ರತಿದಿನ ಎಷ್ಟು ಸಲ ನಿನಗೆ ಸಮರ್ಪಿಸದೆ ನಾನು ಈಗಲೂ ಕಾರ್ಯದಲ್ಲಿ ಉದ್ಯುಕ್ತೆಯಾಗುತ್ತೇನೆ. ಆ ಕೂಡಲೇ ನನಗೆ ಒಂದು ಅಲಕ್ಷಣೀಯವಾದ ಅಸ್ವಾಸ್ಥ್ಯ ಉಂಟಾಗುತ್ತದೆ: ಅದು ನನ್ನ ಶರೀರದ ಇಂದ್ರಿಯಪ್ರಜ್ಞೆಯ ಮೂಲಕ ನನ್ನ ಹೃದಯದಲ್ಲಿ ಒಂದು ಬಗೆಯ ಚುಚ್ಚುನೋವಿನ ರೂಪವನ್ನು ತಾಳುತ್ತದೆ: ಅದೇ ನಾನು ನಿನಗೆ ಸಮರ್ಪಿಸಲಿಲ್ಲವೆಂಬುದನ್ನು ಅರಿತುದರ ಗುರುತು. ಆಗ ನಾನು ನನ್ನ ಕಾರ್ಯವನ್ನು ನನಗೆ ಕರ್ಮಸ್ಥಾನದಲ್ಲಿ (ವಿಷಯದ ವಸ್ತುವಿನ ಸ್ಥಾನದಲ್ಲಿ) ಇಡುತ್ತೇನೆ– ಆಗ ಅದು ನನಗೆ ಹಾಸ್ಯಾಸ್ಪದವಾಗಿ ತೋರುತ್ತದೆ ಅಥವಾ ಬಾಲಿಶ ಇಲ್ಲವೆ ದೋಷಪೂರ್ಣ ಎಂದೆನಿಸುತ್ತದೆ: ಅದನ್ನು ನಾನು ನಿಂದಿಸುತ್ತೇನೆ. ಒಂದುಕ್ಷಣ ನಾನು ಖಿನ್ನೆಯಾಗುತ್ತೇನೆ– ಅನಂತರ ನಿನ್ನಲ್ಲಿ ಮಗುವಿನ ಶ್ರದ್ಧೆಯಿಂದ ಮುಳುಗುತ್ತೇನೆ– ನಿನ್ನಿಂದ ಬರುವ ಬಲಕ್ಕಾಗಿ ಮತ್ತು ಸ್ಫೂರ್ತಿಗಾಗಿ ಕಾಯುತ್ತೇನೆ– ಆ ಮೂಲಕ ನನ್ನಲ್ಲಿಯ ಮತ್ತು ನನ್ನನ್ನಾವರಿಸಿದ ತಪ್ಪನ್ನು ತಿದ್ದುತ್ತೇನೆ– ಎರಡು ವಸ್ತುಗಳು ಒಂದು; ಏಕೆಂದರೆ, ನನಗೀಗ ಎಲ್ಲ ಕಾರ್ಯಗಳ ಕೇವಲ ಪರಸ್ಪರಾವಲಂಬನವನ್ನು ನಿರ್ಧರಿಸುವ ವಿಶ್ವವ್ಯಾಪಕ ಐಕ್ಯದ ಸತತವೂ ಅಚ್ಚುಕಟ್ಟೂ ಆದ ಸಾಕ್ಷಾತ್ಕಾರವಾಗಿದೆ”.

ಮಾತೃಶ್ರೀ ಆಗಲೇ ದೇವರೊಡನೆ ಆಪ್ತತೆಯನ್ನು ಪಡೆದಿದ್ದಾಳೆ ಎಂಬುದನ್ನಿದು ತೋರಿಸುತ್ತದೆ. ದೇವರೀಗ ಅವಳಿಗೆ ಹಳೆಯ ಗೆಳೆಯ,

[illegible]ತ್ತ ಪದೇ ಪದೇ ಆಕೆ ಅವನೊಡನೆ ಸಂಪರ್ಕ ಬೆಳೆಸುತ್ತಾಳೆ-[illegible] ಆಶೀರ್ವಾದದಿಂದ ತನ್ನ ಕರ್ತವ್ಯಚ್ಯುತಿಗಳನ್ನು ಒಪ್ಪಿಕೊಳ್ಳುತ್ತಾಳೆ-[illegible] ಅವನು ತಿದ್ದುಪಡಿಯಾಗುತ್ತದೆಂದು ಅವಳ ನಿರೀಕ್ಷೆ. ಅವಳು ಆತನನ್ನು ಅನನ್ಯವಾಗಿ ಅವಲಂಭಿಸಿದ್ದಾಳೆ. ಆದ್ದರಿಂದ ಅವಳಿಗೆ ಜಯದ ಬಗೆಗೆ ಆತ್ಮವಿಶ್ವಾಸವಿದೆ.

ಕೆಲವೇ ದಿನಗಳ ಅನಂತರ ಅವಳು ಮಾಡಿದ ಈ ಪ್ರಾರ್ಥನೆಯು ಅವಳಿಗೆ ದೇವಸಾಕ್ಷಾತ್ಕಾರವಾಗಿದೆ ಎಂಬುದಕ್ಕೆ ಸಾಕ್ಷಿಯಾಗಿದೆ:

ನವೆಂಬರ್ 19, 1912

"ನಿನ್ನನ್ನು ಪ್ರಾಮಾಣಿಕ ಬಯಕೆಯಿಂದ ಅರಸುತ್ತಿದ್ದ ಆ ಆಂಗ್ಲನಿಗೆ ನಾನು ನಿನ್ನೆ ಹೇಳಿದೆ: ನಾನು ಖಂಡಿತವಾಗಿಯೂ ನಿನ್ನನ್ನು ಹುಡುಕಿ ತೆಗೆದಿದ್ದೇನೆ ಮತ್ತು ನಮ್ಮ ಐಕ್ಯವು ಸ್ಥಿರ ಎಂದು. ನನ್ನ ಜಾಗರವಲ್ಲಿರುವುದು ಅಂಥ ಸ್ಥಿತಿ. ನನ್ನ ಆಲೋಚನೆಗಳೆಲ್ಲವೂ ನಿನ್ನೆಡೆಗೆ ಹೋಗುತ್ತವೆ; ನನ್ನ ಕಾರ್ಯಗಳೆಲ್ಲವೂ ನಿನಗೆ ಮುಡಿಪಾಗಿವೆ; ನಿನ್ನ ಉಪಸ್ಥಿತಿಯು ನನ್ನಪಾಲಿಗೆ ಕೇವಲವೂ ಅಪರಿವರ್ತನೀಯವೂ ಅವಿಕಲ್ಪನೀಯವೂ ಆದ ಒಂದು ವಸ್ತುಸ್ಥಿತಿ. ನಿನ್ನ ಶಾಂತಿಯು ಸ್ಥಿರವಾಗಿ ನನ್ನ ಹೃದಯದಲ್ಲಿ ನೆಲೆನಿಂತಿದೆ. ಆದರೂ ಈ ಐಕ್ಯಸ್ಥಿತಿಯು ಬಡವಾದುದೆಂಬುದನ್ನು ಬಲ್ಲೆ. ಇದು ಅದೃಢವೂ ಹೌದು. ನಾಳೆ ನನಗೆ ಸಾಧ್ಯವಾಗುವುದರ ಜೊತೆಗೆ ಹೋಲಿಸಿದರೆ ಅನಿಸುವುದೇ ಹೀಗೆ. ಹಾಗೆ ಸಾಧ್ಯವಾಗುವ ಐಕ್ಯಸ್ಥಿತಿಯಿಂದ ಈಗ ನಾನು ಬಹಳ ದೂರದಲ್ಲಿದ್ದೇನೆ ಆ ಐಕ್ಯಸ್ಥಿತಿಯಲ್ಲಿ ನಾನು ನಾನೆಂಬ ಭಾವವನ್ನು ಸಂಪೂರ್ಣವಾಗಿ ಕಳೆದುಕೊಳ್ಳುವೆನು. ಆ ನಾನೆಂಬ ಭಾವವಾವುದು? ನನ್ನನ್ನು ಅಭಿವ್ಯಕ್ತ[illegible] ಈಗ ನಾನು ಬಳಸುತ್ತಿರುವ 'ನಾನು'. ಆದರದು ಪ್ರತಿಸಲವೂ [illegible]ವಾಗಲೇ[illegible] ವಿಚಾರವನ್ನು ಹೇಳಲು ಅಯೋಗ್ಯವಾದ ಪದವಂತೆ ಸಂಕುಚಿತ, ಅರ್ಥಾತ್ ಪರಿಮಿತ, ನಿಯಂತ್ರಿತ.... ನೀನು ಸರ್ವ, ಸರ್ವವ್ಯಾಪಿ,

ಸರ್ವಾಂತರ್ಯಾಮಿ. ಕಾರ್ಯನಿರತವಾದ ಈ ಶರೀರವು ನಿನ್ನ ಸ್ವಂತ ಶರೀರ. ಇಷ್ಟೂ ದೃಶ್ಯವಾದ ಇಡಿ ಜಗತ್ತೂ ಸರಿಸಮ. ಈ ಜಗತ್ತು ನಿನ್ನ ಕಾಯವೇ ಅಲ್ಲವೇ? ಉಸಿರುಬಿಡುವವನು ನೀನು, ಆಲೋಚಿಸುವವನು ನೀನು, ಈ ದ್ರವ್ಯದಲ್ಲಿ ಪ್ರೀತಿಸುವವನು ನೀನು- ಇದು ನೀನೇ ಆದ್ದರಿಂದಿದು ನಿನ್ನ ಬುದ್ಧಿ ಪೂರ್ವಕವಾದ ಸೇವಕನಾಗಬಯಸುತ್ತದೆ".

ಈ ಪ್ರಾರ್ಥನೆಯಲ್ಲಿ ಆಕೆ ಖಚಿತವಾಗಿ ತಾನು ತನ್ನ ದೇವರನ್ನು ಕಂಡುದಾಗಿ ಹೇಳುತ್ತಾಳೆ- ಅಲ್ಲದೆ, ಅವಳು ಆತನೊಡನೆ ಸತತಸಂಪರ್ಕ ವನ್ನಿಟ್ಟುಕೊಂಡಿರುವುದಾಗಿಯೂ ಅವನೊಡನೆ ತನ್ನನ್ನು ಐಕ್ಯಗೊಳಿಸಿ ಕೊಂಡಿರುವುದಾಗಿಯೂ ಈ ಸ್ಥಿತಿಯು ಇನ್ನಷ್ಟು ಗಭೀರ-ಗಭೀರತರವಾಗುತ್ತ ಹೋಗಿರುವುದಾಗಿಯೂ ಹೇಳುತ್ತಾಳೆ.

ಅವರೀ ವೈಯಕ್ತಿಕ ಮುಕ್ತಿಯ ಸಾಕ್ಷಾತ್ಕಾರವು ಅವಳ ಆತ್ಯಂತಿಕ ಧ್ಯೇಯವನ್ನು ಮುಟ್ಟುವ ಒಂದು ಹೆಜ್ಜೆಯಷ್ಟೇ ಆಗಿದೆ: ಅವಳು ಜಗತ್ತಿಗೇ ಸುಖ-ಶಾಂತಿಗಳನ್ನು ತರಲು ಬಯಸುತ್ತಾಳೆ. ಅಜ್ಞಾನಿ, ದುಃಖಿ, ನಿರಾಶ, ಕ್ಲೇಶಮಗ್ನ ಎನ್ನಿಸಿರುವ ಜನಗಳೆಲ್ಲರಿಗೂ ಅವನ್ನು ಒದಗಿಸಲು ಹಾರಯಿ ಸುತ್ತಾಳೆ. ಅವಳ ಭಾವನೆಗಳನ್ನು ಈ ಕೆಳಗಿನ ಪ್ರಾರ್ಥನೆ ಸ್ಪಷ್ಟವಾಗಿ ಅಭಿವ್ಯಂಜಿಸುತ್ತದೆ:

ಜೂನ್ 17, 1913

"ಹೇ ಈಶ್ವರ, ನನ್ನನ್ನು ಬೆಳಕು ಬೀರುವ ಮತ್ತು ಬೆಚ್ಚಗಿರಿಸುವ ಬೆಂಕಿಯಂತೆ, ಬಾಯಾರಿಕೆ ಹಿಂಗಿಸುವ ಬುಗ್ಗೆಯಂತೆ, ನೆರಳೀಯುವ ಮತ್ತು ಕಾಯುವ ಮರದಂತೆ ರೂಪಿಸು ... ಜನರು ಅಷ್ಟು ಅಸುಖಿಗಳೂ ಅಜ್ಞಾನಿಗಳೂ ಆಗಿದ್ದಾರೆ; ಅವರಿಗೆ ಅಷ್ಟು ನೆರವು ಬೇಕು.

"ನನಗೆ ನಿನ್ನಲ್ಲಿರುವ ಅಂತಃ ಶ್ರದ್ಧೆ, ಒಳನಿಶ್ಚಯ ದಿನೇ ದಿನೇ ಬೆಳೆಯುತ್ತಿದೆ; ಹಾಗೇ ದಿನೇ ದಿನೇ ನಿನ್ನ ಪ್ರೇಮವು ನನ್ನ ಹೃದಯದಲ್ಲಿ

ಹೆಚ್ಚು ಹೆಚ್ಚು ಸಜೀವವಾಗುತ್ತ ಹೋಗುತ್ತಿದೆ- ನಿನ್ನ ಬೆಳಕು ಒಮ್ಮೆಲೇ ಹೆಚ್ಚು ಪ್ರಕಾಶಮಾನವೂ ಮೃದುವೂ ಆಗುತ್ತಿದೆ; ನಿನ್ನ ಸತ್ಯವು ಅದ್ಭುತ; ನಿನ್ನ ಸರ್ವಶಕ್ತ ಪ್ರೇಮವು ಜಗತ್ತನ್ನು ಸಂರಕ್ಷಿಸುತ್ತದೆ".

ತನ್ನ ಮನಸ್ಸು-ಹೃದಯಗಳಲ್ಲಿ ಆಕೆ ಮಾಡುತ್ತಿದ್ದ ಸಾಧನೆಯ ಅಂಗವಿದು. ಇದು ಅವಳಿಗಾಗಿ ಅಲ್ಲ- ಇಡಿ ಜಗತ್ತಿಗಾಗಿ. ಈ ಪ್ರಾರ್ಥನೆಯು ದಿನವೂ ಅವಳ ಇರವಿನಿಂದ ಹೊರಬೀಳುತ್ತಿತ್ತು. ದಿನಚರಿಯಂತೆ ಬರೆದ ಈ ಇಡೀ ಪುಸ್ತಕದಲ್ಲಿ ಆಕೆಯ ಉತ್ಕಂಠಿತ ಭಕ್ತಿ ಮತ್ತು ಧ್ಯೇಯಸಾಧನೆಯ ಆಶೆಗಳನ್ನುಳಿದರೆ ಯಾವ ಪುಟದಲ್ಲಿಯೂ ಇತರ ವಿಷಯವಿಲ್ಲ. ಅವು ಕವಿಸಹಜವಾದ ಅಥವಾ ಕಾವ್ಯಮಯ ಅಭ್ಯಾಸಕರ್ಮಗಳಲ್ಲ. ಅವುಗಳಲ್ಲಿ ಸಾಕಷ್ಟು ಕಾವ್ಯವಿರುವುದೇನೋ ನಿಜ. ಆದರದೆಂಥ ಕಾವ್ಯ? ಅದು ಪವಿತ್ರತರಕಾವ್ಯ; ಅದರಲ್ಲಿ ಹೊರಗಿನದೇನೂ ಇಲ್ಲ- ಅವಳ ದೈವಭಕ್ತಿಯಷ್ಟೇ ಇದೆ- ಅವಳ ದುಃಖ- ಕಾರುಣ್ಯಗಳಷ್ಟೇ ಇವೆ. ಯಾರ ಬಗೆಗೆ ಅವಳ ದುಃಖ-ಕಾರುಣ್ಯಗಳು? ಪರಮ ಸತ್ಯವನ್ನು ಮರೆತು ಕುರುಡರೂ ಅಜ್ಞಾನಿಗಳೂ ಅಸುಖಿಗಳೂ ಆಗಿ ಸುಖಕ್ಕಾಗಿ ಅತ್ತಿಂದಿತ್ತ ಅಲೆದಾಡಿ ಅಂತ್ಯವಿಲ್ಲದ ತೊಂದರೆಗಳಲ್ಲಿ ಸಿಕ್ಕಿಕೊಳ್ಳುವ ಜನರ ಬಗೆಗೆ. ಅವರ ಚೇತನೆಯನ್ನು ಬದಲಾಯಿಸಿ, ಅವರ ದುಃಖವನ್ನು ಪರಿಹರಿಸಿ, ಒಂದು ಹೊಸಸ್ಥಿತಿಗೆ ಅವರನ್ನು ಎತ್ತುವಂಥ ಶಕ್ತಿಯನ್ನು ವರವಾಗಿ ಕೊಡೆಂಬುದೇ ಅವಳ ಪ್ರಾರ್ಥನೆ. ಇದೊಂದೇ ವಿಷಯ ಅವಳ (ಪ್ರಾರ್ಥನೆಗಳಲ್ಲಿ) ವಿವೇಚಿಸಲ್ಪಟ್ಟಿರುವುದು.

ಮಾತೃಶ್ರೀಯ ಮೊದಲ ಜೀವನ ಹಾಗಿತ್ತು. ಆಮೇಲೆ ಪ್ಯಾರಿಸ್ಸನ್ನು ಬಿಟ್ಟು ಹೊರಡುವ ಸಮಯ ಬಂತು. ಆಗ ಭಾರತಕ್ಕೆ ಬಂದು ಪಾಂಡಿಚೇರಿಗೆ ಹೋದಳು. ಅವಳು ಪ್ಯಾರಿಸ್ಸನ್ನು ಬಿಡುವ ಮೊದಲು ತನ್ನ ದಿನಚರಿ ಪುಸ್ತಕದಲ್ಲಿ ಹೀಗೆ ಬರೆದಳು:

ಮಾರ್ಚ್ 4, 1914

"ಇದು ಕೊನೆಯ ಅವಧಿ. ನಿನ್ನ ಉಪಸ್ಥಿತಿಯಿಂದ ತುಂಬಿದ ಈ ಕೋಣೆಯಲ್ಲಿರುವ ಈ ಮೇಜನ್ನು ಆಧರಿಸಿ ನಾನು ಬರೆಯುವುದು ಬಹಳ ಕಾಲಾನಂತರ ಆಗಬಹುದು. ಈ ಪುಟದ ಬರಹ ಹರಿಯುತ್ತಿರುವ ಹಾಗೇ ನಾನು ಇದನ್ನು ಪ್ರಣಿಧಾನಿಸುತ್ತಿರುವುದು ಆಂತರಿಕ ಏಕಾಗ್ರತೆಯಿಂದ, ಇದು ತಿರುಗುತ್ತಲೇ ಹಿಂದಿನ ಸ್ವಪ್ನದಲ್ಲಿ ಅದೃಶ್ಯವಾಗುತ್ತದೆ. ಮುಂದಿನ ಖಾಲಿ ಪುಟದಲ್ಲಿ ಭವಿಷ್ಯತ್‌ಕಾಲದ ಸ್ವಪ್ನ ಸುಪ್ತವಾಗಿ 'ತುಂಬಿದೆಯೆಂದು ನಾನು ನಂಬುತ್ತೇನೆ. ಈಶ್ವರನೇ. ನನ್ನಲ್ಲಿರುವ ಎಲ್ಲವೂ ನಿನ್ನನ್ನು ಆರಾಧಿಸುವಂತೆ ಮತ್ತು ಸೇವಿಸುವಂತೆ ಅನುಗ್ರಹಿಸು, ಎಲ್ಲರಿಗೂ ಶಾಂತಿ ದೊರಕಲಿ!"

ತನ್ನ ಜಲಪ್ರಯಾಣಕಾಲದಲ್ಲಿ ಅದೇ ದಾಟಿಯಲ್ಲಿ ಅವಳು ಇತರ ಹಲವಾರು ಪ್ರಾರ್ಥನೆಗಳನ್ನು ಬರೆದಳು:

"ಒಂದೇ ಬಯಕೆಯಿಂದ ನನ್ನ ಪ್ರಾರ್ಥನೆಯು ನಿನ್ನೆಡೆಗೆ ಏಳುತ್ತದೆ: ನಿನ್ನ ವಾತ್ಸಲ್ಯವನ್ನು ಅಳವಡಿಸಿಕೊಂಡು ಬಾಳುವುದು, ನಿನ್ನ ವಾತ್ಸಲ್ಯವನ್ನು ಬೆಳಕಾಗಿ ಹರಿಸುವುದು– ಎಲ್ಲರೂ ಸುರಕ್ಷಿತತೆಯ ಕೋಟೆಯಲ್ಲಿ ಭದ್ರವಾಗಿ ಮನಸ್ಥೈರ್ಯವುಳ್ಳ ಶಕ್ತಿ ಮತ್ತು ಪರಿಣಾಮಕತೆಯಿಂದ ಇದಾಗಬೇಕು– ನಮ್ಮ ಸಂಬಂಧದಿಂದ ಎಲ್ಲರೂ ಉನ್ನತತರ ಪ್ರಜ್ಞಾಸ್ತರಕ್ಕೇರಿ ಬೆಳಕನ್ನು ಕಂಡವರಾಗಬೇಕು. ಬಾಳ ಬವಣೆಯನ್ನು ಪರಿಹರಿಸುವ, ಕ್ಲೇಶವನ್ನು ಕಳೆಯುವ ಪ್ರಶಾಂತ ಆತ್ಮವಿಶ್ವಾಸವನ್ನೂ ಶಾಂತಿಯನ್ನೂ ಹುಟ್ಟಿಸುವ, ತೀಕ್ಷ್ಣ ವೇದನೆಯನ್ನು ಒರಿಸಿ ಒಗೆದು ಅದರ ಜಾಗದಲ್ಲಿ ಏಕಮೇವಾದ್ವಿತೀಯವಾದ ನಿಜಸುಖವನ್ನು ತಂದಿರಿಸುವ– ಎಂದೂ ಬಾಡದೆ ನಿನ್ನಲ್ಲಿ ಸ್ಥಿರವಾಗಿ ಬೇರು ಬಿಟ್ಟಿರುವಂಥ ಆನಂದವನ್ನು ಪಡಿಮೂಡಿಸುವ ಶಕ್ತಿಯನ್ನು ಪಡೆಯಬೇಕೆಂಬುದೇ (ನನ್ನ ಪ್ರಾರ್ಥನೆ)...."

ಬಹುಬೇಗ ಪ್ರಾರ್ಥನೆಗಳು ಅವಳನ್ನು ಪ್ರಾರ್ಥಿತಗಳತ್ತ ಒಯ್ದವು. ಒಂದು ಹೊಸ ಅಧ್ಯಾಯವು ತೆರೆಯಲಿದೆ.

ಪಾಂಡಿಚೇರಿಗೆ ಆಗಮನ

1914ನೆಯ ಮಾರ್ಚ್ 29ನೆಯ ದಿನಾಂಕದಲ್ಲಿ ಮೊಟ್ಟಮೊದಲು ಮಹಾತಾಯಿ ಪಾಂಡಿಚೇರಿಗೆ ಆಗಮಿಸಿದಳು. ಅದೇ ದಿನ ಆಕೆ ಅರವಿಂದರನ್ನು ಸಂದರ್ಶಿಸಿದಳು; ಮತ್ತು ಕೂಡಲೇ ತಾನು ಸ್ವಪ್ನದಲ್ಲಿ ಕಾಣುತ್ತಿದ್ದ ಮತ್ತು ಹುಡುಕಾಡುತ್ತಿದ್ದ ಗುರು ಇವರೇ ಎಂದು ಅವಳು ಕಂಡುಕೊಂಡಳು. ಮರುದಿನ ಆಕೆ ತನ್ನ ದಿನಚರಿ ಪುಸ್ತಕದಲ್ಲಿ ಆ ಬಗ್ಗೆ ತನಗೆನ್ನಿಸಿದ್ದನ್ನು ಬರೆದಳು.

1914ನೆಯ ಮಾರ್ಚ್ 30

“ನಿನ್ನ ಸಮಗ್ರ ಸೇವಕರಾಗಿರುವ ಮತ್ತು ನಿನ್ನ ಉಪಸ್ಥಿತಿಯ ಪೂರ್ಣಪ್ರಜ್ಞೆಯುಳ್ಳವರಾಗಿರುವ ಜನರೆದುರು ನಿಂತಾಗ ಹೇಗೆ ನಾನು ಆ ಸ್ಥಿತಿಯಿಂದ ಬಹುದೂರದಲ್ಲಿದ್ದೇನೆ- ಅದನ್ನಿನ್ನೂ ನಾನು ಪಡೆಯಬೇಕಾಗಿದೆ- ಎಂಬುದು ಗೊತ್ತಾಗುತ್ತದೆ. ಆದರೆ ಈ ತಿಳಿವಳಿಕೆಯು ನಿರ್ವಿಣ್ಣತೆಯನ್ನು ನನ್ನಲ್ಲಿ ಉಂಟು ಮಾಡುವುದರ ಬದಲು ನನ್ನ ಧ್ಯೇಯ ಸಾಧನಾಪೇಕ್ಷೆಯನ್ನೂ ಉತ್ಸಾಹವನ್ನೂ ಬಲಗೊಳಿಸಿ ಪ್ರೋತ್ಸಾಹಿಸುತ್ತದೆ- ಎಲ್ಲ ಅಡಿಗಳನ್ನೂ ಗೆಲ್ಲುವ ನನ್ನ ಸಂಕಲ್ಪವನ್ನು ದೃಢಪಡಿಸುತ್ತದೆ.... ಸ್ವಲ್ಪ ಸ್ವಲ್ಪವಾಗಿ ಕ್ರಮಶಃ ಕ್ಷಿತಿಜವು ನಿರ್ದಿಷ್ಟವಾಗುತ್ತದೆ, ದಾರಿ ಸ್ಪಷ್ಟವಾಗುತ್ತದೆ; ಮತ್ತು ನಾವು ಇನ್ನಷ್ಟು ಹೆಚ್ಚಿನ ನಿಶ್ಚಿತತೆಗೆ ತಲುಪುವೆವು.

“ಸಾಂಪ್ರತವು ಅಜ್ಞಾನದಲ್ಲಿ ನೂರಾರು ಜನರು ಮುಳುಗಿದ್ದರೆ ಮುಳುಗಿರಲಿ- ಅದರಿಂದಾವ ತೊಂದರೆಯೂ ನನಗಿಲ್ಲ. ನಿನ್ನೆ ನಾವು

ಕಂಡವನು ಇಂದು ಭೂಮಿಯ ಮೇಲಿದ್ದಾನೆ: 'ಒಂದು ದಿನ ಬರುತ್ತದೆ'- ಎಂದು ಕತ್ತಲು ಬೆಳಕಾಗಿ ಪರಿವರ್ತನ ಹೊಂದುವುದು- ಅಂದು ನಿನ್ನ ಆಳಿಕೆಯು ಭೂಮಿಯಲ್ಲಿ ಸ್ಥಾಪಿಸಲ್ಪಡುವುದು'- ಎಂಬುದನ್ನು ಸಿದ್ಧ ಮಾಡಲು ಆತನ ಉಪಸ್ಥಿತಿ ಸಾಕು".

ಪಾಂಡಿಚೇರಿಯಲ್ಲಿ 3 ದಿನ ಇದ್ದ ಮೇಲೆ 3-4-1914 ರಂದು ಆಕೆ ತನ್ನ ದಿನಚರಿ ಪುಸ್ತಕದಲ್ಲಿ ಈ ಕೆಳಗಿನಂತೆ ಬರೆದಳು:

"ನಾನೊಂದು ಹೊಸ ಬಾಳಿನಲ್ಲಿ ಪುನರ್ಜನ್ಮ ತಾಳುತ್ತಿರುವಂತೆ ನನಗೆ ಭಾಸವಾಗುತ್ತಿದೆ: ಹಿಂದಿನ ಎಲ್ಲ ಕ್ರಮಗಳೂ ಅಭ್ಯಾಸಗಳೂ ಈಗ ನಿರುಪಯೋಜಕಗಳಾಗಿ ತೋರುತ್ತವೆ. ಹಿಂದೆ ಫಲವೆನ್ನಿಸಿದ್ದೀಗ ಬರಿ ಸಿದ್ಧತೆಯಾಗಿ ಕಾಣುತ್ತದೆ. ಇನ್ನೂ ನಾನೇನನ್ನೂ ಮಾಡಿಲ್ಲವೆಂದು ನನಗೆ ನ್ನಿಸುತ್ತದೆ, ಆಧ್ಯಾತ್ಮಿಕ ಜೀವನವನ್ನು ನಾನು ನಡೆಸಿಯೇ ಇಲ್ಲವೆನ್ನಿಸುತ್ತದೆ, ಅದಕ್ಕೊಯ್ದು ತಲುಪಿಸುವ ಹಾದಿಯನ್ನು ಮಾತ್ರ ಹಿಡಿದಿದ್ದೆ ಎನ್ನಿಸುತ್ತದೆ; ನನಗೇನೂ ಅರಿಯದೆನ್ನಿಸುತ್ತದೆ. ಯಾವುದನ್ನೂ ನಾನು ಸೂತ್ರಿಸಲಾರೆ ಎಂದು ತೋರುತ್ತದೆ: ಎಲ್ಲ ಅನುಭವಗಳೂ ಇನ್ನುಮುಂದೆ ಶುರುವಾಗಬೇಕು.... ನಾನೀಗ ಖಂಡಿತವಾಗಿ ನನ್ನನ್ನು ತ್ಯಾಗಮಾಡಬೇಕು. ಹೇ ಭಗವನ್, ನಾನು ನಿನ್ನ ಆಲೋಚನೆ ಮತ್ತು ನಿನ್ನ ಸಂಕಲ್ಪಗಳು ನಿರಾತಂಕವಾಗಿ ಮುದ್ರಿತವಾಗತಕ್ಕ ಶುದ್ಧ ಶೂನ್ಯಪುಟವಾಗಬೇಕು- ಯಾವರೀತಿಯಿಂದಲೂ ಅವುಗಳ ಮುದ್ರಣ ವಿಕೃತವಾಗದಿರುವಷ್ಟು ಸುರಕ್ಷಿತೆಯನ್ನು ಕೊಡುವಂತಾಗಬೇಕು. ನನ್ನೆದೆಯಿಂದ ಹಿಡಿಸಲಾರದಷ್ಟು ಕೃತಜ್ಞತೆಯೇಳುತ್ತಿದೆ: ಕಟ್ಟ ಕಡೆಗೆ ಇಷ್ಟುದಿನ ನಾನು ಅರಸುತ್ತಿದ್ದ ಹೊಸ್ತಿಲಿಗೆ ಬಂದು ತಲುಪಿದೆನೆಂದು ತೋರುತ್ತಿದೆ".

ಆಕೆ ತನ್ನ ಈ ಪ್ರಾರ್ಥನೆಯಲ್ಲಿ ಬರೆದದ್ದರಲ್ಲಿ ಅವಳ ಸ್ವಂತದ ನಮ್ರತೆ ತುಂಬಿಕೊಂಡಿದೆ. ಆದರಾಕೆ ಆಗಲೇ ಸುಸಜ್ಜಿತೆಯೂ ಸಿದ್ಧೆಯೂ ಆಗಿದ್ದಳು: ಅವಳಲ್ಲಿ ಅಹಂಭಾವದ ಕಸರಿರಲಿಲ್ಲ; ಆದ್ದರಿಂದಲೇ ಅವಳಷ್ಟು ಸಾಧುಜೀವಿಯಾಗಿದ್ದಳು.

ಆಕೆ ಶ್ರೀಅರವಿಂದರನ್ನು ಸೇರಿದಳು. ಅವರನ್ನು ತನ್ನ ಗುರುವನ್ನಾಗಿ ಸ್ವೀಕರಿಸಿದಳು. ಅವರ ಆಧ್ಯಾತ್ಮಿಕ ಸಲಹೆಗಳನ್ನು ಅನುಸರಿಸಿದಳು. ಅವಳು ಪಾಂಡಿಚೇರಿಯಲ್ಲಿದ್ದು ತನಗೆ ಸಾಧ್ಯವಾದ ಎಲ್ಲವುಗಳಲ್ಲಿಯೂ ಅರವಿಂದರಿಗೆ ಸಹಾಯಮಾಡಲು ಯತ್ನಿಸಿದಳು. ಅವಳ ಹಾಗೂ ಅವಳ ಗಂಡನ ನೆರವಿನಿಂದ "ಆರ್ಯ" ಎಂಬ ನಿಯತಕಾಲಿಕವನ್ನು ಪ್ರಕಟಿಸ ಲಾಯಿತು. ವಿವಿಧ ವಿಷಯಗಳನ್ನು ಕುರಿತು ಅರವಿಂದರು ಅದರಲ್ಲಿ ಲೇಖನಗಳನ್ನು ಬರೆಯುತ್ತಿದ್ದರು. ಆ ಪತ್ರಿಕೆಯ ಫ್ರೆಂಚ್ ರೂಪವೂ ಪ್ರಕಟವಾಗುತ್ತಿತ್ತು.

ಆದರೆ ಸುಮಾರು ಒಂದುವರ್ಷದೊಳಗೆ ಮೊದಲನೆಯ ಜಾಗತಿಕ ಯುದ್ಧ ಪ್ರಾರಂಭವಾಯ್ತು: ವಿದೇಶೀಯ ನಾಗರಿಕೆಯಾಗಿದ್ದುದರಿಂದ ಮಾತೃಶ್ರೀಯು ಗಂಡನೊಡನೆ ಪ್ಯಾರಿಸ್ಸಿಗೆ ಹಿಂದಿರುಗ ಬೇಕಾಯ್ತು. ಹಾಗೆ ಹಿಂದಿರುಗುವಾಗ ಅವಳು ತಾನು ಆಗತಾನೇ ಆರಂಭಿಸಿದ ತನ್ನೆಲ್ಲ ಕಾರ್ಯವನ್ನೂ ಇಲ್ಲೇಬಿಟ್ಟು ಹೋಗಬೇಕಾಯ್ತು. ಅವಳ ಅಂದಿನ ಮನಃಸ್ಥಿತಿ ಯನ್ನು ಯಾರಾದರೂ ಸುಲಭವಾಗಿ ಊಹಿಸಬಲ್ಲರು. ಶಾಂತತೆಯಿಂದಲೂ ಸಮತ್ವ ಭಾವದಿಂದಲೂ ಅವಳೀ ದೌರ್ಭಾಗ್ಯವನ್ನು ಸಹಿಸಿದಳು.

ಯುರೋಪಿಗೆ ಜಲಪ್ರಯಾಣದ ಮೂಲಕ ಹಿಂದಿರುಗುವಾಗ ಆಕೆ ತನ್ನ ದಿನಚರಿ ಪುಸ್ತಕದಲ್ಲಿ ಹೀಗೆ ಬರೆದಳು:

3-3-1915

"ಈ ಏಕಾಂತತೆಯು ಕ್ರೂರವೂ ತೀಕ್ಷ್ಣವೂ ಆಗಿದೆ. ಈಗ ಯಾವಗಲೂ ನನ್ನನ್ನು ಯಾರೋ ಅಂಧಕಾರ ನರಕದಲ್ಲಿ ತಲೆಕೆಳಗಾಗುವಂತೆ ನೂಕಿಬಿಟ್ಟಿದ್ದಾರೋ ಏನೋ ಎಂಬಂತಹ ಬಲಿಷ್ಠ ಭಾವನೆ ಬಡಿದುಕೊಂಡಿದೆ! ನಾನು ಈ ಪ್ರಕಾರ ಹಿಂದೆಂದೂ ಯಾವ ಪರಿಸ್ಥಿತಿಯಲ್ಲಿಯೂ ಯಾವಕ್ಷಣ ದಲ್ಲಿಯೂ ನನಗೆ ಪತ್ನಳೆನ್ನಿಸಿದ. ನನ್ನ ಜೀವನಸಾರವೆನ್ನಿಸಿದ ಎಲ್ಲದ್ದರಕ್ಕೂ ಸಂಪೂರ್ಣ ವಿರುದ್ಧವಾದ ಆವರಣದಲ್ಲಿ ಬದುಕಿರುವಂತೆ ನನಗೆನ್ನಿಸಿತು....

ಆದರೆ ಒಮ್ಮೆಲೇ ನನ್ನ ಧ್ಯೇಯಸಾಧನೇಚ್ಛೆ ಇನ್ನಷ್ಟು ಉಜ್ವಲವಾಯಿತು. ದುರ್ಬಲವಾಗುವುದರಿಂದ ಈ ಜೀವವನ್ನು ಉಳಿಸು: ಅದು ಯಾವುದೇ ಆಗಲಿ– ಈ ಜೀವವನ್ನು ಆ ನಿನ್ನ ಕಾರ್ಯವನ್ನು ಮಾಡುವ ಶಕ್ತಿಗಳುಳ್ಳ ಮತ್ತು ಸುಲಭೋಪಶಿಕ್ಷಣೀಯವಾದ ಸಾಧನವನ್ನಾಗಿ ಮಾಡು".

ಪುನಃ ಆಕೆ 7-3-1915ರಲ್ಲಿ ಬರೆದಳು:

"....ನಾನು ನಿನ್ನ ಕರುಣೆಯನ್ನೂ ಬೇಡೆನು. ಏಕೆಂದರೆ ನನಗಾಗಿ ನೀನು ಏನನ್ನು ಸಂಕಲ್ಪಿಸುವೆಯೋ ಅದರಂತೆಯೇ ನಾನೂ ಸಂಕಲ್ಪಿಸುವೆನು. ದಾರಿಯಲ್ಲಿ ಎಂಥ ಆಳವಾದ ಅಂಧಕಾರ ಮತ್ತು ವಿಘ್ನಗಳೇ ಬರಲಿ— ಒಂದೊಂದೇ ಹೆಜ್ಜೆ ಮುಂದೆಹೋಗುವುದೇ- ಯಾವಾಗಲೂ ಮುಂದೆ ಮುಂದೆ ಹೋಗುವುದೇ ನನ್ನ ಎಲ್ಲ ಶಕ್ತಿಯು ಶ್ರಮಪಡುವುದರ ಗುರಿ...."

ಆಕೆ ಪ್ಯಾರಿಸ್ಸಿಗೆ ಮರಳಿದಳು; ತನ್ನ ಕ್ಲೇಶಮಯ ದಿನಗಳನ್ನು ಮೌನವಾಗಿ ಕಳೆದಳು. ಆದರೆ ಅವಳು ಈ ವಿಷಯದ ಬಗೆಗೆ ಯಾರಿಗೂ ಏನನ್ನೂ ಹೇಳಲಿಲ್ಲ; ತನ್ನ ದಿನಚರಿ ಪುಸ್ತಕದಲ್ಲಿಯೂ ಏನನ್ನೂ ಬರೆಯಲಿಲ್ಲ. ಏಕೆಂದರೆ. ಅವಳು ಯಾವ ಸ್ಥಿತಿಯಲ್ಲೇ ಇರಲಿ- ಅನುಭವದ ಲಾಭವನ್ನು ಪಡೆಯುತ್ತಲೇ ಇದ್ದಳು; ಅವಳಿಗೆ ಆಧ್ಯಾತ್ಮಿಕ ಸಾಕ್ಷಾತ್ಕಾರಗಳು ಒಂದಾದಮೇಲೊಂದರಂತೆ ಆಗುತ್ತಿದ್ದವು- ಆ 5 ವರ್ಷಗಳ ಆಭಾಸಿಕ ನಿರಾಶೆಯಲ್ಲಿ ಆಕೆ ತನ್ನ ಭಾವಿ ಕಾರ್ಯಕ್ಕಾಗಿ ಸಿದ್ಧತೆ ನಡೆಸುತ್ತಿದ್ದಳು. ಆ ಅವಧಿಯಲ್ಲಿ ಆಕೆ ಬರೆದ ಪ್ರಾರ್ಥನೆಗಳು ಇದಕ್ಕೆ ಸಾಕ್ಷಿಗಳಾಗಿವೆ.

ಸುಮಾರು ಒಂದು ವರ್ಷದ ಮೇಲೆ ಆಕೆ ಜಪಾನಿಗೆ ಹೋದಳು. 1916 ರ ಡಿಸೆಂಬರ್ 5ನೆಯ ದಿನಚರಿಯಲ್ಲಿ ಅವಳು ಹೀಗೆ ಬರೆದಳು:

"ಭೂಮಿಯ ಕಡೆಗೆ ತಿರುಗು". ಅಪರಿವರ್ತನೀಯ ಐಕ್ಯದ ಮೌನದಲ್ಲಿ ರೂಢಿಯ ಆಜ್ಞೆ ಕೇಳಿಸುತ್ತಿತ್ತು. ಆಗ ನನ್ನ ಚೇತನೆಯು ಅನೇಕದಲ್ಲಿ ಒಂದೇ ಒಂದಾಗಿರುವ (ಸಚ್ಚಿದಾನಂದ) ತತ್ವದ ಚೇತನೆಯಾಗಿ

ಹೋಯಿತು. ಎಲ್ಲಿಯೇ ಆಗಲಿ, ಯಾರಲ್ಲೇ ಆಗಲಿ- ಆ ಒಂದನ್ನು ನೀನು ಕಾಣಬಲ್ಲೆಯಾದರೆ- ದೇವರಲ್ಲಿಯ ಈ ಐಕ್ಯಪ್ರಜ್ಞೆಯ ಜಾಗರ ನಿನಗಾಗುವುದು; ನೋಡು'.... ಅದೊಂದು ಜಪಾನೀಯ ರಸ್ತೆ; ಅದರಲ್ಲಿ ಹರ್ಷ ಹರಿಸುವ ಲಾಂದ್ರಗಳು ಉಜ್ವಲವಾಗಿ ಹೊಳೆಯುತ್ತಿದ್ದವು; ವಿವಿಧ ವರ್ಣಗಳಿಂದ ಅದು ಚಿತ್ರಮಯವಾಗಿತ್ತು. ಸಚೇತನವಾದುದೆಲ್ಲವೂ ರಸ್ತೆಯಲ್ಲಿ ಮುನ್ನಡೆದವು. ದೇವರು ಆ ಪ್ರತಿಯೊಂದರಲ್ಲೂ ದೃಶ್ಯನಾದನು. ಒಂದು ಚಿಕ್ಕಮನೆಯು ಪಾರದರ್ಶಕವಾಯಿತು. ಅದರಲ್ಲಿ ಒಂದು ಬದನೆಬಣ್ಣದ 'ಕಿಮೋನೋ' ಧರಿಸಿದ ಒಬ್ಬಳು 'ತತಮಿ' ಯ ಮೇಲೆ ಕುಳಿತದ್ದನ್ನು ಯಾರಾದರೂ ಕಾಣಬಹುದಾಗಿತ್ತು. ಆ ಕಿಮೋನೋ ಸಾಕಷ್ಟು ದೊಡ್ಡದಾಗಿತ್ತು ಮತ್ತು ವಿವಿಧ ಬಣ್ಣಗಳಿಂದಲೂ ಬಂಗಾರದ ಗೆರೆಗಳಿಂದಲೂ ಅಲಂಕೃತವಾಗಿತ್ತು. ಆ ಹೆಂಗಸು ಸುಂದರಿಯಾಗಿದ್ದಳು- ಅವಳ ವಯಸ್ಸು 35-40 ರ ನಡುವಿನದಾಗಿತ್ತು. ಅವಳು ಒಂದು ಬಂಗಾರದ ಬಣ್ಣದ 'ಸಮಿಸೆನ್ನ' ನ್ನು ಬಾರಿಸುತ್ತಿದ್ದಳು. ಅವಳ ಕಾಲ ಬದಿಯಲ್ಲೊಂದು ಮಗುವಿತ್ತು. ಆ ಹೆಂಗಸಿನಲ್ಲಿಯೂ ದೇವರು ತೋರುತ್ತಿದ್ದನು".

ಆಕೆ ಎಷ್ಟು ಉನ್ನತಮಟ್ಟದ ಸಾಕ್ಷಾತ್ಕಾರಕ್ಕೆ ಮುಟ್ಟಿದ್ದಳೆಂಬುದನ್ನು ನಾವಿಲ್ಲಿ ಸ್ಪಷ್ಟವಾಗಿ ಕಾಣಬಹುದು. ಅವಳಿಗೆ ದೇವರು ಎಲ್ಲವುಗಳಲ್ಲಿಯೂ ಎಲ್ಲವುದರ ಮೂಲಕವೂ ಕಾಣಿಸುತ್ತಿದ್ದನು. ಅವಳು ಎಲ್ಲಿ ನೋಡಿದರೂ- ರಸ್ತೆಯ ಕಡೆ ನೋಡಿದರೂ ಅವಳಿಗವನು ಸಿಕ್ಕುತ್ತಾನೆ ಮತ್ತು ಅವಳವನನ್ನು ಗುರುತಿಸುತ್ತಾಳೆ. ಈ ಬಗೆಯ ಆಂತರಿಕ ಅನುಭವವು ದಿನಂಪ್ರತಿ ಮುಂಬರಿಯುತ್ತಿತ್ತು.

ದಾರಿದ್ರ್ಯವನ್ನೆದುರಿಸುತ್ತಿದ್ದಾಗಲೂ ಆಕೆ ಬರೆದಳು:

28-11-1916

"...ದಾರಿದ್ರ್ಯ, ದಾರಿದ್ರ್ಯ! ನನ್ನನ್ನು ನೀನು ಮರುಭೂಮಿಯಲ್ಲಿರಿಸಿದೆ. ಆ ಮರುಭೂಮಿಯು ಒಣ ಒಣ ಮತ್ತು ನಿರಾವರಣ- ಹೀಗಿದ್ದರೂ ಈ

ಮರುಭೂಮಿಯು ನನಗೆ ಮಧುರ. ಓ ಒಡೆಯ, ನಿನ್ನಿಂದ ಬರುವುದೆಲ್ಲವೂ ಮಧುರ. ಈ ನಿರ್ವರ್ಣದ ಬೆಳ್ಳಿನಲ್ಲಿ, ಈ ಬೇಸರ ಬರಿಸುವ ಆವರಣದಲ್ಲಿ, ಈ ಹೊಳಪಿಲ್ಲದ ಬೂದಿ ಬಣ್ಣದ ಬೆಳಕಿನಲ್ಲಿ ಅನಂತ ಆಕಾರಗಳ ರುಚಿಯನ್ನು ಸವಿಯುತ್ತೇನೆ.... ನಾನು ಅವಿಷ್ಕೃತವಾದ ಏರಿಕೆಗಾಗಿ ರೆಕ್ಕೆ ತೆರೆಯುವ ಪಕ್ಷಿಯಂತಾಗಿರುವೆನೆನ್ನಿಸುತ್ತದೆ. ಆದರೆ ಹಕ್ಕಿಯು ಬಂಡೆಯಮೇಲೇ ಉಳಿದಿದೆ. ಅದರ ರೆಕ್ಕೆಗಳು ಹತ್ತಿಬಣ್ಣದ ಆಗಸದಲ್ಲಿ ಬಿಚ್ಚಿದ್ದರೂ ಏನೋ ಆಗಬೇಕೆಂದು ಅದು ಕಾದು ಕೂತಿದೆ- ಅದೇನೆಂಬುದು ಅದಕ್ಕೆ ಗೊತ್ತಿಲ್ಲ. ತನ್ನ ಹಾರಿಕೆಗೆ ಯಾವ ಬಂಧನವೂ ಅಡ್ಡಿಯಾಗಿಲ್ಲದಿರುವಾಗ ಅದು ಹಾರುವ ಆಲೋಚನೆಯನ್ನೇ ಮಾಡುವುದಿಲ್ಲ. ಸ್ವಾತಂತ್ರ್ಯ ತನಗಿದೆ ಎಂಬುದನ್ನು ತಿಳಿದ ಅದು ಅದನ್ನನುಭವಿಸುವುದಿಲ್ಲ; ಮತ್ತು ಮಿಕ್ಕವುಗಳಂತೆಯೇ ಆ ಹಕ್ಕಿ ಅಂಧಕಾರಮಯವಾದ ವಟ್ಟಮಂಜಿನಲ್ಲಿ ನೆಲದ ಮೇಲೆ ಕುಳಿತಿದೆ”.

ಕೆಲಕಾಲಾನಂತರ, ಪರಿಸ್ಥಿತಿ ಬದಲಾಯಿಸಿರಬೇಕು, ದಾರಿದ್ರ್ಯ ಹೋಗಿ ಧನಿಕತೆ ಬಂತು- ಇಲ್ಲಿ ನೋಡಿರಿ:

4-1-1917

“ಹೇ ಈಶ್ವರ. ನೀನು ನಿನ್ನ ಲಾಭಗಳನ್ನು ನನ್ನಮೇಲೆ ರಾಶಿಹಾಕಿದೆ. ಈಗ ಈ ದೇಹ ಏನನ್ನೂ ನಿರೀಕ್ಷಿಸುತ್ತಿಲ್ಲ, ಬಾಳಿನಿಂದ ಏನನ್ನೂ ಬಯಸುವುದಿಲ್ಲ. ಬಾಳು ಅತ್ಯಮೂಲ್ಯ ವಸ್ತುಗಳನ್ನು ಅದಕ್ಕೆ ತಂದು ಕೊಟ್ಟಿದೆ. ಜನರು ಬಹಳವಾಗಿ ಬಯಸುವ ವಸ್ತುಗಳವು. ವ್ಯಕ್ತಿ ಜೀವನದ ಸಕಲ ಕ್ಷೇತ್ರಗಳಲ್ಲೂ ನೀನು ಮಾನಸಿಕ, ಅಂತರ್ಮಾನಸಿಕ ಮತ್ತು ಭೌತಿಕ ವರಗಳ ಹೊರೆಯನ್ನು ನನ್ನ ಮೇಲೆ ಹೊರಿಸಿರುವೆ. ನೀನು ನನ್ನನ್ನು ಐಶ್ವರ್ಯದಲ್ಲಿಟ್ಟಿರುವೆ. ಐಶ್ವರ್ಯವು ನನಗೆ ದಾರಿದ್ರ್ಯದಷ್ಟೇ ಸಹಜವಾಗಿ ತೋರುತ್ತದೆ. ನನಗದರಿಂದ ಹೆಚ್ಚು ಸಂತೋಷವಾಗದು. ಏಕೆಂದರೆ ದಾರಿದ್ರ್ಯದಲ್ಲಿದ್ದಾಗ ಆಧ್ಯಾತ್ಮಿಕ ಜೀವನವು ಹೆಚ್ಚು ಸಾಂದ್ರವೂ ಜಾಗರಿತವೂ ಆಗಿತ್ತು: ಆದರೆ ಈ ಐಶ್ವರ್ಯವೂ ನನ್ನ ವ್ಯಕ್ತಿ ಜೀವನವೂ

(ಇವರ ಮೇಲೆ ನೀನು ನಿನ್ನ ವರಗಳನ್ನು ಹೇರಿರುವಾಗ) ಅವರ್ಣನೀಯ ಕೃತಜ್ಞತೆಯಿಂದ ನಿನ್ನ ಕಾಲಿಗೆ ಬೀಳುತ್ತವೆ. ನಿನ್ನ ಒಳ್ಳೆಯತನವು ಉಪಮಾತೀತ ಮತ್ತು ನಿನ್ನ ಕರುಣೆಯು ಅಪ್ರಮೇಯ".

ಅಪಕರ್ಷದಲ್ಲಿರಲಿ, ಉತ್ಕರ್ಷದಲ್ಲಿರಲಿ, ಮಾತೃಶ್ರೀಯು ತನ್ನ ಅಪರಿವರ್ತನೀಯ ಸಮತ್ವವನ್ನು ಉಳಿಸಿಕೊಂಡಿರುತ್ತಾಳೆ: ಇವೆಲ್ಲವನ್ನೂ ಸಹಜವೆಂದು ತಿಳಿಯುತ್ತಾಳೆ ಮತ್ತು ದೇವರಲ್ಲಿ ಅವಳಿಟ್ಟ ನಂಬಿಗೆ ಮತ್ತು ಶ್ರದ್ಧೆಗಳು ಅಚ್ಚಳಿಯದೆ ಇರುತ್ತವೆ.

ಕಟ್ಟಕಡೆಗೆ ಸಿದ್ಧತೆ-ನಿರೀಕ್ಷಣೆಗಳ ಅವಧಿ ಮುಗಿಯಿತು. ಬಹಳ ಕಾಲದಿಂದ ನಿರೀಕ್ಷಿಸುತ್ತಿದ್ದ ಕಾಲ ಬಂದಿತು. 24-4-1920 ರಂದು ಆಕೆ ಒಳಿತಿಗಾಗಿ ಉಳಿಯಲು ಆಕೆ ಪಾಂಡಿಚೇರಿಗೆ ಮರಳಿ ಬಂದಳು.

ಆದರೆ ತನ್ನ ತೊಂದರೆಗಳಿನ್ನೂ ಮುಗಿಯಲಿಲ್ಲವೆಂಬುದನ್ನು ಬಂದ ಸ್ವಲ್ಪ ಕಾಲದಲ್ಲಿಯೇ ಆಕೆ ಅರಿತಳು. ದೇವಾಜ್ಞಪ್ತ ಕಾರ್ಯವನ್ನವಳು ಆರಂಭಿಸುವ ಮೊದಲೇ ಅವಳು ವಿವಿಧ ವಿಘ್ನ-ವಿರೋಧಗಳ ಎದುರು ಹೋರಾಡಬೇಕಾಯಿತು. ಇದನ್ನೊಪ್ಪಿ ಅವಳು ತನ್ನ ಪ್ರಾರ್ಥನೆಯಲ್ಲಿ, ಬರೆದಿದ್ದಾಳೆ:

20-6-1920,

ಮಾತಿಗೆ ಮೀರಿದ ಸಂತೋಷವನ್ನು ದಯಪಾಲಿಸಿದ ಬಳಿಕ- ಓ ನನ್ನ ಒಲುಮೆಯ ಒಡೆಯನೇ- ಹೋರಾಟವನ್ನು, ಅಗ್ನಿ ಪರೀಕ್ಷೆಯನ್ನು, ನೀನು ನನಗಾಗಿ ಕಳಿಸಿಕೊಟ್ಟಿರುವೆ. ಇದು ಕೂಡ ನಿನ್ನ ಒಬ್ಬ ಅಸದೃಶ ದೇವದೂತನೆಂದು ಗ್ರಹಿಸಿ ನಾನು ಮುಗುಳ್ನಗೆ ನಕ್ಕೆ. ಈ ಹಿಂದೆ ನಾನು ಸಂಘರ್ಷಕ್ಕೆ ಹೆದರುತ್ತಿದ್ದೆ: ಏಕೆಂದರದು ನನ್ನ ಸಾಮರಸ್ಯ-ಶಾಂತಿಗಳ ಬಗೆಗಿನ ಪ್ರೇಮವನ್ನು ಗಾಸಿಗೊಳಿಸುತ್ತಿತ್ತು. ಆಕೆ ಗಡಿಬಿಡಿಯಲ್ಲಿರಲಿಲ್ಲ. ಶ್ರೀಅರವಿಂದರ ನೆರವಿನಿಂದ ತಾನು ಜಯಶೀಲಯಾಗುವೆನೆಂದು ಅವಳಿಗೆ ಗೊತ್ತಿತ್ತು.

ಆಶ್ರಮ

ಮಹಾತಾಯಿ ಪಾಂಡಿಚೇರಿಯಲ್ಲಿರ ಬಂದಾಗ ಅಲ್ಲಿ ಆಶ್ರಮ ಇತ್ತೆಂದು ಹೇಳುವುದು ಕಷ್ಟವಾಗಿತ್ತು. ಶ್ರೀ ಅರವಿಂದರು ಒಂಟಿ ಮನೆಯೊಂದರಲ್ಲಿ ವಾಸವಾಗಿರುತ್ತಿದ್ದರು. ಉಪ್ಪರಿಗೆಯಲ್ಲಿ ಮಹಾಮಾತೆಗೊಂದು ಕೊಠಡಿಯನ್ನು ಕೊಡಲಾಯ್ತು. ಅರವಿಂದರು ತಮ್ಮ ಸಾಧನೆಯಲ್ಲಿ ಮತ್ತು ಓದುಬರಹಗಳಲ್ಲಿ ನಿರತರಾಗಿರುತ್ತಿದ್ದರು. ಕೇವಲ 8-10 ಶಿಷ್ಯರು ಅವರೊಂದಿಗಿರುತ್ತಿದ್ದರು. ಅವರು ಬಹಳ ಮಿತವ್ಯಯದ ಜೀವನ ನಡೆಸಬೇಕಾಗಿತ್ತು. ತಮ್ಮ ಕೈಯಲ್ಲಾದಷ್ಟನ್ನು ಶಿಷ್ಯರು ಮಾಡುತ್ತಿದ್ದರು. ಆದರದು ಕೊರತೆಯ ದುಃಖವನ್ನು ಪರಿಹರಿಸಲು ಸಾಕಾಗದಾಗಿತ್ತು.

ಕ್ರಮೇಣ ಮಾತೃಶ್ರೀ ಮನೆವಾರ್ತೆಯನ್ನು ಕೈಗೆ ತೆಗೆದುಕೊಂಡಳು. ಕೂಡಲೇ ಅವಳು ಅರವಿಂದರ ನಿಯತಕಾಲಿಕ ಸ್ನಾನ, ಊಟ ಮತ್ತು ವಿಶ್ರಾಂತಿ ಕಾಲಗಳನ್ನು ವ್ಯವಸ್ಥೆಗೊಳಿಸಿದಳು. ಅವಳು ಹೆಚ್ಚಾಗಿ ತನ್ನ ಕೋಣೆಯಲ್ಲೇ ಇರುತ್ತಿದ್ದಳು ಮತ್ತು ಫಲಹಾರಕ್ಕೂ, ಊಟಕ್ಕೂ, ಗಂಜಿಯೂಟಕ್ಕೂ, ಚಹಕ್ಕೂ ಮಾತ್ರ ನಿರ್ದಿಷ್ಟ ವೇಳೆಗಳಲ್ಲಿ ಕೆಳಗೆ ಬರುತ್ತಿದ್ದಳು. ಆಗ ಆಕೆ ಶ್ರೀ ಅರವಿಂದರು ಹಾಗೂ ಅವರ ಶಿಷ್ಯರೊಡನೆ ಸಂಭಾಷಿಸುತ್ತಿದ್ದಳು. ಆದರೆ ಅವಳು ಮಾತಾಡುತ್ತಿದ್ದುದು ಬಹಳ ಸ್ವಲ್ಪ. ಆ ಹೊತ್ತಿಗೆ ಇತರರು ಅರವಿಂದರ ಸುತ್ತಲೂ ಕುರ್ಚಿಯ ಮೇಲೆ ಕುಳಿತುಕೊಳ್ಳುತ್ತಿದ್ದರು. ಆದರೆ ಅವಳು ನೆಲದ ಮೇಲೆ ಅವರ ಪಾದದ ಬಳಿ ಕುಳಿತುಕೊಳ್ಳುತ್ತಿದ್ದಳು. ತನ್ನ ಯೂರೋಪೀಯ ವೇಷವನ್ನವಳು ತೆಗೆದೊಗೆದಳು ಮತ್ತು ಭಾರತೀಯವಾದ ಸೀರೆ-ರವಕೆಗಳನ್ನು ತೊಟ್ಟಳು. ಮೀನು ಮಾಂಸಗಳ ಭೋಜನ ಬಿಟ್ಟು ಅವಳು ಶುದ್ಧ ಸಸ್ಯಾಹಾರಿಣಿ

ಯಾದಳು. ಆ ಸಮಯದಲ್ಲಿ ಉಳಿದೆಲ್ಲರೂ- ಶ್ರೀಅರವಿಂದರು ಕೂಡ-ಹಾಗೆ ಅಪ್ಪಟ ಸಸ್ಯಾಹಾರಿಗಳಾಗಿರಲಿಲ್ಲ. ಬಹಳ ವರ್ಷಗಳ ಅನಂತರ ಅರವಿಂದರ ಸಲಹೆಯ ಪ್ರಕಾರ ಆಕೆ ಯೂರೋಪೀಯ ರೀತಿಯ ಉಡುಪನ್ನು ಧರಿಸತೊಡಗಿದಳು.

ಬಹು ನಿಧಾನವಾಗಿ ಅವಳ ಸಲಹೆ-ಸೂಚನೆಗಳ ಪ್ರಕಾರ ಆಶ್ರಮವು ರೂಪಿತವಾಯ್ತು. ಶಿಷ್ಯಸಂಖ್ಯೆ ಹೆಚ್ಚತೊಡಗಿತು; ಜಾಗದ ಕೊರತೆ ತಲೆದೋರಿತು. ಆದುದರಿಂದ ಸುತ್ತಲಿನ ಮನೆಗಳಲ್ಲಿ ಕೆಲವನ್ನಾಕೆ ಅವರ ವಾಸಕ್ಕಾಗಿ ಕೊಂಡುಕೊಂಡಳು. ಅವಳು ಅವರ ಊಟ, ವಸತಿ ಮತ್ತು ಇತರ ಸುಖಸಾಮಗ್ರಿಗಳನ್ನು ವ್ಯವಸ್ಥೆಗೊಳಿಸಿದಳು. ಹೀಗೆ ಆಶ್ರಮವು ಉದಯೋನ್ಮುಖವಾಯ್ತು. ತನ್ನ ಸಾಧನೆಯಲ್ಲವಳು ದೊಡ್ಡ ಪ್ರಗತಿಯನ್ನು ಸಾಧಿಸಿದಳು ಮತ್ತು 1926 ರಲ್ಲಿ ಶ್ರೀಅರವಿಂದರು ಅವಳನ್ನು ಆಶ್ರಮದ ಮಾತೆ ಎಂದು ಘೋಷಿಸಿದರು.

1926 ರ ನವೆಂಬರ್ 24 ರಂದು ಶ್ರೀಅರವಿಂದರು ತಮ್ಮ ಸಾಧನೆಯ ಮೂಲಕ ಪೂರ್ಣಸಿದ್ಧಿಯನ್ನು ಪಡೆದರು. ಅಂದಿನಿಂದ ಇನ್ನೂ ಹೆಚ್ಚಿನ ತೀವ್ರಸ್ವರೂಪದ ಸಾಧನೆಗಾಗಿ ಅವರು ಮತ್ತಷ್ಟು ಹೆಚ್ಚು ಏಕಾಂತವಾಸಿಗಳಾದರು. ಅತಿಮಾನಸ (ಸುಪ್ರಮಾಣಸ) ಚೇತನೆಯನ್ನು ಭೂಲೋಕಕ್ಕೆ ತರುವುದೇ ಅವರ ಉದ್ದೇಶವಾಗಿತ್ತು. ಆದುದರಿಂದ ಆಶ್ರಮದ ಎಲ್ಲ ಚಟುವಟಿಕೆಗಳನ್ನು ನಡೆಸುವ ಸರ್ವಾಧಿಕಾರವನ್ನವರು ಮಾತೃಶ್ರೀಗೆ ಕೊಟ್ಟರು ಮತ್ತು ಆಧ್ಯಾತ್ಮಿಕ ಸಿದ್ಧಿಗಾಗಿ ದುಡಿವ ಸಾಧಕರಿಗೆ ಮಾರ್ಗದರ್ಶನ ಮಾಡಲು ಹೇಳಿದರು. ವಾಸ್ತವಿಕವಾಗಿ ಅದರಿಂದ ಒಂದು ಬಗೆಯ ಶ್ರಮ ವಿಭಾಗ ಮಾಡಿದಂತಾಯ್ತು: ಶ್ರೀಅರವಿಂದರು ಉನ್ನತತರ ಚೈತನ್ಯವನ್ನು ಅವತರಿಸುವಂತೆ ಸಾಧನೆ ಮಾಡುವುದು ಮತ್ತು ಮಾತೃಶ್ರೀಯು ಆಶ್ರಮದ ಸಂಘಟನೆ – ವ್ಯವಸ್ಥಾಪನೆಗಳನ್ನು ಮಾಡುವುದು. 1950 ರ ಡಿಸೆಂಬರ್ ತಿಂಗಳಿನಲ್ಲಿ ಅವರು ತಮ್ಮ ಮರ್ತ್ಯ ದೇಹವನ್ನು ತ್ಯಜಿಸಿದಂದಿನಿಂದ ಅದೃಶ್ಯವಾದ ಇತರ ಕ್ಷೇತ್ರಗಳಲ್ಲಿ ಶ್ರಮಿಸುತ್ತಿರಬಹುದಾಗಿದೆ;

ಮಾತೃಶ್ರೀಯು ಪಾಂಡಿಚೇರಿಯಲ್ಲಿ ತನ್ನ ಕಾರ್ಯವನ್ನು ಮುಂಬರಿಸಿಕೊಂಡು ಹೋಗುತ್ತಿದ್ದಾಳೆ- ಪ್ರತಿಯೊಂದು ವಿಧದಿಂದಲೂ ಆಶ್ರಮವನ್ನು ವಿಸ್ತರಿಸುತ್ತಲೂ ಸಂಪದ್ಭರಿತವನ್ನಾಗಿ ಮಾಡುತ್ತಲೂ ಇದ್ದಾಳೆ.

1926 ರಲ್ಲಿ ಮಾತೃಶ್ರೀ ಆಶ್ರಮದ ಅಧಿಕಾರವನ್ನು ವಹಿಸಿಕೊಂಡಂದಿನಿಂದ ಅದಕ್ಕೆ ' ಶ್ರೀಅರವಿಂದಾಶ್ರಮ ' ಎಂದು ಕರೆಯುವುದು ರೂಢಿಗೆ ಬಂದಿತು. ಹೆಚ್ಚು ಮನೆಗಳನ್ನು ಪಡೆದುಕೊಳ್ಳಲಾಯ್ತು, ಹೆಚ್ಚು ಜಾಗವನ್ನು (ಆಶ್ರಮವಾಸಿಗಳಿಗೆ) ಕೊಡಲಾಯ್ತು. ಏಕೆ? ಶಿಷ್ಯಸಂಖ್ಯೆಯೂ ಬೆಳೆಯಿತು, ಹೊರಗಿನ ಸಂದರ್ಶಕರ ಸಂಖ್ಯೆಯೂ ಹೆಚ್ಚಾಯ್ತು. ಅವಳ ವಾರಸುದಾರಿಕೆಯಲ್ಲಿ ಪಡೆದು ಬಂದಿದ್ದ ಹಣದಿಂದ ಈ ಎಲ್ಲವನ್ನೂ ಮಾಡಲು ಶಕ್ತೆಯಾದಳು ಮತ್ತು ವಿವಿಧ ಆಕರಗಳಿಂದ ಹೆಚ್ಚಿನ ಧನ ಸಂಗ್ರಹವೂ ಆಯಿತು. ಆಶ್ರಮಕ್ಕೆ ಸೇರಬಯಸುವವರು ತಮ್ಮ ಎಲ್ಲ ಆಸ್ತಿಯನ್ನು ಮಹಾತಾಯಿಗೆ ಕೊಟ್ಟು ಅವಳದೇಖರೇಖೆಗೆ ಒಳಪಡಬೇಕೆಂಬ ನಿಯಮವನ್ನು ಅರವಿಂದರು ಮಾಡಿದ್ದರು.

ಆಕೆಯ ಉಪಸ್ಥಿತಿ ಮತ್ತು ಸಂಘಟನೆಯ ಪ್ರತಿಭೆಗಳಿಲ್ಲದಿದ್ದರೆ ಆಶ್ರಮವೆಂದೂ ಉಳಿಯುತ್ತಿರಲಿಲ್ಲವೆಂಬುದು ವಸ್ತುಸತ್ಯ.

ಆದರೆ ಮೊಟ್ಟಮೊದಲು ಮಾತೃಶ್ರೀ ಹೆಚ್ಚು ಕಷ್ಟಪಟ್ಟು ಹೋರಾಡಬೇಕಾಯಿತು. ಆಶ್ರಮವಾಸಿಗಳಿಂದ ಅವಳು ಬುದ್ಧಿಪೂರ್ವಕವಾದ ಸಹಕಾರವನ್ನು ಬಯಸಿದಳು; ಆದರೆ ಅವರು ಅಷ್ಟು ಸುಲಭವಾಗಿ ಅವಳ ಕರೆಗೆ ಓಗೊಡಲಿಲ್ಲ.

ಮೊಟ್ಟಮೊದಲು, ಯಾರೂ ಸೋಮಾರಿಗಳಾಗಿರಬಾರದು, ಕೇವಲ ಧ್ಯಾನಮಗ್ನರಾಗಿರಬಾರದು, ಪ್ರತಿಯೊಬ್ಬರೂ ಇಲ್ಲಿ ಯಾವುದಾದರೂ ಒಂದು ಕೆಲಸ ಮಾಡಬೇಕು ಎಂದು ಮಾತೃಶ್ರೀ ನಿಯಮ ಮಾಡಿದಳು. ಅವರ ಸಂಯುಕ್ತ ಶ್ರಮದಿಂದ ಆಶ್ರಮವು ಸ್ವಾವಲಂಬಿಯಾಗುವುದಲ್ಲದೆ, ಅದು ಅವರ ಸಾಧನೆಗೆ ನೆರವೀಯುತ್ತದೆ- ಏಕೆಂದರೆ ಅದೇ ಅವರ ಕರ್ಮಯೋಗ,

ಯೋಗದಲ್ಲಿ ಜ್ಞಾನವಲ್ಲದೆ ಕರ್ಮವು ಬೇಕು. ಆದ್ದರಿಂದ ಪ್ರತಿಯೊಬ್ಬರೂ ಅವರವರ ಶಕ್ತ್ಯನುಸಾರ ಕೆಲಸ ಮಾಡಬೇಕು. ಇದಕ್ಕಾಗಿ ಆಶ್ರಮದಲ್ಲಿ ವಿವಿಧ ಶಾಖೆಗಳನ್ನು ತೆರೆಯಲಾಯ್ತು; ಮತ್ತು ಪ್ರತಿಯೊಂದು ಶಾಖೆಯೂ ಒಬ್ಬ ಮುಖ್ಯಸ್ಥನ ಮೇಲ್ವಿಚಾರಣೆಯಲ್ಲಿ ಕೆಲಸಮಾಡುತ್ತ ಬಂತು.

ಆಮೇಲೆ ಪ್ರತಿಯೊಬ್ಬರೂ ಯಾವುದಾದರೊಂದು ಬಗೆಯ ವ್ಯಾಯಾಮವನ್ನು ನಿಯತವಾಗಿ ಮಾಡಬೇಕೆಂದು ಆಕೆ ವಿಧಿಸಿದಳು. ಸಾಧನೆ ಮಾಡಲು ಶರೀರವನ್ನು ಸಮರ್ಥವೂ ಸಜ್ಜವೂ ಆಗಿ ಇಡಲು ಇದು ಅಗತ್ಯ. ದುರ್ಬಲವೂ ಜಡವೂ ಅನಾರೋಗ್ಯಯುಕ್ತವೂ ಆದ ಶರೀರದಿಂದ ಏನನ್ನು ಮಾಡಲೂ ಸಾಧ್ಯವಿಲ್ಲ. ಸಮಗ್ರಯೋಗದ ಸಾಧಕನು ಚುರುಕಾಗಿ ರಬೇಕಾದ್ದು. ಪ್ರತಿದಿನವೂ ಆಕೆ ಸ್ವತಃ ಮಧ್ಯಾಹ್ನದ ಮೇಲೆ ಹೊರ ಹೊರಟು ಟೆನಿಸ್ ಆಡುತ್ತಿದ್ದಳು.

ಕೆಲವರು ಈ ವಿಧಿಯನ್ನು ಅಪಾರ್ಥಮಾಡಿದರು. ಅವರನ್ನು ಒಲಿಸಿಕೊಳ್ಳುವುದು ಸುಲಭವಾಗಲಿಲ್ಲ. ಚಾತುರ್ಯದಿಂದಲೂ ಸಹನೆಯಿಂದಲೂ ಆಕೆ ತನ್ನ ಉದ್ದೇಶವನ್ನು ಸಾಧಿಸಿಕೊಂಡಳು. ಅವಳು ಅದ್ಭುತವನ್ನು ಸಾಧಿಸಬಲ್ಲಳೆಂದು ಎಲ್ಲರಿಗೂ ಮನವರಿಕೆಯಾಯಿತು- ಆತ್ಮವಿಶ್ವಾಸವನ್ನು ಹುಟ್ಟಿಸುವುದು, ಪ್ರತ್ಯಾಶೆ ಸುಖಗಳನ್ನು ಕುದುರಿಸುವುದು, ಶ್ರದ್ಧೆ-ಪ್ರೇಮ ಗೌರವಗಳನ್ನು ಸ್ಫುರಿಸುವಂತೆ ಮಾಡುವುದು, ವಾತ್ಸಲ್ಯಮಯ ತಾಯಿಯಂತೆ ನೆರವೀಯುವುದು- ಇವೇ ಅವಳು ಮಾಡುತ್ತಿದ್ದ ಅದ್ಭುತ. ನಿಜವಾಗಿ ಆಕೆ ಅವರಿಗೆ ತಾಯಿಗಿಂತ ಹೆಚ್ಚಿನವಳಾಗಿದ್ದಳು. ಶ್ರೀ ಅರವಿಂದರು ನ್ಯಾಯವಾಗಿ ಹಾಗೆ ಅಪ್ಪಣೆ ಕೊಡಿಸಿದರು. “ಸಾಮಾನ್ಯ ತಾಯಿ- ಮಕ್ಕಳ ಶರೀರನಿಷ್ಠ ಸಂಬಂಧಕ್ಕಿಂತ ಅವಳಿಗೂ ಅವಳನ್ನು ತಾಯಿಯೆಂದು ಒಪ್ಪಿದವರಿಗೂ ಇರುವ ಸಂಬಂಧ ಎಷ್ಟೋ ಪಾಲು ಹೆಚ್ಚಿನದು; ಅದು ಮಾನವ ಮಾತೆ ಕೊಡಬಲ್ಲುದೆಲ್ಲವನ್ನೂ ಕೊಡುತ್ತದೆ- ಆದರೆ ಹಾಗೆ ಕೊಡುವುದನ್ನು ಉನ್ನತತರ ರೀತಿಯಿಂದ ಕೊಡುತ್ತದೆ ಮತ್ತು ಅದು ತನ್ನಲ್ಲಿ ಲೆಕ್ಕವಿಲ್ಲದಷ್ಟು ಪಟ್ಟು ಹೆಚ್ಚನ್ನು ಅಳವಡಿಸಿಕೊಂಡಿದೆ”.

"ಶ್ರೀಅರವಿಂದರು ನನ್ನ ಹತ್ತಿರ ಬಂದರು" ಎಂಬ ತಮ್ಮ ಪುಸ್ತಕದಲ್ಲಿ ದಿಲೀಪಕುಮಾರರಾಯರು ತಾವು ಒಮ್ಮೆ ಹೇಗೆ ದಂಗೆಯೆದ್ದೆವೆಂಬುದನ್ನೂ ಹೇಗೆ ನಿಮಿಷಾರ್ಧದಲ್ಲಿ ಆಕೆ ತಮ್ಮನ್ನು ಸಂತೈಸಿದಳೆಂಬುದನ್ನೂ ಬಣ್ಣಿಸಿದ್ದಾರೆ.

"...ಒಂದು ಘಟನೆ ನಡೆದುದರಿಂದ ನನ್ನ ಮೇಲಿನ ಸುಳ್ಳು ಆರೋಪವೊಂದನ್ನಾಕೆ ನಂಬಿದ ಮೂಲಕ ನನಗೆ ದೊಡ್ಡ ಅನ್ಯಾಯ ಮಾಡಿದಳೆಂದು ನಾನು ಗಡಿಬಿಡಿಯಲ್ಲಿ ನಿರ್ಧರಿಸಿದೆ ಆದುದರಿಂದ ಅವಳ ಮೇಲಿನ ಶ್ರದ್ಧೆ ಹೊರಟು ಹೋಯಿತೆಂದೂ ಅವಳನ್ನು ನಾನಿನ್ನು ನೋಡುವುದಿಲ್ಲವೆಂದೂ ಅವಳಿಗೆ ಹೇಳಿ ಕಳಿಸಿದೆ. ಅದೇ ಕಾಲದಲ್ಲಿ ಕೇವಲ ನಿಮಗಾಗಿ ನಾನು ಆಶ್ರಮಕ್ಕೆ ಬಂದವನೆಂದು ಶ್ರೀ ಅರವಿಂದರಿಗೊಂದು ಕಾಗದವನ್ನು ಬರೆದೆ... ನೀವು ಹೇಳಿದ್ದರಿಂದ ಮಾತ್ರ ನಾನವಳನ್ನು ತಾಯಿಯೆಂದು ಸ್ವೀಕರಿಸಿದ್ದು ಎಂದೂ ಅದರಲ್ಲಿ ಅವರಿಗೆ ನೆನಪು ಮಾಡಿಕೊಟ್ಟೆ... ಮಾತೃಶ್ರೀಗೇ ನಾನು ನೇರವಾಗಿ ಬರೆದೆ- 'ನೀನು ನನ್ನಮೇಲೆ ಹುಬ್ಬುಗಂಟಿಕ್ಕುವೆಯಾದರೆ, ಅದಕ್ಕೆ ನಾನು ನಿನಗಿಂತ ಅರವಿಂದರನ್ನು ಹೆಚ್ಚಾಗಿ ಪ್ರೀತಿಸುವೆನೆಂಬುದು ಅದಕ್ಕೆ ಕಾರಣವಾದರೆ, ಆಗ- ನಾನು ಮುಖ್ಯವಾಗಿ ಅವರಿಗಾಗಿಯೇ ಇಲ್ಲಿಗೆ ಬಂದವನು ಮತ್ತು ನಿನ್ನತ್ತ ತಿರುಗಬೇಕೆಂದು ಅವರು ಬಯಸಿದ್ದರಿಂದ ನಿನ್ನನ್ನು ನಾನು ತಾಯಿಯೆಂದು ಸ್ವೀಕರಿಸಿದ್ದು ಎಂಬುದು ಸತ್ಯವಾಗಿರುವುದರಿಂದ ನಾನು ಪಶ್ಚಾತ್ತಾಪ ಪಡದೆ ಉಳಿಯುವುದು ನ್ಯಾಯ. ಈಗ ನೀನು ಯಾವ ಕೇಡನ್ನು ಬೇಕಾದರೂ ನನಗೆ ಮಾಡಬಹುದು: ಈ ಸಂಜೆಯೇ ನಾನು ಆಶ್ರಮ ಬಿಡಲು ಸಿದ್ಧನಾಗಿದ್ದೇನೆ: ಆದರೆ ಅವರೇ ಸ್ವತಃ ನನ್ನನ್ನು ನಿವೃತ್ತನನ್ನಾಗಿ ಮಾಡಿ ಕಳಿಸಬೇಕು- ನೆನಪಿರಲಿ! ಏಕೆಂದರೆ ನಿನ್ನಿಂದ ಯಾವ ಅಪ್ಪಣೆಯನ್ನೂ ನಾನು ಪಡೆಯತಕ್ಕವನಲ್ಲ".

"ಅವಳಿಂದ ಒಂದು ಸಂದೇಶವನ್ನು ತೆಗೆದುಕೊಂಡು ನಳಿನೀಗುಪ್ತನು ನನ್ನೆಡೆಗೆ ಬಂದನು: ಅವಳು ನನ್ನನ್ನು ನೋಡಬಯಸಿದಳು. 'ನಾನು

ಅವಳಲ್ಲಿಗೆ ಹೋಗಿ ಮುಬ್ಬುಗಂಟಿಕ್ಕಿಸಿ ಕೊಳ್ಳಲಾರೆ' ಎಂದು ಥಟ್ಟನೆ ಉತ್ತರವಿತ್ತೆ. 'ನಾನು ಗುರುದೇವನಿಂದ ಹೊರಟುಹೋಗ ಬೇಕೆಂಬ ಕಾಗದಕ್ಕಾಗಿ ಕಾಯುತ್ತಿದ್ದೇನೆ ಮತ್ತು ಅದು ಬಂದೊಡನೆಯೇ ನಾನು ಹೊರಟು ಹೋಗುವೆನು'. ಆಗ ಅವನೆಂದ: ನಿನ್ನ ಮೇಲೆ ಮುಬ್ಬುಗಂಟಿಕ್ಕ ಬೇಕೆಂದು ಮಾತೃಶ್ರೀ ಬಯಸಿಲ್ಲ. ಅದು ಬರಿ ತಪ್ಪು ಅರ್ಥಮಾಡಿಕೊಂಡ ಒಂದು ಪ್ರಕರಣ ಎಂದು ನನಗೆ ಆಕೆ ಹೇಳಿದಳು. ಏನೇ ಆಗಲಿ, ಬೇಕಾದ ಹಾಗೆ ವಿವರಿಸಲು ನಿನಗೆ ಅವಕಾಶಕೊಟ್ಟು ಆಕೆ ಸ್ವತಃ ಬಂದು ನೋಡೆಂದು ಹೇಳಿದಾಗ ನೀನು ಇಷ್ಟು ನಿರ್ದಾಕ್ಷಿಣ್ಯ ಪ್ರವೃತ್ತಿಯುವನಾಗ ಕೂಡದು'.... ಎಂದೂ ಅವನು ಹೇಳಿದನು.

"ಮನಸ್ಸಿಲ್ಲದ ಮನಸ್ಸಿನಿಂದ ನಾನು ಹೋದೆ. ನನಗೆ ಶಕ್ಯವಿದ್ದುದು ಅದೊಂದೇ ಆದುದರಿಂದ ನನ್ನತ್ತ ಮಾತೃಶ್ರೀ ಮುಗುಳುನಗೆ ನಕ್ಕಳು. ಆ ಪರಿಸ್ಥಿತಿಯಲ್ಲಿ ನಾನು ನನ್ನ ಕಣ್ಣುಗಳನ್ನೇ ನಂಬಲಾರದಾದೆ! ಆದರೆ ಅವಳ ಅನಿರೀಕ್ಷಿತ ಮಧುರಹಾಸವು 'ಹೃದಯಕ್ಕೆ ಸಮಾಧಾನಕರ' ಎಂಬ ಒಂದೇ ಒಂದು ವಿಶೇಷಣದಿಂದ ನಾನು ವರ್ಣಿಸಬಹುದಾದ ಆಲೋಚನೆಯೊಂದು ನನ್ನ ಮನದಲ್ಲಿ ಥಟ್ಟನೆ ಹೊಳೆಯಿತು. ಅಂದರೆ ಎಲ್ಲಾ ಇನ್ನೂ ಕಳೆದುಹೋಗಿಲ್ಲ- ಸ್ವಲ್ಪ ಬಾಕಿ ಇರುವಂತಿದೆ.... ಅವಳ ಸಹನೆ ಮತ್ತು ಔದಾರ್ಯಗಳ ಉದಾಹರಣೆಗಳನ್ನು ನಾನೇ ಸ್ವತಃ (ಹಿಂದೆ) ನೋಡಿಲ್ಲವೇ? ಅವಳ ಒಂದೇ ಒಂದು ಫಲನತ್ತಾದ ಮುಗುಳ್ನಗೆಯಿಂದ ಅಂಥ ಆಲೋಚನೆಗಳು ನನ್ನ ಶಪಥ ನಿರ್ಧಾರವನ್ನು ಕದಲಿಸಿದವು. ಅನಂತರ ನಾನು ನೆಲದ ಮೇಲೆ ಕುಳಿತೆ. ಅವಳು ತನ್ನ ಸುಂದರವಾದ ಕೂದಲನ್ನು ಹರಡಿ ಬಿಟ್ಟು ಉಚ್ಚಪೀಠದಲ್ಲಿ ಕುಳಿತಿದ್ದಳು. ಆಕೆ ತನ್ನ ಕೈಯನ್ನು ನನ್ನ ಹೆಗಲ ಮೇಲಿಟ್ಟಳು ಮತ್ತು ನೆಟ್ಟ ದೃಷ್ಟಿಯಿಂದ ನನ್ನನ್ನು ನೋಡಿದಳು. ನಾನು ಅಂಕೆತಪ್ಪಿ ಹೊರಬರುತ್ತಿದ್ದ ನನ್ನ ಕಂಬನಿಗಳೊಡನೆ ಹೋರಾಡಿದೆನು. 'ನಿನ್ನಂತೆ ಅರವಿಂದರನ್ನು ಪ್ರೀತಿಸುವ ಯಾರ ಬಗೆಗಾದರೂ ನಾನು ಕೋಪಗೊಳ್ಳುವುದು ಶಕ್ಯವಿದೆಯೆ?' ಎಂದಳಾಕೆ ಸರಳವಾಗಿ. ಅವಳ ಕಣ್ಣು ವಿಚಿತ್ರವಾದ ಬೆಳಕನ್ನು ಹೊರಸೂಸಿತು. ಅದು ಬಲ, ಮಾರ್ದವ,

ಸಮ್ಮತಿಗಳ ಒಂದು ವಿಚಿತ್ರ ಸಂಯೋಗವಾಗಿತ್ತು. 'ನನ್ನ ಭಾವನೆ ಏನೇ
ಆಗಿರಲಿ. ಅರವಿಂದರು ನಿನ್ನನ್ನು ಎಷ್ಟು ಹೊತ್ತುಕೊಂಡಿದ್ದಾರೆ ಎಂಬುದ
ನ್ನಾದರೂ ನಾನರಿಯೆನೆ? ಹೀಗಿರುವಾಗ ಅವರು ಮಂದಸ್ಮಿತದಿಂದ
ಅಭಿನಂದಿಸುವ ಒಬ್ಬನ ಮೇಲೆ ನನಗೆ ಹುಬ್ಬುಗಂಟಿಕ್ಕಲು ಸಾಧ್ಯವೆಂದು
ನೀನು ಹೇಗೆ ತಿಳಿದೆ? ನಾನು ಮತ್ತು ನನ್ನ ಎಲ್ಲವೂ ಅವರ ಸೇವೆಗಾಗಿಯೇ
ಇರುವುದು ನಿನಗರಿಯದೆ? ಅವರ ಸಮೀಪಸ್ಥರೂ ಪ್ರೀತಿಪಾತ್ರರೂ ಆದ
ನಿಮ್ಮಂತೆಯೇ ನಾನೂ ಅಲ್ಲವೇ?' ನಾನು ಗಳಗಳನೆ ಅಳುದಿದ್ದರೆ ಆಕೆ
ಇನ್ನೂ ಏನೇನನ್ನೋ ಹೇಳುತ್ತಿದ್ದಳು.... ಆದಿನ ನನಗೊಂದು ಹೊಸ
ನೋಟ ಅಥವಾ ದರ್ಶನವೇ ದೊರಕಿತು. ಅದೆಂಥ ದರ್ಶನ? ನಿಜವಾದ
ಆಧ್ಯಾತ್ಮಿಕ ಗೌರವಸ್ಥಿತಿಯಿಂದ ಹುಟ್ಟಿದ ಸಮ್ಮತಿಯ ದರ್ಶನ! ಅವಳು
ಹೇಳಿದ ಪ್ರಕಾರ ನಾನವಳನ್ನು ನನ್ನ ಆಧ್ಯಾತ್ಮಿಕ ತಾಯಿಯೆಂದೂ
ನನಗವಳೂ ಪೂರ್ಣವು ಕೊನೆಯದೂ ಆದ ಆಧ್ಯಾತ್ಮ ಪ್ರವೇಶ ಮಾಡಿಸಿ
ದವಳೆಂದೂ ಅದೇ ಬೇಗಿನಲ್ಲಿ ನಾನು ಸ್ವೀಕರಿಸಿದೆನು".

ಕೆಲ ಸಂಗತಿಗಳಲ್ಲಿ ಮಾತೃಶ್ರೀ ಬಿಗುವಿನವಳಾದರೆ ಆ ಬಿಗುವಿನ
ಜೊತೆಗೇ ಅವಳಲ್ಲಿ ಸರ್ವರಿಗೂ ಮೀಸಲಾದ ಅಪ್ರಮಿತಮಾರ್ದವವೂ ಇದೆ.
ಅವಳು ಎಲ್ಲರನ್ನೂ ಕ್ಷಮಿಸುತ್ತಾಳೆ, ಎಲ್ಲರಿಗೂ ಸಹಾಯ ಮಾಡುತ್ತಾಳೆ-
ಅವಳಿಗೆ ಪಕ್ಷ ಭೇದವೆಂಬುದು ಇಲ್ಲವೇ ಇಲ್ಲ. ಅದು ಅವಳ ವೈಶಿಷ್ಟ್ಯ.
ಅದರಿಂದಲೇ ಅಷ್ಟೊಂದು ಜನರು ಮಾತೃಶ್ರೀಯ ಸತತವಾದ ಕಾವಲಿನಲ್ಲಿ,
ಅವಧಾನದಲ್ಲಿ, ಸುಖಿಗಳೂ ತೃಪ್ತರೂ ಪ್ರಾಮಾಣಿಕರೂ ವಿಧೇಯರೂ ಆಗಿ
ಒಟ್ಟುಕೂಡಿ ಬದುಕಬಲ್ಲವರಾದರು.

ಈಗ ಆಶ್ರಮವು ಪಾಂಡಿಚೇರಿಯ ಪಟ್ಟಣದ ಹಳೆಯ ಗಡಿಗಳೊಳಗೆ
ಸ್ವಾವಲಂಬಿಯಾಗಿದೆ. ಆಶ್ರಮಕ್ಕೆ ಸುಮಾರು 200 ಮನೆಗಳಲ್ಲಿ ಸುಮಾರು
1500 ಜನರು ವಾಸಿಸುತ್ತಿದ್ದಾರೆ: ಹೊರಗಿನ ಕೆಲಸಗಾರರು ಸುಮಾರು
700 ಜನರಿದ್ದಾರೆ. ಅತಿಥಿಗಳಿಗಾಗಿ ಹಲವಾರು ಅತಿಥಿಗೃಹಗಳು ಅಲ್ಲಿವೆ.

ಅವುಗಳಲ್ಲೊಂದು ಆಶ್ರಮದ ಸಮೀಪದಲ್ಲೇ ಬಹಳ ವಿಶಾಲವಾಗಿಯೂ ಅನನ್ಯವಾಗಿಯೂ ಇದೆ. ಅದರ ಹೆಸರು 'ಗೋಲ್ಕೊಂಡೆ'; ಅದರ ಯೋಜನೆಯನ್ನು ಸ್ವತಃ ಮಾತೃಶ್ರೀಯೇ ಸಿದ್ಧಗೊಳಿಸಿದ್ದಳು. ಅದನ್ನು ಕಟ್ಟಿದ್ದು ಅಮೇರಿಕದ ವಾಸ್ತುಶಿಲ್ಪಿಯೊಬ್ಬ. ಅದರೊಳಗಿನ ಕಚ್ಚುಪಲಗೆ ಮುಂತಾದವುಗಳೂ ಪೀಠೋಪಕರಣಗಳೂ ಮಾತೃಶ್ರೀಯ ಹೇಳಿಕೆಯ ಪ್ರಕಾರ ಆಶ್ರಮದಲ್ಲಿಯೇ ಸಿದ್ಧವಾದಂಥವು. ಪ್ರತಿಯೊಂದನ್ನೂ ಎಚ್ಚರಿಕೆಯಿಂದ ಬಳಸುವಂತೆ ಆಕೆ ವಿಶೇಷ ಎಚ್ಚರಿಕೆಯನ್ನು ತೆಗೆದುಕೊಳ್ಳುತ್ತಾಳೆ. ಸ್ಪಷ್ಟವಾಗಿ ಅವಳು ನೋಟೀಸು ಹಚ್ಚಿದ್ದಳು: "ತಾನು ಬಳಸುವ ಭೌತಿಕ ವಸ್ತುಗಳನ್ನು ಎಚ್ಚರಿಕೆಯಿಂದ ನೋಡಿಕೊಳ್ಳದಿರುವುದು ಜಾಡ್ಯ, ಅಜ್ಞಾನ. ಜಾಗರೂಕತೆಯಿಂದ ಬಳಸಿದವರಾದರೆ ನಿಮಗೆ ಭೌತಿಕವಾದ ಯಾವ ವಸ್ತುವನ್ನು ಬಳಸಲೂ (ಎಷ್ಟರಮಟ್ಟಿಗೂ) ಹಕ್ಕಿಲ್ಲ".

ಆಶ್ರಮವಾಸಿಗಳು ತಾಪತ್ರಯರಹಿತರೂ ತೃಪ್ತರೂ ಆಗಿದ್ದಾರೆ. ಏಕೆಂದರೆ ಯಾರೂ ತಮ್ಮ ದಿನದ ಊಟಕ್ಕಾಗಿಯೂ ಉಳಿವಿಗಾಗಿಯೂ ವಿಚಾರ ಮಾಡಬೇಕಾಗಿಲ್ಲ. ಮಾತೃಶ್ರೀಯ ಕಣಜದಿಂದ ಅವರ ಅವಶ್ಯಕತೆಗಳೆಲ್ಲವೂ ಪೂರಯಿಸಲ್ಪಡುತ್ತದೆ; ಮಾತೃಶ್ರೀಯೇ ಸ್ವತಃ ದೇಖರೇಖೆ ನೋಡುತ್ತಾಳೆ. ಪ್ರತಿ ತಿಂಗಳ ಕೊನೆಗೆ ಪ್ರತಿಯೊಬ್ಬನೂ ತನ್ನ ಅವಶ್ಯಕತೆಗಳ ಪಟ್ಟಿಯನ್ನು ಅವಳಿಗೆ ಒಪ್ಪಿಸಬೇಕು. ಪ್ರತಿ ತಿಂಗಳ ಮೊದಲ ದಿನ "ಅಭಿವೃದ್ಧಿ" ಎಂಬ ಹೆಸರಿನಲ್ಲಿ ಮಾತೃಶ್ರೀಯು ಸ್ವತಃ ತನ್ನ ಆಶೀರ್ವಾದಗಳೊಂದಿಗೆ ವಸ್ತುಗಳನ್ನು ಹಂಚುತ್ತಾಳೆ.

ಆದರೆ ಯೋಗಾಭ್ಯಾಸ ಮಾಡಲು ಬಂದಿದ್ದರೂ ಪ್ರತಿಯೊಬ್ಬನೂ ಆಶ್ರಮಕ್ಕಾಗಿ ಆಶ್ರಮದಲ್ಲಿ ಏನನ್ನಾದರೂ ಮಾಡಲೇಬೇಕು. ಏಕೆಂದರೆ, ದೇವರಿಗಾಗಿ ದುಡಿಯುವುದೆಂದರೆ ದೇಹಸಮೇತ ಪ್ರಾರ್ಥನೆ ಮಾಡುವುದು- ಎಂದಿದ್ದಾಳೆ ಮಹಾತಾಯಿ. ಯಾವ ಕೆಲಸವೂ ಉಚ್ಚವಲ್ಲ, ನೀಚವಲ್ಲ- ದೇವರ ದೃಷ್ಟಿಯಲ್ಲಿ ಎಲ್ಲ ಕೆಲಸಗಳೂ ಸಮಾನ ಮೌಲ್ಯವುಳ್ಳವು- ಅವನ್ನು ಸರಿಯಾದ ಪ್ರಜ್ಞೆಯಿಂದ ಮಾಡಿದರೆ. ನೀವು ಏನು ಮಾಡುತ್ತೀರಿ ಎಂಬುದು ಮುಖ್ಯವಲ್ಲ- ನೀವು ಹೇಗೆ ಮಾಡುತ್ತೀರಿ ಎಂಬುದು ಮುಖ್ಯ.

ಆಶ್ರಮದಲ್ಲಿ ಹಲವಾರು ಶಾಖೆಗಳಿವೆ. ಅವುಗಳಿಗೆ 'ಸೇವೆಗಳು' ಎಂದು ಹೆಸರು. ಉದಾಹರಣೆಗಾಗಿ- 'ಕಟ್ಟಡಸೇವೆ' ಇದೆ: ಅದರಲ್ಲಿ ಆಶ್ರಮದ ಕಟ್ಟಡದ ದುರಸ್ತನ್ನು ಮಾಡಬೇಕು. ಅಲ್ಲದೆ ಕಟ್ಟಡಗಳನ್ನೂ ಕಟ್ಟಬೇಕು. ಆಶ್ರಮವು ತನ್ನದೇ ಆದ ಟೊಳ್ಳು ಇಟ್ಟಿಗೆಗಳನ್ನು ತಯಾರಿಸುತ್ತದೆ; ಸಿಮೆಂಟಿನ ಗಟ್ಟಿ ಮುಂತಾದವುಗಳನ್ನೂ ಸಿದ್ಧಗೊಳಿಸುತ್ತದೆ. ಅದರೊಡನೆ ಪೂರಕ ಸೇವೆಗಳೂ ಇವೆ; ಶೌಚಸೇವೆ, ಜಲಾಸಯನ, ವಿದ್ಯುತ್ಸೇವೆ ಮೊದಲಾದವು ಪೂರಕ ಸೇವೆಗಳು: ತೊಳೆವಬಳಿವ ಗೃಹಸೇವೆಯೂ ಅಲ್ಲಿದೆ.

ಗೃಹೋಪಕರಣಸೇವೆಯವರು ಆಶ್ರಮದ ಎಲ್ಲ ಮನೆಗಳಿಗೂ ಕಿರು ಮನೆಗಳಿಗೂ ಮೇಜು. ಕುರ್ಚಿ, ಬಟ್ಟೆಸಿಲುವು, ಕಪಾಟು ಮುಂತಾದವನ್ನು ಒದಗಿಸಬೇಕು. ಈ ಕೆಲಸಕ್ಕಾಗಿ ಎರಡು ಬಡಿಗಸಾಲೆಗಳಿವೆ. ಅಲ್ಲಿ ಒಂದು ದೊಡ್ಡ ಅಡಿಗೆಮನೆಯಿದೆ; ಅದರಲ್ಲಿ ಒಂದು ಸಲಕ್ಕೆ ಒಂದು ಸಾವಿರ ಜನರು ಕುಳಿತುಕೊಳ್ಳಬಹುದು. ಅನ್ನ. ರೊಟ್ಟಿ, ಹಾಲು, ಮೊಸರು, ಲಿಂಬೆಹಣ್ಣು ಮತ್ತು ಬಾಳೆಹಣ್ಣುಗಳನ್ನು ಬಡಿಸಲಾಗುತ್ತದೆ. ಅಡಿಗೆಮನೆಗೆ ಒಂದು ಮಲಾಪಕರ್ಷಣ ವಿಭಾಗವಿದೆ. ಚೆನ್ನಾದ ಬ್ರೆಡ್‌ತುಂಡುಗಳನ್ನು ತಯಾರಿಸುವ ಪಾಕಶಾಲೆಯೂ ಅಲ್ಲಿದೆ; ಹಿಟ್ಟಿನ ಹಾಗೂ ಎಣ್ಣೆಯ ಗಿರಣಿಗಳೂ ಇವೆ. ಕಲ್ಲಿದ್ದಲನ್ನೂ ಕಟ್ಟಿಗೆಯನ್ನೂ ಒದಗಿಸುವ ಇಂಧನ ವಿಭಾಗ ಕೂಡ ಆಶ್ರಮದಲ್ಲಿದೆ.

ಹೊಲಿಗೆ ವಿಭಾಗವು ಗಂಡಸರಿಗೂ ಹೆಂಗಸರಿಗೂ ಯೋಗ್ಯವಾದ ಉಡುಪನ್ನು ತಯಾರಿಸಿಕೊಡುತ್ತದೆ. ಬಟ್ಟೆ ತೊಳೆದು ಇಸ್ತ್ರಿಮಾಡಲು ಅಲ್ಲೊಂದು ಅಗಸನಂಗಡಿ ಸಹ ಇದೆ. ಪಾದಸೇವಾ ವಿಭಾಗವು ಮೆಟ್ಟುಗಳನ್ನು ಎಲ್ಲರಿಗೂ ಒದಗಿಸುತ್ತದೆ.

ಗದ್ದೆ ತೋಟಗಳಲ್ಲಿ ಶಿಷ್ಯರು ವಿಶಿಷ್ಟವಾಗಿ ಮಾಡಿಕೊಂಡು ಕೊಯ್ಲು ಮುಂತಾದ ಕೆಲಸಗಳನ್ನು ಮಾಡುತ್ತಾರೆ. ಅಲ್ಲಿ ಎರಡು ಹಾಲಿನ ಕೇಂದ್ರಗಳಿವೆ. ಅವುಗಳಲ್ಲಿ ವಿಶಿಷ್ಟ ತಳಿಯ ದನಗಳಿವೆ. ಗೋಸಾಕಣೆಯನ್ನಲ್ಲಿ ಮಾಡಲಾಗುತ್ತದೆ.

ಪುಷ್ಪಸೇವಾ ವಿಭಾಗದವರು ವಿವಿಧ ತೋಟಗಳಿಂದ ಹೂವುಗಳನ್ನು ಕೊಯ್ದು ಮಾತೃಶ್ರೀಗೂ ಇತರ ಆಶ್ರಮಿಗಳಿಗೂ ದೇವಾರ್ಚನೆಗಾಗಿ ಬೆಳಿಗ್ಗೆ ಒದಗಿಸುತ್ತಾರೆ.

ಮೋಟಾರು ಮತ್ತು ಯಂತ್ರಗಳ ದುರಸ್ತು, ಡಬ್ಬಿಗೆ ತುಂಬುವುದು, ಚೆಸಿಗೆ ಹಾಕುವುದು ಮುಂತಾದವುಗಳಿಗಾಗಿ ಕರ್ಮಶಾಲೆಗಳಿವೆ. ಅಕ್ಷರಶೀಲ ಕಾರ್ಖಾನೆ, ಕಮ್ಮಾರಸಾಲೆ ಮತ್ತು ಅದಕ್ಕೆ ಸೇರಿದ ದೃಢೀಕರಣಶಾಲೆ- ಇವು ಕೂಡ ಇವೆ.

ಹೊಲಿಗೆ ಸೇವೆಯನ್ನೂ ಉಪಯುಕ್ತ ಮತ್ತು ವಿಲಾಸಿ ವಸ್ತುಗಳ ತಯಾರಿಕೆಯನ್ನೂ ಹೆಂಗಸರು ಮಾಡುತ್ತಾರೆ.

ಆಶ್ರಮದ ಅಚ್ಚುಕೂಟಕ್ಕೆ ನಾಲ್ಕು 'ಮೋಟೋಟೈಪ್' ಯಂತ್ರಗಳಿವೆ: ಕೆಲಸ ಬಹಳ. ಸುಮಾರು 10 ವಿವಿಧ ಭಾಷೆಗಳ ಪುಸ್ತಕ ಹಾಗೂ ನಿಯತಕಾಲಿಕಗಳಲ್ಲಿ ಮುದ್ರಿತವಾಗುತ್ತವೆ. ಚಿತ್ರದಚ್ಚುಗಳೂ ಮುದ್ರಿಸಲ್ಪಡುತ್ತವೆ. ಒಂದು 'ಬೈಂಡಿಂಗ್' ವಿಭಾಗವನ್ನೂ ಅದಕ್ಕೆ ಜೋಡಿಸಲಾಗಿದೆ. ಆಶ್ರಮದ ವಿವಿಧ ಪ್ರಕಟನೆಗಳನ್ನಲ್ಲಿ ಮುದ್ರಿಸಲಾಗುತ್ತದೆ.

ವಿವಿಧ ಭಾಷೆಗಳ 50,000 ಪುಸ್ತಕಗಳನ್ನುಳ್ಳ ಗ್ರಂಥಾಲಯವು ಆಶ್ರಮದಲ್ಲಿದೆ.

ಆಸ್ಪತ್ರೆ ಹಾಸಿಗೆಗಳಿಂದ ಕೂಡಿದ ಒಂದು ಚಿಕಿತ್ಸಾಲಯವನ್ನು ತೆರೆಯಲಾಗಿದೆ. ಔಷಧಗಳನ್ನದು ಒದಗಿಸುತ್ತದೆ. ದಂತ ಚಿಕಿತ್ಸಾಲಯ, ವೈದ್ಯಕೀಯ ಪ್ರಯೋಗಶಾಲೆ ಮತ್ತು ಅಂಗಸಂವಾಹನ ಶಾಲೆಗಳು ಅಲ್ಲಿವೆ.

ವಾಹನಸೇವಾ ಶಾಖೆಯಲ್ಲಿ ಜನರನ್ನೂ ಸಂದರ್ಶಕರನ್ನೂ ಒಯ್ಯಲು ಜೀಪು-ಕಾರುಗಳಿವೆ. ಸಂದರ್ಶಕರಿಗೂ ಹೊಸ ಆಗಂತುಕರಿಗೂ ನೆರವೀಯಲು ಸ್ವಾಗತಸೇವಾ ಶಾಖೆಯೊಂದಿದೆ.

ಇಷ್ಟೇಅಲ್ಲ; ಅಲ್ಲೊಂದು ಸಚಿವಾಲಯವೂ ಟಪ್ಪಾಲು ಸೇವಾಲಯವೂ ಇವೆ.

ಆಶ್ರಮವನ್ನು ನಡೆಸಲು ತಿಂಗಳಿಗೆ ಸುಮಾರು ಒಂದು ಲಕ್ಷಕ್ಕೂ ಹೆಚ್ಚು ಮತ್ತು ವರ್ಷಕ್ಕೆ 14 ಲಕ್ಷ ರೂಪಾಯಿಗಳು ಬೇಕಾಗುತ್ತವೆ. ಅರವಿಂದರು ತೀರಿ ಹೋದಮೇಲೆ ಆಶ್ರಮದ ಆದಾಯ ಇಳಿದೀತೆಂಬ ಭೀತಿಯಿತ್ತು; ಆದರದು ಹೆಚ್ಚಿದೆ.

ಇದೆಲ್ಲವೂ ಸಾಧ್ಯವಾದದ್ದು ಮಾತೃಶ್ರೀಯ ಶಕ್ತಿಯಿಂದ ಮತ್ತು ಅವಳ ಉಪಸ್ಥಿತಿಯಿಂದ. ಹೊರಗಿನಿಂದ ಅದರ ಅದ್ಭುತ ಪರಿಣಾಮವನ್ನು ನಿರ್ಣಯಿಸಲು ಬರದು: ಏಕೆಂದರೆ, ಆಶ್ರಮದ ಚಟುವಟಿಕೆಗಳೆಲ್ಲವೂ ಅವಳ ವೈಯಕ್ತಿಕ ಸಲಹೆ ಮತ್ತು ಮೇಲ್ವಿಚಾರಣೆಗಳೊಳಗೆ ಸುಗಮವಾಗಿ ನಡೆಯುತ್ತಿವೆ. ಮೊದಲೇ ಮಾತೃಶ್ರೀಯ ಅಪ್ಪಣೆ ಪಡೆದುಕೊಳ್ಳದೆ ಯಾರೂ ಏನನ್ನೂ ಮಾಡರು. ಸಲಹೆ ಸೂಚನೆಗಳಿಗಾಗಿ ಎಲ್ಲ ಸೇವಾ ಶಾಖೆಯವರೂ ಬೇಕಾದಷ್ಟು ಸಲ ಮಾತೃಶ್ರೀಯನ್ನು ಸಂದರ್ಶಿಸುತ್ತಾರೆ. ಅವಳು ಎಲ್ಲವನ್ನೂ ನಿರ್ವಹಿಸುತ್ತಾಳೆ. ಯಾರಾದರೂ ಮುದ್ರಣಾಲಯದೊಳಗೆ ಹೋಗ ಬೇಕೆಂದರೆ ಅವಳಿಂದ ಸಹಿ ಮಾಡಲ್ಪಟ್ಟ ಅಪ್ಪಣೆ ಚೀಟಿಯನ್ನು ಪಡೆದುಕೊಂಡರೇ ಹಾಗೆ ಹೋಗಲು ಸಾಧ್ಯ. ಚಂದಾಹಣವನ್ನೊಳಗೊಂಡ ಬಹುಸಂಖ್ಯಾತ ಧನ ಪ್ರೇಷಣ ಪತ್ರಗಳ ರಶೀದಿಗಳಿಗೆಲ್ಲಾ ಅವಳೇ ರುಜು ಹಾಕುತ್ತಾಳೆ. ಅವಳ ರುಜುವೇ ಅವಳ ದಯೆಗೂ ವಿವರಗಳ ಬಗೆಗಿನ ಅವಳ ಅವಧಾನಕ್ಕೂ ಸೂಚಕವಾಗಿವೆ.

ಈ ವಿಸ್ಮಿತ ಪ್ರಪಂಚಕ್ಕೆ ಆಶ್ರಮದಲ್ಲಿ ಮಾತೃಶ್ರೀಯ ಪ್ರತಿಭೆಯು ಒಂದು ಮಾದರಿಯನ್ನು ರಚಿಸಿತು. ಇದು ಜಗತ್ತಿನ ಎಲ್ಲ ಭಿನ್ನ ದೇಶಗಳ ಮತ್ತು ರಾಷ್ಟ್ರೀಯತೆಯ ಪರಿಷತ್ತು; ಈ ಎಲ್ಲ ಜನರು ಆಪ್ತ ಸೋದರರಾಗಿದ್ದಾರೆ; ಸಹಜೀವನ ನಡೆಸುತ್ತಿದ್ದಾರೆ; ದೇವಬೋಧ ಮಾಡುತ್ತಿದ್ದಾರೆ; ಮಾತೃಶ್ರೀಗೆ ಭಕ್ತಿದೋರುತ್ತಿದ್ದಾರೆ- ಅವಳು ಪರಮಾಧಿಕಾರಿಣಿ.

ಈ ರಾಜ್ಯವು ವಿಸ್ತರಿಸುತ್ತಿದೆ. ಮಾತೃಶ್ರೀಯ ಸಂಪತ್ತು ಅಪ್ರಮೇಯ; ಹಾಗೇ ಅವಳ ಯೋಜನೆಗಳೂ. ಪಾಂಡಿಚೇರಿಗೆ ಸ್ವಲ್ಪ ದೂರದಲ್ಲಿವಳೀಗ ಒಂದು ದೊಡ್ಡ ಪ್ರದೇಶವನ್ನು ಕೊಂಡುಕೊಂಡಿದ್ದಾಳೆ; ಅದು ಹವಳ

ಧ್ಯೇಯದ ಹತ್ತಿರವಿದೆ. ಪ್ರತಿಯೊಂದು ರಾಷ್ಟ್ರದವರಿಗೂ ಪ್ರತ್ಯೇಕವಾದ ಪಟ್ಟಣವೊಂದನ್ನು ನಿರ್ಮಿಸಲು ಆಗಲೇ ವ್ಯವಸ್ಥೆ ಮಾಡಲಾಗುತ್ತಿದೆ. ಆ ಪಟ್ಟಣಗಳು ಸ್ವಯಂಪೂರ್ಣವೂ ಸ್ವಪ್ರಶಾಸಕವೂ ಆಗಿರುತ್ತವೆ. ಅವುಗಳ ಒಟ್ಟು ಹೆಸರು 'ಅರೋವಿಲ್'. ಅದು ಅರವಿಂದರ ಹೆಸರನ್ನಾಧರಿಸಿದ್ದು. ಅರೋವಿಲಿಯಲ್ಲಿ ಪ್ರತಿಯೊಂದು ಪಟ್ಟಣ ಶಾಖೆಯೂ ವಿವಿಧ ದೇಶಗಳನ್ನು ಪ್ರತಿನಿಧಿಸುತ್ತದೆ. ಎಲ್ಲ ದೇಶಗಳ ಪ್ರಜೆಗಳೂ ಅಲ್ಲಿ ವಾಸಮಾಡುತ್ತಾರೆ. ಎಲ್ಲರೂ ಒಂದೇ ರಾಷ್ಟ್ರದವರಾಗಿ ಬಾಳುತ್ತಾರೆ; ಜಾತಿ-ಮತಗಳ ಪರಿಭೇದವಿಲ್ಲ. ಅವರು ತಮ್ಮ ತಮ್ಮ ಸಂಸ್ಕೃತಿಯನ್ನು ಉಳಿಸಿ ಕೊಂಡಿರುತ್ತಾರೆ. ಆದರೂ ಅರವಿಂದರ ಉಪದೇಶಾನುಸಾರವಾಗಿ ಒಟ್ಟಾಗಿರುತ್ತಾರೆ. ತಾವು ಆಯ್ದುಕೊಂಡ ಉದ್ಯಮ ಸಾಹಸಗಳ ನಿರ್ವಾಹಕ್ಕೆ ಬೇಕಾದ ಅನುಕೂಲತೆಗಳನ್ನು ಅವರು ಪಡೆಯುತ್ತಾರೆ. ಪ್ಯಾರಿಸ್ಸಿನಲ್ಲಿರುವ ಸಂಯುಕ್ತರಾಷ್ಟ್ರ ಸಂಘದ ಸಂಘಟನ ಶಾಖೆಯು ತಡಮಾಡದೆ ಈ ಯೋಜನೆಯನ್ನು ಸಮ್ಮತಿಸಿದೆ ಎಂಬುದು ಸ್ವಾಗತಾರ್ಹವಾದ ಸುದ್ದಿ. ಅದರ ಅಸ್ತಿಭಾರವನ್ನು ಆಗಲೇ ಹಾಕಲಾಗಿದೆ. ಅದಕ್ಕೆ ಜಗತ್ತಿನ ಎಲ್ಲ ಭಾಗಗಳಿಂದಲೂ ನೆರವು ದೊರೆಯುತ್ತಿದೆ.

ಮಾತೃಶ್ರೀ ಚಿಕ್ಕಂದಿನಲ್ಲಿ ಕನಸುಕಂಡದ್ದೆಲ್ಲ ಸತ್ಯವಾಗಿ ಪರಿಣಮಿಸುತ್ತಿದೆ. ಶಾಂತವಾಗಿ ಮತ್ತು ಸುರಕ್ಷಿತವಾಗಿ ಬದುಕಲು ತೀವ್ರವಾಗಿ ಬಯಸುವ ಯಾರಾದರೂ ಇಲ್ಲಿ ಸುರಕ್ಷಿತ ನೆರಳನ್ನು ಪಡೆಯುವರು. ಅವರಿಲ್ಲಿ ಮುಕ್ತವಾಗಿ "ಜಗತ್ಪ್ರಜೆ" ಗಳಾಗಿ ಬಾಳುವರು. ಮಾತೃಶ್ರೀ ಹೇಳಿದಂತೆ "ಈ ಸ್ವಪ್ನವು ಸತ್ಯವಾಗಿ ಪರಿಣಮಿಸುವುದರಲ್ಲಿದೆ".

ದರ್ಶನ

ಅಂತಾರಾಷ್ಟ್ರೀಯ ವಿದ್ಯಾಕೇಂದ್ರ

1951ರಲ್ಲಿ ವಿದ್ಯಾಕೇಂದ್ರವು ಮಾತೃಶ್ರೀಯಿಂದ ಉದ್ಘಾಟಿಸಲ್ಪಟ್ಟಿತು. ಅದಕ್ಕಾಕೆ "ಶ್ರೀಅರವಿಂದೋ ಅಂತಾರಾಷ್ಟ್ರೀಯ ವಿಶ್ವವಿದ್ಯಾನಿಲಯ ಕೇಂದ್ರ" ಎಂದು ಕರೆದಳು. ಶ್ರೀ ಅರವಿಂದರ ಜೀವಿತಾವಧಿಯಲ್ಲೇ ಸಣ್ಣ ಆರಂಭವಾಯ್ತು. ಆಗ ಆಶ್ರಮದ ಕೆಲ ಮಕ್ಕಳಿಗೆ ಪಾಠ ಹೇಳುತ್ತಿದ್ದಳು. ಮೊದಲು ಮಕ್ಕಳಿಗೆ ಅವಳು ಫ್ರೆಂಚ್ ಭಾಷೆಯನ್ನು ಕಲಿಸುತ್ತಿದ್ದಳು; ಅವರಿಗೆ ಸರಳವಾದ ಕಥೆಗಳನ್ನು ಹೇಳುತ್ತಿದ್ದಳು. ಚಿಕ್ಕವರೂ ದೊಡ್ಡವರೂ ಎಲ್ಲರೂ ಅಲ್ಲಿರುತ್ತಿದ್ದರು; ಅವರಿಗೆ ಆಸಕ್ತಿ ಹುಟ್ಟಿಸುವ ಜ್ಞಾನವನ್ನವಳು ನೀಡುತ್ತಿದ್ದಳು. ಆದರಿಂದ ಅವಳ ತರಗತಿಗೆ ಸೇರಲು ಅಂಥ ಎಲ್ಲರೂ ಕುತೂಹಲಿಗಳಾಗುತ್ತಿದ್ದರು. ಚಿಕ್ಕ ಮಕ್ಕಳಿಗೆ ಪಾಠ ಹೇಳುವುದು ಅವಳಿಗೆ ಇಷ್ಟ. ಅವರಿಗೆ ಯಾವ ಅಭ್ಯಾಸವೂ ಆಗಿರದುದರಿಂದ ಅವರನ್ನು ಇಷ್ಟವಾದ ರೂಪಕ್ಕೆ ತಿರುಗಿಸಬಹುದಾಗಿತ್ತು. ಅವರವರ ಮನಃಪ್ರವೃತ್ತಿಗನುಗುಣವಾದ ವಿಷಯವನ್ನು ಕಲಿಯಲು ಅವರನ್ನು ಪ್ರೋತ್ಸಾಹಿಸಲಾಗುತ್ತಿತ್ತು. ಈ ಪ್ರಕಾರ ಸರಿಯಾದ ಒಂದು ಶಾಲೆ ಅಸ್ತಿತ್ವಕ್ಕೆ ಬಂದಿತು. ಆಶ್ರಮದ ಸದಸ್ಯರೊಳಗಿಂದಲೇ ಗುರುಗಳನ್ನು ನಿಯಮಿಸಲಾಗುತ್ತಿತ್ತು. ಆಶ್ರಮದ ಹೊರಗೆ ವಾಸಿಸುತ್ತಿದ್ದ ಶಿಷ್ಯರಿಗೆ ತಮ್ಮ ಮಕ್ಕಳನ್ನು ಆಶ್ರಮದೊಳಗಿಡುವುದು ಸಂತೋಷಕರವಾಗಿತ್ತು. ಮಕ್ಕಳೂ ಹಾಗೇ ಸಂತುಷ್ಟರಾಗಿರುತ್ತಿದ್ದರು. ಅವರಿಗೆ ಮಾತೃಶ್ರೀಯನ್ನು ಕಂಡರೆ ಮಹಾ ಪ್ರೀತಿ; ಅವರು ಅಲ್ಲೇ ಉಳಿಯಲು ಬಯಸುತ್ತಿದ್ದರು; ತಂದೆ ತಾಯಿಗಳು ಕರೆದರೂ ಕೆಲ ಮಕ್ಕಳು ಹೋಗಲೊಲ್ಲೆವೆನ್ನುತ್ತಿದ್ದರು. ತರಗತಿಗಳಲ್ಲಿ ಮಾತೃಶ್ರೀಯ ಭಾಷಣಗಳು ಬಹಳ ರುಚಿಕಟ್ಟಾಗಿರುತ್ತಿದ್ದವು. ಆದುದರಿಂದ ವಯಸ್ಕರು ಸಹ ಅವನ್ನು ಕೇಳಲು ಬರುತ್ತಿದ್ದರು. ಶಾಲೆಯ ಅಭ್ಯಾಸದ

ನಿಯಮಗಳು ವಿಲಕ್ಷಣವಾಗಿದ್ದವು. ಒಂದು ವಿಷಯದಲ್ಲಿ ಹಿಂದುಳಿದ ವಿದ್ಯಾರ್ಥಿಗೆ ಇನ್ನೊಂದರಲ್ಲಿ ಮುಂದಾಗಲು ಯಾವ ಅಡ್ಡಿಯೂ ಇರಲಿಲ್ಲ. ಒಬ್ಬನು ಇತಿಹಾಸದಲ್ಲಿ 4ನೆಯ ಇಯತ್ತೆಯಲ್ಲಿದ್ದರೆ ಗಣಿತದಲ್ಲಿ 2ನೆಯ ಇಯತ್ತೆಯಲ್ಲಿರುತ್ತಿದ್ದ. ತಾಯ್ನುಡಿಯಲ್ಲದೆ ಇತರ ಯಾವ ಭಾಷೆಯನ್ನು ಬೇಕಾದರೂ ಕಲಿಯಬಹುದಾಗಿತ್ತು.

ಶ್ರೀ ಅರವಿಂದರು ವಿಶ್ವವಿದ್ಯಾಲಯದ ಶಿಕ್ಷಣ ವ್ಯವಸ್ಥೆಯನ್ನು ಮಾಡಬೇಕೆಂದು ಆಲೋಚಿಸಿದ್ದನ್ನು ಹೇಳುತ್ತಿದ್ದರು. ಅದು ಅಂತಾರಾಷ್ಟ್ರೀಯ ಸ್ವರೂಪದ್ದಾಗಿರಬೇಕೆಂದು ಆಶಿಸಿದ್ದರು. ಮಾತೃಶ್ರೀ ಅದನ್ನು ಹೀಗೆ ವಿವರಿಸಿದ್ದರು: "ಈ ಕೇಂದ್ರವು ಅಂತಾರಾಷ್ಟ್ರೀಯ ಸ್ವರೂಪದ್ದಾಗಿರುವುದು ಎಲ್ಲ ದೇಶಗಳಿಂದ ವಿದ್ಯಾರ್ಥಿಗಳು ಬರುತ್ತಾರೆಂದೂ ಅಲ್ಲ, ಅವರವರ ಮಾತೃಭಾಷೆಗಳಲ್ಲೇ ಶಿಕ್ಷಣ ಕೊಡಲಾಗುತ್ತದೆಯೆಂದೂ ಅಲ್ಲ- ಆದರೆ ಜಗತ್ತಿನ ವಿವಿಧ ಪ್ರದೇಶಗಳ ಸಂಸ್ಕೃತಿ ಇಲ್ಲಿ ಪ್ರತಿನಿಧಿಸಲ್ಪಡುವುದೆಂಬುದು ಅದಕ್ಕೆ ಮಹತ್ವದ ಕಾರಣ, ಅದು ಇಲ್ಲಿ ಸರ್ವಲಭ್ಯವಾಗಬೇಕು. ಹಾಗಾಗುವುದು ಬೌದ್ಧಿಕವಾಗಿ ಮಾತ್ರವಲ್ಲ- ವಿಚಾರಗಳಲ್ಲಿ, ಸಿದ್ಧಾಂತಗಳಲ್ಲಿ, ತತ್ವಗಳಲ್ಲಿ, ಭಾಷೆಗಳಲ್ಲಿ ಮತ್ತು ಹೆಚ್ಚಾಗಿ ಆಚಾರ ಅನುಷ್ಠಾನಗಳಲ್ಲಿ ಹಾಗೂ ಕಲೆ ಮತ್ತು ಇತರ ರೂಪಗಳಲ್ಲಲ್ಲದೆ ಭೌತಿಕವಾಗಿ ಕೂಡ.... ಹೀಗಿರುವುದರಿಂದ ತಾವು ಸೇರಿರುವ ರಾಷ್ಟ್ರಗಳ ಮೂಲಭೂತ ಪ್ರತಿಭೆಯ ಜಾಗರವನ್ನು ಪಡೆಯುವಂತೆ ಮಾಡುವುದು ಪ್ರಥಮ ಧ್ಯೇಯ; ಅದೇ ಕಾಲದಲ್ಲಿ ಇತರ ರಾಷ್ಟ್ರಗಳ ಜೀವನಕ್ರಮಗಳೊಡನೆ ಅವರಿಗೆ ಸಂಪರ್ಕ ಉಂಟಾಗುವಂತೆಸಗುವುದು ಎರಡನೆಯ ಧ್ಯೇಯ: ಅದರಿಂದ ಜಗತ್ತಿನ ಎಲ್ಲ ದೇಶಗಳ ನಿಜಭಾವನೆಯನ್ನು ತಿಳಿದು ಅದನ್ನು ಗೌರವಿಸುವಂತೆ ಮಾಡುವುದು ಅದರಲ್ಲಿ ಮುಖ್ಯ. ಎಲ್ಲ ಜಾಗತಿಕ ಸಂಘಗಳೂ ನಿಜವೆನ್ನಿಸಬೇಕಾದರೆ ಮತ್ತು ಉಳಿಯಬೇಕಾದರೆ ರಾಷ್ಟ್ರ-ರಾಷ್ಟ್ರಗಳಲ್ಲಿಯೂ ವ್ಯಕ್ತಿ-ವ್ಯಕ್ತಿಗಳಲ್ಲಿಯೂ ಗೌರವ ಮತ್ತು ಪರಸ್ಪರ ತಿಳಿವಳಿಕೆ ಇರುವುದನ್ನು ಆಧರಿಸಿರಬೇಕು. ಸಾಮೂಹಿಕ ವ್ಯವಸ್ಥೆ ಮತ್ತು ಸಂಘಟನೆಗಳೇ- ಅವು ಪರಸ್ಪರ ಸಹಕಾರ-ಸದಾಶಯಗಳನ್ನಿಟ್ಟುಕೊಂಡಾಗ- ಈಗ ಇರುವ ದುಃಖಕರ ಅರಾಜಕತೆಯಿಂದ ಮಾನವನನ್ನು ಮೇಲಕ್ಕೆ ಎತ್ತಬಲ್ಲವು".

ಆದುದರಿಂದ ಅರೋವಿಲಿಯ ಕಾರ್ಯವಿಧಾನವು ,ಶ್ರೀ ಅರವಿಂದರ ಆದರ್ಶಕ್ಕೆ ಹೊಂದಿಸಲಾಗಿದೆ. ನಿಜವಾಗಿ ನೋಡಿದರೆ ಉಕ್ತಸಂಸ್ಥೆಯು ಪೌರಸ್ತ್ಯವೂ ಅಲ್ಲ, ಪಾಶ್ಚಾತ್ಯವೂ ಅಲ್ಲ. ಆದರೂ ಇವೆರಡರ ಉತ್ತಮಾಂಶಗಳನ್ನು ಅದು ಒಳಗೊಂಡಿದೆ. ವಿದ್ವಾಂಸರೂ ಉದಾತ್ತ ಮನಸ್ಕರೂ ಆದ ಗುರುಗಳು ಅನೇಕ ದೇಶಗಳಿಂದ ಇಲ್ಲಿಗೆ ಬಂದಿದ್ದಾರೆ, ಇನ್ನೂ ಬರುತ್ತಿದ್ದಾರೆ, ಹಾಗೆ ಬಂದು ಗೌರವಧನ ತೆಗೆದುಕೊಂಡು ಕೆಲಸ ಮಾಡುತ್ತಿದ್ದಾರೆ. ಎಲ್ಲ ವಯಸ್ಸಿನ ವಿದ್ಯಾರ್ಥಿಗಳನ್ನೂ ಸೇರಿಸಿಕೊಳ್ಳಲಾಗಿದೆ. ಸೈದ್ಧಾಂತಿಕ ಮತ್ತು ಪ್ರಾಯೋಗಿಕ ವಿಜ್ಞಾನವನ್ನೊಳಗೊಂಡು ವಿವಿಧ ವಿಷಯಗಳನ್ನವರಿಗೆ ಕಲಿಸಲಾಗುತ್ತಿದೆ. ಗುರು-ಶಿಷ್ಯರು ಸಾಮಾನ್ಯವಾಗಿ ಒಟ್ಟಿಗೆ ಬದುಕುತ್ತಾರೆ. ಶಿಕ್ಷಣ ಉಚಿತ. ಮಾತೃಶ್ರೀ ಹೇಳಿದ್ದಾಳೆ, 'ನಾನು ವಿದ್ಯೆಯನ್ನು ಮಾರುವುದಿಲ್ಲ',

ಸಮಗ್ರ ಆಧ್ಯಾತ್ಮಿಕ ದೃಷ್ಟಿ ಆಧಾರವಾಗಿರುವುದು ಈ ಕೇಂದ್ರದಲ್ಲಿಯ ವಿದ್ಯಾಭ್ಯಾಸದ ವೈಶಿಷ್ಟ್ಯ. ಇಲ್ಲಿಯ ಕೆಲ ಯಶಸ್ವಿ ವಿದ್ಯಾರ್ಥಿಗಳು ಸರಕಾರದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಕೂತು ವಿಜೇತರಾಗಿದ್ದರೂ ಈ ವಿದ್ಯಾಸಂಸ್ಥೆಯಲ್ಲಿ ಸಾಫಲ್ಯ ಸಾಧನೆಯ ಉದ್ದೇಶವೂ ಇಲ್ಲ, ಸ್ಪರ್ಧೆಯ ಪ್ರವೃತ್ತಿಯೂ ಇಲ್ಲ.

ಹುಡುಗರನ್ನೂ ಹುಡುಗಿಯರನ್ನೂ ಇಲ್ಲಿ ಸಮಾನತೆಯಿಂದ ನಡೆಸಿಕೊಳ್ಳಲಾಗುತ್ತದೆ.

1952 ರಲ್ಲಿ ನಡೆದ ಉದ್ಘಾಟನ ಸಮಾರಂಭದಲ್ಲಿ ಸಭೆಯಲ್ಲಿ ಮಾತೃಶ್ರೀ ಹೇಳಿದಳು:

“ಶ್ರೀ ಅರವಿಂದರೀಗಲೂ ನಮ್ಮಲ್ಲಿ ಉಪಸ್ಥಿತರಾಗಿದ್ದಾರೆ. ಬಹಳ ಕಾಲದವರೆಗೆ ಇಂಥ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಬೇಕೆಂದು ಅವರು ವಿಚಾರ ಮಾಡುತ್ತಿದ್ದರು. ಅತಿಮಾನಸದ ಬೆಳಕನ್ನು ಪಡೆಯುವುದಕ್ಕಾಗಿ ಸಿದ್ಧತೆ ನಡೆಸಲು ಮನುಷ್ಯನಿಗಿದೇ ಅತ್ಯುತ್ತಮ ಮಾರ್ಗ ಎಂದಿದ್ದರವರು. ಇದರ ನೆರವಿನಿಂದ ಆಧುನಿಕ ಮುಂಬರಿದ ಮಾನವ ಮಾದರಿಗಳು

ಉದಯಿಸುವುವು ಮತ್ತು ಅವು ಒಂದು ಹೊಸ ಬೆಳಕನ್ನು, ಹೊಸ ಶಕ್ತಿಯನ್ನು ಮತ್ತು ಒಂದು ಹೊಸ ಜೀವನಾಭಿವ್ಯಕ್ತಿಯನ್ನು ಈ ಜಗತ್ತಿನೊಳಗೆ ತರುವುವು".

ಅರವಿಂದರಿಗೆ ಅರೋವಿಲೆಯ ಭವಿಷ್ಯತ್ತಿನ ಬಗೆಗೆ ದೊಡ್ಡ ಪ್ರತ್ಯಾಶೆಯಿತ್ತು; ಅದು ಕೊನೆಗೆ ಜಾಗತಿಕ ಪ್ರಾಮುಖ್ಯವುಳ್ಳ ಒಂದು ಸಂಸ್ಥೆಯಾಗಿ ಬೆಳೆಯುವುದು– ಎಂದು ಅದರ ಉದ್ಘಾಟನೆಯ ಕಾಲದಲ್ಲಿ ಮಾತೃಶ್ರೀ ಹೇಳಿದಳು. ಕೆಂ. ಎಂ. ಮುನಶಿಯವರು ಬಂದಾಗ 'ನೀವು 10 ವರ್ಷಗಳಾದಮೇಲೆ ಬನ್ನಿರಿ; ಇದು ಎಷ್ಟು ಪರಿಣತವಾಗಿರುವುದು ಎಂಬುದನ್ನು ಆಗ ನೋಡುವಿರಿ' ಎಂದಿದ್ದಳಾಕೆ.

ಇದರ ಒಬ್ಬ ವಿದ್ಯಾರ್ಥಿ ತನ್ನ ಸೋದರನಿಗೆ ಬರೆದ ಪತ್ರವೊಂದನ್ನಿಲ್ಲಿ ಉದ್ಧರಿಸುತ್ತೇವೆ. ಅದರಲ್ಲಿ ಅನಲಂಕೃತವಾದರೂ ಮೆಚ್ಚಬಹುದಾದ ಚಿತ್ರವನ್ನು ನೀವು ಕಾಣುವಿರಿ:

24-3-1953

"ನನ್ನ ಪ್ರಿಯ ಸೋದರ,

ಆಶ್ರಮದ ಬಗೆಗೆ ನಾನು ಬರೆದೇತೀರಬೇಕು. ನಾನಿಲ್ಲಿ ಬಹುಕಾಲವಿದ್ದುದರಿಂದ ನನಗದರ ಸ್ಥಿತಿಯ ಬಗೆಗೆ ಬೇಕಾದಷ್ಟು ಗೊತ್ತಿದೆ. ಯಾರೇ ಆಗಲಿ, ಒಂದು ತಿಂಗಳಿಗಿಂತ ಹೆಚ್ಚು ಕಾಲ ಇಲ್ಲಿ ಬಂದು ಉಳಿದರೆ ಹೊರಜಗತ್ತನ್ನವನು ಪ್ರೀತಿಸಲಾರನೆಂದು ನನ್ನ ಭಾವನೆ....

ನನ್ನ ಕೈಬರೆಹವನ್ನು ಗಣಿಸಬೇಡ. ನಾನು ಬಹಳ ಗಡಿಬಿಡಿಯಲ್ಲಿದ್ದೇನೆ. ಇಗ ರಾತ್ರಿ 10-30 ಗಂಟೆ. ನನಗೀಗ ನಿದ್ದೆ ಬರುವ ಹಾಗಿದೆ. ನಾನು ನಾಳೆ ಬೆಳಿಗ್ಗೆ 5 ಗಂಟೆಗೆ ಏಳಬೇಕು; ಮತ್ತು ನಾನು ಓಡಲು, ಭರ್ಚಿ ಎಸೆಯಲು ಹಾಗೂ ಚಕ್ರ ಎಸೆಯಲು ಹೋಗಬೇಕಾಗಿದೆ. ಓ, ಅದೊಂದು ಸೊಗಸಾದ ಸಂಗತಿ. ಪ್ರತಿದಿನವೂ ನಾನು ವ್ಯಾಯಾಮ ಮಾಡುತ್ತೇನೆ ಮತ್ತು ಆಟಗಳನ್ನು ಆಡುತ್ತೇನೆ.

ನಾನು ನನ್ನ ಜೀವನದ ಅತ್ಯಂತ ಸುಖಕರವಾದ ದಿನಗಳನ್ನು ಕಳೆಯುತ್ತಿದ್ದೇನೆ ಎನ್ನಿಸುತ್ತದೆ. ನನ್ನ ಇಡಿ ಜೀವನವನ್ನು ಇಂಥ ಸುಖದಲ್ಲಿ ಕಳೆಯುವಂತೆ ದೇವರು ನನ್ನನ್ನು ಹರಸಲಿ.

ಶ್ರೀ ಅರವಿಂದರ "ಸಾವಿತ್ರಿ" ಯನ್ನು ನಾನು ಓದುತ್ತಿದ್ದೇನೆ ಮತ್ತು ಅದು ಬಹಳ ಆಕರ್ಷಕವಾದ ಪುಸ್ತಕ- ಎಂಬುದು ನಿನಗೆ ಗೊತ್ತೇ? ಅದು ನನಗೆ ಬಹಳ ಸಹಾಯ ಮಾಡುತ್ತಿದೆ; ಒಮ್ಮೆ ಅದನ್ನು ತೆರೆದೆನೆಂದರೆ ಅದನ್ನು ಬಿಡಲು ಮನಸ್ಸೇ ಬರುವುದಿಲ್ಲ. ಅದರ ಭಾಷೆ ಅಷ್ಟು ಚೆನ್ನಾಗಿದೆ; ಅದರಲ್ಲೇ ಮೈಮರೆತಿರಬಹುದು. ಓ, ಹೌದು! ಒಂದು ಸಂಗತಿಯನ್ನು ನಾನು ನಿನಗೆ ಹೇಳಬೇಕೆಂದಿದ್ದೇನೆ- ಇಲ್ಲಿ ಓದುತ್ತಿರುವ ಹುಡುಗ-ಹುಡುಗಿಯರೆಲ್ಲರೂ ಸಾಂಪ್ರದಾಯಿಕ ತಪಸ್ವಿಗಳಂತೆ ಯೋಗಾಭ್ಯಾಸ ಮಾಡುತ್ತಿದ್ದಾರೆ ಎಂದು ತಿಳಿಯಬೇಡ; ಆದರೂ ಅವರು ಅತ್ಯಂತ ಸ್ವಾಭಾವಿಕ ರೀತಿಯಲ್ಲಿ ಆಧ್ಯಾತ್ಮಿಕ ಜೀವನವನ್ನು ನಡೆಸುತ್ತಿದ್ದಾರೆ. ಕೆಲವರಿಗಿದು ಗೊತ್ತೇ ಇಲ್ಲ. ಎಳೆಯರೆಲ್ಲರಿಗೂ ಮಹಾಮಾತೆ ಮತ್ತು ಅರವಿಂದರ ಮೇಲೆ ಬಹಳ ಪ್ರೀತಿ-ಗೌರವಗಳಿವೆ ಈ ವಿಶ್ವವಿದ್ಯಾನಿಲಯವನ್ನು ತಪ್ಪಿಸಬೇಡ. ಇದು ಈಗ ಮತ್ತು ಇನ್ನು ಮುಂದೆಯೂ ಇಡೀ ಜಗತ್ತಿನಲ್ಲಿ ಅನನ್ಯ ವಿಶ್ವವಿದ್ಯಾನಿಲಯ.

ಈಗ ನೀನು ಹೇಳಬಹುದು ಇಲ್ಲವೆ ಆಲೋಚಿಸಬಹುದು: ಈ ವಿಶ್ವವಿದ್ಯಾನಿಲಯಕ್ಕೂ ಹೊರಗಿನ ವಿಶ್ವವಿದ್ಯಾನಿಲಯಕ್ಕೂ ಯಾವ ಭೇದವಿದೆ? ಓ- ಬಹಳ ಭೇದವಿದೆ. ಉದಾಹರಣೆಗಾಗಿ- ದೇಹದ ಕಣಪುಟದ (cell) ವಿಷಯವಾಗಿ ಚರ್ಚಿಸಲಾಗುತ್ತಿದ್ದ ಒಂದು ತರಗತಿಯಲ್ಲಿ ನಾನು ಕುಳಿತಿದ್ದೆ. ನಮ್ಮ ಶಾಲೆಗಳಲ್ಲಿ ಈ ವಿಷಯವನ್ನು ಒಂದೆರಡು ದಿನಗಳಲ್ಲಿ ಮುಗಿಸಿಬಿಡುತ್ತಾರೆ; ಇದನ್ನಿಲ್ಲಿ ಕಳೆದ 2 ತಿಂಗಳುಗಳಿಂದ ಕಲಿಸಲಾಗುತ್ತಿದೆ. ನನ್ನ ಪ್ರಕಾರ ಇಲ್ಲಿಯ ಗುರುಗಳು ಇಡಿವರ್ಷದಲ್ಲಿ ಸ್ವಲ್ಪ ಕಡಿಮೆ ಪಾಠ ಮಾಡುತ್ತಾರೆ; ಆದರೆ ಅವರು ಏನು ಹೇಳಿಕೊಟ್ಟರೂ ವಿವರಪೂರ್ವಕವಾಗಿ ಹೇಳಿಕೊಡುತ್ತಾರೆ. ಹುಡುಗರು ಅರವಿಂದ ಗುರುಗಳ

ಸಾವಿತ್ರಿ ಅಥವಾ ಇತರ ಗ್ರಂಥಗಳಿಂದ ವಾಕ್ಯಗಳನ್ನು ಎತ್ತಿ ಹೇಳಿ ಕಣಿ ಪುಟದ ಮೇಲೆ 12 ಪುಟಗಳಷ್ಟು ಬರೆಯುತ್ತಾರೆ. ಅವರ ಬರಹಗಳನ್ನೋದುವುದು- ಅದರಲ್ಲೂ ಅಂಥ ಪ್ರಬಂಧಗಳನ್ನೋದುವುದು ಬಹಳ ಸೊಗಸಾಗಿರುತ್ತದೆ. ಇನ್ನೊಂದು ಝುಳ ಹೊಡೆಯುವಂಥ ಸುದ್ದಿಯನ್ನು ನಿನಗೆ ಹೇಳಬೇಕೆಂದಿದ್ದೇನೆ. ಅದೇನೆಂದರೆ, 5-6ನೆಯ ಇಯತ್ತೆಯಲ್ಲಿ ಕಲಿಯುವ ಹುಡುಗ-ಹುಡುಗಿಯರು ಷೇಕ್ಸ್‌ಪಿಯರನ ಪದ್ಯಗಳನ್ನೂ ನಾಟಕಗಳನ್ನೂ ಸೊಗಸಾಗಿ ವಿಮರ್ಶೆ ಮಾಡುತ್ತಾರೆ. ಆ ರೀತಿ ನಮ್ಮ ಕಾಲೇಜಿನ ಹುಡುಗರು ಎಂದೂ ವಿಮರ್ಶೆ ಮಾಡಲಾರರು.... ಇಲ್ಲಿ ಇಂಗ್ಲೀಷಿನ ಮಟ್ಟ ಬಹಳ ಉನ್ನತವಾಗಿದೆ. ನನಗೆ ಆಶ್ಚರ್ಯವನ್ನುಂಟುಮಾಡಿದ ಒಂದು ವಿಷಯವೆಂದರೆ ವಾರದ ಪರೀಕ್ಷೆಯಲ್ಲಿ ಪ್ರಶ್ನೆಗಳಿಗೆ ಉತ್ತರ ಬರೆಯಲಾರದ ಒಬ್ಬ ಹುಡುಗ ಮತ್ತು ಒಬ್ಬ ಹುಡುಗಿಯು 5 ನಿಮಿಷ ಕೂತು ಧ್ಯಾನ ಮಾಡಿ ಕೂಡಲೇ ಉತ್ತರ ಬರೆಯಲಾರಂಭಿಸಿದ್ದಲ್ಲದೆ ಆ ಉತ್ತರಗಳನ್ನವರು ಬಹಳ ಚೆನ್ನಾಗಿಯೂ ಕ್ರಮಬದ್ಧವಾಗಿಯೂ ಬರೆದರು. ಈ ಎಲ್ಲದರ ಹಿಂದೆ ಮಾತೃಶ್ರೀಯ ಅನುಗ್ರಹ ಕೆಲಸಮಾಡುತ್ತಿದೆ. ಇಡೀ ಆಶ್ರಮದಲ್ಲಿ ಅಥವಾ ವಿಶ್ವವಿದ್ಯಾನಿಲಯದಲ್ಲಿ ಒಂದಾದರೂ ಬಲಾತ್ಕಾರದ ಶಬ್ದವಿಲ್ಲ. ನೀನು ಕಲಿಯಬಹುದು ಅಥವಾ ಬಿಡಬಹುದು. ಪ್ರತಿಯೊಬ್ಬ ಹುಡುಗನೂ ಸಂತೋಷದಿಂದ ಶಾಲೆಗೆ ಹೋಗುತ್ತಾನೆ. ಅವನ ಸುಖ-ಸಂತೋಷಗಳನ್ನು ನಾನು ನಿನಗೆ ಬರೆದು ತಿಳಿಸಲು ಅಸಮರ್ಥ.

ಮಕ್ಕಳು ಮಹಾಧೀರರು. ಅವರಿಗೀಜಗತ್ತಿನಲ್ಲಿ ಯಾವುದರ ಹೆದರಿಕೆಯೂ ಇಲ್ಲ. ಅಪ್ಪ-ಅಮ್ಮಂದಿರ ಭಯ ಕೂಡಾ ಇಲ್ಲ. ಆದರೆ ದುಷ್ಕಾರ್ಯಗಳನ್ನು ಮಾಡುವುದರ ಬಗೆಗೆ ಅವರಿಗೆ ಹೆದರಿಕೆ ಇದೆ; ಅವರಲ್ಲಿ ಯಾರೂ ಯಾವ ದುಷ್ಕಾರ್ಯವನ್ನೂ ಮಾಡರು. ಅವರೇನಾದರೂ ಮಾಡಿದರೆ ಆ ಕೂಡಲೇ ಮಾತೃಶ್ರೀಯಲ್ಲಿ ಹೋಗಿ ಒಪ್ಪಿಕೊಂಡುಬಿಡುತ್ತಾರೆ. ಅವಳು, ನಿನಗೆ ಗೊತ್ತಿರುವಹಾಗೆ, ದಿವ್ಯಮಾತೆ. ಆದ್ದರಿಂದ ಅವಳವರನ್ನು ಕ್ಷಮಿಸಿ ಮತ್ತೆ ಅವರು ಅಂಥ ತಪ್ಪನ್ನು ಮಾಡದಿರುವಂತೆ ಹರಸುತ್ತಾಳೆ. ಅವರಿಗೆ ಮಹಾತಾಯಿಯ ರಕ್ಷಣೆ ಇದೆ- ಅವರು ಧೀರರೆಂದರೆ ಧೀರರು....

ಹುಡುಗರು ಎಷ್ಟೋ ಸಲ ಜಗಳವಾಡುತ್ತಾರೆ; ಆದರೆ ಎರಡೇ ನಿಮಿಷಗಳಲ್ಲಿ ಗೆಳೆಯರಾಗಿ ಬಿಡುತ್ತಾರೆ. ಹುಡುಗರು ಸುಳ್ಳು ಹೇಳರು ಮತ್ತು ನಿಷ್ಠಾವಂತರು ಹಾಗೂ ಸತ್ಯಸಂಧರು. ಸೋದರನೆ, ಇದು ನಮಗೆಲ್ಲಾ ಸ್ವರ್ಗವೆಂದೇ ನನ್ನ ಭಾವನೆ. ಭೂತಲದಲಿ ನೀನೆಲ್ಲೂ ಇಂಥ ಸುಖವನ್ನು ಪಡೆಯಲಾರೆ. ದುಃಖವೆಂಬುದು ಇಲ್ಲಿ ಇಲ್ಲವೇ ಇಲ್ಲ. ಪ್ರತಿಯೊಂದು ಸುಖವೂ ಇಲ್ಲಿ ಸಂಪಸ್ಕೃತ ತಾಳಿರುತ್ತದೆ; ಮತ್ತು ಒಂದಲ್ಲಾ ಒಂದುದಿನ ಇಡಿ ಜಗತ್ತೇ ಇಲ್ಲಿ ನೋಡಲು ಹಾಗೂ ಕಲಿಯಲೆಂದು ತುಂಬಿ ಹೋಗುವುದೆಂಬುದು ನನಗೆ ಖಾತ್ರಿಯಾಗಿದೆ. ನನ್ನ ಧ್ಯೇಯವಾದ ಏಕಮೇವಾದ್ವಿತೀಯ ಪ್ರಶ್ನವನ್ನು ಸಮಾಪಿಸುವುದರಲ್ಲಿ ಮುಂಬರಿಯುವಂತೆ ದೇವರು ನಮಗೆ ಸಹಾಯ ಮಾಡಲಿ.

ಗೌತಮ

ಇಂಥ ಪ್ರಯೋಗಕ್ಕೆ ಸೇರಲು ಯಾರೂ ಸಿದ್ಧರಾಗದಿದ್ದಾರು? ಯಾರಿಗೆ ಇಂಥ ಅಮರ್ತ್ಯತೆಯ ಮೊಳಕೆಗಳು ಎತ್ತರ ಎತ್ತರವಾಗಿ ಬೆಳೆಯಲಿ ಎನ್ನಿಸದಿರದು?

* * *

ಮಾತೃಶ್ರೀಯ ವಿದ್ಯಾದರ್ಶ

ಮಾತೃಶ್ರೀಯ ಪ್ರಕಾರ ವಿದ್ಯಾಭ್ಯಾಸವೆಂದರೆ ‘ಬದುಕುವ ಶಾಸ್ತ್ರ’. ಅದಕ್ಕೆ ಆದಿ-ಅಂತಗಳಿಲ್ಲ ಮತ್ತು ಅದಕ್ಕೆ ಲಿಂಗಭೇದವು ಅಸಂಬದ್ಧ.

ಪ್ರಪಂಚದಲ್ಲಿಂದು ಬಳಕೆಯಲ್ಲಿರುವ ವಿದ್ಯಾಭ್ಯಾಸ ಕ್ರಮವು ಒಮ್ಮಗ್ಗಲಿನ ಉಪಶಿಕ್ಷಣವನ್ನೂ ಜ್ಞಾನವನ್ನೂ ಕೊಡುತ್ತದೆ; ಮತ್ತು ಮನಸ್ಸಿನ ಒಂದು ಭಾಗ ಮಾತ್ರ ಅದರಿಂದ ಬೆಳೆಯುತ್ತದೆ. ಉಳಿದೆಲ್ಲ ಭಾಗಗಳೂ ನಾಗರಿಕತೆಯ ಪ್ರಾರಂಭದೆಶೆಯಲ್ಲಿಯೂ ಅಜ್ಞಾನದಲ್ಲಿಯೂ ಉಳಿಯುವುವಲ್ಲದೆ ಅಂತರಾತ್ಮವು ಅವಿಕಾಸಿತ ಸ್ಥಿತಿಯಲ್ಲೇ ಬಿದ್ದಿರುತ್ತದೆ. ಸರಿಯಾದ ವಿದ್ಯಾಭ್ಯಾಸವು ಜೀವಿಯ ಎಲ್ಲ ಭಾಗಗಳ ಸಮನ್ವಿತ ಬೆಳವಣಿಗೆ-ಅಭಿವೃದ್ಧಿಗಳ ಗುರಿಯುಳ್ಳದ್ದಾಗಿರಬೇಕು— ಯಾವ ಭಾಗವೂ ಅಸ್ಪೃಷ್ಟವಾಗಿರಕೂಡದು.

ಆ ಉದ್ದೇಶ ಸಾಧನೆಗೆ– ಮಾತೃಶ್ರೀಯ ಪ್ರಕಾರ– ಮೊದಲ ಹೆಜ್ಜೆಯೆಂದರೆ- “ನೀನು ನಿನ್ನ ಜಾಗರ ಉಳ್ಳವನಾಗಿರಬೇಕು; ನಿನ್ನ ಇರವಿನ ವಿವಿಧ ಭಾಗಗಳ ಜ್ಞಾನವುಳ್ಳವನಾಗಿರಬೇಕು– ಅವುಗಳ ವಿಶಿಷ್ಟ ಚಟುವಟಿಕೆಗಳನ್ನು ಅರಿತುಕೊಂಡವನಾಗಿಯೂ ಇರಬೇಕು”.

ಸರ್ವಾಂಗೀಣ ವಿದ್ಯಾಭ್ಯಾಸದ ಬಗೆಗೆ ಮಾತೃಶ್ರೀಯು ವಿಸ್ತಾರವಾಗಿ ಬರೆದಿದ್ದಾಳೆ ಮತ್ತು ಭಾಷಣ ಮಾಡಿದ್ದಾಳೆ; ನಾವಿಲ್ಲಿ ಅದರ ಸಾರವನ್ನು ಮಾತ್ರ ಕೊಡುತ್ತೇವೆ:

ಉಪದೇಶಕ್ಕಿಂತ ಆಚರಿಸಿ ತೋರಿಸುವುದೇ ಶಿಕ್ಷಣದ ಅತ್ಯುತ್ತಮ ಕ್ರಮ. ನಡೆದು ತೋರಿಸುವುದರಿಂದ ನೀವು ವಿದ್ಯಾರ್ಥಿಗಳಿಗೆ ಸಹತೆಯನ್ನು

ಕಲಿಸುತ್ತೀರಿ. ನೀವವರನ್ನು ಬೈಯಬಾರದು, ಬೆದರಿಸಬಾರದು; ಏಕೆಂದರೆ ಕೊನೆಯದಾಗಿ ಇದರಿಂದ ಅವರು ಅಸಾವಧಾನರೂ ಒರಟರೂ ಆಗಿ ನಿಮ್ಮ ಯತ್ನವೆಲ್ಲ ನಿಷ್ಪ್ರಯೋಜನವಾಗುವುದು. ನೀವು ಅದಕ್ಕಿಂತ ಅವರ ತಪ್ಪುಗಳನ್ನೂ ಕರ್ತವ್ಯಚ್ಯುತಿಗಳನ್ನೂ ಶಾಂತತೆಯಿಂದ ತೋರಿಸಿಕೊಡುವುದು ಲೇಸು; ಮತ್ತು ತಮ್ಮ ತಪ್ಪುಗಳನ್ನು ಒಪ್ಪಿಕೊಳ್ಳುವಂತೆ ಅವರಿಗೆ ಪ್ರೋತ್ಸಾಹ ನೀಡಬೇಕು. ಅವರು ತಮ್ಮ ತಪ್ಪುಗಳನ್ನು ಒಪ್ಪಿಕೊಂಡ ಮೇಲೆ ಅವರನ್ನು ಬೈಯದೆ ಕ್ಷಮಿಸಿ ಬಿಡಬೇಕು. ಸತ್ಯ ಹೇಳಲು ಒಮ್ಮೆ ಅವರು ಹೆದರಿದರೆಂದರೆ ಸುಳ್ಳು ಹೇಳಲು ತೊಡಗುತ್ತಾರೆ. ಆಗ ಅವರನ್ನು ತಿದ್ದಲು ಮಾಡುವ ನಿಮ್ಮ ಯತ್ನಗಳೆಲ್ಲ ವಿಫಲವಾಗುವುವು. ಅವರ ಮನಸ್ಸಿನಲ್ಲಿ ಯಾವ ಭಯವೂ ಹೋಗಬಾರದು.

ಶಿಕ್ಷಣವು ವ್ಯಕ್ತಿತ್ವದ ದೈಹಿಕ, ಜೈವಿಕ, ಮಾನಸಿಕ, ಅಂತರ್ಮಾನಸಿಕ ಮತ್ತು ಆಧ್ಯಾತ್ಮಿಕ ಎಂಬ ಎಲ್ಲ ಮುಖಗಳನ್ನೂ ಮುಟ್ಟುವಂಥದಾಗಿರಬೇಕು. ಈ ಎಲ್ಲ ಭಾಗಗಳನ್ನೂ ಒಟ್ಟಿಗೆ ಅದು ಸ್ಪರ್ಶಿಸಬೇಕು.

1. ದೈಹಿಕ. ಚಿಕ್ಕವಯಸ್ಸಿನಿಂದಲೇ ದೈಹಿಕ ಶಿಕ್ಷಣವನ್ನು ನೀಡಲಾರಂಭಿಸುವುದು ಅತ್ಯುತ್ತಮ. ಅದಕ್ಕೆ ವಯೋಮಾನದ ನಿರ್ದಿಷ್ಟತೆ ಇಲ್ಲ. ಎಲ್ಲ ವಯಸ್ಸಿನಲ್ಲೂ ವ್ಯಾಯಾಮವು ಅಗತ್ಯ ಮತ್ತು ಉಪಯುಕ್ತ. ಅದರ ಅಭ್ಯಾಸದ ಗುರಿಗಳು ಮೂರು: (1) ಅವಯವಗಳೆಲ್ಲವೂ ತಮ್ಮ ಕರ್ತವ್ಯಗಳನ್ನು ಸರಿಯಾಗಿ ನಿರ್ವಹಿಸುವಂತಾಗಬೇಕು; (2) ವಿವಿಧ ಅವಯವಗಳೆಲ್ಲವೂ ಪರಸ್ಪರ ಸಮಾಕೃತವಾಗಿ ಕೆಲಸ ಮಾಡುವಂತಾಗಬೇಕು; ದೇಹದಲ್ಲಿಯ ನ್ಯೂನತೆಗಳು ಸರಿಪಡುವಂತಾಗಬೇಕು. ಎಲ್ಲ ವ್ಯಾಯಾಮಗಳೂ ಆಟಗಳೂ ಈ ಮೂರು ಗುರಿಗಳನ್ನು ಸಾಧಿಸಲು ಅನುಕೂಲವಾಗಿರಬೇಕು.

ಪ್ರತಿದಿನ ಬೆಳಿಗ್ಗೆ ಹಾಸಿಗೆಯಿಂದೆದ್ದು ಕೈಕಾಲು ತಲೆಗಳು ಆಲಸ್ಯವನ್ನು ಕೊಡವಿ ಎಸೆಯುವಂತೆ ಮಾಡಬೇಕು; ಮತ್ತು ಅವುಗಳಲ್ಲಿ ಸ್ವಲ್ಪ ಕಸುವನ್ನು ತುಂಬಬೇಕು. ನಿಯತ ವ್ಯಾಯಾಮಾಭ್ಯಾಸವು ಸಾವಧಾನತೆ

ಯನ್ನ ಚುರುಕನ್ನೂ ಉಂಟುಮಾಡುತ್ತದೆ: ಪದೇ ಪದೇ ಬರುವ ಕಾಯಿಲೆ
ಗಳಿಗಳಿಂದ ಮುಕ್ತರಾಗಿ ಉಳಿಯುವಂತೆಸಗುತ್ತವೆ; ಔಷಧ ತೆಗೆದುಕೊಳ್ಳು
ವುದು ಆಗ ಅನಾವಶ್ಯಕವಾಗುತ್ತದೆ. ಅನಿವಾರ್ಯವಾದಲ್ಲದೆ ಔಷಧಿಗಳ
ನ್ನೆಂದೂ ತೆಗೆದುಕೊಳ್ಳಬಾರದೆಂಬುದೇ ಮಾತೃಶ್ರೀಯ ಉಪದೇಶ.

ಆಹಾರ ಪ್ರಶ್ನೆ ಇಲ್ಲಿ ಉದ್ಭವಿಸುತ್ತದೆ. ಆಹಾರ ಅತಿ ಕಡಿಮೆಯೂ
ಆಗಬಾರದು, ಅತಿ ಹೆಚ್ಚೂ ಅಗಬಾರದು; ಬಹಳ ಗುರುವೂ ಆಗಿರಬಾರದು.
ಬಹಳ ಲಘುವೂ ಆಗಿರಬಾರದು- ಎಷ್ಟು ಬೇಕೋ ಅಷ್ಟಿರಬೇಕು ಮತ್ತು
ಪೋಷಕ ಅಂಶಗಳಿಂದ ಕೂಡಿರಬೇಕು. ಆಹಾರವಿರುವುದು ಆರೋಗ್ಯವನ್ನು
ಕಾಪಾಡುವುದಕ್ಕಾಗಿ- ಬಾಯಿರುಚಿಗಾಗಿ ಅಲ್ಲ- ಎಂಬುದನ್ನು ನೆನಪಿಟ್ಟು
ಕೊಳ್ಳಬೇಕು. ಮೊದಲಿನಿಂದಲೇ ಈ ಅಂಶವನ್ನು ಶಿಷ್ಯರ ಮನಸ್ಸಿನಮೇಲೆ
ಬಿಂಬಿಸಬೇಕು. ದೇಹದ ಆರೋಗ್ಯದಿಂದ ಮನಸ್ಸಿನ ಆರೋಗ್ಯ ಲಭ್ಯ
ಮತ್ತು ಅನಾರೋಗ್ಯಯುಕ್ತ ಮನಸ್ಸನ್ನು ಕಟ್ಟಿಕೊಂಡು ಏನು ಮಾಡಲೂ
ಸಾಧ್ಯವಿಲ್ಲ ಎಂಬುದನ್ನು ವಿವರಿಸಬೇಕು.

2. ಜೈವಿಕ. ಜೈವಿಕಕ್ಕೆ ತರಬೇತು ಕೊಡುವುದು ಬಹುಶಃ ಬಹು
ಮುಖ್ಯ ಮತ್ತು ಬಹು ಕಠಿಣ. ಹೀಗಿದ್ದರೂ ಅಂಥ ಉಪ ಶಿಕ್ಷಣವನ್ನು
ಕೊಡುವುದೇ ಬಹಳ ವಿರಳ. ಕೊಟ್ಟರೂ ಕ್ರಮಬದ್ಧವಾಗಿರುವುದು ಬಹಳ
ಕಡಿಮೆ. ಏಕೆಂದರೆ ಜನರಿಗಿದರ ಬಗ್ಗೆ ಸ್ಪಷ್ಟವಾದ ಕಲ್ಪನೆ ಇಲ್ಲ. ಅದಕ್ಕೆ
ಸಹನೆ, ಸತತೋದ್ಯಮ ಮತ್ತು ಸಂಕಲ್ಪ ಶಕ್ತಿಗಳು ಅಗತ್ಯ.

ಜೈವಿಕ ಶಕ್ತಿಯೇ ಜನರನ್ನು ಸಾಮಾನ್ಯವಾಗಿ ಕಾರ್ಯಮಗ್ನರನ್ನಾಗಿ
ಮಾಡುವಂಥದು. ಅದು ಪ್ರೇರಣೆ ನೀಡಿ ಕೆಲಸಕ್ಕೆ ಬೇಕಾದ ಶಕ್ತಿಯನ್ನು
ಹೊರಪಡಿಸುತ್ತದೆ. ಮಾನವನ ಎಲ್ಲ ಚಟುವಟಿಕೆಗಳಲ್ಲಿಯೂ ಸಕ್ರಿಯ ಜೈವಿಕ
ಚೈತನ್ಯವು ಅತ್ಯಗತ್ಯ ಮತ್ತು ಸಹಾಯಕ. ಆದರೆ ಅದರ ಅಧಿಕಾರದಾಸೆ
ಮತ್ತು ಅವಲಂಬನೆಗಳು ಅಸಂಖ್ಯೇಯ. ತನ್ನನ್ನು ಸಂತೋಷಗೊಳಿಸಿ
ಕೊಳ್ಳುವ ಸ್ಥಿರಭಾವವು ಪ್ರತಿಯೊಬ್ಬನಲ್ಲಿಯೂ ಇರುತ್ತದೆ. ಜೈವಿಕ

ಸಂತರ್ಪಣವು ಜೀವನದ ಮುಖ್ಯ ಧ್ಯೇಯವೆಂದು ಪ್ರತಿಯೊಬ್ಬನೂ ತಿಳಿದಿರುವುದು ಹೆಚ್ಚು.

ಆದರೆ ಅದೊಂದು ತಪ್ಪು ತಿಳಿವಳಿಕೆ- ಸತ್ಯಕ್ಕೆ ವಿಪರೀತವಾದದ್ದು. ಜೈವಿಕವಲ್ಲ- ಅದಕ್ಕೆ ಅತೀತವಾದ ಆನಂದವನ್ನು ಪಡೆಯುವುದೇ ಜೀವನದ ಮುಖ್ಯ ಧ್ಯೇಯ. ದೇಹ ಸುಖದಂತೆ ಈ ಆಂತರಿಕ ಆನಂದವು ಪಾರ್ಥಿವ ತೃಪ್ತಿಯನ್ನವಲಂಬಿಸಿರದು. ದೇಹಸುಖಕ್ಕೆ (ಜೈವಿಕ ಸುಖಕ್ಕೆ) ಅಥವಾ ಇಂದ್ರಿಯ ಸಂತರ್ಪಣಕ್ಕೆ ಅಹಂಕಾರ ಸಂತರ್ಪಣ ಆಧಾರ. ಆದರೆ ಆನಂದವು ಅಹಂಮುಕ್ತವಾದ ಇನ್ನೊಂದು ವಿಧದ ಅಂತಃಪ್ರವೃತ್ತಿ ಮತ್ತು ಭಾವನೆಗಳಿಂದ ಬರುವಂಥದು.

ಈ ವ್ಯತ್ಯಾಸವನ್ನು ಪೂರ್ಣವಾಗಿ ಅರಿತುಕೊಳ್ಳಬೇಕು. ಅದಕ್ಕೆ ಅಂತರ್ನಿರೀಕ್ಷಣೆ ಮತ್ತು ಸ್ವಪ್ರವೃತ್ತಿ ವಿಶ್ಲೇಷಣೆಗಳು ಅಗತ್ಯ. ನಿಮ್ಮ ನಡತೆ, ಮನಃ ಪ್ರಣಾಳಿ ಮತ್ತು ಮನಃ ಸಂಚಾರಗಳನ್ನು ಸೂಕ್ಷ್ಮವಾಗಿ ನೋಡುವುದರಿಂದ ಅದು ಆರಂಭವಾಗಬೇಕು. ಸ್ವಭಾವಕ್ಕೆ ಎರಡು ವಿರುದ್ಧ ಮಗ್ಗುಲುಗಳಿವೆ ಎಂಬುದು ಆಗ ನಿಮಗೆ ಬಹು ಬೇಗ ಗೊತ್ತಾಗುವುದು- ಒಂದು ಬೆಳಕಿನದು, ಇನ್ನೊಂದು ಕತ್ತಲಿನದು- ಒಂದು ಅನುಷೇಧಾತ್ಮಕ, ಇನ್ನೊಂದು ಪ್ರತಿಷೇಧಾತ್ಮಕ. ಅದರಿಂದಲೇ ಒಬ್ಬನು ಒಂದರಲ್ಲಿ ಧೀರನಾಗಿದ್ದರೆ ಇನ್ನೊಂದರಲ್ಲಿ ಅಧೀರನಾಗಿರುತ್ತಾನೆ. ಒಂದರಲ್ಲಿ ಉದಾರಿಯಾದವನು ಇನ್ನೊಂದರಲ್ಲಿ ಲೋಭಿಯಾಗಿರುತ್ತಾನೆ. ಒಂದರಲ್ಲಿ ಉದಾತ್ತಮನಸ್ಕನಾಗಿರುವಾತ ಇನ್ನೊಂದರಲ್ಲಿ ಅನುದಾತ್ತ ಮನಸ್ಕನಾಗಿರುತ್ತಾನೆ. ನಿಮ್ಮನ್ನು ನೀವು ಮೇಲ್ವಿಚಾರಕರ ಸ್ಥಾನದಲ್ಲಿರಿಸಿಕೊಂಡು ನೋಡಿದರೆ ಅವುಗಳಲ್ಲಿ ಘರ್ಷಣ ಉಂಟಾಗುವುದೂ ನಿಮ್ಮ ಚಾರಿತ್ರವು ತರಬೇತು ಅಥವಾ ಮನೋವೃತ್ತಿಯ ಪ್ರಕಾರ ಅತ್ತ ಅಥವಾ ಇತ್ತ ಒಲೆಯುವುದೂ ಕಂಡುಬರುತ್ತದೆ. ಜೈವಿಕ ತರಬೇತಿನ ಪ್ರಾಧಾನ್ಯವು ಇಲ್ಲಿದೆ.

ಜೈವಿಕ ತರಬೇತಿಗೆ ಇನ್ನೆರಡು ಅಂಶಗಳಿವೆ:

ಮೊದಲು. ಇಂದ್ರಿಯಗಳ ಹಾಗೂ ಅವುಗಳ ಯೋಗ್ಯವಾದ ಬಳಕೆ

ಗಳನ್ನು ಗಮನಿಸುವುದು: ಸ್ವಭಾವವನ್ನರಿತುಕೊಂಡು ಕ್ರಮಶಃ ಅದನ್ನು ಯತ್ನದಿಂದ ನಿಯಂತ್ರಣಕ್ಕೊಳಪಡಿಸುವುದು ಮತ್ತು ಪ್ರಸಾರಚಿಸುವುದು.

ಇಂದ್ರಿಯಗಳ ಮೇಲೆ ನಾಗರಿಕವಾದ ನಿಯಂತ್ರಣವನ್ನಿಟ್ಟು ಕೊಳ್ಳುವುದನ್ನು ಚಿಕ್ಕವರಿಗೆ ಹೇಳಬೇಕು ಮತ್ತು ತರಬೇತು ಕೊಡಬೇಕು. ದೇಹವನ್ನು ಆರೋಗ್ಯಯುಕ್ತವನ್ನಾಗಿಟ್ಟುಕೊಳ್ಳಬೇಕಾದರೆ ಇಂದ್ರಿಯಗಳ ಶುಚಿಯನ್ನು ಕಾದುಕೊಂಡಿರ ಬೇಕೆಂದು ತಿಳಿದುಕೊಳ್ಳಬೇಕು. ಒಳಗಿನ ಜೈವಿಕ ಚೇತನೆಯು ಸುಧಾರಿಸಿದರೆ ಇಂದ್ರಿಯಗಳ ಬಗೆಗಿನ ಹೊರ ದೃಷ್ಟಿಯು ಸುಧಾರಿಸುವುದು ಆಗ ಅಸಭ್ಯವಾದ ಮತ್ತು ನಿಷೇಧಾರ್ಹವಾದ ನಡತೆಗಳು ಮಕ್ಕಳಲ್ಲಿ ಕಂಡುಬರಲಾರವು.

ಸ್ವಭಾವದ ಶುದ್ಧೀಕರಣ ಮತ್ತು ಬದಲಾವಣೆಗಳ ಬಗ್ಗೆ ಹೇಳುವುದಾದರೆ, ಬಲಾತ್ಕಾರದ ದಮನವು ಉಪಯುಕ್ತವಾಗದು- ಆಗ ಜೈವಿಕ ಚೇತನೆಯು ಸಹಕರಿಸದು. ನೀವು ಹೇಗೆ ಮತ್ತು ಏಕೆ ಹಾಗೆ ನಡೆದುಕೊಳ್ಳುತ್ತಿದ್ದೀರಿ ಎಂದು ಸೂಕ್ಷ್ಮವಾಗಿ ಪರಿಶೀಲಿಸಿಕೊಳ್ಳುವುದಗತ್ಯ. ತಮ್ಮ ಆಶೆಗಳು, ಮನಃಕ್ಷುಬ್ಧತೆ, ಮಮತ್ವ, ಪ್ರಭುತ್ವಾಗ್ರಹ, ಅಧಿಕಾರ ಲಾಲಸೆಗಳು ಎಲ್ಲಿ ಹುಟ್ಟುತ್ತವೆ ಎಂಬುದನ್ನು ಆಳವಾಗಿ ನೋಡಲು ಮಕ್ಕಳಿಗೂ ಕ್ರಮವಾಗಿ ಕಲಿಸಬೇಕು. ಈ ಅಂತರ್ನಿರೀಕ್ಷಣೆಯು ವಿವಿಧ ರೀತಿಗಳಿಂದ ಆರಂಭವಾಗಬಹುದು: ವಿವರಿಸುವುದರಿಂದ, ಪ್ರೇಮಾದರಗಳಿಂದ ಅಥವಾ ಸ್ವಾಭಿಮಾನವನ್ನು ಪ್ರೇರಿಸುವುದರಿಂದ: ಆದರೆ ನಾವೇ ಉದಾಹರಣೆಯಾಗುವುದರಿಂದ ಆರಂಭಿಸುವುದು ಅತ್ಯುತ್ತಮ ಮಾರ್ಗ. ತಮ್ಮನ್ನು ತಾವೇ ವಿಶ್ಲೇಷಿಸಿಕೊಳ್ಳುವ ನಿರ್ಧಾರ ಒಮ್ಮೆ ಸ್ಥಿರವಾಯಿತೆಂದರೆ, ಅದು ಸತತವೂ ಸಾಂಪ್ರವೂ ಆಗುವುದು ಮತ್ತು ತಮ್ಮ ಗಮನಕ್ಕೆ ಬರುವ ಎಲ್ಲ ದೋಷಗಳನ್ನೂ ಮಕ್ಕಳು ಸರಿಪಡಿಸಿಕೊಳ್ಳುವರು. ಈ ಪ್ರಯತ್ನದಲ್ಲಿ ಮೊದಮೊದಲು ಸೋತರೂ ಹಾಗೇ ಮಾಡುತ್ತಹೋದರೆ ಕ್ರಮವಾಗಿ ಸುಧಾರಿಸುತ್ತ ಹೋಗಬಹುದು. ಅದು ದೈಹಿಕ ವ್ಯಾಯಾಮಕ್ಕೆ ಸರಿಸಮ. ವ್ಯಾಯಾಮದ ಆವೃತ್ತಿಯಿಂದ ನಿಮ್ಮ ಮಾಂಸಬಲವನ್ನು ಹೆಚ್ಚಿಸಿಕೊಂಡಂತೆ

ಮಾನಸಿಕ ಪ್ರಯತ್ನದ ಆವೃತ್ತಿಯಿಂದ ನಿಮ್ಮ ಇಚ್ಛಾಶಕ್ತಿಯು ಬೆಳೆಯುವುದು ಮತ್ತು ಆಮೇಲೆ ನೀವು ಯಶಸ್ವಿಗಳಾಗುವಿರಿ,

3. ಮಾನಸಿಕ. ಒಂದು ವಿಧದ ಮಾನಸಿಕ ಅಥವಾ ಬೌದ್ಧಿಕ ತರಬೇತನ್ನು ಕೊಡುವುದು ಎಲ್ಲ ಕಡೆಯ ರೂಢಿ. ಆದರೆ ಇಂದಿನ ಪದ್ಧತಿಯಲ್ಲಿ ಬಹಳ ತಪ್ಪು ಅಥವಾ ನ್ಯೂನತೆಗಳಿವೆ. ವಿದ್ಯಾರ್ಥಿಗಳು ಅತಿ ಹೆಚ್ಚು ನಿಯಮಗಳಿಂದ ಬದ್ಧರಾಗಿದ್ದಾರೆ; ಬಹಳ ವಿಷಯಗಳ ಪುಸ್ತಕೀಯ ಜ್ಞಾನದ ಭಾರ ಅವರ ಮೇಲಿದೆ; ತಮ್ಮ ಮಿದುಳಿಗವರು ಹೆಚ್ಚು ಕೆಲಸ ಕೊಡಬೇಕಾಗಿದೆ.

ಅವರಿಗೆ ಮಾನಸಿಕ ತರಬೇತಿನ ಕೆಲಸ ಕೊಡಬೇಕಾದರೆ ಈ ಕೆಳಗಿನ ಐದು ಅಂಶಗಳನ್ನು ಗಮನಿಸಬೇಕು:

(1) ಅವರ ಧ್ಯಾನಶಕ್ತಿಯೂ ಅವಧಾನಶಕ್ತಿಯೂ ಹೆಚ್ಚಬೇಕು.

(2) ವಿವಿಧ ಜ್ಞಾನಗಳ ಸಂಗ್ರಹ ಮಾಡುವ ಶಕ್ತಿಯನ್ನು ಹೆಚ್ಚಿಸಿ ಮನಸ್ಸನ್ನು ಸಂಪನ್ನಗೊಳಿಸಬೇಕು.

(3) ಜೀವನದ ನಿಶ್ಚಿತಧ್ಯೇಯವನ್ನು ಬೆಳೆಯುವಂತೆ ಮಾಡಬೇಕು; ಏಕೆಂದರೆ ಧ್ಯೇಯರಹಿತ ಜೀವನವು ಯಾವಾಗಲೂ ದುಃಖಕರ ಜೀವನ.

(4) ಆರೋಗ್ಯಕರವಾದ ವಿಚಾರಗಳು ಪುಷ್ಟಿಗೊಳ್ಳುವಂತೆಯೂ ಅನಾರೋಗ್ಯಕರವೂ ನಾಶಿಕರವೂ ಆದ ವಿಚಾರಗಳನ್ನು ತ್ಯಜಿಸುವಂತೆ ಮಾಡಬೇಕು.

(5) ಕೆಲವೇಳೆ ಮನಸ್ಸನ್ನು ಆಲೋಚನಾರಹಿತವನ್ನಾಗಿ ಮಾಡಲು ಮಕ್ಕಳ ಮನಸ್ಸು ಶಕ್ತವಾಗುವಂತಾಗಬೇಕು.

ಅಸಂಬದ್ಧ ವಿಚಾರಗಳು ಮನಸ್ಸಿನ ಸುಧಾರಣೆಗೆ ವಿರುದ್ಧವಾಗಿ ಅತ್ಯಂತ ಹಠಹಿಡಿದು ಕಾಡಿಸುವ ವಿಘ್ನಗಳು. ಚಿಕ್ಕವರಲ್ಲಿ ಅವರ ಚಂಚಲ ವಿಚಾರಗಳು ಚಿಟ್ಟೆಗಳಂತೆ ಬಹುಬೇಗ ಸ್ಥಳ ಬದಲು ಮಾಡುತ್ತ ಸತತವೂ

ಹಾರಾಡುತ್ತಿರುತ್ತವೆ; ಆದರೂ ಅವುಗಳಲ್ಲಿ ಒಂದು ಸುಪ್ತಶಕ್ತಿ ಇರುತ್ತದೆ. ಯಾವುದಾದರೂ ಒಂದರಮೇಲೆ ಅವರ ಆಸಕ್ತಿಯನ್ನೂ ಕುತೂಹಲವನ್ನೂ ಉದ್ಬೋಧಿಸಬಹುದು. ಅವರ ಅವಧಾನವಾಗ ಕೂಡಲೇ ಸ್ತಿಮಿತಕ್ಕೆ ಬರುವುದು. ನಿಮಗಾಗ ಆ ಸ್ತಿಮಿತತೆಯನ್ನು ಆದಷ್ಟು ಹೆಚ್ಚುಕಾಲ ಉಳಿಯುವಂತೆ ಮಾಡುವ ಭಾರವಷ್ಟೇ ಉಳಿಯುವುದು.

ಏಕಾಗ್ರತೆ ಮತ್ತು ಅವಧಾನಗಳಲ್ಲದೆ, ಮಕ್ಕಳು ಬಹಿರ್ನಿರೀಕ್ಷಣೆ, ಕಲಿತುದರ ರಕ್ತಸಾತ್ಕರಣ ಮತ್ತು ಸ್ಮರಣ ಶಕ್ತಿಗಳನ್ನು ಗಳಿಸಿಕೊಳ್ಳಬೇಕು. ಆಸಕ್ತಿಯನ್ನು ಹೆಚ್ಚಿಸಿ ಅದನ್ನು ಹೆಚ್ಚು ಹೆಚ್ಚು ಸಕ್ರಿಯವನ್ನಾಗಿ ಮಾಡುವುದರಿಂದ ಈ ಅಭ್ಯಾಸ ರೂಪಿತವಾಗಬಲ್ಲದು. ರಕ್ತಸಾತ್‌ಕರಣವೇ ಬೇರೆ ಬರಿದೆ ಬಾಯಿಪಾಠ ಮಾಡುವುದು ಬೇರೆ. ಬರಿದೆ ಬಾಯಿಪಾಠ ಮಾಡಿದ್ದನ್ನು ನೀವು ಬೇಗ ಮರೆಯುವಿರಿ; ರಕ್ತಸಾತ್ಕೃತವನ್ನು ಸುಲಭವಾಗಿ ನೀವು ಮರೆಯಲಾರಿರಿ.

ಅವು ಕೇಳುವ ಯಾವ ಪ್ರಶ್ನೆಗೂ ಉತ್ತರ ಕೊಡಲು ನಿರಾಕರಿಸ ಬಾರದು. ಉತ್ತರ ಕೊಡಲು ಒಮ್ಮೆ ಸಾಧ್ಯವಾಗದೆ ಹೋದರೆ ಉತ್ತರ ಸಿಗುವ ಗ್ರಂಥಗಳನ್ನು ಹೇಳಿ ಅವುಗಳನ್ನು ನೋಡಿರಿ ಎನ್ನಬೇಕು. ಅದರಿಂದ ಅವುಗಳ ಉತ್ಸಾಹ ಹೆಚ್ಚಾಗುವುದು.

ಹೀಗೆ ಮನಸ್ಸನ್ನು ವಿಸ್ತಾರಗೊಳಿಸಬಹುದು. ಅವಕ್ಕೆ ಬಾಳಿನ ಯಾವ ಮುಖದ ಬಗ್ಗೆ ಕುತೂಹಲ ಉಂಟಾದರೂ ಸರಿಯೆ, ಅದಕ್ಕೆ ತಕ್ಕ ಉತ್ತರ ವನ್ನು ಕೊಟ್ಟು ಅವನ್ನು ತೃಪ್ತರನ್ನಾಗಿ ಮಾಡಬೇಕು. ಅಂಥ ಒಂದು ಉತ್ತರವು ಇನ್ನೊಂದಕ್ಕೆ ಬಯಸು ಮುಟ್ಟಿಸುವುದು. ಅಲ್ಲದೆ, ಅವುಗಳ ಕಲ್ಪನಾಶಕ್ತಿಗೂ, ಕಲ್ಪನಾವಿಲಾಸಕ್ಕೂ ಪ್ರೋತ್ಸಾಹ ನೀಡಬೇಕು. ಅವಕ್ಕೆ ಆಕರ್ಷಕವಾದ ಪುಸ್ತಕಗಳನ್ನು ಓದಲು ಕೊಡ ಬೇಕು. ಅದರಿಂದ ಅವುಗಳ ಕಲ್ಪನಾಶಕ್ತಿಗೆ ತಾನೇತಾನಾಗಿ ಸ್ಫೂರ್ತಿ ದೊರಕುವುದು; ಆ ಮೂಲಕ ಅವಕ್ಕೆ ಹೆಚ್ಚು ಹೆಚ್ಚು ಕಲಿಯಲು ಕುತೂಹಲ ಉಂಟಾಗುವುದು; ಮತ್ತು ಹೊಸ ಶೋಧ ಮಾಡುವ ಪ್ರವೃತ್ತಿ ಕೂಡ ಅವುಗಳಲ್ಲಿ ಹುಟ್ಟಬಲ್ಲದು.

ಇಷ್ಟೇ ಅಲ್ಲ- ಮಾನಸಿಕ ಚಟುವಟಿಕೆಯು ಇನ್ನೊಂದು ಮಗ್ಗುಲೂ ಇದೆ. ಅದೇ ನವನಿರ್ಮಾಣ ಪ್ರವೃತ್ತಿ. ಅನೇಕ ಮಕ್ಕಳಲ್ಲಿ ಇದೊಂದು ನೈಸರ್ಗಿಕ ಒಲವಾಗಿರುವುದುಂಟು. ಅದನ್ನು ಚೆನ್ನಾಗಿ ಗಮನಿಸಿ ಸರಿಯಾದ ದಿಕ್ಕಿನಲ್ಲಿದು ಹರಿಯುವಂತೆ ಮಾಡಬೇಕು. ಏಕೆಂದರೆ, ಅವುಗಳ ಆಲೋಚನೆಗಳ ಪ್ರವಾಹ ಬೆಲೆಯುಳ್ಳದ್ದೋ ಅಲ್ಲವೋ ಮುಖ್ಯ ವಿಷಯಕ್ಕೆ ಅವೇನಾದರೂ ಸಂಬಂಧಿಸಿವೆಯೋ ಇಲ್ಲವೋ ಎಂಬುದನ್ನು ನಿರ್ಣಯಿಸಿ, ಹಾಗೆ ಸಂಬಂಧಿಸಿರದೆ ಹೋದರೆ ಆ ಆಲೋಚನೆಗಳನ್ನು ಪರಿತ್ಯಜಿಸಿ ಬಿಡಬೇಕು. ಈ ಬಗೆಯ ಕೆಲಸಕ್ಕೆ ನಿರ್ದಿಷ್ಟವಾದ ಅವಧಿಯನ್ನು ತೆಗೆದಿಡಬೇಕು.

ಮನಸ್ಸನ್ನು ಸುಮ್ಮನಿರಿಸುವುದು: ಮನಸ್ಸು ಶಾಂತವೂ ವಿಚಾರ ರಹಿತವೂ ಆಗುವಂತೆ ತರಬೇತುಗೊಳಿಸಬೇಕು. ಇದರಿಂದ ಮನಸ್ಸು (ಬಹಳ) ಬುದ್ಧಿವಂತಿಕೆಯಿಂದ ನಿಷ್ಕ್ರಿಯವಾಗಿರುವುದರ ಬದಲು, ಉನ್ನತ ಪ್ರಜ್ಞಾಸ್ತರದಿಂದ ಯಾವುದಾದರೂ ಒಂದು ಸ್ಫೂರ್ತಿ ಬಂದು ಮನಸ್ಸಿನ ಆ ಖಾಲಿಯಾದ ಸ್ಥಳವನ್ನು ತುಂಬುವ ಸಂಭವ ಉಂಟಾಗುವುದು. ಇಷ್ಟಲ್ಲದೆ, ಸತತಕ್ರಿಯಾಮಯವಾಗಿರುವ ಮನಸ್ಸಿಗೆ ಆಗ ಈಗ ವಿಶ್ರಾಂತಿಯೂ ಬೇಕು. ಮನಸ್ಸನ್ನು ನಿರ್ವಿಚಾರಗೊಳಿಸುವುದನ್ನು ಕಲಿತರೆ, ಬೇರೆ ಬಗೆಗಳಿಂದ ಸಾಧ್ಯವಾಗದೆ ಹೋದಾಗ ಎಷ್ಟೋ ಕಠಿನ ಸಮಸ್ಯೆಗಳನ್ನು ಈ ಬಗೆಯಿಂದ ಬಗೆ ಹರಿಸಲು ಸಾಧ್ಯವಾಗುವುದೆಂಬುದು ಗೊತ್ತಾಗುವುದು; ಇಷ್ಟಲ್ಲದೆ, ಇದರಿಂದ ಎಷ್ಟು ತೊಂದರೆಗಳನ್ನೂ ಅಪಾಯಗಳನ್ನೂ ತಪ್ಪಿಸಿಕೊಳ್ಳಬಹುದು ಮತ್ತು ಹೊಸ ಸಾಧ್ಯತೆಗಳನ್ನು ತೆರುವ ಬೆಳಕಿನ ಯಾವುವಾದರೂ ಕಿರಣಗಳು ಮೂಡಿ ಬರುವಂತಾಗಬಹುದು.

4. ಆಧ್ಯಾತ್ಮಿಕ. ಎಲ್ಲ ಮನುಷ್ಯ ಪ್ರಾಣಿಗಳಲ್ಲಿಯೂ ಸಾಮಾನ್ಯ ಪ್ರಜ್ಞೆಯಲ್ಲದೆ, ಎಲ್ಲೋ ಒಳಗೆ ಉರಿಯುತ್ತಿರುವ ಮಂದ ಜ್ವಾಲೆಯಂತೆ ತೋರುವ ಉಚ್ಚತರ ಪ್ರಜ್ಞೆಯು ಅಡಗಿರುವ ಸಂಭವ ವಿರುತ್ತದೆ. ಬಹಳ ಚಿಕ್ಕವರಾಗಿರುವಾಗ ಮಕ್ಕಳಿಗದು ಎಷ್ಟೋ ಸಲ ಆಶ್ಚರ್ಯಕರವಾಗಿ

ಅನುಭವಕ್ಕೆ ಬರುವುದು: ಆದರೆ ಅವುಗಳ ಅಜ್ಞಾನಿಗಳಾದ ತಾಯ್ತಂದೆಗಳು ತಪ್ಪಾಗಿ ದಮನಗೊಳಿಸಿ ಅವುಗಳನ್ನು ಬೈದು (ತೆಪ್ಪಗೆ ಕುಳ್ಳಿರಿಸಿದರೆ) ಆ ಅನುಭವ ಹೊರಟು ಹೋಗುವುದು. ಹಾಗೆ ಅವುಗಳನ್ನು ಗದ್ದರಿಸಿ ಕುಳ್ಳಿರಿಸದಿದ್ದಲ್ಲಿ ಸಕಾಲದಲ್ಲಿ ದೇವರನ್ನು ಅಥವಾ ಪರಮ ಸತ್ಯವನ್ನು ತಿಳಿಯ ಬೇಕೆಂಬ ಆಧ್ಯಾತ್ಮಿಕ ಜಿಜ್ಞಾಸೆ ಹುಟ್ಟಿದರೂ ಹುಟ್ಟಬಹುದಾಗಿರುತ್ತದೆ. ಅದು ಮನಸ್ಸಿನ ಬುದ್ಧಿಮತ್ತೆಯನ್ನು ಅವಲಂಬಿಸಿರುವುದಿಲ್ಲ; ಅದು ಸಂಪೂರ್ಣ ಬೇರೆ ಬಗೆಯ ಜ್ಞಾನವಾಗಿರುತ್ತದೆ, ಎಷ್ಟೋ ಮಕ್ಕಳಿಗದು ಪರದೆಯ ಹಿಂದಿನಿಂದಲೋ ಎಂಬಂತೆ ಅವುಗಳಿಗೆ ಗೊತ್ತಾಗದ ಹಾಗೆ ಕೆಲಸ ಮಾಡುತ್ತಿರುತ್ತದೆ. ಅದರ ಒತ್ತಡವನ್ನು ಅನುಭವಿಸಲಾರಂಭಿಸಿದವು ಆ ಆಧ್ಯಾತ್ಮಿಕ ಜ್ಞಾನದತ್ತ, ಯಾವ ಅಡೆತಡೆಗಳನ್ನೂ ಗಮನಿಸದೆ, ಆತ್ಮ ವಿಶ್ವಾಸದಿಂದಲೂ ಅದಮ್ಯ ಉತ್ಸಾಹದಿಂದಲೂ ಮುಂಬರಿಯುವುವು. ಅವು ಈ ಜ್ಞಾನವನ್ನು ಪಡೆಯಲು ನಿರ್ಧಾರ ಬುದ್ಧಿಯನ್ನು ಪ್ರಕಟಿಸಿದರೂ ಅದಕ್ಕೆ ಕೆಲ ಮಟ್ಟಿನ ಪ್ರಾಥಮಿಕ ತರಬೇತು ಬೇಕೇ ಬೇಕು. ಸಮರ್ಥ ಗುರುಗಳ ಸಹಾಯ ಅವಕ್ಕೆ ಸಿಕ್ಕಿದರೆ ಆಗ ಅದು ಸುಲಭವಾಗುವುದು; ಇಲ್ಲದಿದ್ದರೆ, ಅವು ತಮ್ಮ ಆತ್ಮದ ಆಳದಲ್ಲಿ ದೈವೋಪಸ್ಥಿತಿಯನ್ನು ಅನುಭ ವಿಸಲು ಬಹಳ ಕಷ್ಟಪಡಬೇಕಾಗುವುದು.

ಈ ಮಾರ್ಗವನ್ನು ಅನುಸರಿಸಬಯಸುವವರಿಗೆ ಈ ಕೆಳಗಿನ ಉಪದೇಶಗಳು ಉಪಯುಕ್ತವಾದಾವು:

(1) ಬುದ್ಧಿಯಿಂದ ಯಾವ ಆಧ್ಯಾತ್ಮಿಕ ಪ್ರಶ್ನೆಯನ್ನೂ ನಿರ್ಣಯಿಸ ಕೂಡದು.

(2) ವೈಯಕ್ತಿಕ ಸುಖ ಅಥವಾ ಗೆಲುವಿಗಾಗಿ ಯಾವ ಆಸೆಯನ್ನೂ ಇಟ್ಟುಕೊಳ್ಳಬಾರದು.

(3) ಎಂದೂ ಕ್ಷೋಭೆಗೊಳಗಾಗಬಾರದು, ಹೆದರಬಾರದು; ಸಮತ್ವವನ್ನು ಸಾಧಿಸಬೇಕು.

(4) ಹೊಸ ಲಕ್ಷಣಗಳಿಂದ ಯಾವುದರ ಬೆಲೆಯನ್ನೂ ಕಟ್ಟಬಾರದು.

(5) ಆತ್ಮರನ್ನೆಂದೂ ದೂಷಿಸಕೂಡದು.

(6) ಬೆಳೆಸಿಟ್ಟುಕೊಂಡ ಧ್ಯೇಯದಿಂದ ಎಂದೂ ಕದಲ ಬಾರದು. ಯಾವಾಗಲೂ ಅದನ್ನೇ ಮೊದಲು ಚಿಂತಿಸಬೇಕು— ಯಾವ ಚಿಲ್ಲರೆ ವಿಷಯಗಳಿದ್ದಾದರೂ ಸರಿಯೆ: ಊಟ ಮಾಡುವ ಮೊದಲು ಗುರಿ ಮುಟ್ಟಲು ತಕ್ಕ ಶಕ್ತಿಯನ್ನು ಈ ಆಹಾರ ಕೊಟ್ಟೀತೆಂದು ಭಾವಿಸಿ ಊಟ ಮಾಡಬೇಕು. ಮರುದಿನ ಧ್ಯೇಯಸಾಧನೆಯ ಮಾರ್ಗದಲ್ಲಿ ಮುಂಬರಿಯಲು ಬೇಕಾದ ಹೊಸ ಶಕ್ತಿಯನ್ನು ಪಡೆಯಲನುಕೂಲವಾಗುವಂತೆ ದಿನದ ದಣಿವು ಅಡಗೀತು ಎಂದು ಭಾವಿಸಿಕೊಂಡು ಮಲಗಬೇಕು.

(7) ಯಾವ ಕೆಲಸವನ್ನು ಮಾಡಬೇಕಾದರೂ ಮೊದಲು ಅದು ನಿನ್ನ ಸಾಧನೆಗೆ ವಿಘ್ನವಾಗದಿರುವಂತೆ ಎಚ್ಚರಿಕೆ ವಹಿಸಬೇಕು.

(8) ಅನವಶ್ಯಕವಾದ ಮಾತುಕತೆಗಳಲ್ಲಿ ಭಾಗವಹಿಸಬಾರದು. ಹೇಳಬೇಕೆಂಬುದನ್ನು ಮೊದಲು ಆಲೋಚಿಸು; ಅದು ಧ್ಯೇಯ ಸಾಧನೆಗೆ ಹಾನಿಕರವಾಗುವುದೋ ಹೇಗೆಂಬುದನ್ನು ಮೊದಲು ವಿಚಾರ ಮಾಡಬೇಕು.

ಹೀಗೆ ಮುಂದುವರಿಸಿಕೊಂಡು ಹೋಗಲು ಸಾಧ್ಯವಾದರೆ, ತಪ್ಪು ಹೆಜ್ಜೆಯನ್ನಿಡದೆ ಸಾಧನೆಯನ್ನು ಸತತಗೊಳಿಸಲಾದರೆ, ಒಂದು ದಿನ ಒಮ್ಮೆಲೇ ಬಾಗಿಲೊಂದು ತೆರೆದದ್ದನ್ನು ಕಾಣಬಹುದು ಮತ್ತು ಒಂದು ಪ್ರಕಾಶಮಯ ಚೈತನ್ಯ ಸನ್ನಿಹಿತವಾದದ್ದನ್ನು ನೋಡಬಹುದು. ಆ ಚೈತನ್ಯವು (ಪ್ರಜ್ಞಾಪ್ರಕಾಶವು)- ನಾನು ಹಿಂದೆ ಇದ್ದೆ, ನಾನು ಮುಂದೆ ಇರುವೆ, ಸಾವು ಅಥವಾ ನಾಶ ಎಂಬುದು ನನಗಿಲ್ಲ- ಎಂಬ ಸ್ವರೂಪದ ಆತ್ಮತತ್ವದ ಬಗೆಗೆ ನಿಶ್ಚಯ ಬುದ್ಧಿಯನ್ನು ಹುಟ್ಟಿಸುವುದು. ಆಗ ಎಲ್ಲರೂ ಒಂದೇ ಆಗಿರುವುದರಿಂದ ಎಲ್ಲರೂ ಸಮಾನರು ಎಂಬುದು ಗೊತ್ತಾಗುವುದು. ಅದರಿಂದ ಸಾಧಕನಿಗೆ ತಾನು ಮುಕ್ತನಾದೆನೆಂಬುದೂ ತಾನು ಪ್ರಕೃತಿ ದಾಸನಲ್ಲವೆಂದೂ ಗೊತ್ತಾಗುವುದು.

ಆದರೆ ಇನ್ನೂ ಮುಂದೆ ಹೋಗತಕ್ಕದ್ದಿದೆ

(5) ಅಂತರ್ಮಾನಸಿಕ. ವ್ಯಕ್ತಿತ್ವದ ಕ್ರಮಿತ ಪರಿವರ್ತನೆಗೆ ಈ ತರಬೇತೂ ಬೇಕು. ಇದರಿಂದ ಅಹಂಕಾರ ಅಡಗುವುದು ಮತ್ತು ಅಪ್ರಮೇಯವಾದ ಅತೀಂದ್ರಿಯ ಚೈತನ್ಯಲೋಕದಲ್ಲಿ ಪ್ರವೇಶ ದೊರಕುವುದು.

ಆದರಿದು ಕೊನೆಯ ಮಾತಲ್ಲ. ಇದಕ್ಕೂ ಮುಂದೆ ಹೊಸ ಲೋಕವೊಂದಿದೆ. ಅದಕ್ಕೆ ಹೋಗಲು ಅತಿಮಾನಸ (ಸುಪ್ರಮಾಣಸ) ತರಬೇತು ಆಗತ್ಯ. ಅದರ ಕೆಲಸವು ಮೇಲಿನಿಂದ ಕೆಳಕ್ಕೆ ಶುರುವಾಗುವುದು. ಅದು ಇರವಿನ ನಾನಾ ಸ್ತರಗಳನ್ನು ಹಾಯ್ದು ಹೋಗುವುದು; ಅನ್ನಮಯ ಕೋಶವನ್ನೂ ಹೊಕ್ಕು ಅಂತ್ಯವಲ್ಲದ ದಿವ್ಯಶರೀರವಾಗಿ ನಿಲ್ಲುವುದು. ಅವನೇ ದಿವ್ಯ ಮಾನವ. ಅವನಿಂದ ಭೂಲೋಕದಲ್ಲಿ ಹೊಸಕುಲ ಹುಟ್ಟುವುದು.

ಇದು ಸಂಕ್ಷಿಪ್ತವಾಗಿ, ಮಾತೃಶ್ರೀಯ ಮಾತಿನಿಂದಲೇ ಸಾಕ್ಷಿಕವಾಗಿ, ಹೇಳಿದ ವಿದ್ಯಾಭ್ಯಾಸ ಮತ್ತು ಉಪಶಿಕ್ಷಣಗಳ ಆದರ್ಶ. (ಪಾಂಡಿಚೇರಿಯ) ವಿಶ್ವವಿದ್ಯಾನಿಲಯದಲ್ಲಿ ಈ ಮಾರ್ಗದಿಂದಲೇ ಕೆಲಸ ನಡೆಯುತ್ತಿದೆ. ಒಂದಲ್ಲ ಒಂದು ದಿನ, ಇದು ಇಡಿ ಜಗತ್ತೇ ಅನುಸರಿಸುವ ಅಥವಾ ಬೆಳಕಿಗೆ ಎದುರಾದ ಜಗದ್ಭಾಗವು ಅನುಸರಿಸುವ ಆದರ್ಶವಾದೀತೆಂದು ನಾವು ಪ್ರತ್ಯಾಶೆಯನ್ನಿಟ್ಟುಕೊಳ್ಳಬಹುದು.

* * *

ಮಾತೃಶ್ರೀಯ ವ್ಯಕ್ತಿತ್ವ

ಆಶ್ರಮದಿಂದಲೂ ಅಲ್ಲಿಗೆ ಹೋಗಿ ಮಾತೃಶ್ರೀಯ ಸಂಪರ್ಕದಲ್ಲಿದ್ದ ಹೊರಗಿನವರಿಂದಲೂ ಅವಳ ವ್ಯಕ್ತಿತ್ವದ ಬಗೆಗೆ ಬಹಳ ಸಂಗತಿಗಳನ್ನು ತಿಳಿದುಕೊಳ್ಳಬಹುದು.

ಮೊದಲನೆಯದಾಗಿ, ಹೊರ ಹೊರಗೆ ನೋಡಿದರೆ ಸಹ ಮಾತೃಶ್ರೀ ಯಾವಾಗಲೂ ಕಾರ್ಯಮಗ್ನೆಯಾಗಿರುವುದು, ತನ್ನದೇ ಆದ ರೀತಿಯಿಂದ ಕೆಲಸಮಾಡುತ್ತಿರುವುದು ಕಂಡು ಬರುತ್ತದೆ. ಆಕೆಗೆ ವಿಶ್ರಾಂತಿ ವೇಳೆಯೇ ಇಲ್ಲ. ಇಡಿ ವರ್ಷದಲ್ಲಿ ಅವಳಿಗೆ ಒಂದು ದಿನದ ರಜೆಯೂ ಇಲ್ಲ, ಕುಳಿತು ವಿಶ್ರಾಂತಿ ತೆಗೆದು ಕೊಳ್ಳಲು ಸಮಯವೇ ಇಲ್ಲ. ಇರುಳಿನಲ್ಲಿ ಅವಳು ಬಹುಶಃ ಎರಡು ಗಂಟೆಗಳಕಾಲ ನಿದ್ರಿಸುತ್ತಾಳೆ. ದಿನದ 24 ಗಂಟೆಗಳಲ್ಲಿ 22 ಗಂಟೆಗಳ ಕಾಲ ಅವಳು ಕೆಲಸ ಮಾಡುತ್ತಿರುತ್ತಾಳೆ. ಕೆಲಸದ ಪ್ರತಿಯೊಂದು ಅಂಗಕ್ಕೂ ಕಾಲನಿರ್ದೇಶವಿದೆ; ಅದರಿಂದ ವೇಳಾ ಪತ್ರಿಕೆಗೆ ಎಂದೂ ವ್ಯತ್ಯಯ ಉಂಟಾಗುವುದಿಲ್ಲ. ಉಷಃ ಕಾಲದಿಂದ ರಾತ್ರಿಯ ಬಹಳ ಕಾಲದವರೆಗೆ ಅವಳು ತನ್ನ ದೈನಂದಿನ ಕರ್ತವ್ಯದಲ್ಲಿ ಮಗ್ನಳಾಗಿರುತ್ತಾಳೆ. ರಾತ್ರಿಯ 2 ರಿಂದ 4 ಗಂಟೆಗಳವರೆಗೆ ಮಾತ್ರ ಅವಳು ವಿಶ್ರಾಂತಿ ತೆಗೆದುಕೊಳ್ಳುತ್ತಾಳೆ- ಅದೂ ಹಾಸಿಗೆಯ ಮೇಲಲ್ಲ- ಸೋಫದ ಮೇಲೆ. ಆಗಲೂ ಆಕೆ ನಿದ್ರಿಸುವುದಿಲ್ಲ ಸಮಾಧಿಯಲ್ಲಿರುತ್ತಾಳೆ ಎಂದು ಕೆಲವರೆನ್ನುತ್ತಾರೆ, ಧ್ಯಾನ-ಸಮಾಧಿಗಳು ನಿದ್ರೆಗಿಂತ ಹೆಚ್ಚು ವಿಶ್ರಾಂತಿದಾಯಕ ಎಂದು ಮಾತೃಶ್ರೀಯೇ ಹೇಳುತ್ತಿದ್ದಳು.

ಮೊದಲು, ಪ್ರತಿದಿನ ಬೆಳಿಗ್ಗೆ ಆರೂ ಕಾಲಿಗೆ ಸರಿಯಾಗಿ (ಮಹಡಿಯ ಮೇಲಿನ ಮುನ್ನಟ್ಟಳಿಗೆಯಲ್ಲಿ ಬಂದು ಅವಳು ನಿಲ್ಲುತ್ತಿದ್ದಳು. ಆಗ

ಆಶ್ರಮವಾಸಿಗಳು ಹೊರ ಬಂದು ರಸ್ತೆಯ ಬದಿಗೆ ನಿಂತು ಅವಳ ದರ್ಶನವನ್ನು ಪಡೆಯುತ್ತಿದ್ದರು. ಅನಂತರ ಅವಳು ಆಶೀರ್ವದಿಸಲೆಂದು ಕೆಳಗೆ ಬರುತ್ತಿದ್ದಳು. ಆದರೀಗ ಈ ಯೆಲ್ಲವೂ ಬದಲಾಗಿದೆ.

ಬೆಳಿಗ್ಗೆ ಅವಳು ತನ್ನ ಕೋಣೆಯಲ್ಲಿದ್ದು ನಿತ್ಯದ ಕೆಲಸವನ್ನು ಮಾಡುತ್ತಿದ್ದಳು. ಕಾರ್ಯದರ್ಶಿಯು 9 ಗಂಟೆಗೆ ಅವಶ್ಯಕವಾದ ಉಪದೇಶಗಳನ್ನು ಪಡೆಯಲು ಅವಳೆಡೆಗೆ ಹೋಗುತ್ತಿದ್ದನು. 10 ಗಂಟೆಯಿಂದ ಅವಳು ಅಂದು ಸಂದರ್ಶಿಸಲು ಅಪ್ಪಣೆ ಪಡೆದವರನ್ನು- ಅವರಲ್ಲೂ ಆ ದಿನ ಯಾರ ಹುಟ್ಟು ಹಬ್ಬವಾಗಿರುವುದೋ ಅವರನ್ನು- ಸ್ವಾಗತಿಸುತ್ತಿದ್ದಳು. ಅವಳ ಮುಂದೆ ಒಬ್ಬರಾದ ಮೇಲೆ ಒಬ್ಬರಂತೆ ಅವರು ಬಂದು ನಿಲ್ಲುತ್ತಿದ್ದರು. ಅವರು ಆಗ ಹೇಳಬೇಕೆನ್ನಿಸಿದ್ದನ್ನು ಹೇಳಿ ಆಶೀರ್ವಾದ ಪಡೆದು ಹೋಗುತ್ತಿದ್ದರು. ಶಾಖಾಧಿಪತಿಗಳೂ ಉಪದೇಶಗಳನ್ನು ಪಡೆಯಲು ಬರಬಹುದಾಗಿತ್ತು. ಆಮೇಲೆ ಅವಳು ಫಲಾಹಾರ ಮಾಡುತ್ತಿದ್ದಳು. ಅವಳು ಫಲಾಹಾರ ಮಾಡುತ್ತಿದ್ದುದು ಬಹಳ ಸ್ವಲ್ಪ; ದ್ರವಪದಾರ್ಥಗಳನ್ನೇ ಅವಳು ಹೆಚ್ಚಾಗಿ ತೆಗೆದುಕೊಳ್ಳುತ್ತಿದ್ದಳು. ಯಾರಾದರೂ ನೈವೇದ್ಯವೆಂದು ಆಕೆಗೆ ಯಾವುದಾದರೊಂದು ಖಾದ್ಯವನ್ನು ತಂದು ಕೊಟ್ಟರೆ ಅದರಲ್ಲಿ ಒಂದು ತುತ್ತನ್ನು ತೆಗೆದುಕೊಂಡು ಮಿಕ್ಕದ್ದನ್ನು ಪ್ರಸಾದವೆಂದು ಇತರರಿಗೆ ಕೊಟ್ಟು ಬಿಡುತ್ತಿದ್ದಳು.

ಮಧ್ಯಾಹ್ನ ಮೂರಕ್ಕೆ ಅವಳ ಲಕ್ಷ್ಯಕ್ಕೆ ಬೀಳಬೇಕಾದ ಕಾಗದ-ಪತ್ರಗಳನ್ನು ಕಾರ್ಯದರ್ಶಿ ನಳಿನೀಗುಪ್ತರು ಅವಳೆಡೆಗೆ ಒಯ್ಯುತ್ತಿದ್ದರು. ಅವನ್ನು ಅವರು ಅವಳಿಗೆ ಓದಿ ಹೇಳುತ್ತಿದ್ದರು: ಅವಳು ಹೇಳಿದ ಉತ್ತರಗಳನ್ನು ಬರೆದು ಕೊಳ್ಳುತ್ತಿದ್ದರು. ಈ ಕೆಲಸವನ್ನು ಮುಗಿಸಲು ದಿನವೂ ಸುಮಾರು ಎರಡು ಗಂಟೆಗಳು ಬೇಕಾಗುತ್ತಿದ್ದವು.

ಅನಂತರ ಸಲಹೆ-ಸೂಚನೆಗಳನ್ನು ಪಡೆಯಲು ವಿವಿಧ ಶಾಖೆಯ ಕೆಲಸಗಾರರು ಅವಳೆಡೆಗೆ ಹೋಗುತ್ತಿದ್ದರು. ಆ ಸಲಹೆ-ಸೂಚನೆಗಳಿಲ್ಲದೆ ಏನು ಮಾಡಲೂ ಆಗುತ್ತಿರಲಿಲ್ಲ. ಕೆಲವರಿಗೆ ಮಾತೃಶ್ರೀಯು ಲಿಖಿತ

ಅಪ್ಪಣೆಗಳನ್ನು ಕೊಡುತ್ತಿದ್ದಳು, ಕೆಲವರಿಗೆ ಬಾಯಿ ಮಾತಿನಿಂದ ಹೇಳುತ್ತಿದ್ದಳು. ಹೀಗೆ ಆಯಾ ಶಾಖೆಗಳ ಕೆಲಸದ ಬಗೆಗೆ ಹೇಳಬೇಕಾದುದೆಲ್ಲವನ್ನೂ ಅವಳು ಹೇಳುತ್ತಿದ್ದಳು. ಎಲ್ಲ ಶಾಖೆಗಳ ಕಾರ್ಯ ವಿವರಗಳನ್ನೂ ಅವಳು ನೆನಪಿನಲ್ಲಿಟ್ಟುಕೊಳ್ಳುತ್ತಿದ್ದಳು.

ಮೊದಲು ಅವಳು ಮಧ್ಯಾಹ್ನ ನಾಲ್ಕೂವರೆಗೆ ಆಟದ ಬಯಲಿಗೆ ಹೋಗುವ ಸಂಪ್ರದಾಯವಿದ್ದಿತ್ತು. ಅವಳು ಸ್ವತಃ ಸುಮಾರು ಒಂದು ಗಂಟೆಯ ಕಾಲ ಟೆನಿಸ್ ಆಡುತ್ತಿದ್ದಳು. ಆಮೇಲೆ ಆಬಾಲ ವೃದ್ಧರೆಲ್ಲರೂ ಸಾಮೂಹಿಕ ಕವಾಯತಿಗಾಗಿ ಸೇರುತ್ತಿದ್ದರು ಅಥವಾ ಓಡುವ ವ್ಯಾಯಾಮ ಮಾಡುತ್ತಿದ್ದರು. ಇದಾದ ಮೇಲೆ ಆಟದ ಬಯಲಲ್ಲೇ ಅವಳು ಸಂದರ್ಶನ ಕೊಡುತ್ತಿದ್ದಳು.

ಆಮೇಲೆ ಅವಳೆದುರು ಎಲ್ಲರೂ ಮೌನವಾಗಿ ಎದ್ದು ನಿಂತು ಅವಳೊಡನೆ ಕೆಲ ಕಾಲ ಧ್ಯಾನ ಮಾಡುತ್ತಿದ್ದರು. ಧ್ಯಾನ ಮುಗಿದ ಮೇಲೆ ಮಾತೃಶ್ರೀಯು ಅಲ್ಲಿದ್ದವರೆಲ್ಲರಿಗೂ ಕಾಯಿ, ಪೆಪ್ಪರಮಿಂಟು ಮುಂತಾದ ಸಿಹಿ ತಿಂಡಿಗಳನ್ನು ಹಂಚುತ್ತಿದ್ದಳು. ಹಾಗೆ ಹಂಚುವಾಗ ಅವಳು ಎಷ್ಟೋ ಸಲ ಸಮಾಧಿಸ್ಥಳಂತಿರುತ್ತಿದ್ದಳು. ಆದರೆ ಯಾವುದೂ ಅವಳ ಕಣ್ಣು ತಪ್ಪಿಸುತ್ತಿರಲಿಲ್ಲ. ಯಾರಾದರೂ ಅನುಪಸ್ಥಿತರಾಗಿದ್ದರೆ "ಅವನೇಕೆ ಇಲ್ಲಿಲ್ಲ?" ಎಂದು ಕೂಡಲೇ ಅವಳು ಕೇಳಿಬಿಡುತ್ತಿದ್ದಳು.

ಕೆಲವು ಸಲ ಹೂವುಗಳನ್ನು ಹಂಚಿ ಆಶೀರ್ವಾದ ಮಾಡಲು ನಿಂತಾಗ ಅವಳು ಅಕಸ್ಮಾತ್ತಾಗಿ ಎಲ್ಲ ಚಲನವಲನಗಳನ್ನೂ ನಿಲ್ಲಿಸಿ 10-15 ರಿಂದ ಮತ್ತು ಒಮ್ಮೆ 45 ನಿಮಿಷಗಳವರೆಗೆ ನಿಷ್ಪಂದವಾಗಿದ್ದು ಬಿಡುತ್ತಿದ್ದಳು. ಅವಳು ಬಹಿರ್ಮುಖಿಯಾಗುವ ವರೆಗೆ ಎದುರಿಗಿದ್ದ ಶಿಷ್ಯ ಕಾದುಕೊಂಡಿರಬೇಕಾಗಿತ್ತು. ಇದನ್ನು ಕಂಡು ಒಮ್ಮೆ ಒಬ್ಬರು ಮೆಲ್ಲಗೆ ಹೇಳಿದರು, "ತಾಯಿ, ನಾನು ಬಹಳ ಹೊತ್ತಿನಿಂದ ಕಾಯುತ್ತ ನಿಂತಿದ್ದೆ; ಬಹುಶಃ ನೀನು ಸಮಾಧಿಸ್ಥೆಯಾದೆ". ಅದಕ್ಕೆ ಮಂದಸ್ಮಿತೆಯಾಗಿ ಉತ್ತರ ಕೊಟ್ಟಳು.

"ಪೂರ್ಣವಾಗಲ್ಲ. ನಿನ್ನ ಸಹನೆಯನ್ನು ಪರೀಕ್ಷಿಸುತ್ತಿದ್ದೆ- ಎಷ್ಟು ಹೊತ್ತು ನೀನು ಕಾಯಬಲ್ಲೆ ಎಂಬುದನ್ನು ನೋಡುತ್ತಿದ್ದೆ" ಎಂದು.

ಆಟದ ಬಯಲಿಂದ ಹಿಂದಿರುಗಿದ ಬಳಿಕ ಅವಳು ಫ್ರೆಂಚ್ ಭಾಷೆಯ ಪಾಠ ಹೇಳುತ್ತಿದ್ದಳು. ಯುವಕರೊಡನೆ ಬಹಳ ಜನ ವೃದ್ಧರೂ ಆ ತರಗತಿಗಳಿಗೆ ಹೋಗುತ್ತಿದ್ದರು. ಒಂದು ಗಂಟೆ ಪಾಠ ಹೇಳಿದ ಮೇಲೆ ಅವಳು ತನ್ನ ಕೊಠಡಿಗೆ ಹೋಗುತ್ತಿದ್ದಳು.

ಆದರೆ 1962 ರಿಂದ ಈ ಕಾರ್ಯಕ್ರಮಗಳನ್ನು ಬದಲಾಯಿಸಲಾಗಿದೆ. ಆಟದ ಬಯಲಿನಲ್ಲಿ ಅದೇ ಕಾರ್ಯಪದ್ಧತಿ ಇದೆ. ಆದರೆ ಮಾತೃಶ್ರೀ ಅಲ್ಲಿಗೆ ಹೋಗುವುದಿಲ್ಲ.

ತನ್ನ ಸಾಮಾನ್ಯ ಕೆಲಸಗಳಲ್ಲಲ್ಲದೆ ಅವಳು ಕಲೆಯಲ್ಲೂ ಆಸಕ್ತಿ ವಹಿಸುತ್ತಿದ್ದಳು: ಅದರಲ್ಲೂ ಏನಾದರೂ ಮಾಡುತ್ತಿದ್ದಳು. ಅವಳು ಬಣ್ಣದ ಚಿತ್ರ ಬರೆಯುತ್ತಿದ್ದಳು, ಲೇಖನಗಳನ್ನು ತಯಾರಿಸುತ್ತಿದ್ದಳು, ಪಿಯಾನೋವನ್ನು ನುಡಿಸುತ್ತಿದ್ದಳು. ಚಿಕ್ಕವಳಾಗಿದ್ದಾಗ ಅವಳು ವರ್ಣಶಿಲ್ಪವನ್ನು ಕಲಿತಿದ್ದಳು. ಈಗಲೂ ಆಕೆ ಸಮರ್ಥ ಶಿಷ್ಯರಿಗೆ ವರ್ಣಶಿಲ್ಪವನ್ನು ಕಲಿಸುತ್ತಾಳೆ.

ಅವಳ ಬರೆಹದ ಶೈಲಿ ಅವಳದೇ. ಅದು ಪ್ರಸನ್ನವೂ ಓಜಸ್ವಿಯೂ ಸರಳವೂ ಆಗಿದೆ. ಆಶ್ರಮದ ಪತ್ರಿಕೆಗೆ ಅವಳೇ ಬರೆಯುತ್ತಾಳೆ. ಅವಳು ಸಂಸ್ಕೃತವನ್ನು ಬರೆಯಲೂ ಓದಲೂ ಬಲ್ಲವಳಾಗಿದ್ದಾಳೆ.

ಇತ್ತೀಚೆಗೆ ಪಿಯಾನೋವನ್ನು ನುಡಿಸುತ್ತಿಲ್ಲ, ವರ್ಷದ ಕೊನೆಯ ದಿನದ ನಟ್ಟಿರುಳಿನಲ್ಲಿ ಹೊಸ ವರ್ಷವನ್ನು ಉದ್ಘಾಟಿಸಲು ಅವಳೊಮ್ಮೆ ಅದನ್ನು ಬಾರಿಸುತ್ತಾಳೆ.

ಈಯೆಲ್ಲ ಚಟುವಟಿಕೆಗಳಲ್ಲಿ ಮಾತೃಶ್ರೀಯ ಯಾವ ಚಟುವಟಿಕೆ ಅರ್ಥಪೂರ್ಣವಾದದ್ದು? ಅವಳ ನೋಟ ಮತ್ತು ಮುಗುಳ್ನಗೆ- ನಿಜವಾಗಿಯೂ. ಎಲ್ಲರೂ ಇದನ್ನೊಪ್ಪುತ್ತಾರೆ ಆದರೆ ಅಷ್ಟನ್ನೇ ಹೇಳ

ಜಿಹ್ವೆಗೆ ಸಾಕಾಗದು. ಅವಳ ನೋಟವೂ ಮಂದಸ್ಮಿತವೂ ಅಪಾರ್ಥಿವ, ಸ್ವರ್ಗೀಯ. ಪಾಂಡಿಚೇರಿಗೆ ಬರುವ ಸಂದರ್ಶಕರು ಕೇವಲ ಅದಕ್ಕಾಗಿ ಅಲ್ಲಿಗೆ ಹೋದೆವೆಂದು ಹೇಳುತ್ತಾರೆ; ಅವರಿಗೆ ಮತ್ತೆ ಯಾವ ಉದ್ದೇಶವೂ ಇರುವುದಿಲ್ಲವಂತೆ. ಅವಳ ನೋಟವೂ ಮುಗುಳ್ನಗೆಯೂ ಉಲ್ಲಾಸಕರ, ಉನ್ನತಿಕರ- ಅದು ಅವರ್ಣನೀಯ; ಅದನ್ನು ಕಂಡೇ ಅನುಭವಿಸಬೇಕು. ನಿನಗಾಗಿಯೇ ಅವಳು ಹಾಗೆ ಮಂದಸ್ಮಿತ ಬೀರುವಳೆಂದು ನಿನಗೆನ್ನಿಸತೊಡಗುವುದು. ಆದರೆ ಒಬ್ಬ ಕುರೂಪಿಯೂ ವಿಕಾರಿಯೂ ಆದವನು ಹೋದರೂ ಅದೇ ಪ್ರಕಾರ ಅವನತ್ತ ಅವಳು ಮಧುರವಾದ ಮುಗುಳ್ನಗೆಯಾಡುವಳು- ಆಗ ನೀನು ಆಶ್ಚರ್ಯ ಪಡುವಿ. ನೀನು ಎಷ್ಟು ಸಲ ಅವಳೆಡೆಗೆ ಹೋದರೂ ಅದೇ ಬದಲಾಗದ ಮುಗುಳ್ನಗೆಯನ್ನು ನೋಡುವಿ.

ಅಲ್ಲಿ ಹೋಗಿ ನೀನು ಅವಳೆದುರು ನಿಂತರೆ, ಅವಳು ನಿನ್ನತ್ತ ನೋಡುವಳು- ಅದಕ್ಕೂ ಹೆಚ್ಚಾಗಿ- ನಿನ್ನೊಳಹೊಕ್ಕು ನೋಡುವಳು. ಆ ನೋಟವು ನಿನ್ನ ಎದೆಯಾಳವನ್ನು ಬಗೆದು ಹೊಗುವುದು ಮತ್ತು ಅವಳಲ್ಲಿ ಮುಚ್ಚುಮರೆ ಯಾವುದೂ ಇಲ್ಲವೆಂಬುದು ನಿನ್ನ ಅನುಭವಕ್ಕೆ ಬರಲಾರಂಭಿಸುತ್ತದೆ. ಅನಂತರ ಅನುಗ್ರಹ ಪೂರ್ಣವಾಗಿ (ಪ್ರಸನ್ನತೆಯಿಂದ) ನಿನ್ನತ್ತ ಮಂದಹಾಸ ಬೀರುವಳು; ಅದರ ಪರಿಣಾಮ ಎಂಥದೆಂದರೆ- ನಿನ್ನಲ್ಲಿರುವ ಕತ್ತಲೆಲ್ಲವೂ ನಿನ್ನಿಂದ ಮಾಯವಾಯ್ತೆನ್ನಿಸುತ್ತದೆ ನಿನಗೆ. ನಿನ್ನ (ವ್ಯಕ್ತಿತ್ವದ) ಪ್ರಚ್ಛನ್ನ ಮೂಲೆಯಲ್ಲಿರುವ ಅಂಧಕಾರಮಯವಾದ ಮಚ್ಚೆಯನ್ನು ಸರಿಯಾಗಿ ಗುರುತಿಸಿ ಅವಳು ತನ್ನ ದಯಾಮಯವಾದ ಮುಗುಳ್ನಗೆಯಿಂದಷ್ಟೇ ಮುಟ್ಟಿ ಆ ಕಳಂಕವನ್ನು ನಿನ್ನಿಂದ ಒರೆಸಿ ತೆಗೆದಳೆಂದು ನಿನಗೆ ಭಾಸವಾಗುವುದು.

ಇದಾದ ಮೇಲೆ ಅವಳು ಹರಸಲೆಂದು ತನ್ನ ಕೈಯಿಂದ ನಿನ್ನ ತಲೆಯನ್ನು ಮುಟ್ಟುವಳು. ಅವಳ ಈ ಹಸ್ತಸ್ಪರ್ಶವು ವಿಚಿತ್ರವಾದ ಒಂದು ಶಕ್ತಿಯನ್ನುಳ್ಳದ್ದು. ಅದು ನಿನ್ನ (ಮನದ) ನೋವುಸುಳಿಗಳನ್ನು ಪರಿಹರಿಸುವುದು; ಉದ್ವೇಗ- ಬೇಸರಗಳನ್ನು ತೊಡೆದು ಹಾಕುವುದು. ನೀನು

ವಿಯೋಗದಿಂದ ದುಃಖಿಯಾಗಿ ಭಾರವಾದ ಎದೆಯೊದನೆ ಆವಳೆಡೆಗೆ ಹೋದರೆ ನೀನು ಅವಳನ್ನು ಬಿಟ್ಟು ಬರುವಾಗ ನಿರ್ದುಃಖಿಯೂ ಹಗುರವೂ ಆಗಿ ಬರುವೆ. ಇದು ಪ್ರತಿದಿನದ ಅನುಭವ. ತಮ್ಮ ಬಂಧುಬಳಗದವರನ್ನು, ಅಕ್ಕರೆಯ ಪುತ್ರನನ್ನು, ಗಂಡಂದಿರನ್ನು ಕಳೆದುಕೊಂಡ ಎಷ್ಟು ಜನ ದುಃಖ ಭಾರ ಹೊತ್ತು ಅವಳಲ್ಲಿಗೆ ಹೋಗಿ ಬರುವುದಿಲ್ಲ! ಅವಳು ಅವರನ್ನು ತನ್ನ ಕಿರುಮನೆಗೆ ಕರೆದೊಯ್ಯುತ್ತಾಳೆ; ಬಾಗಿಲು ಹಾಕುತ್ತಾಳೆ; ಯಾರಿಗೂ ಅರಿಯದ ಏನನ್ನೋ ಮಾಡುತ್ತಾಳೆ: ಅದರಿಂದ ಅವರು ಹೊರಗೆ ಬರುವಾಗ ತೃಪ್ತರಾಗಿ ಬರುವುದು ಕಂಡು ಬರುತ್ತದೆ. ಇದಾದ ಬಳಿಕ ಅವರು ತಮ್ಮ ಮಾಮೂಲು ವ್ಯವಹಾರವನ್ನು, ಏನೂ ಆಗಲಿಲ್ಲವೆಂಬಂತೆ, ಮಾಡುತ್ತ ಹೋಗುತ್ತಾರೆ.

ವಾಸ್ತವಿಕವಾಗಿ ನೋಡಿದರೆ ಅವಳು ಒಬ್ಬ ದಿವ್ಯ ದಾತ್ರಿ. ಅವಳು ಪಾರ್ಥಿವ ದಾನವನ್ನು ಕೊಡಳು. ಅದಕ್ಕೂ ಹೆಚ್ಚು ಬೆಲೆಯ ವಸ್ತುವನ್ನು ಕೊಡುತ್ತಾಳೆ. ಇದನ್ನವಳು ಮೂಲಭೂತವಾಗಿ ಎರಡು ತೆರದಗಳಿಂದ ಮಾಡುತ್ತಾಳೆ. ಶ್ರೀ ಅರವಿಂದರು ಹೇಳುವಂತೆ, "ಉಭಯ ರೀತಿಯಿಂದ ಮಹಾತಾಯಿ ಕೊಡುತ್ತಾಳೆ: ಕಣ್ಣುಗಳ ಮೂಲಕ ಅಂತರ್ಮನಕ್ಕೂ ಕೈಗಳ ಮೂಲಕ ಭೌತಿಕ ಭಾಗಕ್ಕೂ ಅವಳು ಕೊಡುತ್ತಾಳೆ".

ಆದರೆ ಅವಳು ಇನ್ನೂ ಅನೇಕ ವಿಧದಿಂದ ಅವಳು ಕೊಡುತ್ತಾಳೆ: ಹತ್ತಿರವಿದ್ದವರಿಗಷ್ಟೇ ಅಲ್ಲ ಬಹುದೂರದಲ್ಲಿರುವವರಿಗೆ ಸಹ- ಅವಳನ್ನು ಮೆಚ್ಚುವ ಹಾಗೂ ಗುರುವೆಂದು ಗ್ರಹಿಸಿದ ಸಾವಿರಾರು ಜನರು ಅವಳಲ್ಲಿ ಸಹಜ ಶ್ರದ್ಧೆಯನ್ನುಳ್ಳವರಾಗಿದ್ದಾರೆ, ಅವಳನ್ನು ಅವಲಂಬಿಸುತ್ತಾರೆ- ಅವರು ಕಷ್ಟದಲ್ಲಿದ್ದಾಗಲೆಲ್ಲ ಅವಳಿಗೆ ಮೊರೆಹೊಗುತ್ತಾರೆ. ಅವರಲ್ಲಿ ಕೆಲವರು ಕಷ್ಟದಲ್ಲಿರುವವರು, ಕೆಲವರು ಅಪಾಯದಲ್ಲಿರುವವರು, ಕೆಲವರು 'ಅತ್ತ ದರಿ ಇತ್ತ ಪುಲಿ' ಎಂಬ ಸ್ಥಿತಿಯಲ್ಲಿರುವವರು, ಇನ್ನು ಉಳಿದವರು ರೋಗಗ್ರಸ್ತರು. ಅವರ ಕಾಗದ ಬರೆದೋ ಮೂಕವಾಗಿ ಪ್ರಾರ್ಥಿಸಿಯೋ ಅವಳ ನೆರವನ್ನು ಬೇಡುತ್ತಾರೆ. ಕಾಗದಗಳ ರಾಶಿಗಳೂ ಅತಿ ತ್ವರೆಯ ತಂತಿ ಸುದ್ದಿಗಳೂ ಪ್ರತಿದಿನವೂ ಸುರಿಯುತ್ತಿರುತ್ತವೆ. ಅವರಲ್ಲಿಯ ಪ್ರತಿಯೊಬ್ಬರಿಗೂ ಅವಳು

ಉತ್ತರ ಬರೆಯುತ್ತಾಳೆ- ಅವಳಿಗೆ ಅತ್ಯುತ್ತಮವೆಂದು ಕಂಡ ಉತ್ತರವನ್ನು- ಕೆಲವರಿಗೆ ಸ್ವಹಸ್ತಲೇಖನದಿಂದಲೂ ಕೆಲವರಿಗೆ ಕಾರ್ಯದರ್ಶಿಯ ಮೂಲಕವೂ ಕೆಲವರಿಗೆ ಮೌನದಿಂದಲೂ ಅವಳು ಉತ್ತರ ಕೊಡುತ್ತಾಳೆ. ಅದು ಯಾವರೀತಿಯದೇ ಆಗಿರಲಿ, ಅದು ಕೆಲಸ ಮಾಡುತ್ತದೆ, ಅವರವರ ಕಷ್ಟ ಪರಿಹಾರವಾಗುತ್ತದೆ.

ಅವರೆಲ್ಲರ ಅನುಭವಕ್ಕೂ ಅದು ಬಂದಿದೆ. ಅವರು ಯಾರೇ ಆಗಿರಲಿ, ಅವರು ಎಲ್ಲಿಯೇ ಇದ್ದಿರಲಿ- ಅವರು ಭೂಮಿಯ ಈ ಭಾಗದವರಾಗಿರಲಿ, ಇನ್ನೊಂದು ಭಾಗದವರಾಗಿರಲಿ- ಅವರಿಗೆ ತಾವು ಮಹಾ ಮಾತೃಶ್ರೀಯ ರಕ್ಷಣೆಯಲ್ಲಿಯೂ ಉಪಸ್ಥಿತಿಯಲ್ಲಿಯೂ ಇರುವಂತೆ ಹಾಗೂ ಅವಳ ಆಶೀರ್ವಾದಗಳಿಂದ ಆವೃತರಾದವರಂತೆ ಮತ್ತು ತಾವು ಸುರಕ್ಷಿತರಾಗಿರುವಂತೆ ತೋರುತ್ತದೆ. ಕೆಲವು ಸಲ ಸೂಕ್ಷ್ಮವಾಗಿ, ಆದರೆ ಸ್ಪಷ್ಟವಾಗಿ ಯಾವುದೋ ಒಂದು ಅಕಲ್ಪನೀಯ ರೀತಿಯಿಂದ ಅವರಿಗೆ ಅವಳ ದರ್ಶನವಾಗುವುದು.

ಕೆಲವರಿಂದದ್ದುಂಟು: ಅವಳ ನೆರವಿಗಾಗಿ ಬೇಡಿದಾಗ ಒಂದು ವಿಲಕ್ಷಣವಾದ ಎಲ್ಲಿಂದಲೋಬಂದ ಸುವಾಸನೆಯ ಮೂಲಕ ಅವಳು ಬಂದಂತೆನ್ನಿಸುತ್ತದೆ. ಆ ಸುಗಂಧವು ಹೂವು-ಲೋಬಾನಗಳಿಂದ ಬಂದಂತಿರುತ್ತದೆ- ಅದು ಬಹಳ ಹೊತ್ತು ಇರುತ್ತದೆ. ಬೇಡಿಕೆಯು ಬಹಳ ಭಕ್ತಿನಿರ್ಭರವೂ ತೀವ್ರವೂ ಆಗಿದ್ದಾಗ ಈ ಸುಗಂಧವು ತಲೆದೋರಿ ಇಡಿ ಆವರಣವನ್ನು ತುಂಬಿಕೊಳ್ಳುತ್ತದೆ. ಕೆಲವೊಮ್ಮೆ ಕೂಡಲೇ ಸಂಭವಿಸಬಹುದಾದ ಯಾವ ಅಪಾಯವೂ ಒಬ್ಬನ ಅರಿವಿಗೆ ಬಂದಿರದಿದ್ದಾಗಲೂ ಅವನು ಒಮ್ಮೆಲೇ ಆ ಸುಗಂಧವನ್ನು ಅನುಭವಿಸಿ ಆಶ್ಚರ್ಯಪಟ್ಟು ಮರುದಿನ ರೈಲಿನಪಘಾತದಂತಹ ಮರಣಾಂತಿಕ ಆಪತ್ತಿನಿಂದ ಅತ್ಯಲ್ಪಕಾಲದಲ್ಲಿ ತಪ್ಪಿಸಿಕೊಂಡದ್ದನ್ನು ಕಂಡದ್ದುಂಟು. ಮಾತೃಶ್ರೀ ಅದನ್ನು ಮೊದಲೇ ತಿಳಿದು ಸಕಾಲದಲ್ಲಿ ನಡುವೆ ಬಂದು ತಪ್ಪಿಸಿರಬೇಕು.

ಆದರೆ ಅಂಥ ಪ್ರತಿಕೂಲ ಸಂನಿವೇಶಗಳಲ್ಲಲ್ಲದೆ ಎಷ್ಟೋ ಶುಭ ಸಂನಿವೇಶಗಳಲ್ಲಿಯೂ ಮಾತೃಶ್ರೀಯಿಂದ ನೀವು ಹರಕೆಗಳನ್ನು ಪಡೆಯ

ಬಲ್ಲಿರಿ. ಅವಳ ಆರಾಧಕರು ಹುಟ್ಟುಹಬ್ಬ, ಮದುವೆ, ಭೂವಿಕ್ರಯ, ಗೃಹವಿಕ್ರಯ ಮುಂತಾದ ಸಂದರ್ಭಗಳಲ್ಲಿ ಸಹ ಅವಳ ಆಶೀರ್ವಾದಗಳನ್ನು ಬೇಡುತ್ತಾರೆ. ಒಬ್ಬರು ಮೋಟಾರು ಕಾರನ್ನು ಕೊಳ್ಳುವ ಮೊದಲು ಅವಳ ಹರಕೆಯನ್ನು ಪಡೆದು ಮೊದಲ ಸಲ ಹತ್ತಿ ತಿರುಗಾಡಲೆಂದು ಆವಳೆಡೆಗೆ ಕಳಿಸಿದರು. ಆದರೆ ವರ್ಧಂತಿಗಳಲ್ಲಿ ಅವಳು ತನ್ನ ಭಕ್ತರಿಗೆ ಯಾವಾಗಲೂ ತಪ್ಪದೆ ಸ್ವಹಸ್ತದಿಂದ 'ಶುಭವಾಗಲಿ' (ಸುದೈವ ಒದಗಲಿ) ಎಂದು ಹರಕೆಗಳನ್ನು ಬರೆದು ಕಳಿಸುತ್ತಾಳೆ.

ಇಡಿ ವರ್ಷಗಳಲ್ಲಿ ಅಂಥ ಎಷ್ಟು ಹರಕೆಗಳನ್ನವಳು ಕಳಿಸಬೇಕಾಗುವುದೆಂಬುದನ್ನು ಯಾರಾದರೂ ಊಹಿಸಿಕೊಳ್ಳಬಹುದು. ಆದರವಳು ಸುಸ್ತಾಗುವುದೇ ಇಲ್ಲ, ಇಲ್ಲವೆನ್ನುವುದೇ ಇಲ್ಲ; ಕೇಳಿದವರೆಲ್ಲರಿಗೂ ತನ್ನ ದಿವ್ಯ ಶಕ್ತಿಯಿಂದ ನೆರವೀಯಲು ಅವಳು ಯಾವಾಗಲೂ ಸಿದ್ಧಳಾಗಿರುತ್ತಾಳೆ.

ಪ್ರಾಣಿಗಳ ಬಗೆಗೆ ಸಹ ಅವಳಲ್ಲಿ ದಯೆಯಿದೆ. ಅವಳ ಹತ್ತಿರ ಒಂದು ಒಳ್ಳೆಯ ನಾಯಿಯಿತ್ತು. ಅದೀಗ ಸತ್ತು ಹೋಗಿದೆ. ಅವಳೊಡನೆ ಅವಳ ಬೆಕ್ಕೊಂದು ಕಣ್ಣುಮುಚ್ಚಿಕೊಂಡು ಧ್ಯಾನಕ್ಕೆ ಕುಳಿತುಕೊಳ್ಳುತ್ತಿತ್ತು. ಒಮ್ಮೆ ಆ ಬೆಕ್ಕಿಗೊಂದು ಚೇಳು ಕಚ್ಚಿತು. ಆಗ ಅದು ಆ ನೋವನ್ನು ಪರಿಹರಿಸೆಂದು ಕಣ್ಣುಗಳ ಮೂಲಕ ಪ್ರಾರ್ಥಿಸಿಕೊಂಡಿತು.

ತನಗೆ ಆಹಾರ ಬೇಕಾದಾಗೆಲ್ಲ ಒಂದು ಕಪ್ಪುಕಾಗೆ ಅವಳ ತಳಿವಂಡೆಯ ಮೇಲೆ ಬಂದು ಕುಳಿತುಕೊಳ್ಳುತ್ತಿತ್ತು. ಮಾತೃಶ್ರೀ ಅದನ್ನು "ಕರಿಯ" ನೆಂದು ಕರೆಯುತ್ತಿದ್ದಳು; ಆಗ ಆ ಕಾಗೆ ನಿರ್ಭಯವಾಗಿ ಬಂದು ಅವಳ ಕೈಯಲ್ಲಿದ್ದ ಆಹಾರವನ್ನು ತಿಂದುಕೊಂಡು ಹೋಗುತ್ತಿತ್ತು. ಇದು ಬಹಳ ವರ್ಷಗಳವರೆಗೆ ನಡೆಯಿತು. ಮಾತೃಶ್ರೀ ಮಾಡುವುದನ್ನು ನೋಡಿ ಅವಳ ಕೆಲ ಸೇವಕರು ಹಾಗೆ ಮಾಡಹೋದಾಗ ಕೈಯಲ್ಲಿ ಆಹಾರವನ್ನಿಟ್ಟುಕೊಂಡು ಕರೆದರೂ ಅದು ಒಮ್ಮೆಯೂ ಅವರ ಹತ್ತಿರ ಬರಲೂ ಇಲ್ಲ, ಕೊಡಲೆತ್ತಿದ ಆಹಾರವನ್ನು ತಿನ್ನಲೂ ಇಲ್ಲ.

ಮಾತೃಶ್ರೀಗೆ ಹರಿತವಾದ ನೆನಪಿನ ಶಕ್ತಿಯಿದೆ ಅವಳು ಅತಿ ಚಿಕ್ಕ ಸಂಗತಿಯನ್ನೂ ಮರೆತು ಬಿಡಳು. ಒಮ್ಮೆ ಕಲ್ಕತ್ತದಿಂದ ಬಂದ ಹೆಂಗಸೊಬ್ಬಳು ಶ್ರೀ ಅರವಿಂದರ ಕಿರುಮನೆಯಲ್ಲಿ ಕೆಲಕಾಲ ಕುಳಿತು ಧ್ಯಾನ ಮಾಡುವ ಆಸೆ ತನಗಿದೆ ಎಂದಳು. ಅನಂತರ ಅವಳು ಅದನ್ನು ಸಂಪೂರ್ಣವಾಗಿ ಮರೆತುಬಿಟ್ಟಳು. ಒಂದು ತಿಂಗಳಿದ್ದ ಮೇಲೆ ಅವಳು ಹೋಗಲು ಮಾತೃಶ್ರೀಯ ಅಪ್ಪಣೆಯನ್ನು ಕೇಳಹೋದಾಗ, "ಶ್ರೀ ಅರವಿಂದರ ಕೋಣೆಯಲ್ಲಿ ಕುಳಿತು ನೀನು ಧ್ಯಾನ ಮಾಡುವುದಿಲ್ಲವೇ?" ಎಂದು ಮಾತೃಶ್ರೀ ಕೇಳಿ ಬಿಟ್ಟಳು.

ಅವಳ ಮಾತೆಂದೂ ತಪ್ಪದು. ಇದಕ್ಕೆ ಹಲವಾರು ಉದಾಹರಣೆಗಳಿವೆ. ಒಮ್ಮೆ ಒಬ್ಬರಿಗೆ ಆಟದ ಬಯಲಿನಲ್ಲಿದ್ದಾಗ ಹೊಟ್ಟೆ ನೋವು ಬಂತು. ಮಾತೃಶ್ರೀಗೆ ಅದು ಗೊತ್ತಾಗಿ ಅವಳು ಉಪ್ಪು ಹಾಕಿದ ಕೆಲ ಬಾದಾಮಿಗಳನ್ನು ತಿನ್ನಗೊಟ್ಟಳು. ಇದರಿಂದ ಅವರ ನೋವು ಹೊರಟು ಹೋಗುವುದು ಎಂದಳವಳು. ಅವರು ಬಾದಾಮಿ ತಿಂದರು. ಅವರ ಹೊಟ್ಟೆ ನೋವು ಹೊರಟುಹೋಯಿತು. ಮತ್ತೊಬ್ಬ ಜ್ವರ ಬಂದಿದ್ದಾಗ ಆಟದ ಮೈದಾನಕ್ಕೆ ಹೋದ ಮತ್ತು ಆನುಷಂಗಿಕವಾಗಿ ಆ ವಿಷಯವನ್ನು ಮಾತೃಶ್ರೀಗೆ ಹೇಳಿದ. ಅವಳು "ನೋಡುತ್ತೇನೆ" ಎಂದು ಅವನ ಹಣೆಯನ್ನು ಮುಟ್ಟಿದ ಸ್ವಕಾಲಾವಧಿಯಲ್ಲೇ ಅವನ ಜ್ವರ ಅಡಗಿತು. ಆಶ್ರಮವಾಸಿಯೊಬ್ಬನಿಗೊಮ್ಮೆ ನಿನ್ನ ಮಗನಿಗೆ ಬಹಳ ಹುಷಾರಿಲ್ಲ ಎಂದು ಕಲ್ಕತ್ತದಿಂದ ತಂತಿ ಬಂತು. ಅಲ್ಲಿಗೆ ಹೋಗಲು ಅಪ್ಪಣೆ ಪಡೆಯಲೆಂದು ಅವನು ಮಾತೃಶ್ರೀಯಡೆಗೆ ಹೋದ. ಆದರವಳೆಂದಳು- ಅವಸರವೇನಿಲ್ಲ. ಅವನಿಗೆಲ್ಲ ಸರಿಹೋಗುವುದು- ಎಂದು. ಅವನಿಗಾಶ್ಚರ್ಯವಾಯಿತು. ಆದರೆ ಕೆಲದಿನಗಳಾದ ಮೇಲೆ ತನ್ನ ಮಗನ ಕಾಯಿಲೆ ಗುಣವಾಯ್ತೆಂದು ಅವನಿಗೆ ಸಮಾಚಾರ ಸಿಕ್ಕಿತು.

ಆಗ ಈಗ ಮಾತೃಶ್ರೀಯ ಆಕಾರ ಬದಲಾಗುವುದೆಂಬ ಅಪೂರ್ವ ಸಂಗತಿಯನ್ನು ಬಹಳ ಜನರು ನೋಡಿದ್ದಾರೆ. ಕೆಲವೊಮ್ಮೆ ಅವಳು ಅತಿ ಸುಂದರಿಯಾಗಿ ತೋರುವಳು (ಮಹೇಶ್ವರಿಯಂತೆ); ಕೆಲವೊಮ್ಮೆ ಓಜಸ್ವಿನಿ

ಯಾಗಿಯೂ ರಭಸಯುಕ್ತಳಾಗಿಯೂ ತೋರುವಳು; ಕೆಲವುಸಲ ಸುವರ್ಣಮಯಳಾಗಿ ತೋರುತ್ತಾಳೆ (ಮಹಾಲಕ್ಷ್ಮಿಯಂತೆ): ಮತ್ತೆ ಕೆಲ ಸಲ ಸರ್ವಶುಕ್ಲೆಯಾಗಿ ಕಾಣುತ್ತಾಳೆ (ಮಹಾಸರಸ್ವತಿಯಂತೆ). ಇವರ ಬಗೆಗೆ ಶ್ರೀ ಅರವಿಂದರು, "ಪಾರ್ಥಿವ ಶರೀರದ ಹಿಂದೆ ಮಾತೃಶ್ರೀಯ ಅನೇಕ ರೂಪಗಳೂ ಶಕ್ತಿಗಳೂ ವ್ಯಕ್ತಿತ್ವಗಳೂ ಇವೆ" ಎನ್ನುತ್ತಾರೆ.

ಅನೇಕರಿಗೆ ಅವಳ ಸುತ್ತ ವಿಶಿಷ್ಟವಾದ ಒಂದು ಪರಿಮಳವಿದೆ ಎನ್ನಿಸಿವೆ. ಇದನ್ನು ಶ್ರೀ ಅರವಿಂದರಿಗೆ ಹೇಳಿದಾಗ- "ಮಾತೃಶ್ರೀಯ ಪರಿಮಳದಲ್ಲಿ ಜ್ಯೋತಿಗಳ ಹಾಗೂ ಶಕ್ತಿಗಳ ಲಾಸ್ಯವಿದೆ ....ಜನ ಅದನ್ನು ಅರಿಯಬೇಕೆಂಬ ಇಚ್ಛೆ ಮಾತೃಶ್ರೀಗಿಲ್ಲ- ತಮ್ಮಷ್ಟಕ್ಕೆ ತಾವೇ ಆಶ್ರಮದ 20-30 ಜನರು ಅದನ್ನರಿತರು- ಎಂದು ನಾನು ನಂಬುತ್ತೇನೆ".

ಮಾತೃಶ್ರೀಯ ವ್ಯಕ್ತಿತ್ವದ ಬಗೆಗೆ ಇನ್ನೂ ಎಷ್ಟೋ ಹೇಳಬಹುದು. ಇವನ್ನೆಲ್ಲ ಹೇಳುತ್ತ ಹೋದರೆ ಅಂತ್ಯವೇ ಇಲ್ಲವಾಗುವುದು. ಆದರೆ ಅವಳ ವ್ಯಕ್ತಿತ್ವದ ಇತರ ಮುಖಗಳಿವೆ. ಅವುಗಳತ್ತ ನಾವು ತಿರುಗೋಣ.

* * *

ದುರ್ಗೆಯಾಗಿ

ಶ್ರೀ ಅರವಿಂದರ ಪ್ರಕಾರ. "ದುರ್ಗೆಯು ಮಾತೃಶ್ರೀಯ ರಕ್ಷಣಾಶಕ್ತಿ". ದುರ್ಗತಿಯಿಂದ ರಕ್ಷಿಸುವವಳು ದುರ್ಗೆ. ಅವಳು ಸರ್ವದಿಕ್ಕುಗಳಲ್ಲಿ ಕೆಲಸ ಮಾಡುವ ದೇವಬಲ. ಆದುದರಿಂದಲೇ ಅಸುರ ಸಂಹಾರಕ್ಕಾಗಿ ಹತ್ತು ಕೈಗಳಲ್ಲಿ ಹತ್ತು ಆಯುಧಗಳನ್ನು ಹಿಡಿದವಳನ್ನಾಗಿ ಚಿತ್ರಿಸಲಾಗುತ್ತದೆ. ವಾಸ್ತವಿಕವಾಗಿ ನೋಡಿದರೆ, ಅವಳು ಪರಮ ಸತ್ಯದ ಸೃಷ್ಟಿ ಸ್ಥಿತಿ ಲಯಕಾರಕ ಶಕ್ತಿ. ಗೋಪುರ ವೃತ್ತಗಳಿಂದ ವಿಕಾಸಪ್ರಕ್ರಿಯೆಯನ್ನು ಸಾಗಿಸಿಕೊಂಡು ಹೋಗತಕ್ಕವಳವಳು, ಅವಳೇ ಪರಾಪ್ರಕೃತಿ. ಅವಳು ಅಪರಾಪ್ರಕೃತಿಗಿಂತ ಬಹಳ ಮೇಲಿನವಳು. ಅಪರಾಪ್ರಕೃತಿಯು ನಮ್ಮ ವ್ಯಾವಹಾರಿಕ ಪ್ರಜ್ಞೆಯನ್ನು ಪ್ರೇರಿಸುವವಳು. ಅವಳು ಮೇಲಿನಿಂದ ಬಂದ ಆಜ್ಞೆಯನ್ನು ಕುರುಡು ನಂಬಿಗೆಯಿಂದ ಪಾಲಿಸುತ್ತ ಹೋಗುವವಳು; ಆ ನಿಯಮಗಳನ್ನು ಕಣ್ಣು ಮುಚ್ಚಿಕೊಂಡು ಅನುಸರಿಸುವವಳು.

ಅಪರಾಪ್ರಕೃತಿಯ ವಿಧಿ-ಕರ್ಮಗಳ ನಡುವೆ ಒಮ್ಮೊಮ್ಮೆ ಮಾತೃಶ್ರೀಯು (ಪರಾಪ್ರಕೃತಿಯು) ಯಾವುದಾದರೂ ಒಂದು ವಿಶಿಷ್ಟ ಉದ್ದೇಶಕ್ಕಾಗಿ ಅನುಗ್ರಹ ಬುದ್ಧಿಯಿಂದ ಬರುತ್ತಾಳೆ: ಉದಾಹರಣೆಗಾಗಿ- ವಿಕಾಸದ ಮುಂದಗತಿಯನ್ನು ತ್ವರಿತಗೊಳಿಸುವುದರ ಸಲುವಾಗಿ. ಆದರಿಂದ ಅವಳು ತನ್ನ ನಿಸರ್ಗವನ್ನು ಮೀರಿ ಕೆಲಸ ಮಾಡುವ ಸರ್ವಶಕ್ತ ಮಹಿಮೆಯಿಂದ ವಿವಿಧ ರಕ್ಷಕ ಶಕ್ತಿಗಳನ್ನು ಪ್ರಕಟಿಸುವಳು.

ಹೊಸ ಪ್ರಜ್ಞೆಯೊಂದನ್ನು ಭೂಲೋಕಕ್ಕೆ ತರುವುದರ ಮೂಲಕ ಮಾತೃಶ್ರೀಯು ಜೀವನದ ಮಾಮೂಲು ಗತಿಗಳಿಗೆ ಹೊಸ ತಿರುವನ್ನು

ಕೊಡಲು ಮಾತೃಶ್ರೀಯು ಮಾನವರೂಪ ತಳೆದು ಇಲ್ಲಿಗೆ ಬಂದಳು. ಅವಳ ಶಕ್ತಿ ಹೇಗೆ ಕೆಲಸ ಮಾಡುವುದೆಂಬುದನ್ನು ಯಾರೂ ಅರಿಯರು. ಅದು ಮೇಲಿಮೇಲಿಂದ ಕಾಣದು. ಆದರೆ ಬಹು ವಿಧವಾಗಿ ಅದರ ಪರಿಣಾಮಗಳು ಕಂಡುಬರುವುವು.

ಯೋಗಶಕ್ತಿ, ಮಾಯಾಶಕ್ತಿ, ರೋಗನಿವಾರಕಶಕ್ತಿ, ಅಪಾಯ ಪರಿಹಾರಕಶಕ್ತಿ, ಭಯನಿವಾರಣಾಶಕ್ತಿ, ವರಪ್ರದಾನಶಕ್ತಿ, ಮತ್ತು ಪ್ರಬೋಧನಶಕ್ತಿಗಳು ಅವಳ ಕೆಲವು ಶಕ್ತಿಗಳು.

ಒಮ್ಮೆ ದಿಲೀಪಕುಮಾರರಾಯರು ಯೋಗಶಕ್ತಿಯ ವ್ಯಾವಹಾರಿಕ ಪ್ರಮಾಣವನ್ನು ತೋರಿಸಬೇಕೆಂದು ಅವಳನ್ನು ಕೇಳಿದರು.

ಈ ಕೆಳಗಿನ ಕಥೆಯು ಮುಂದೇನಾಯಿತೆಂಬುದನ್ನು ತಿಳಿಸುತ್ತದೆ:

“ಸರಳವಾಗಿ ಆದರೆ ಖಚಿತವಾಗಿ ನಿನ್ನನ್ನು ಕೇಳಬಂದಿದ್ದೇನೆ- ನಿನ್ನಲ್ಲಿ ಯೋಗಶಕ್ತಿ ಇರುವುದನ್ನು ಖಾತ್ರಿಮಾಡಿಕೊಡಲು ನನಗೊಂದು ಪ್ರಾಯೋಗಿಕ ನಿದರ್ಶನವನ್ನು ಕೊಡು- ಎಂಬುದಾಗಿ....

“ಮಾತೃಶ್ರೀ ಮತ್ತೊಮ್ಮೆ ಮಂದಹಾಸ ಬೀರಿದಳು. ‘ನಾನು ಪ್ರಯತ್ನಿಸಬಲ್ಲೆ, ನೀನು ಉಪಹಾರ ಗೃಹದಲ್ಲಿದ್ದೀಯಾ? ನೀನು ಇರುಳಲ್ಲಿ ಎಷ್ಟು ಹೊತ್ತಿಗೆ ವಿಶ್ರಾಂತಿ ತೆಗೆದುಕೊಳ್ಳುತ್ತೀಯೆ? ಒಂಬತ್ತಕ್ಕೆ? ಆ ಹೊತ್ತಿಗೆ ನೀನು ನಿನ್ನ ಕೋಣೆಯಲ್ಲಿ ನೀನು ಧ್ಯಾನಮಾಡು. ನೀನು ನಿನ್ನ ಮನಸ್ಸನ್ನು ನನಗಾಗಿ ತೆರವು ಮಾಡು. ಆಗ ನಾನು ಇಲ್ಲಿಂದ ನಿನ್ನತ್ತ ಲಕ್ಷ್ಯವನ್ನು ಕೇಂದ್ರೀಕರಿಸುವೆನು. ವೈಜ್ಞಾನಿಕ ಅಥವಾ ಇನ್ನಿತರ ವ್ಯಾವಹಾರಿಕ ಎಂದು ವಿವರಿಸಲಾಗದ ಒಂದು ಅನುಭವ ನಿನಗೆ ಆಗುವುದು’ ಎಂದು ಅವಳು ಸುಮ್ಮನೆ ಉತ್ತರ ಕೊಟ್ಟುಬಿಟ್ಟಳು.

“ಆ ಅನುಭವವು ಬಹಳ ವಿಲಕ್ಷಣವಾಗಿ ಬಂದಿತು. ಊಟವಾದ ಮೇಲೆ ನನ್ನ ಕಿರುಮನೆಗೆ ಹೋಗಿ ನೆಲದ ಮೇಲೆ ಕುಳಿತುಕೊಂಡೆ.

ಅತಿ ವೇಗದಿಂದ ತಿರುಗುವ ಬೀಸಣಿಗೆಯಿಂದ ಕೋಣೆ ಬಹಳ ತಂಪಾಗಿತ್ತು.... ಆದುದರಿಂದ ಸಹಜವಾಗಿ ನಾನು ನಿರ್ದುಷ್ಟವಾದ ಆತ್ಮವಿಶ್ವಾಸದಿಂದ ಧ್ಯಾನಕ್ಕೆ ಕುಳಿತೆ. ಅನೇಕ ಸಂಗತಿಗಳನ್ನು ನೋಡಬಹುದೆಂದು ನಾನು ನಿರೀಕ್ಷಿಸಿದೆ: ಬಣ್ಣಗಳು; ಕೆಲ ಆಕೃತಿಗಳು; ನನ್ನ ಅದೃಷ್ಟ ಒಳ್ಳೆಯದಿದ್ದರೆ, ದೀಪ್ತ ರೂಪಗಳು- ಇವುಗಳನ್ನೆಲ್ಲಾ ನೋಡಬಹುದು- ಯಾರಿಗೆ ಗೊತ್ತು? ಆದರೆ ನಾನು ಎಚ್ಚರಿಕೆಯಿಂದಿರಬೇಕು ಎಂದುಕೊಂಡೆ....

“ಒಮ್ಮಿಂದೊಮ್ಮೆ ನನ್ನ ದೇಹ ಸೆಟೆದುಕೊಳ್ಳಲಾರಂಭಿಸಿದ್ದು ನನಗೆ ಕಂಡಿತು; ಮೈ ತುಂಬ ಬೆವರತೊಡಗಿತು; ಆಮೇಲೆ ನನಗೆ ಭಯವಾಗುವಷ್ಟು ವೇಗದಿಂದ ನನ್ನ ಎದೆ ಬಡಿದುಕೊಳ್ಳಲಾರಂಭಿಸಿತು. ಅದರಿಂದ ನನ್ನ ಅಸ್ವಾಸ್ಥ ಸಂಪೂರ್ಣವಾಯ್ತು. ಇದೆಲ್ಲ ಏನು? ಕೂಡಲೇ ನಾನು ಜ್ಞಾಪಿಸಿಕೊಂಡು ಮಾತೃಶ್ರೀಯ ಹೆಸರನ್ನು ಜಪಿಸತೊಡಗಿದೆ, ಎದೆಬಡಿತ ಕೂಡಲೇ ನಿಂತಿತು. ಆದರೆ ಬೆವರಿನಿಂದ ನನ್ನ ಮೈಯೆಲ್ಲ ಒದ್ದೆಯಾಗಿಬಿಟ್ಟಿತ್ತು; ನನ್ನ ದೇಹದ ಬಿಗಿತ ಹೆಚ್ಚಾಯಿತು; ಮಾಂಸಖಂಡಗಳು ನೋವಾಗುವಷ್ಟು ಬಿಗಿದುಕೊಂಡವು.... ಯಾವುದೋ ಒಂದು ಶಕ್ತಿಯು ನನ್ನ ಮೇಲೆ ಅಧಿಕಾರ ನಡೆಸುತ್ತಿದೆ ಎಂಬುದು ನನಗೆ ಖಾತ್ರಿಯಾಯಿತು- ಅದರಲ್ಲೂ ಹುಚ್ಚುಹುಚ್ಚಾಗಿ ಅಲ್ಲದಿದ್ದರೂ ಯದ್ವಾತದ್ವಾ ಆಗಿ.

“ಮಾರನೆಯ ದಿನ ಬೆಳಗ್ಗೆ ನನ್ನ ವಿಲಕ್ಷಣ ಅನುಭವಗಳ ವಿವರವೆಲ್ಲವನ್ನೂ ಮಾತೃಶ್ರೀಗೆ ಹೇಳಿದೆ. ನನಗೆ ಶಾಂತಿಯನ್ನೂ ಸಂತೋಷವನ್ನೂ ಇನ್ನೂ ಇತರ ಗ್ರಾಹ್ಯವಾದವುಗಳನ್ನೂ ಕೊಡುವುದನ್ನು ಬಿಟ್ಟು ಅರ್ಥಹೀನವಾದ ನೋವನ್ನೇಕೆ ಉಂಟುಮಾಡಿದೆ? ಎಂದು ಮಾತೃಶ್ರೀಯನ್ನು ಕೇಳಿದೆ.

“ನಾನು ನಿನಗೆ ನೋವನ್ನುಂಟುಮಾಡಬೇಕೆಂದು ಬಯಸಲೇ ಇಲ್ಲ”- ಎಂದು ಕಚಗುಳಿಗೊಳಗಾದವಳಂತೆ ಅವಳು ನಕ್ಕಳು. “ನೀನು ನನ್ನ ಶಕ್ತಿಯನ್ನು ತಡೆಯುತ್ತಿದ್ದೆ: ನಿನ್ನ ವಿವೇಕಾರೂಢವಾದ ನಾಸ್ತಿಕತೆ ಮತ್ತು ಖಾತ್ರಿಯಾದ ಅಜ್ಞಾನಗಳ ಸರ್ವಾಯುಧಗಳಿಂದ ಅದನ್ನು ವಿರೋಧಿಸದೆ ಇದ್ದಿದ್ದರೆ ನಿನಗದು ಶಾಂತಿ-ಸಂತೋಷಗಳನ್ನು ತಂದುಕೊಡು

ತ್ತಿತ್ತು. ದೇವರಲ್ಲಿ ನಂಬಿಗೆ ಬೇಕು. ಆದರೆ ನೀನು ಚಿಂತೆಮಾಡಬೇಕಾಗಿಲ್ಲ. ಏಕೆಂದರೆ ನೀನು ಒಳ್ಳೆಯ ಗ್ರಹೀತನೆಂಬುದನ್ನು ನಾನು ಕಂಡುಕೊಂಡೆ. ಈಗ ನಾನು ಹೆಚ್ಚಿಗೆ ಹೇಳುವುದಿಲ್ಲ. ನೀನು ಧ್ಯಾನಮಾಡುತ್ತ ಹೋಗು: ನನ್ನನೆರವು ಯಾವಾಗಲೂ ನಿನಗೆ ಇದ್ದೇ ಇದೆ”.

ಮಾತೃಶ್ರೀಯು ಯೋಗಶಕ್ತಿಗೆ ಒಂದೇ ಒಂದು ಉದಾಹರಣೆಯಿದೆ. ಆ ವಿಶಿಷ್ಟ ಶಕ್ತಿಯಿಂದ ಆಕೆ ಆಶ್ರಮದ 2 ನೆಯ ಅಟ್ಟದಲ್ಲಿರುವ ತನ್ನ ಕೋಣೆಯಲ್ಲೇ ಕುಳಿತು ಹೊರಗೆ ನಡೆಯುವುದೆಲ್ಲವನ್ನೂ ತಿಳಿದುಕೊಳ್ಳುತ್ತಿದ್ದಳು. ತನ್ನ ಹತ್ತಿರ ಬರುವವರನ್ನು ಕಂಡಕೂಡಲೇ ಒಂದೇ ನೋಟದಿಂದ ಅವಳು ಅವರ ಮನಸ್ಸನ್ನೂ ವಿಚಾರಗಳನ್ನೂ ತಿಳಿದುಕೊಂಡು ಬಿಡುತ್ತಿದ್ದಳು. ಆದರವಳು ಅದರ ಬಗ್ಗೆ ಏನನ್ನೂ ಹೇಳುವುದಿಲ್ಲ. ಆದರೆ ನಿನ್ನ ಅಗತ್ಯವೇನೆಂಬುದನ್ನವಳು ಬಲ್ಲಳು ಮತ್ತು ನೀನು ಪ್ರಾಮಾಣಿಕನಾದರೆ ಅದು ನಿನಗೆ ಸಿಕ್ಕಿಯೇ ಸಿಕ್ಕುತ್ತದೆ. ಅವಳ ಬಾಗಿಲನ್ನು ನೀನು ಭಕ್ತಿಯಿಂದಲೂ ಪ್ರಾಮಾಣಿಕತೆಯಿಂದಲೂ ಪ್ರಾರ್ಥಿಸಿ ಬಡಿದರೆ—ಬಾಗಿಲು ತೆರೆಯುವುದು ಮತ್ತು ನಿನಗೆ ಬೇಕಾದದ್ದು ನಿನಗೆ ದೊರಕುವುದು.

ನಮ್ಮ ಮಾರ್ಗದರ್ಶನಕ್ಕೆ ಮಾತೃಶ್ರೀಯ ಸಹಾಯಕ ಶಕ್ತಿಯು ಬೇಕೇ ಬೇಕು. ಆ ಸಹಾಯವಿಲ್ಲದೆ ನಾವೇನನ್ನೂ ಮಾಡಲಾರೆವು. ಆದರೆ ನಾವು ಪ್ರಾಮಾಣಿಕರೂ ಅವಲಂಬಿಗಳೂ ಆಗಿರಬೇಕು. ಅವಳೊಡನೆ ಸಂಪರ್ಕ ಇಟ್ಟುಕೊಂಡಿರಬೇಕು. ಯಾವಾಗಲೂ ಅವಳನ್ನು ನೆನಪಿನಲ್ಲಿಟ್ಟುಕೊಂಡು ಪ್ರಾರ್ಥಿಸಬೇಕು. ತಲೆ ಕೆಡಿಸಿಕೊಳ್ಳದೆ ಕ್ಷುಬ್ಧನಾಗದೆ ನೀನು ಯಾವ ಕಷ್ಟಕಾಲದಲ್ಲೇ ಆಗಲಿ ಅಥವಾ ತೊಂದರೆಯಲ್ಲೇ ಆಗಲಿ, ಅವಳನ್ನು ಶಾಂತವಾಗಿಯೂ ಸತತವಾಗಿಯೂ ಪ್ರಾರ್ಥಿಸಿಕೊಂಡರೆ ನಿನಗೆ ಅಗತ್ಯವಾದ ಎಲ್ಲವನ್ನೂ ಅವಳು ಮಾಡುವಳು. ಏಕೆಂದರೆ. ಅವಳ ಶಕ್ತಿಯು ಯಾವಾಗಲೂ ನಿನ್ನ ನೆರವಿಗೆ ಸಿದ್ಧವಾಗಿರುತ್ತದೆ. ಪ್ರಾಮಾಣಿಕತೆಯಿಂದ ನೀನವಳನ್ನು ಪ್ರಾರ್ಥಿಸಿದರೆ ನಿನಗೆ ಅವಳು ಓಗೊಡುತ್ತಾಳೆ. ನೀನು ಯಾವ ರೀತಿಯಿಂದ ಅವಳನ್ನು ಕರೆದರೂ ಸರಿಯೆ, ನಿನ್ನ ಆತ್ಮದಲ್ಲಿ

ಪ್ರಾಮಾಣಿಕತೆಯಿರಬೇಕು. ಬೇರೆ ಬೇರೆ ಕಾಲಗಳಲ್ಲಿ ಶ್ರೀ ಅರವಿಂದರು ನನಗೆ ಈ ವಿಷಯದ ಬಗೆಗೆ ಆಶ್ವಾಸನವನ್ನು ಕೊಟ್ಟಿದ್ದಾರೆ:

"ನೀನು ನಿನ್ನನ್ನು ಅವಳ ಕೈಗೆ ಸಮರ್ಪಿಸಿಕೊಂಡರೆ ಅವಳು ನಿನ್ನನ್ನು ಬಿಡಳು".

"ನೀನು ಇತರ ಕಾರ್ಯಗಳನ್ನು ಜಯಪ್ರದವಾಗಿ ಮಾಡಲಾರೆಯಾದರೆ ಮತ್ತೆ ಮತ್ತೆ ಅವಳನ್ನು ಪ್ರಾರ್ಥಿಸು".

"ಮಾರ್ಗದಲ್ಲಿ ನಿನ್ನನ್ನು ನಡೆಸಿಕೊಂಡು ಹೋಗಲು ಮಹಾತಾಯಿ ಯಾವಾಗಲೂ ನಿನ್ನೊಡನೆ ಇದ್ದಾಳೆ ಎಂಬುದರ ಬಗ್ಗೆ ಅನುಮಾನಿಸದಿರು".

"ನಿನಗೆ ಗೊತ್ತಾಗದಿದ್ದಾಗಲೂ ಮಾತೃಶ್ರೀಯ ಶಕ್ತಿಯು ನಿನ್ನೊಡನಿರುತ್ತದೆ".

"ನಿನ್ನ ಹೃದಯದಲ್ಲಿರುವ ಎಲ್ಲವನ್ನೂ ದಿವ್ಯಮಾತೆಯ ಎದುರಿಗಿಡು. ಅದರಿಂದ ಅವಳ ಬೆಳಕು ನಿನ್ನ ಸದ್ಗತಿಗಾಗಿ ಅದರ ಮೇಲೆ ಕೆಲಸಮಾಡಲು ಅನುಕೂಲವಾಗುವುದು".

"ನಿರುತ್ಸಾಹಿಯಾಗದೆ ಮುನ್ನಡೆ. ಮಾತೃಶ್ರೀಯ ಶಕ್ತಿಯು ಎಲ್ಲ ಕಷ್ಟಗಳ ಮೂಲಕವೂ ಒಂದೇ ಸಮನಾಗಿ ಕೆಲಸ ಮಾಡುತ್ತಿರುತ್ತದೆ ಮತ್ತು ಬೇಕಾದ ಎಲ್ಲವನ್ನೂ ಮಾಡುತ್ತದೆ ಎಂಬುದನ್ನು ನಂಬಿ ಮುಂದೆ ಸಾಗು".

ಶ್ರೀ ಗುರುವಿನ ಈ ಮಾತುಗಳು ಹೃದಯದ ಆಳಕ್ಕೆ ತೆಗೆದುಕೊಳ್ಳ ತಕ್ಕಂಥವು. ಅಪಾಯಕರವಾದ ರೋಗಗಳನ್ನು ಅದ್ಭುತವಾಗಿ ಗುಣಪಡಿಸುವುದು ಮಾತೃಶ್ರೀಯ ಒಂದು ವೈಶಿಷ್ಟ್ಯ. ಅಸಂಖ್ಯಾತ ಜನರು ಗ್ರಾಹ್ಯವಾದ ಪ್ರಮಾಣಗಳನ್ನು ಇದಕ್ಕೆ ಕೊಡಬಲ್ಲರು. ಅಕಾಲಿಕ ಮರಣದಿಂದ ಅನೇಕರು ಉಳಿಸಲ್ಪಟ್ಟಿದ್ದಾರೆ; ಮರಣಾಂತಿಕ ಕಾಯಿಲೆಗಳಿಂದ ಅನೇಕರು ಮುಕ್ತರಾಗಿದ್ದಾರೆ. ಆದರೆ ಶ್ರದ್ಧೆ, ವಿಶ್ವಾಸ, ಅಂತರಿಕ ಮುಕ್ತಭಾವ ಇದ್ದಲ್ಲಿ ಮಾತ್ರ ಈ ಶಕ್ತಿ ಕೆಲಸ ಮಾಡೀತು ಎಂದು ಆಕೆ ಹೇಳಿದ್ದಾಳೆ. ನಿನಗೆ ಸಂಶಯ, ಅನುಮಾನ ಏನಾದರೂ ಇದ್ದರೆ, ಅದು ಬಹುಶಃ ಕೆಲಸ

ಮಾಡದು. ದಿಲೀಪಕುಮಾರರು ತಮ್ಮ ಪುಸ್ತಕದಲ್ಲಿ- ಮಹಾತಾಯಿಗೆ ಪ್ರಾರ್ಥನೆ ಮಾಡಿಕೊಂಡು, ಗುಣಪಡಿಸಲಸಾಧ್ಯವಾದ. ತಲೆಗೆ ಬಂದ ರಕ್ತ ಪಿಂಡೀಕರಣದ ರೋಗದಿಂದ ತಾವು ಸಂಪೂರ್ಣವಾಗಿ ಗುಣಹೊಂದಿದ್ದನ್ನು ಉಲ್ಲೇಖಿಸಿದ್ದಾರೆ.

ನಮಗೇ ಸ್ವತಃ ಅಂಥ ಪ್ರಕರಣವೊಂದು ಗೊತ್ತಿದೆ. ಮಾತೃಶ್ರೀಯ ಪ್ರಾಮಾಣಿಕ ಭಕ್ತರಾದ ಕಲ್ಕತ್ತದ ಜತಿನ್‌ದಾಸ್‌ಗುಪ್ತರು ಸರಳ ಸ್ವಭಾವದವರು. ಅಂಥವರು ಸಿಗುವುದೇ ದುರ್ಲಭ. ಅವರ ಸೋದರಳಿಯನೊಬ್ಬ ಅವರಿಗೆ ಮಗನಂತಿದ್ದನು. ಸ್ವಲ್ಪ ದೂರದಲ್ಲಿ ವಾಸಿಸುತ್ತಿದ್ದ ಅವನು (ಸಣ್ಣ) ಕರುಳು ಹುಣ್ಣಿನಿಂದ ನರಳುತ್ತಿದ್ದನು. ಆ ಹುಣ್ಣು ಒಮ್ಮೆಲೇ ಒಡೆಯಿತು. ಅಂಥ ಗಂಭೀರ ಸ್ಥಿತಿಯಲ್ಲಿ ಶೀಘ್ರ ಶಸ್ತ್ರಚಿಕಿತ್ಸೆಗಾಗಿ ಅವನನ್ನು ಕಲ್ಕತ್ತಕ್ಕೆ ತರಲಾಯಿತು. ಶಸ್ತ್ರಚಿಕಿತ್ಸೆಯಾದಮೇಲೆ ಚಿಕಿತ್ಸಕರು ಬಹಳ ಗಂಭೀರ ಮುಖಮುದ್ರೆಯನ್ನು ತಾಳಿದ್ದು ಕಂಡು ಬಂದಿತು. ಹುಣ್ಣು ಕೊಳೆತಿದ್ದುದರಿಂದ ಜೀವ ಉಳಿಯುವುದು ಕಷ್ಟ ಎಂದು ಅವರು ಹೇಳಿದರು. ಆದರೆ ಈ ನಡುವೆ ಜತಿನ್‌ದಾಸರು ಮಾತೃಶ್ರೀಗೆ ತಂತಿಯ ಮೂಲಕ ಪ್ರಕರಣವನ್ನು ತಿಳಿಸಿ ಆಶೀರ್ವಾದವನ್ನು ಕೇಳಿದ್ದರು ಮತ್ತು ಮಾತೃಶ್ರೀ ತಂತಿಯ ಮೂಲಕವೇ ಆಶೀರ್ವಾದವನ್ನು ಕಳಿಸಿದರು. ಇದಾದ ಮೇಲೆ ಜತಿನ್‌ದಾಸರು ತಮಗೇನೂ ಸಂಬಂಧವಿಲ್ಲವೆಂಬಂತೆ ನಿಶ್ಚಿಂತರಾಗಿದ್ದರು. ರೋಗಿಗೆ ನಾಡಿ ಬಡಿತವೂ ನಿಂತು ಹೋಗಿದೆ ಎಂದು ಸೇವಕರು ಬಂದು ಹೇಳಿದರೂ ಆ ಬಗ್ಗೆ ಯಾವ ಉತ್ಕಂಠತೆಯನ್ನೂ ವ್ಯಕ್ತಪಡಿಸದೆ ಅವರು ತಮ್ಮ ಮಾಮೂಲು ಕೆಲಸದಲ್ಲಿ ಮಗ್ನರಾಗಿದ್ದರು. ಆದರೆ ಕೆಲ ಗಂಟೆಗಳಾದ ಮೇಲೆ ನಾಡಿ ಬಡಿತ ಶುರುವಾದುದನ್ನೂ ರೋಗಿ ಮಾತಾಡ ತೊಡಗಿದ್ದನ್ನೂ ಸೇವಕರು ಕಂಡರು. ಶಸ್ತ್ರಚಿಕಿತ್ಸಕರೂ ಆಶ್ಚರ್ಯ ಪಟ್ಟರು. ಅನಂತರ ರೋಗಿ ಗುಣ ಹೊಂದಿದನು.

ಅವಳನ್ನು ಬಲ್ಲ ಮತ್ತು ಅವಳನ್ನು ಪೂಜಿಸುವ ಎಲ್ಲರಿಗೂ ಅಪಾಯದಲ್ಲಿ ಸಿಕ್ಕಿದವರನ್ನು ಕಾಯುವ ಅವಳ ಶಕ್ತಿ ಚೆನ್ನಾಗಿ ಗೊತ್ತು.

ಕಾಗದ ಬರೆದು ಮಾತೃಶ್ರೀಗೆ ತಿಳಿಸಿದಾಯಿತು: ಅದು ದಾರಿಯಲ್ಲಿದ್ದಾಗಲೇ ಅವರಿಗೆ ಉತ್ತರ ದೊರಕಿತು: ಅವರ ಕ್ರಮೇಣ ಗಂಭೀರ ಅಪಾಯ ಕಡಿಮೆಯಾಗುತ್ತ ಹೋದುದು ಅವರಿಗೆ ಗೊತ್ತಾಗುತ್ತಿತ್ತು: ಹಾಗೆ ಕಡಿಮೆಯಾಗುತ್ತ ಹೋಗಿ ಅದು ಅತ್ಯಲ್ಪವಾಗಿ ಕೊನೆಯಲ್ಲಿ ಅದೃಶ್ಯವೇ ಆಯಿತು. ಕಾಗದ ಬರುವ ಮೊದಲೇ, ಕೆಲವುಸಲ, ಮಾತೃಶ್ರೀಗೆ ಅಪಾಯದ ಸಂಭವ ಗೊತ್ತಾಗುತ್ತಿತ್ತು; ಆಗಲೇ ಅವಳು ತನ್ನ ಶಕ್ತಿಯನ್ನು ಪ್ರಯೋಗಿಸಿರುತ್ತಿದ್ದಳು. ಹೀಗೆ ಬೇಕಾದಾಗಲೆಲ್ಲ ಅವಳು, ತನ್ನ ಭಕ್ತರು ಹತ್ತಿರವಿರಲಿ ಇಲ್ಲವೆ ದೂರದಲ್ಲಿರಲಿ, ತನ್ನ ರಕ್ಷಕ ಶಕ್ತಿಯನ್ನು (ಅವರಿಗಾಗಿ) ಬಳಸುತ್ತಾಳೆ.

'ನಾನು ಮಾತೃಶ್ರೀಯ ಪ್ರೀತಿಪಾತ್ರ ಭಕ್ತನಾದುದರಿಂದ ನನ್ನನ್ನು ಯಾವ ಅಪಾಯವೂ ಬಾಧಿಸದು' ಎಂಬ ನಿರೀಕ್ಷೆಯೇ ಭ್ರಾಂತಿ. ಶ್ರೀ ಅರವಿಂದರು ಹೀಗೆಂದು ಎಚ್ಚರಿಕೆಯನ್ನು ನೀಡಿದ್ದಾರೆ. ಇತರರಿಗೆ ಬರುವ ಹಾಗೆ ಮಾತೃಶ್ರೀಯ ಪ್ರೀತಿಪಾತ್ರ ಭಕ್ತನಿಗೂ ಅಪಾಯಗಳು ಬರುತ್ತವೆ. ಆದರಾಗ- ನೀನು ಅಂತರಂಗದಲ್ಲಿ ಅವಳಿಗೆ ನಿಷ್ಠನಾಗಿದ್ದರೆ- ನಿನ್ನನ್ನು "ಅಪಾಯಗಳ ಮೂಲಕವೇ ದಾಟಿಸಿಕೊಂಡು ಹೋಗಿ ಪಾರು ಮಾಡುವಳು".

ಅದಕ್ಕಾಗಿಯೇ ಅವಳು ನಮ್ಮೊಡನೆ ಇರುತ್ತಾಳೆ: ಪೂರ್ಣ ಸಾಧನೆಯ ದಾರಿಯನ್ನು ನಡೆಸಲು. ಬಾಳು ನಮಗೆ ಸಾಧ್ಯವಾಗುವಂತಾಗಲು. ಉನ್ನತ ಪ್ರಕೃತಿಯನ್ನು ಹೊಂದುವ ನಮ್ಮ ಪ್ರಯತ್ನವನ್ನು ಸುಲಭಗೊಳಿಸಲು- ಆಕೆ ಇಲ್ಲಿ ಅವತರಿಸಿದ್ದಾಳೆ. ಹಿಂದಿನ ಕಾಲದಲ್ಲಿ ಆಧ್ಯಾತ್ಮಿಕ ಜ್ಞಾನವನ್ನು ಪಡೆದು ಅಜ್ಞಾನದಿಂದ ಮುಕ್ತರಾಗಬಯಸುವವರು ಎಲ್ಲ ಪಾಶಗಳನ್ನು ಬಿಟ್ಟು ಹೊರಟು ತಪಸ್ಸಿನ ಜೀವನವನ್ನು ನಡೆಸಬೇಕಾಗಿತ್ತು. ಆದರೀಗ ಶ್ರೀ ಅರವಿಂದರೂ ಮಾತೃಶ್ರೀಯೂ ನಮ್ಮ ದಾರಿಯನ್ನು ಸುಲಭಗೊಳಿಸಿದ್ದಾರೆ: ನೀವು ಏನನ್ನೂ ಬಿಡಬೇಕಾಗಿಲ್ಲ. ಆಧ್ಯಾತ್ಮಿಕೋನ್ನತಿ ಸಾಧನೆಯ ಸಂಕಲ್ಪ ತಾಳಿ ಮಾತೃಶ್ರೀಗೆ ನಿಮ್ಮನ್ನು ಪ್ರಾಮಾಣಿಕವಾಗಿ ಸಮರ್ಪಿಸಿಕೊಂಡು ಬಿಟ್ಟರೆ ಸಾಕು- ಪ್ರಾರ್ಥಿಸಿಕೊಂಡು. ನಿಮ್ಮ ಸರ್ವಲಕ್ಷ್ಯವನ್ನೂ ಅವಳತ್ತ ತಿರುಗಿಸಿ, ಎಲ್ಲವನ್ನೂ ಆಕೆಯ ಕೈಗೆ ಬಿಟ್ಟು ಕುಳಿತುಕೊಂಡರೆ

ಸರಿ- ಅವಳು ನಿಮ್ಮನ್ನು ಗುರಿಗೆ ಒಯ್ದು ಮುಟ್ಟಿಸುವಳು. ಸಾಧ್ಯವಿರುವಷ್ಟರ ಮಟ್ಟಿಗೆ ಮಾತೃಶ್ರೀಯನ್ನು ಮಾತ್ರ ನೆನೆಯಿರಿ- ನಿಮ್ಮ ಯಾವ ಕೆಲಸಕಾರ್ಯಗಳಲ್ಲಿಯೂ ಅವಳನ್ನು ಮರೆಯದಿರಿ. ಕಾಲಕ್ರಮೇಣ ನಿಮಗೆ ದಿವ್ಯಜ್ಞಾನವು ಪ್ರಾಪ್ತವಾಗುವುದು.

ಈ ದಿವ್ಯಜ್ಞಾನವು ನಮ್ಮ ಮನೋಬುದ್ಧಿಯ ಜ್ಞಾನಕ್ಕಿಂತ ಮೇಲಿನದು. ಆದರವನ್ನು ನಿಮ್ಮ ವೈಯಕ್ತಿಕ ಪ್ರಯತ್ನ ಮಾತ್ರದಿಂದ ಪಡೆಯಲಾರಿರಿ. ಮಾತೃಶ್ರೀ ಮಧ್ಯ ಪ್ರವೇಶಿಸಿ ತನ್ನ ಅನುಗ್ರಹದ ಮೂಲಕ ನಿಮಗೆ ವರದಾನ ಮಾಡಿದ್ದಲ್ಲದೆ ಅದು ನಿಮಗೆ ದೊರಕದು. ಆ ಅನುಗ್ರಹ ದೊರಕಬೇಕಾದರೆ ಅದಕ್ಕೆ ಮುಂಚೆ ಅದನ್ನು ಸ್ವೀಕರಿಸಲು ತಕ್ಕ ಸಿದ್ಧತೆಯನ್ನು ಮಾಡಿಕೊಂಡಿರಬೇಕು. ನಿಮ್ಮ ಆಧಾರ ಪಾತ್ರೆಯನ್ನು ಸಿದ್ಧಗೊಳಿಸಿಕೊಂಡಿರಬೇಕು- ಅದರಲ್ಲೇ ನಿಮ್ಮ ಯತ್ನ. ಬೇಕಾಗುವಷ್ಟು ಸಾಧನೆ ಮತ್ತು ಆತ್ಮಸಮರ್ಪಣ ಅಗತ್ಯವಾಗಿರುವುದು. ಈ ಹಾದಿಯಲ್ಲಿ ಬಹಳ ವಿಘ್ನಗಳೂ ತೊಂದರೆಗಳೂ ಬರಬಹುದು: ಎಡವಿಸುವ ಕಲ್ಲುಗಳೂ ಹೊಡೆತಗಳೂ ಬಂದು ಬೀಳಬಹುದು: ಸಂಶಯಗಳೂ ನಿರಾಶೆಗಳೂ ಎದುರಾದಾವು; ನಿರುಪಾಧಿಕ ಆತ್ಮಸಮರ್ಪಣೆಯ ಬಗೆಗೆ ಅರುಚಿ ಉಂಟಾದೀತು- ಆದರಿವುಗಳನ್ನು ತಪ್ಪಿಸಲು ಬರದು- "ಆಕಸ್ಮಿಕ ಹೊಡೆತ ಮತ್ತು ಒತ್ತಡಗಳ ಮೂಲಕವೇ ಜೀವಿಗಳು ವಿಕಾಸ ಹೊಂದಬೇಕೆಂಬುದು ನಿಯಮ". ಹೀಗಿದ್ದರೂ ಅದಕ್ಕೂ ನೀವು ಮಾತೃಶ್ರೀಯನ್ನೇ ಅವಲಂಬಿಸಬೇಕು. ಅವಳೆಲ್ಲ ನೋಡಿಕೊಳ್ಳುವಳು- ನೀವು ಅನಾಥರಾಗಿ ಉಳಿಯುವುದಿಲ್ಲ. ಶ್ರೀ ಅರವಿಂದರು ಹೇಳಿದ್ದಾರೆ- "ಕಷ್ಟಗಳು ಬರುವುವು, ಹೋಗುವುವು: ಆದರವಳು ನಿಮ್ಮೊಂದಿಗಿರುವುದರಿಂದ ಜಯ ಲಭಿಸುವುದು ಖಂಡಿತ"- ಎಂದು. ಆಗ "ಅವಳ ಪ್ರೇಮವು ನಿಮ್ಮನ್ನು ಸುತ್ತಿಕೊಂಡು, ತನ್ನ ಕೈಯಲ್ಲೆತ್ತಿ ಹಿಡಿದು, ದೇವರತ್ತ ನಿಮ್ಮನ್ನೊಯ್ಯುವುದನ್ನು" ನೀವು ಕಾಣುವಿರಿ.

ಮಾತೃಶ್ರೀಯ ಮಾಂತ್ರಿಕಶಕ್ತಿಯು ಸುಸ್ಪಷ್ಟ. ಆದರವಳು ಯಾವ ಅದ್ಭುತ ಕಾರ್ಯವನ್ನೂ ಮಾಡಲೊಲ್ಲೆನೆನ್ನುತ್ತಾಳೆ. ನಿಸರ್ಗದ ಪ್ರಕ್ರಿಯೆಗಳನ್ನು, ಸಮತೋಲವನ್ನು ಕೆಡಿಸಲು ಅವಳು ಇಷ್ಟಪಡಳು. ತ್ವರಿತ ಅಗತ್ಯ ಆಕೆಗೆ ತೋರಿದಾಗ ಅವಳು ತನ್ನ ಶಕ್ತಿಯನ್ನು ಉಪಯೋಗಿಸುವಳು- ಆಗ ಅವಳು ಪ್ರಕೃತಿಯ ಸ್ವಾಭಾವಿಕವಾದ ಪರಿಣಾಮ ನಿಯಮಗಳ ಕೊಂಡಿಸರ ಮುರಿಯದಂತೆ ನೋಡಿಕೊಳ್ಳುವಳು.

* * *

ಸಾವಿತ್ರಿಯಾಗಿ

ಮಾತೃಶ್ರೀ ಸಾವಿತ್ರಿಯೂ ಹೌದು. ಸಂಸ್ಕೃತದಲ್ಲಿ ಸವಿತೃವೆಂದರೆ ಬೆಳಕಿನ ಆಕರವೆಂದರ್ಥ. ಸವಿತೃಪುತ್ರಿಯೇ ಸಾವಿತ್ರಿ. ಈ ಸಾವಿತ್ರಿಯು ಮಾತೃಶ್ರೀಯಾಗಿ ಅವತರಿಸಿದ್ದಾಳೆ. ಈ ವಿಷಯದ ಮೇಲೆ ಶ್ರೀ ಅರವಿಂದರು ಸಾವಿತ್ರಿ ಎಂಬ ಬೃಹತ್ ಕಾವ್ಯವನ್ನು ಬರೆದಿದ್ದಾರೆ. ಅದೊಂದು ಐತಿಹ್ಯ, ಅದೊಂದು ಪ್ರತೀಕ.

ಮಹಾಭಾರತದಿಂದ ಸಾವಿತ್ರಿಯ ಐತಿಹ್ಯವನ್ನು ತೆಗೆದುಕೊಳ್ಳಲಾಗಿದೆ. ಧರ್ಮಾಭಿರಾಮನಾದ ಅಶ್ವಪತಿ ರಾಜನು ಮಕ್ಕಳಿಲ್ಲದವನಾಗಿದ್ದನು. ಆತನು ದೇವಿಯನ್ನು ಪ್ರಾರ್ಥಿಸಿಕೊಂಡು ಹತ್ತುವರ್ಷ ತಪಸ್ಸು ಮಾಡಿದನು. ಅವನ ತಪಸ್ಸಿಗೆ ಸಂತುಷ್ಟೆಯಾದ ದೇವಿಯು ಪ್ರತ್ಯಕ್ಷೆಯಾಗಿ ಅವನಿಗೆ ಮಗಳಾಗಿ ಹುಟ್ಟಲು ಒಪ್ಪಿದಳು. ಹುಟ್ಟಿದ ಆ ಮಗಳಿಗೆ ಸಾವಿತ್ರಿ ಎಂದು ಹೆಸರಿಡಲಾಯ್ತು. ಅವಳು ಬೆಳೆದಮೇಲೆ 'ನಿನಗೆ ಬೇಕಾದ ವರನನ್ನು ನೀನೇ ಆರಿಸಿಕೋ' ಎಂದು ಅವಳ ತಂದೆ ಹೇಳಿದನು. ಅವಳು ಕುರುಡನಾಗಿ ಕಾಡಿನಲ್ಲಿ ವಾಸಿಸುತ್ತಿದ್ದ ದ್ಯುಮತ್ಸೇನನ ಮಗನಾದ 'ಸತ್ಯವಾನ್' ಎಂಬವನನ್ನು ಆಯ್ದುಕೊಂಡಳು. ಅದಕ್ಕೆ ನಾರದಮಹರ್ಷಿಯು, ಅವನ ಆಯುಸ್ಸು ಇನ್ನೊಂದು ವರ್ಷ ಮಾತ್ರ ಇದೆ ಎಂಬ ಕಾರಣದಿಂದ, ತಕರಾರು ತೆಗೆದನು. ಆದರೆ ಸಾವಿತ್ರಿಯು ಹಟಹಿಡಿದು ಸತ್ಯವಂತನನ್ನೇ ಮದುವೆಯಾದಳು. ಒಂದು ವರ್ಷಕಳೆದೊಡನೆಯೇ ಸತ್ಯವಂತನು ಕಾಡಿನಲ್ಲಿ ಕಟ್ಟಿಗೆಯನ್ನು ಸಂಗ್ರಹಿಸುತ್ತಿದ್ದಾಗ ಸಿಡಿಲುಬಡಿದು ಸತ್ತುಬಿದ್ದನು. ಸಾವಿನ ಅಧಿಕಾರಿಯಾದ ಯಮನು ಬಂದು ಸತ್ಯವಂತನ ಜೀವವನ್ನು ತೆಗೆದುಕೊಂಡು

ಹೋದನು. ಆದರೆ ಸಾವಿತ್ರಿ ಅವನನ್ನು ಹಿಂಬಾಲಿಸಿದಳು: ಹೀಗಿದ ಸ್ವಲ್ಪವೂ ಅವಳು ಬಿಡಲಿಲ್ಲ. ಸಾವಿನ ಅನಿವಾರ್ಯತೆಯನ್ನು ಅವಳಿಗೆ ಯಮನು ವಿವರಿಸಿದನು ಮತ್ತು ಪರಿಪರಿಯಿಂದ ಅವಳಿಗೆ ಮನೆಗೆ ಹಿಂದಿರುಗ ಹೇಳಿದನು. ಆದರವಳು ಅವನ ಉಪದೇಶವನ್ನು ಕೇಳದೆ ಕಲ್ಲಾಗಿ ನಿಂತಳು. ಕೊನೆಯಲ್ಲಿ ಅವಳು ಗೆದ್ದಳು: ಯಮನು ಸತ್ಯವಂತನ ಜೀವವನ್ನು ಹಿಂದಿರುಗಿ ಕೊಡಬೇಕಾಯ್ತು. ಅವಳು ಸಜೀವನಾದ ಗಂಡನ ಜೊತೆಗೆ ಬಂದು ಸೂರ್ಯ ಎಂದೂ ಮುಳುಗದಿರುವ ಸ್ಥಳವಲ್ಲಿ ನೆಲೆಸಿದಳು.

ಈ ಪ್ರಸಿದ್ಧ ಐತಿಹ್ಯವನ್ನು ಅರವಿಂದರು ಕಂಡಿದ್ದರು. ಹೇಗೆ? ಒಂದು ಹೊಸ ಪ್ರತೀಕದ ಬೆಳಕಿನಲ್ಲಿ. ಅವರ ಕಾವ್ಯದಲ್ಲಿ ಅಶ್ವಪತಿಯು ಪಾರ್ಥಿವ ಮಾನವರ ಪ್ರತಿನಿಧಿ; ಅಶ್ವವು ಜೀವ ಚೈತನ್ಯದ ಪ್ರತೀಕ. ಮೊದಲಿನ ಸರ್ಗಗಳಲ್ಲಿ ವಿವರಿಸಲಾದ ಅಶ್ವಪತಿಯ ತಪಸ್ಸು ಅರವಿಂದರ ಬಾಳಿನ ಸಾದೃಶ್ಯವನ್ನು ಹೊಂದಿದೆ. ದೇವಿಯು ಅಶ್ವಪತಿಗೆ ಮಗಳಾಗಿ ಹುಟ್ಟಲು ಒಪ್ಪಿದಂತೆ ಮಾತೃಶ್ರೀಯು (ನಿತ್ಯ) ಸತ್ಯಪ್ರಜ್ಞೆಯನ್ನು ಭೂಲೋಕಕ್ಕೆ ಇಳಿಸುವುದರಲ್ಲಿ ಅವರಿಗೆ ನೆರವೀಯಲು ಬಂದಳು. ಸತ್ಯವಂತನು ಮಾನವನ ಪ್ರತಿನಿಧಿ. ಮೂಲತಃ ಮಾನವರು (ನರರು) ಸತ್ಯದ ಮಕ್ಕಳು. ಸಾವಿತ್ರಿಯು ದಿವ್ಯಾನುಗ್ರಹದ ಪ್ರತಿನಿಧಿ. ಅವಳ ಸಹಾಯವಿಲ್ಲದೆ ಅವರಿಂದೂ ಉದ್ಧಾರವಾಗದು. ತ್ವರಿತಗತಿಯಿಂದ ಅವರು ವಿನಾಶೋನ್ಮುಖರಾಗುತ್ತಿದ್ದಾರೆ- ಅನೃತ, ಅಜ್ಞಾನಗಳಲ್ಲಿ ಬಿದ್ದ ಅವರು ಜೀವನ್ಮೃತರಾಗಿದ್ದಾರೆ. ಇಲ್ಲಿಯೂ ಯಮ ಅವರಿಗೆ ಮರಣವನ್ನು ತೋರ ಬಯಸುತ್ತಾನೆ: ಸಾವಿತ್ರಿ ಅವರಿಗೆ ಹೊಸ ಬಾಳನ್ನು ಕೊಡಬಯಸುತ್ತಾಳೆ. ವಿರುದ್ಧ ಶಕ್ತಿಯಾದ ಮೃತ್ಯುರಾಜನಿಗೂ ದಿವ್ಯಶಕ್ತಿಯಾದ ಸಾವಿತ್ರಿಗೂ ಮಹಾಯುದ್ಧ ಶುರುವಾಗುತ್ತದೆ. ಕೊನೆಗೆ ಮಾತೃಶ್ರೀ ಗೆಲ್ಲುತ್ತಾಳೆ. ಸತ್ಯದ ಪ್ರತಿನಿಧಿಯಾದ ಸತ್ಯವಂತನು ಉಳಿಸಲ್ಪಡುತ್ತಾನೆ ಮತ್ತು ಸೂರ್ಯ ಎಂದೂ ಮುಳುಗದಿರುವಲ್ಲಿ ಬದುಕುತ್ತಾನೆ.

ಈ ಇಡಿ ಚಿತ್ರವು ಅರವಿಂದರ ಪೂರ್ವದರ್ಶನ. ಅವರು ತಮ್ಮ ರಸಸೃಷ್ಟಿಯಿಂದಲೂ ಯೋಗಸೃಷ್ಟಿಯಿಂದಲೂ ಕಂಡದ್ದು ಅನತಿದೂರದ ಭವಿಷ್ಯತ್ತಿನಲ್ಲಿ ಸಾಧಿಸಲ್ಪಡುವುದು.

ಈ ಅಂಶವನ್ನುಳಿದರೂ ಅದರ ಪದ್ಯವೇ ಅನನ್ಯವಾದುದು- ಅದರ ರೀತಿ, ಅಲಂಕಾರ ಮತ್ತು ಭಾಷೆಗಳ ಅನನ್ಯತೆ ಹಾಗಿದೆ. "ಸಾವಿತ್ರಿ"ಯ ಈ ಕೆಳಗಿನ ಕೆಲ ಸಾಲುಗಳು ಮಾದರಿಗಳಾಗಿವೆ:

ಎಲ್ಲ ಶಕ್ತಿ-ಮಾಹಾತ್ಮ್ಯಗಳವಳಲಿ
ಬಂದು ಸೇರ ಬೇಕು;
ರಸವು ಭೂಮಿಯಲಿ ಸಗ್ಗ ನಡೆಯೊಳೋ-
ಡಾಡುತ್ತಿರ ಬೇಕು,
ಅವಳ ಕೇಶ ಮೇಘಗಳ ಬಲೆಯೊಳಾ-
ನಂದ ಮಲಗಬೇಕು,
ಅಮರ ಕೂರ್ಮೆಯವಳಲ್ಲಿ ಮನೆಮರದಿ
ಹಕ್ಕಿ ವಿಭವ ಪೂರ್ಣ
ರೆಕ್ಕೆಗಳನು ಬಡಿವಂತೆ ಬಡಿದು ತಾ
ಬಂದು ನೆಲಸ ಬೇಕು.

ಮಾತೃಶ್ರೀಯ ಪಾರ್ಥಿವ ಅಸ್ತಿತ್ವದ ಅರಿವಿಲ್ಲದಿದ್ದಾಗ ಬರೋಡೆಯಲ್ಲಿ ವಾಸಿಸುತ್ತಿದ್ದ ಅರವಿಂದರು ಮೊಟ್ಟಮೊದಲು "ಸಾವಿತ್ರಿ"ಯನ್ನು ಬಹಳ ವರ್ಷಗಳ ಹಿಂದೆ ಬರೆಯಲಾರಂಭಿಸಿದರೆಂದು ಕುತೂಹಲಕಾರಿಯಾದ ಸಂಗತಿ. ಅವರು ದೇಹತ್ಯಾಗ ಮಾಡುವುದಕ್ಕೆ ಸ್ವಲ್ಪ ಮುಂಚೆ ಈ ಮಹಾ ಕಾವ್ಯವನ್ನು ಬರೆದು ಮುಗಿಸಿದರು. ಈ ಸುದೀರ್ಘಾವಧಿಯಲ್ಲಿ ಅವರು ಬಹಳ ನಿಧಾನವಾಗಿ ಸ್ವಲ್ಪ ಸ್ವಲ್ಪವನ್ನು ಬರೆದು ಪದೇ ಪದೇ ಬದಲಾಯಿಸುತ್ತಿದ್ದರು; ಹಾಗೆ ಬರೆದದ್ದನ್ನವರು ಕೆಲವೊಮ್ಮೆ ಹತ್ತು ಸಲ ಬದಲಾಯಿಸಿದ್ದೂ ಉಂಟು.

ಹೀಗೆ ಸಾವಿತ್ರಿಯಂಥ ಮಹಾತಾಯಿ ಭೂಲೋಕದಲ್ಲಿ ಎಲ್ಲೋ ಹುಟ್ಟಿದ್ದಾಳೆ ಮತ್ತು ಆಕೆ ಮನುಷ್ಯರನ್ನು ಅಜ್ಞಾನಾಂಧಕಾರದಲ್ಲಿ ಮುಳುಗಿ ನಾಶವಾಗುವುದರಿಂದ ತಪ್ಪಿಸುವ ತಮ್ಮ ಮಹಾಕಾರ್ಯದಲ್ಲಿ ನೆರವೀಯಲು ಬಂದು ಸೇರುವಳೆಂಬುದು ಅರವಿಂದರಿಗೆ ಮೊದಲೇ ಸಾಕ್ಷಾತ್ಕಾರವಾಗಿರಬೇಕು- ಎಂದು ನಾವು ಊಹಿಸಬಹುದು. ತಾವು ಭೂಮಿಯಿಂದ ಅದೃಶ್ಯರಾದ ಮೇಲೆ ಅವಳೊಬ್ಬಳೇ ಕೆಲಸ ಮಾಡಬೇಕಾದೀತೆಂಬುದೂ ಅವರಿಗೆ ಮೊದಲೇ ಗೊತ್ತಿದ್ದಿರಬೇಕು. "ಒಬ್ಬರೇ ಆದಾಗ ಮಹಾತ್ಮರು ಮಹಾ ಬಲಿಷ್ಠರಾಗಿರುತ್ತಾರೆ". ಅವರು "ಸಾವಿತ್ರಿ"ಯಲ್ಲಿ ಹೀಗೆ ಬರೆದಿದ್ದಾರೆ:

ಅಸಹಾಯೆಯಾಗಿ ಅವಳೊಬ್ಬಳೇ ಅತ್ಯಪಾಯದ ಇಳಿಕಲಲ್ಲಿ
ಇಡೀ ಜಗತ್ತಿನ ಮತ್ತು ಅವಳ ಅಳಿಗಾಲ ಬಂತೆಂಬ ಗತಿಯಲ್ಲಿ
ನಿಲುವ ದಿನವೊಂದು ಬಂದೀತು. ಲೋಕದ ಭವಿಷ್ಯವನು
ತನ್ನದೆಯ ಮೇಲೊಂಟಿಯಾಗಿ ಮಾನವಕುಲದ ಪ್ರತ್ಯಾಶೆಯ
ಹೃದಯದಲ್ಲಿಟ್ಟೊಬ್ಬಳೇ ಗೆಲ್ಲಬೇಕು ಅಥವಾ ಸೋಲಬೇಕು
ಎಂಬಂಥ ನೈರಾಶ್ಯ ಶಿಖರದಿಳಿಜಾರಿನಲಿ ಕೊನೆಯದಾಗಿ.
ಒಬ್ಬಳೇ ಒಬ್ಬಳೇ ಮೃತ್ಯುದೇವತೆಯೊಡನೆ ನಾಶದಂಚಿನಲಿ
ಕೊನೆಯ ಆ ಘೋರ ದೃಶ್ಯದೊಳವಳ ಒಕ್ಕೈಯ ಮಹಿಮೆ
ನಿಲ್ಲಬೇಕಾದೀತಪಾಯಕರ ಕಾಲ ಸೇತುವೆಯನ್ನು ದಾಟಿ
ಬಂದರೆಲ್ಲಾ ಬಂತು ಹೋದರೆಲ್ಲಾ ಹೋಯ್ತು ಮಾನವನಿಗೆಂಬ
ಜಗದವೃಷ್ಟದ ತುತ್ತ ತುದಿಯ ನವಳೇರಲೇ ಬೇಕು.
ಎದೆಯೊಡೆವ ಆ ಮೌನದಲ್ಲೊಬ್ಬಳೇ ಕಳೆದು ಹೋಗಿ
ಜಗದಗತಿಯನ್ನತ್ತಲೋ ಇತ್ತಲೋ ಎಂದು ನಿರ್ಧರಿಸುವಾಗ
ಮರ್ತ್ಯ ಕಾಲವ ಹತ್ತಿ ದಾಟುತಿರಲವಳಾತ್ಮದಲ್ಲೊಬ್ಬಳೇ
ಮೃತ್ಯುವಿನ ಜೊತೆಗೆ ಯಾ ದೇವರೊಡನೊಬ್ಬಳೇ ನಿಂತುಕೊಂಡಾಗ
ಪ್ರತ್ಯೇಕವಾಗಿ ನಿಃಶಬ್ದ ನೈರಾಶ್ಯ ಗಿರಿಸಾನುವಿನ ಇಳಿಕಲಲ್ಲಿ
ಒಬ್ಬಳೇ ನಿಲಬೇಕು ಮೃತ್ಯುವಿನ ಜೊತೆಗೆ ಮೇಣ್ ತನ್ನೊಡನೆ,
ದೈವದೊಡನೆ

ಕಾಲಕೂ ನಿಷ್ಕಾಲಕೂ ನಡುವಿನೊಂದಂಚನೇರಿ ನಿಂತತೆ
ಅಸ್ತಿತ್ವವಳಿಯ ಬೇಕಿಲ್ಲವೆ ಪುನಾರಚಿಸಬೇಕು ಬುಡವ
ನೆಲಗಟ್ಟನೆಂಬಂಥ ಸಂದರ್ಭದಲ್ಲವಳು ತಾನೊಬ್ಬಳೇ
ಗೆಲ್ಲಬೇಕಿಲ್ಲದಿರೆ ಪಾತಾಳದಲಿ ಬಿದ್ದು ಸಾಯಬೇಕು.
ಆ ಗಳಿಗೆಯಲ್ಲಾವ ಮಾನವ ಸಹಾಯವೂ ಮುಟ್ಟದವಳನ್ನು
ಯಾವ ಅಂಗತ್ರಾಣ ಧಾರಿ ದೇವನು ಕೂಡ ನಿಂತಿರನು ಬಳಿಯಲ್ಲಿ
ಹೊಳೆಯುತ್ತ ರಕ್ಷಿಸಲು ಅವಳನಾದುರ್ಘರಾವಧಿಯಲ್ಲಿ ನೋಡದೋ.
ಮೊರೆಯಿಡದಿರಯ್ಯ ನೀ ಸಗ್ಗಕ್ಕೆ ಏಕೆಂದರವಳೊಬ್ಬಳೇ ತನ್ನನು
ಸಲಹಿಕೊಳಬಲ್ಲಳೇಕೆಂಬೆಯಾ ಕೇಳು ನಿಃಶಬ್ದ ಶಕ್ತಿಯಿದಿತ್ತ
ಬುದ್ಧಿಪೂರ್ವಕವಾಗಿ ಈ ರೂಪವನು ತಾಳಿ ದೈವಾಜ್ಞೆಯನು ಹೊತ್ತು
ಬಂದುದಿಲ್ಲಿಗೆ; ಸುವಿಜ್ಞಾತ ದೈವೇಚ್ಛೆಯವಳಲ್ಲಿ ಮಾನವ ರೂಪತಾಳಿ
ಬಂದಿರಲು ತನ್ನನೂ ಜಗವನೂ ರಕ್ಷಿಸಲು ಬಲ್ಲಳಾ ಅವಳೊಬ್ಬಳೇ.

ಅವರು ಮೊದಲೇ ತಿಳಿದ ಸಂಗತಿಯೀಗ ನಿಜವಾಗಿ ಪರಿಣಮಿಸಿದೆ. ಸ್ವತಃ ಅವರೇ ಈಗ ಇಲ್ಲ. ಅವರು ಬರೆದಂತಾಯಿತು.

ಅದೇ ಮಾತನ್ನು ಮಾತೃಶ್ರೀಯ ಕಡೆಯಿಂದಲೂ ಹೇಳಬಹುದು. ಅವಳೂ ಇಲ್ಲಿ ನಾನು ಯಾರೆಂಬುದನ್ನೂ ಏತಕ್ಕಾಗಿ ಇರುವೆನೆಂಬುದನ್ನೂ ಮೊದಲೇ ಅರಿತಿದ್ದಳು. ಬಹಳ ವರ್ಷಗಳ ಹಿಂದೆ ಅವಳು ತನ್ನ ದಿನಚರಿಯಲ್ಲಿ ಅವಳು ಬರೆದಿದ್ದಳು:

25-9-1914

"ಪ್ರಭು ಸಂಕಲ್ಪವ ಮಾಡಿಹ ನೀನವ
ನಡೆಯಿಸು: ಹೊಸ ಬೆಳಕಾವಿರ್ಭಸುವು-
ದಿಳೆಯಲಿ, ಹೊಸ ಜಗ ಹುಟ್ಟುವುದಲ್ಲದೆ
ಘೋಷಿಸಿದೆಲ್ಲವು ಪೂರ್ತಿಯಾಗುವುವು".

ಅವಳು ತನ್ನ ಖಾಸಗಿ ಪುಸ್ತಕದಲ್ಲಿ ಇದನ್ನು ಬರೆದ ಮೇಲೆ ಅನೇಕ ವರ್ಷಗಳು ಕಳೆದವು. ಆಮೇಲವಳು ಪಾಂಡಿಚೇರಿಗೆ ಬಂದು

ಶ್ರೀ ಅರವಿಂದರೊಡನೆ ತನ್ನ ಕೆಲಸವನ್ನು ಆರಂಭಿಸಿದಳು. ಅನಂತರ ಅವಳೊಬ್ಬಳನ್ನೇ ಬಿಟ್ಟು ಅರವಿಂದರು ನಿರ್ವಾಣ ಹೊಂದಿದರು. ಅವಳ ಕೆಲಸ ಹೆಚ್ಚಾಯಿತು. ಒಬ್ಬಳೇ ಅವಳು ಕೆಲಸ ಮಾಡಿದಳು; ಒಬ್ಬಳೇ ಹೋರಾಡಿದಳು; ಏಕಾಂಗಿನಿಯಾಗಿಯೇ ಅವಳು ಗೆದ್ದಳು. ಉನ್ನತಸ್ತರದ ಅತಿಮಾನಸ ಪ್ರಜ್ಞೆಯು ಭೂಮಿಗಿಳಿದು ಬರಬೇಕಾಗಿತ್ತು. 1956ರ ಫೆಬ್ರವರಿ 29ರಂದು ಅವಳು ಧೈರ್ಯವಾಗಿ ಸಾರಿದಳು:

"ಪ್ರಭುವೇ ನೀ ಸಂಕಲ್ಪವ ಮಾಡಿಹೆ
ನಡೆಸುವೆ ನಾನದ: ಭೂಮಿಯಲಿ
ಪ್ರಭೆ ಹೊಸದೊಂದುದಯಿಸಿಹುದು. ಹೊಸಜಗ
ಹುಟ್ಟಿದೆ, ಮೊದಲೇ ಕೊಟ್ಟಂಥ
ವಚನಗಳಿಂದಿಗೆ ಸಫಲತೆ ಪಡೆದವು
ನಿಶ್ಚಿತ ನಿಶ್ಚಿತ ಹೊಸ ಪಂಥ".

ಅತಿಮಾನಸ ಶಕ್ತಿಯು ಭೂಮಿಯ ಆವರಣದೊಳಗಿಳಿದಿದೆ. ಅದು ಕೆಲಸಮಾಡಲಾರಂಭಿಸಿದೆ.

"ಮಾನವೇತಿಹಾಸದ ಅತಿ ದೊಡ್ಡ ಘಟನೆ ಘಟಿಸಿದೆ. ಹೊಸ ಬೆಳಕು ಜಗತ್ತಿಗಿಳಿದು ಬಂದಿದೆ; ಅದರ ವಿಕಾಸಕ್ಕದು ಉತ್ಕ್ರಿಯ ತತ್ವವಾಗಿ, ಅದರೊಳಹೊಕ್ಕು, ಅದರ ಮೇಲೆ ತಾನು ಅನಂತ ಕಾಲ ತನ್ನ ಪ್ರಶಾಸನವನ್ನು ನಡೆಸುವುದು.... ಆದುದರಿಂದಲೇ ಮಾತೃಶ್ರೀಯು ಹೊಸ ಮಾನವನ ಆಗಮನಕ್ಕೆ ಸಿದ್ಧತೆ ನಡೆಸುತಿದ್ದಾಳೆ; ಹೊಸ ಸಮಾಜದ, ಹೊಸ ನಾಗರಿಕತೆಯ, ಹೊಸ ಜಗತ್ತಿನ ಆಗಮನಕ್ಕೆ ಬೇಕಾದ ಪೂರ್ವ ತಯಾರಿಕೆಯನ್ನು ಮಾಡುತ್ತಿದ್ದಾಳೆ. ಆ ಮೂಲಕ ಅವಳು ಗುರುಗಳು ಕಂಡ ಭವಿಷ್ಯದ್ದರ್ಶನವನ್ನು ಹೀಗೆ ನಿಜವಾಗಿ ಮಾಡುವುದರಲ್ಲಿದ್ದಾಳೆ".

* * *

ಮಾತೃಶ್ರೀಯ ಜ್ಯೋತಿ

ಅದು ಒಳಗಣ್ಣಿಗೆ ಮಾತ್ರ ಕಾಣುವ ಜ್ಯೋತಿ. ಅದನ್ನು ಶಬ್ದಗಳಿಂದ ಹೇಳಬಾರದು; ಮನಸ್ಸು ಊಹಿಸಲಾರದು. ಅನುಭವ ಹೊಂದಿದವರಿಗೆ ಮಾತ್ರ ಅದು ಗೊತ್ತು. "ಅದು ಮಡಿ ಮಾಡುತ್ತದೆ, ಹೊಳೆಯಿಸುತ್ತದೆ. ಪರಮ ಸತ್ಯದ ಸರ್ವಸಾರವನ್ನೂ ಶಕ್ತಿಯನ್ನೂ ಕೆಳಗೆ ತರುತ್ತದೆ ಮತ್ತು ಆ ಮೂಲಕ ಪರಿವರ್ತನೆಯನ್ನು ಸಾಧ್ಯಗೊಳಿಸುತ್ತದೆ."

ಜಗತ್ತಿನ ಮಹಾತ್ಮರೆಲ್ಲರೂ ದಿವ್ಯಜ್ಯೋತಿಯನ್ನು ಉಲ್ಲೇಖಿಸಿದ್ದಾರೆ. ಅವರದನ್ನು ವರ್ಣಿಸಲು ಯತ್ನಿಸಿದ್ದಾರೆ ಮತ್ತು ಅದರಿರುವಿಕೆಯನ್ನು ನಂಬದಿರಬಾರದೆಂದು ನಮ್ಮಲ್ಲಿ ಬೇಡಿಕೊಂಡಿದ್ದಾರೆ. ಶ್ರೀ ಅರವಿಂದರೆಂದಂತೆ, "ಎಲ್ಲ ಜ್ಯೋತಿಗಳೂ ಮಾತೃಶ್ರೀಯಿಂದ ಹೊರಬಿದ್ದ ಅವಳ ಜ್ಯೋತಿಗಳೇ".

ನಾವು ಆಗಲೇ ಮಾತೃಶ್ರೀಯ ಶಕ್ತಿಗಳನ್ನು (ಸಿದ್ಧಿಗಳನ್ನು) ಹೇಳಿಬಿಟ್ಟಿದ್ದೇವೆ. ಆ ಶಕ್ತಿಗಳನ್ನೂ ಈ ಜ್ಯೋತಿಯನ್ನೂ ಬೇರ್ಪಡಿಸಲು ಸಾಧ್ಯವಿಲ್ಲ. ಅವುಗಳ ಕೃತ್ಯಗಳೇನೋ ಬೇರೆ ಬೇರೆ — ಅವುಗಳ ಬಳಕೆಯೂ ಬೇರೆ ಬೇರೆ ಉದ್ದೇಶಗಳಿಗಾಗಿ. ಹಾಗೇ ಮಾತೃಶ್ರೀಯ ಶಕ್ತಿಗಳ ನೆರವನ್ನು ನಾವು ಪಡೆಯಬಹುದು ಮತ್ತು ಬಯಸಿದರೆ ನಾವು ಅವಳ ಜ್ಯೋತಿಯನ್ನೂ ದೊರಕಿಸಿಕೊಳ್ಳಬಹುದು. ಆದರೆ ಆ ಬಯಕೆಯು ಗಿಡ ಮರಗಳು ಸೂರ್ಯನ ಬೆಳಕಿಗಾಗಿ ಮಿಡುಕಾಡುವುದರಲ್ಲಿ ಕಂಡುಬರುವಷ್ಟಾದರೂ ಸತತವೂ ಉತ್ಸಾಹಯುಕ್ತವೂ ಆಗಿರಬೇಕು. ಮಾತೃಶ್ರೀ ಅದನ್ನು ಈ ಪ್ರಕಾರ ವರ್ಣಿಸುತ್ತಾಳೆ:

"ಕಾಡುಗಳಲ್ಲಿ ಮರಗಿಡಗಳು ಹೇಗೆ ಏನಾದರೂ ಮಾಡಿ ಬೇರೆ ಬೇರೆ ರೀತಿಯಿಂದ ತಮ್ಮ ಎಲೆಗಳನ್ನೂ ಶಾಖೆಗಳನ್ನೂ ಸೂರ್ಯಜ್ಯೋತಿ ತಮ್ಮ ಮೇಲೆ ಬೀಳಲೆಂದು ನೀಡುವುದನ್ನು ನೀವು ನೋಡಿಲ್ಲವೇ ? ಅದು ಅವುಗಳ ಆಂತರಿಕ ಬಯಕೆಯ ಭೌತಿಕ ಸಂಜ್ಞೆ : ಮನುಷ್ಯರಿಗಿಂತ ಹೆಚ್ಚು ದೃಢವಾಗಿ ಅವು ಬಯಸುತ್ತವೆ. ತಮ್ಮ ಭೌತದ್ರವ್ಯದಲ್ಲಿಯೇ ಅವುಗಳ ಈ ದೃಢ ಬಯಕೆ ಅಡಗಿದೆ. ಜ್ಯೋತಿಯೆಂದರೆ ದಿವ್ಯಜ್ಯೋತಿ; ಸೂರ್ಯನು ಪರಮಪ್ರಜ್ಞೆಯ ಸಂಕೇತ. ಮರಗಳೂ ಗಿಡಗಳೂ ಅಜ್ಞಾನಿಗಳು, ಅಂಧರು, ಸರಳರು—ಆಗಿರುವುದೇನೋ ನಿಜ. ಆದರೆ ತಮ್ಮ ಅಂತಃಪ್ರಜ್ಞೆಯಲ್ಲಿ ಅವು ನಿಜವಾದ ಬಯಕೆಗಾಗಿ ಚಡಪಡಿಸುತ್ತಿರುತ್ತವೆ. ಆದರಿಂದಲೇ ಅದು ಅಷ್ಟು ಬಲಿಷ್ಠವೂ ಸತತವೂ ಆಗಿರುತ್ತದೆ."

ಸೂರ್ಯನು ಹೊರಜಗತ್ತಿಗೆ ಜ್ಯೋತಿರ್ದಾತನಾಗಿರುವುದು ಹೇಗೋ ಹಾಗೇ ಮಾತೃಶ್ರೀಯು ಒಳಜಗತ್ತಿಗೆ ಜ್ಯೋತಿರ್ದಾತ್ರಿಯಾಗಿದ್ದಾಳೆ. ನಿನ್ನಲ್ಲಿರುವ ಒಳಗತ್ತಲನ್ನು ಕಳೆದು ಮಾತೃಜ್ಯೋತಿಯಿಂದ ಬಾಳನ್ನು ಬೆಳಗಿಕೊಳ್ಳಬೇಕೆನ್ನುವೆಯಾದರೆ ನೀನು ದೃಢವಾಗಿ, ಪ್ರಾಮಾಣಿಕವಾಗಿ ಮತ್ತು ಸತತವಾಗಿ ಬಯಸಬೇಕು. ಎಂಥ ಎಡರುತೊಡರುಗಳು ಬಂದರೂ ನೀನು ಬಯಸುತ್ತಲೇ ಹೋದರೆ ಸ್ವಲ್ಪ ಹೆಚ್ಚು ಕಡಿಮೆ ಕಾಲದಲ್ಲಿ ಈ ದಿವ್ಯಜ್ಯೋತಿಯು ನಿನ್ನಲ್ಲಿ ಹೊನಲಾಗಿ ಹರಿಯುವುದು, ಒಂದು ಕತ್ತಲು ಕೋಣೆಯಲ್ಲಿ ಸಾವಿರ ದೀಪಗಳನ್ನು ಹಚ್ಚಿಟ್ಟಂತೆ ನಿನಗೆ ತೋರುವುದು ಮತ್ತು ಆ ಝಗಝಗಿಸುವ ಪ್ರಕಾಶದಲ್ಲಿ ನಿನ್ನ ಚಿಕ್ಕದಾದ ಅಹಂಪ್ರಜ್ಞೆ ಉಳಿಯಲು ಶಕ್ಯವಾಗದು.

ಆದರೆ ಜ್ಯೋತಿಯನ್ನು ಪಡೆದು ಉಳಿಸಿಕೊಳ್ಳಬೇಕಾದರೆ ನೀನು ಸಿದ್ಧವೂ ಅರ್ಹವೂ ಆದ ಆಧಾರವಾಗಲು ತಕ್ಕ ಸ್ವೀಕರ್ತೃತ್ವವನ್ನು ಸಂಪಾದಿಸಿಕೊಂಡು ಸಿದ್ಧನಾಗಬೇಕು. ಅದಕ್ಕೆ ನೀನು ಅಗ್ನಿ ಪರೀಕ್ಷೆಗಳಲ್ಲಿ ಹೊಕ್ಕು ಹೊರಡಬೇಕು; ಅನೇಕ ಸನ್ನಿವೇಶಗಳ ಮೂಲಕ ಹಾದುಹೋಗಬೇಕು-- ನಾನಾ ವಿಧದ ತೊಂದರೆ-ಅಪಾಯಗಳ, ದೈನ್ಯ-

ಶೋಷಣೆಗಳ, ಸೋಲು-ನಿರಾಶೆಗಳ ಹಾವಳಿಯಲ್ಲಿ ನುಗ್ಗಿ ಪಾರಾಗಬೇಕು. ಆಗ ನೀನು ಪಾತ್ರತೆಯನ್ನು ಪಡೆಯುವೆ. ಆದರೆ ನೀನು ಅಸಹಿಷ್ಣು ವಾಗಬಾರದು, ಹೆದರಬಾರದು, ನಿರಾಶನಾಗಿ ಪ್ರಯತ್ನವನ್ನು ಬಿಡಬಾರದು. ಬಹಳ ಕಷ್ಟವಿಲ್ಲದೆ ನೀನು ಇದನ್ನು ಸಾಧಿಸಲು 'ಸೂರ್ಯಪ್ರಕಾಶ ಕ್ಕೊಳಗಾದ ಪಥವನ್ನು' ನೀನು ಬಿಡದೆ ಹಿಡಿದುಕೊಂಡಿದ್ದರೆ ಸರಿ-ಅಂದರೆ ಪ್ರಸನ್ನನೂ ಲಘುಭಾವಸಂಪನ್ನನೂ ಆಗಿರುವುದು—ಹಾಗಾಗಿರಬೇಕಾದರೆ ಕಷ್ಟಗಳೂ ಅಪಾಯಗಳೂ ಕಳೆದುಹೋಗುವ್ರವು ಎಂದು ಅರಿತಿರಬೇಕು; ಯಾವಾಗಲೂ ಎಲ್ಲ ಪರಿಸ್ಥಿತಿಯಲ್ಲೂ ಮಾತೃಶ್ರೀಯನ್ನು ಅವಲಂಬಿಸಿರಬೇಕು ; ಗುರುಗಳ ಮಾತಿನಲ್ಲಿ ನಿಃಶಂಕ ಶ್ರದ್ಧೆಯನ್ನಿಟ್ಟಿರಬೇಕು. "ಕಷ್ಟಗಳು ಬರುತ್ತವೆ, ಹೋಗುತ್ತವೆ ; ಆದರೆ ಮಾತೃಶ್ರೀ ನಿನ್ನೊಡನಿರುವುದರಿಂದ, ಜಯ ನಿನಗೆ ಖಚಿತ". ನೀನೀ ಶ್ರದ್ಧೆಗಂಟಿಕೊಂಡರೆ ನೀನು ಗೆಲ್ಲುವುದು ಖಂಡಿತ. ನಿನ್ನ ಪ್ರಯತ್ನಗಳಷ್ಟನ್ನೇ ಅವಲಂಬಿಸುವುದಲ್ಲ ; ಮಹಾತಾಯಿಗೆ ಶರಣಾಗತನಾಗುವುದು. ನಿನ್ನ ವಶಕ್ಕೈಯಲ್ಲಿರಿಸುವುದು - ಸರಿಯಾದ ಕ್ರಮ. ಆದರದು ಪರಿಪೂರ್ಣ ಆತ್ಮಸಮರ್ಪಣೆಯಾಗಿರಬೇಕು. ಪರಿಪೂರ್ಣವೆಂದರೆ ಶ್ರೀ ಅರವಿಂದರ ಮಾತಿನಲ್ಲಿ 'ಸಮಗ್ರ'. ನಿನ್ನ ಆತ್ಮ ಸಮರ್ಪಣೆಯು ನಿಜವೂ ಸ್ಥಾಯಿಯೂ ಆದಾಗ ಈ ದಿವ್ಯಜ್ಯೋತಿಯು ನಿನ್ನಲ್ಲಿ ಬಂದು ನೆಲೆಸುವುದು.

ಈ ಜ್ಯೋತಿಯು ಕದ ಮುಚ್ಚಿದ ನಿನ್ನೆದೆಯ ಬಾಗಿಲನ್ನು ತೆರೆಯುವುದು ಮತ್ತು ನಿನ್ನ ಇಡಿ ಇರವನ್ನು ಬೆಳಗುವುದು (ಜ್ಞಾನಮಯವನ್ನಾಗಿ ಮಾಡುವುದು). ಕವಿಯ ಮಾತಿನಲ್ಲಿ—ಸಣ್ಣ ಹುಲ್ಲೆಳೆಯ ಮೇಲಿರುವ ಹೇಳ ಹೆಸರಿಲ್ಲದ ಇಬ್ಬನಿಯು ಅತಿ ದೂರದಲ್ಲಿರುವ ಸೂರ್ಯನನ್ನು ಬಯಸುತ್ತದೆ ; ವಾತ್ಸಲ್ಯದಿಂದ ಸೂರ್ಯನು ತನ್ನ ಕಿರಣಗಳಿಂದ ಆ ಇಬ್ಬನಿಯ ಹೃದಯವನ್ನು ಹೊಕ್ಕು ಮುಟ್ಟಿದೊಡನೆಯೇ ಅದು ಅಪೂರ್ವವಾದ ಒಂದು ಪ್ರಕಾಶಮಯ ವಜ್ರದಂತೆ ಕಣ್ಣು ಕೋರಯಿಸುವ ಹಾಗೆ ಝಗಝಗಿಸುವುದು. ದಿವ್ಯಮಾತೆಯ ಜ್ಯೋತಿಯು ನಿನ್ನನ್ನು ಮುಟ್ಟಿದೊಡನೆ ನೀನೂ ಹಾಗೇ ಆಗುವೆ. ಈ ಜ್ಯೋತಿಯಿಂದ ನಿನ್ನ

ದೃಷ್ಟಿಯು ವಿಸ್ತರಿಸಿ ದೂರದ ಕ್ಷಿತಿಜವನ್ನು ದಾಟಿ ಎಂದೆಂದೂ ಕಾಣದಂತಹ ಸಂಗತಿಗಳನ್ನು ಕಾಣುವೆ. ಜಡದಲ್ಲಿ ಜೀವವನ್ನು ಕಾಣುವೆ; ಆಭಾಸಿಕ ಕುರೂಪಿಯಲ್ಲಿ ಸುರೂಪವನ್ನು ಕಾಣುವೆ; ಅಚೇತನವಾದ ಮರದ ಕೊರಡಿನಲ್ಲಿ ಚೇತನೆ ಇರುವುದನ್ನು ಕಾಣುವೆ: ಹೂವುಗಳ ಎಸಳುಗಳಲ್ಲಿ ಪ್ರೀತಿ ಅರಳುವುದನ್ನು ಕಾಣುವೆ: ಕಣ್ಣೀರ ಹಿಂದೆ ಮುಗುಳ್ನಗೆಯನ್ನು ಕಾಣುವೆ; ಗಾಯದ ಹಿಂದೆ ಅದು ಮಾಯುವುದನ್ನೂ, ನಷ್ಟದ ಹಿಂದೆ ಲಾಭವನ್ನೂ ನೀನು ಕಾಣುವೆ. ಇದು ಒಂದು ಅದ್ಭುತವಾದ ಶೋಧ. ಅದು ನಿನ್ನಲ್ಲಿ ಎಷ್ಟು ವಿದ್ಯೆಯಿದೆ, ಎಷ್ಟು ಬುದ್ಧಿಯಿದೆ-ಎಂಬುದನ್ನು ಆವರಿಸಿರದು—ನೀನು ಯಾವ ಬಾಹ್ಯ ಪರಿಸ್ಥಿತಿಯಲ್ಲಿರುವೆ ಎಂಬುದನ್ನು ಅವಲಂಬಿಸದು.

ಮಾತೃಶ್ರೀಯ ದಿವ್ಯಜ್ಯೋತಿ ಈ ಬಗೆಯದು. ಅದು ಅವಳಿಗೆ ಹೇಗೆ ಲಭ್ಯವಾಯ್ತು? ಅವಳದಕ್ಕೆ ಹೇಗೆ ಆಕರವಾದಳು?

ಶ್ರೀ ಅರವಿಂದರದನ್ನೇ ಹೇಳಿದ್ದಾರೆ:

"ಮಾತೃಶ್ರೀಯ ಪ್ರಜ್ಞೆಯು ದಿವ್ಯ (ದೇವತಾತ್ಮಕ) ; ಅದರಿಂದ ಬರುವ ಜ್ಯೋತಿಯು ದಿವ್ಯ ಸತ್ಯದ್ದು (ಪರಮ ಸತ್ಯದ ಬೆಳಕು). ಮಾತೃಶ್ರೀಯ ಜ್ಯೋತಿಯನ್ನು ಸ್ವಾಗತಿಸಿ ಸ್ವೀಕರಿಸಿ ಅದರಲ್ಲಿಯೇ ಬದುಕುವಾತನು ಮಾನಸ, ಜೈವಿಕ ಮತ್ತು ಕಾಯಿಕ (ಭೌತಿಕ) ಎಂಬೆಲ್ಲ ಪ್ರಜ್ಞಾಸ್ತರಗಳಲ್ಲೂ ಸತ್ಯವನ್ನು ನೋಡಲಾರಂಭಿಸುವನು. ಅದಿವ್ಯವಾದುದೆಲ್ಲವನ್ನೂ ಅವನು ಪರಿತ್ಯಜಿಸುವನು........ಆದರಿಂದಲೇ ಯಾವಾಗಲೂ ಮಾತೃಶ್ರೀಯ ಅವಳ ಜ್ಯೋತಿಯ ಹಾಗೂ ಶಕ್ತಿಯ ಸಂಪರ್ಕವನ್ನಿಟ್ಟುಕೋ ಎಂದು ನಾನು ಯಾವಾಗಲೂ ಹೇಳುತ್ತಿರುವುದು; ಹಾಗಿದ್ದರೆ ಮಾತ್ರ ಈ ಗೊಂದಲ ಮತ್ತು ಅಸ್ಪಷ್ಟತೆಗಳಿಂದ ಹೊರಬಿದ್ದು ನೀನು ಮೇಲಿಂದ ಬರುವ ಮಹಾಸತ್ಯವನ್ನು ಸ್ವಾಗತಿಸಲು ಸಮರ್ಥನಾಗುವೆ".

ಆದರೆ ನನಗೂ ನನ್ನಂತೆ ನಿರಾಶ ಸ್ಥಿತಿಯಲ್ಲಿರುವ ಎಲ್ಲರಿಗೂ ಹತ

ಭಾಗ್ಯರಿಗೂ, ದೇಹ-ಮನಗಳಲ್ಲಿ ಜುಗುಪ್ಸಿತವರಿಗೂ, ಆಶಾಭಂಗ ಹೊಂದಿದವರಿಗೂ ಈ ಸಂದೇಶ ಯಾವ ಉಪಯೋಗಕ್ಕೆ ಬರುತ್ತದೆ ? ಎಂದು ಕೆಲವರು ಕೇಳುತ್ತಾರೆ. ಇಂಥವರು ಅಂಥ ಜ್ಯೋತಿಯ ಸ್ವರ್ಗೀಯ ವರವನ್ನು ಹೇಗೆ ಕನಸಿನಲ್ಲಿಯಾದರೂ ಕಂಡಾರು ? ಸುದೈವಿಗಳಾದ ಒಬ್ಬಿಬ್ಬರಿಗಷ್ಟೇ ಅದು ಲಭ್ಯ—ತಮ್ಮಂಥವರಿಗಲ್ಲ—ಎನ್ನುತ್ತಾರೆ ಅವರು.

ಆದರೆ ಮಾತೃಶ್ರೀಯೇ ಶೋಕ-ನಿರಾಶೆಗಳ ಈ ಸ್ಥಿತಿಗಳೆಲ್ಲವುಗಳ ಮೂಲಕವೂ ಹಾದುಹೋಗಬೇಕಾಗಿ ಬಂದಿತ್ತು. ಅವಳು ಎಲ್ಲ ಕಷ್ಟ ಕಾರ್ಪಣ್ಯಗಳನ್ನೂ ಸಹಿಸಬೇಕಾಗಿತ್ತು. ಪ್ರಶ್ನಕಾರರಿಗೆ ಹೇಳಿದ್ದನ್ನವಳು ಹೇಳಲು ತಕ್ಕ ಅಧಿಕಾರಿಣಿಯಾಗಿದ್ದಾಳೆ: "ಕೇಳಿರಿ, ಎಲ್ಲರೂ ಕೇಳಿರಿ-ಅಧಃಪಾತಿತರಾದ, ದುಃಖಶೋಕ ಸಮನ್ವಿತರಾದ, ಎಂದೂ ತಲೆಯೆತ್ತಲಾರೆವೆಂದುಕೊಂಡಿರುವ ನೀವೆಲ್ಲರೂ—ಒಮ್ಮೆ ನಿಮ್ಮಂತೆಯೇ ನರಳುತ್ತಿದ್ದ, ನಿಮ್ಮೆಲ್ಲ ತಾಪತ್ರಯಗಳನ್ನೂ ಬಲ್ಲ ಮತ್ತು ನಿಮ್ಮ ಬಗ್ಗೆ ನಿಜವಾದ ಸಹಾನುಭೂತಿಯುಳ್ಳ ನಾನು ಹೇಳುವುದನ್ನು ಕೇಳಿರಿ. ನೀವು ಅನುಭವಿಸುತ್ತಿರುವ ಎಲ್ಲ ನೋವು ನುರಿ-ಗೋಳುಗಸಣಿಗಳನ್ನೂ ನಾನು ಅನುಭವಿಸಿದ್ದೆ. ಸುಟ್ಟುರಿವ ಬಿಸಿಲಿನ ಕೆಳಗೆ ಅಪಾರವೂ ಕ್ರೂರವೂ ಆದ ಮರುಭೂಮಿಯನ್ನು ನಾನು ದಾಟಬೇಕಾಯಿತು. ಅತ್ಯಂತ ಏಕಾಂಗಿನಿಯಾಗಿರುವ ಬಾಳನ್ನು ನಾನು ಬಾಳಬೇಕಾಯಿತು; ಹೃದಯದ ಅಸಹ್ಯ ತಿಕ್ತವಾದ ಅನಾಥತೆಯನ್ನೂ, ದಾರಿದ್ರ್ಯವನ್ನೂ ಅನುಭವಿಸಬೇಕಾಯ್ತು: ಒಡೆಯಲಾರದ ಸಂದೇಹದ ಗಂಟುಗಳೊಳಹೊಕ್ಕು ಹೊರಡಬೇಕಾಯ್ತು-ಹೃದಯವಿದ್ರಾವಕವಾದ ಸಂಘರ್ಷ-ಹೋರಾಟಗಳಲ್ಲಿ ಹಾದುಹೋಗಬೇಕಾಯ್ತು........". ಆದರೀಗ ಅವಳು ಸ್ವಾನುಭವದಿಂದ ಹೇಳುತ್ತಾಳೆ: "ಸ್ವಚ್ಛವಾದ ಉಷಃಕಾಲದಲ್ಲಿ ಕೊನೆಗೊಳ್ಳದ ಕತ್ತಲಿನಿರುಳು ಇರಲಿಲ್ಲ; ಇರುಳು ಹೆಚ್ಚು ಅಂಧಕಾರಮಯವಾಗಿದ್ದಷ್ಟೂ ಮುಂಬೆಳಗು ಹೆಚ್ಚು ಸ್ವಚ್ಛವಾಗಿರುತ್ತಿತ್ತು. ಸೂರ್ಯಜ್ಯೋತಿಯಿಂದ ಹೊಡೆದೋಡಿಸಲ್ಪಡದಂಥ ಮಬ್ಬಿಲ್ಲ. ಬೆಳಗಿನ ಮುಗುಳ್ನಗೆಯೊಡನೆ ಆರಿಹೋಗದಂಥ ಕಣ್ಣೀರಿಲ್ಲ. ವಸಂತ ಅನುಸರಿಸಿಬಾರದ ಶಿಶಿರವಿಲ್ಲ".

"ವಿಧಿಯಿಂದಲೋ ನಿನ್ನ ಕರ್ಮಫಲದಿಂದಲೋ ನೀನು ದುರ್ದೆಶೆಗೆ ಬಿದ್ದಿದ್ದರೂ ನೀನು ನಿರಾಶನಾಗಬಾರದು. ದೇವರ ಅನುಗ್ರಹವೂ, ಪ್ರೀತಿಯೂ ನೀನಿರುವ ಸ್ಥಿತಿಯಲ್ಲಿಯೇ ನಿನ್ನ ಮೇಲೆ ಇಳಿದುಬರುವುವು. ವಿಘ್ನಾಗ್ನಿಯಲ್ಲಿ ಸುಟ್ಟು ನೀನು ಶುದ್ಧವಾಗಿರುವ ನೀನು ಮೇಲೇಳುವುದನ್ನು ಯಾರು ತಡೆಯಬಲ್ಲರು ?"

"ನೀನು ನಿರ್ಜನವೂ ನೀರವವೂ ಆದ ಪ್ರದೇಶದಲ್ಲಿರುವಾಗ ನಿನ್ನ ಕಿವಿಯನ್ನು ತೆರೆದಿದ್ದರೆ ಮೌನದ ಮಧುರ ಕರೆಯನ್ನು ಕೇಳುವೆ. ನಿನ್ನ ಕಿವಿಗಳು ಹೊರಗಿನ ಹುಸಿ ಹೊಗಳಿಕೆಗಳನ್ನು ಕೇಳುವ ಅಭಾಸವುಳ್ಳದ್ದಾಗಿರಬೇಕು; ಆದರೀಗ ನೀರವತೆಯ ಆಳವಾದ ಒಡಕುದನಿ ನಿನ್ನ ಆತ್ಮವನ್ನು ಶಾಂತಗೊಳಿಸುವುದು. ನಿಶ್ಚಲವೂ ನಿಷ್ಪ್ರಭವೂ ಆದ ರಾತ್ರಿಯಲ್ಲಿ ಅಲೆದಾಡುತ್ತಿರುವಾಗ ಅಲ್ಲಿ ಇಲ್ಲಿ ನಿನಗೆ ಕೆಲ ಅಮೂಲ್ಯ ರತ್ನಗಳು ಸಿಕ್ಕುವುವು; ನಿನ್ನ ನಿರ್ಧನ ಜೇಬಿನಲ್ಲಿ ಅವನ್ನು ಸಂಗ್ರಹಿಸಿ ಇಡು. ಅವು ಉಪಯೋಗಕ್ಕೆ ಬರುವುವು. ಹೃದಯವನ್ನು ಪ್ರಾಮಾಣಿಕವಾಗಿ ಇಟ್ಟುಕೊಳ್ಳುವುದನ್ನು ಮಾತ್ರ ಬಿಡಬೇಡ— ಅತಿ ಕನಿಷ್ಟವಾದವುಗಳ ನಡುವೆಯೂ ನಿನಗೆ ಅತಿ ವರಿಷ್ಟವಾದವುಗಳು ಸಿಗುತ್ತವೆ".

"ಕತ್ತಲಿಗಂಜದಿರು: ದುರ್ದೈವಕ್ಕೆ ಹೆದರಬೇಡ. ಏಕೆಂದರೆ ಅದರಿಂದಲೇ ಮಾತೃಶ್ರೀಯ ಗುಪ್ತ ಶುಕ್ಲಜ್ಯೋತಿ ಮೂಡಿ ಬರುವುದು".

"ಸಡಿಲ ಬಿಡದಿರು. ಬಿಗಿಯಾಗಿ ಹಿಡಿದುಕೋ. ಎಲ್ಲಾ ಕಳೆದು ಹೋಯಿತೆಂದು ತೋರುವಾಗಲೇ ಎಲ್ಲವೂ ಉಳಿಯುವಂತಾಗುತ್ತದೆ".

ಭೌತ ಜಗತ್ತಿನಲ್ಲಿ ನಾವು ಬಣ್ಣಗಳ ಲೀಲೆಯನ್ನು ನೋಡುತ್ತೇವೆ. ಬಾನು ನೀಲಿ. ನಮ್ಮನ್ನು ಸಜೀವವಾಗಿ ಇಡಲೆಂದು ಸೂರ್ಯನ ಬಿಳಿ ಬೆಳಕು ನಮ್ಮನ್ನು ಬಂದು ಮುಟ್ಟುತ್ತದೆ. ಆಧ್ಯಾತ್ಮಿಕ ಪ್ರಪಂಚದಲ್ಲಿಯೂ ಹೀಗೇ ಆಗುತ್ತದೆ. ಆಧ್ಯಾತ್ಮಿಕ ಸಾಕ್ಷಾತ್ಕಾರ ಪಡೆದವರ ಪ್ರಕಾರ ನಿತ್ಯವೂ ಅನಂತವೂ ಆದ ಸತ್ಯದ ಬಣ್ಣ ನೀಲಿ, ಮತ್ತು ದಿವ್ಯ ಮಾತೃಶ್ರೀಯ

ಬಣ್ಣ ಬಿಳಿ— ಅದು ನಮ್ಮನ್ನು ಮುಟ್ಟಿ ಸಜೀವವಾಗಿ ಇಡುತ್ತದೆ. ಶ್ರೀ ಅರವಿಂದರು ತಮ್ಮ ಬಣ್ಣ ನೀಲವೆಂದೂ ಮಹಾ ಮಾತೆಯ ಬಣ್ಣ ಬಿಳಿಯೆಂದೂ ದೃಢಪಡಿಸುತ್ತಾರೆ.

ಒಮ್ಮೆ ನೀನು ಆ ಬೆಳಕಿನಲ್ಲಿ ಹೊಕ್ಕು ಹೊರಟರೆ ನಿನಗೆ ತುಲನಾತ್ಮಕವಾಗಿ ಭೌತಿಕವಾದ ಸೂರ್ಯ ಜ್ಯೋತಿಯು ಮಂದವೂ ಕಪ್ಪು ಕಪ್ಪೂ ದುರ್ಭಲವೂ ಆಗಿ ತೋರುವುದು ಎಂದು ಮಾತೃಶ್ರೀ ಹೇಳಿದ್ದಾಳೆ.

* * *

ಮಾತೃಶ್ರೀಯ ವಾತ್ಸಲ್ಯ

"ಸಾರಸ್ವರೂಪದಲ್ಲಿ ಪ್ರೀತಿ ಇರುವುದು ಐಕ್ಯಭಾವದಿಂದ ಹುಟ್ಟುವ ಸಂತಸದಲ್ಲಿ— ಸಾಮರಸ್ಯದ ಆನಂದವೇ ಅದರ ತುತ್ತತುದಿ". ಮಗುವಿನ ಮೇಲಿರುವ ಮಾತೃಪ್ರೇಮವು ದೈವಿಕವೂ ಗಾದೆ ಮಾತೂ ಆಗಿದೆ. ಮಗುವನ್ನು ಸಜೀವವಾಗಿ ಇಟ್ಟಿರುವುದು ಅವಳ ವಾತ್ಸಲ್ಯವೇ. ಭಕ್ತಕವಿ ರಾಮಪ್ರಸಾದನು,

"ಬರಿದೆ ಮಗುವನು ಹಡೆವ ತಾಯಿ ತಾಯಲ್ಲ
ಎದೆಯೊಲುಮೆಯಲಿ ಹೆಸರ ಸಾರ್ಥಕತೆಯವಳ"

ಎಂದು ಹಾಡಿದ್ದಾನೆ.

ತಾಯಿಗೆ ಪಕ್ಷಪಾತವೆಂಬುದಿಲ್ಲವೇ ಇಲ್ಲ. ಎಲ್ಲ ಮಕ್ಕಳೂ ಅವಳಿಗೆ ಸೇರಿದಂಥವು. ಅವಳ ತಾಯ್ತನದ ಎಚ್ಚರಿಕೆಯನ್ನೂ ವಾತ್ಸಲ್ಯವನ್ನೂ ಪಡೆಯಲು ಎಲ್ಲವೂ ಸಮಾನಾರ್ಹತೆಯುಳ್ಳವುಗಳು. ಆದರೆ ಮಾನವ್ಯ ಮಾತೃವಿನ ವಾತ್ಸಲ್ಯವು ಪ್ರಮಿತ; ಅವಳ ಮಕ್ಕಳ ಸಂಖ್ಯೆಯೂ ಪ್ರಮಿತ. ಹಾಗಲ್ಲದೆ, ದಿವ್ಯಮಾತೆಯ ವಾತ್ಸಲ್ಯವು ಅಪ್ರಮಿತ ಮತ್ತು ಅವಳ ಮಕ್ಕಳೂ ಅಸಂಖ್ಯಾತ ಹಾಗೂ ಅನೇಕ ಸ್ವರೂಪದವುಗಳು. ಮಾತೃಶ್ರೀ ಹೇಳುತ್ತಾಳೆ— "ಎಲ್ಲರೂ ಒಬ್ಬಳೇ ಮಹಾತಾಯಿಯ ಮಕ್ಕಳು; ಅವಳ ವಾತ್ಸಲ್ಯವು ಅವರೆಲ್ಲರ ಮೇಲೂ ಒಂದೇ ಸಮನಾಗಿ ಹಬ್ಬಿದೆ. ಆದರೆ ಪ್ರತಿಯೊಂದು ಮಗುವಿಗೂ ಅವವರ ಸ್ವಭಾವ ಮತ್ತು ಸ್ವೀಕಾರ ಶಕ್ತಿಗಳಿಗನುಗುಣವಾಗಿ ಅವಳು ತನ್ನ ವಾತ್ಸಲ್ಯವನ್ನು ತೋರಿಸುತ್ತಾಳೆ".

ಪ್ರೀತಿಯೆಂದರೇನೆಂಬುದನ್ನು ನಾವೆಲ್ಲ ಬಲ್ಲೆವು; ಮಾತೃವಾತ್ಸಲ್ಯವೂ ನಮಗೆ ಗೊತ್ತು. ಆದರೆ ದಿವ್ಯಪ್ರೇಮವೆಂದರೇನು?

ಅದನ್ನು ಸ್ಪಷ್ಟವಾಗಿ ತಿಳಿದುಕೊಳ್ಳಲು ವಾತ್ಸಲ್ಯ ಮತ್ತು ದಿವ್ಯ ವಾತ್ಸಲ್ಯಗಳ ಬಗೆಗೆ ಮಾತೃಶ್ರೀ ಹೇಳಿದ್ದನ್ನು ಗಮನಿಸಬೇಕು.

"ವಾತ್ಸಲ್ಯವು ಅಪ್ರತಿಹತವಾದ ಒಂದು ಶಕ್ತಿ. ನಿತ್ಯಚೈತನ್ಯವು ತನ್ನೊಳಗಿಂದ ಅದನ್ನು ಕೆಳಗೆ (ಇಲ್ಲಿಗೆ) ಕಳಿಸಿದೆ. ಈ ಜಗತ್ತು ಅಸ್ಪಷ್ಟವೂ ಅಂಧಕಾರಮಯವೂ ಆಗಿದೆ. ಇದರಲ್ಲಿರುವ ಜೀವಿಗಳನ್ನೂ ಇದನ್ನೂ ದಿವ್ಯಚೈತನ್ಯದೆಡೆಗೆ ತಿರುಗಿ ತರುವುದೇ ಹಾಗೆ ಕಳಿಸಿರುವುದರ ಉದ್ದೇಶ. ಈ ಭೌತ ಜಗತ್ತು ಅಜ್ಞಾನ-ಅಂಧಕಾರಗಳ ದೆಶೆಯಿಂದ ದಿವ್ಯಚೈತನ್ಯವನ್ನು (ಪರಮಸತ್ಯವನ್ನು) ಮರೆತಿದೆ. ವಾತ್ಸಲ್ಯವು ಈ ಕತ್ತಲೆಡೆಗೆ ಬಂದಿತು; ಅಲ್ಲಿ ನಿದ್ರಿಸಿದ್ದ ಎಲ್ಲವನ್ನೂ ಎಚ್ಚರಿಸಿತು. ಅದು ಪಿಸುಮಾತಾಡಿತು. ಬೀಗ ಮುದ್ರೆಗೊಳಪಟ್ಟಿದ್ದ ಕಿವಿಗಳನ್ನು ತೆರೆಯಿಸಿತು. 'ಎಚ್ಚತ್ತು ನೋಡತಕ್ಕದ್ದೊಂದಿದೆ, ಬದುಕನ್ನು ಸಾರ್ಥಕಗೊಳಿಸುವ ವಸ್ತುವೊಂದಿದೆ— ಅದೇ ವಾತ್ಸಲ್ಯ!' ಈ ವಾತ್ಸಲ್ಯದ ಪ್ರಜ್ಞೆ ಉದಯಿಸಿದಾಗ ದಿವ್ಯಸತ್ಯದೆಡೆಗೆ ಪುನಃ ಮರಳುವ ಸಾಧ್ಯತೆ ಪ್ರಪಂಚವನ್ನು ಪ್ರವೇಶಿಸಿತು. ಈ ಸೃಷ್ಟಿಯು ವಾತ್ಸಲ್ಯದ ಮೂಲಕ ಮೇಲೆ ಮೇಲೇರುತ್ತ ದಿವ್ಯಸತ್ಯದ (ದೇವರ, ಈಶ್ವರನ ಅಥವಾ ಮಾತೃಶಕ್ತಿಯ) ಸಮೀಪಕ್ಕೆ ಚಲಿಸುತ್ತದೆ. ಇದಕ್ಕೆ ಪ್ರತಿಯಾಗಿ ಅವರ ದಿವ್ಯವಾತ್ಸಲ್ಯವೂ ಅನುಗ್ರಹಪ್ರಸಾದವೂ ಸೃಷ್ಟಿಯತ್ತ ಒಲಿಯುತ್ತದೆ".

ಹೀಗೆ ಪ್ರೀತಿ ಸಾರ್ಥಕವಾಗಲು ಎರಡು ಮಗುಲುಗಳಿವೆ: ಸೃಷ್ಟಿಯಿಂದ ದೇವರತ್ತ (ಅಧಿಯಜ್ಞದತ್ತ, ಈಶ್ವರನತ್ತ, ಪುರುಷೋತ್ತಮನತ್ತ) ಹರಿಯುವ ಭಕ್ತಿಪ್ರವಾಹವೊಂದು; ದೇವರತ್ತಣಿಂದ ಸೃಷ್ಟಿಯತ್ತ ಹರಿಯುವ ವಾತ್ಸಲ್ಯ ಪ್ರವಾಹವಿನ್ನೊಂದು. ಈ ಭಕ್ತಿಯೂ ವಾತ್ಸಲ್ಯವೂ ಮೂಲತಃ ಒಂದೇ. ಆದರೀ ಎದುರು ಬದುರಿನ ಪ್ರವಾಹಗತಿಯು ಅಗತ್ಯ. ಮೂಲ ಆಕಾರ ಮತ್ತು ಅದರಿಂದ ಸಿಡಿದು ದೂರವಾದ ಕಣಗಳು ಒಂದುಗೂಡಲು ಪರಸ್ಪರ ಆಕರ್ಷಣೆ ಬೇಕು: ಅಂಥ ಆಕರ್ಷಣೆ ಪರಸ್ಪರವಾಗಿ ಅವುಗಳೊಳಗೂ

ಬೇಕು. ಸಂಕುಚಿತವೂ ಸ್ವಾರ್ಥಪರವೂ ಆದ ಬೇಡಿಕೆಗಳ ದೆಸೆಯಿಂದ ಮಾನವ್ಯ ಪ್ರೀತಿಯು ವಿಕೃತವಾಗಿ ಹೋಗಿರುವುದು ಖೇದಕರ. ಮಾನವ ಪ್ರಪಂಚವಲ್ಲಲ್ಲದೆ ಇನ್ನೆಲ್ಲಿಯೂ ಇಂಥ ವಿಕಾರ ಕಂಡುಬರದು. ಮಾತೃಶ್ರೀ ಉವಾಚಃ.

"ವಾತ್ಸಲ್ಯದ ಚಲನವು ಮಾನವರಿಗೆ ಪರಿಸೀಮಿತವಲ್ಲ. ಅದು ಬಹುಶಃ ಮನುಷ್ಯೇತರ ಪ್ರಪಂಚದಲ್ಲಿ ಕಡಿಮೆ ವಿಕೃತವಾಗಿದೆ. ಹೂವುಗಳನ್ನೂ ಮರಗಳನ್ನೂ ನೋಡಿರಿ. ಸೂರ್ಯ ಮುಳುಗಿದಾಗ ಎಲ್ಲವೂ ನಿಃಶಬ್ದವಾಗಿರುವಾಗ ಕುಳಿತುಕೊಂಡು ಒಂದು ಕ್ಷಣ ನಿಸರ್ಗದೊಡನೆ ಸಂಪರ್ಕ ಬೆಳೆಸಿಕೊೞ: ಮರಗಳ ಬೇರುಗಳ ಕೆಳಗಿನ ಸ್ಥಳದಿಂದ ತಮ್ಮ ನಾರುಗಳ ಮೂಲಕ ಅವು ಅತ್ಯುನ್ನತವಾಗಿ ಹಬ್ಬಿದ ಶಾಖೆಗಳವರೆಗೆ ಮೇಲೇರುವುದನ್ನು ನೀವು ಅನುಭವಿಸುವಿರಿ. ಅದು ಅವುಗಳ ದೃಢವಾದ ಭಕ್ತಿಯ ಬಯಕೆಯ ಸಂಕೇತ. ಅದು ಜ್ಯೋತಿಯನ್ನೂ ಸುಖವನ್ನೂ ತರುವ ಬಯಕೆ........".

ಮಾನವರಲ್ಲಿಯೂ ಇದು ಸಾಧ್ಯವಾಗಬೇಕು. ಸ್ವಾರ್ಥದ ಪ್ರೀತಿಯ ಬದಲಿಗೆ ಸ್ವಾರ್ಥತ್ಯಾಗದ, ಸ್ವಾರ್ಥನಿಸ್ಪೃಹತೆಯ ಭಾವ ಮೂಡಬೇಕು. ಅದು ಎಲ್ಲವನ್ನೂ ದಾನ ಮಾಡುವ ಪ್ರತಿಫಲವನ್ನು ಬಯಸದ ಭಾವ ಅದು. ಮಾತೃಶ್ರೀ ಅದನ್ನು ಸಾಕಷ್ಟು ಚೆನ್ನಾಗಿ ಸಿದ್ಧಮಾಡಿತೋರಿಸಿದ್ದಾಳೆ. ಅದು ಶುದ್ಧವೂ ನಿಃಸ್ವಾರ್ಥವೂ ಆದ ಪ್ರೇಮ. ಅದು ಅವಳ ಸುಖಕ್ಕಾಗಿ ಅಲ್ಲ—ದಿವ್ಯ ಪ್ರೇಮವನ್ನು ಪ್ರಕಟಪಡಿಸುವುದಕ್ಕಾಗಿ. ಅದು ಅವಳಲ್ಲಿ ಚಿಕ್ಕಂದಿನಿಂದಲೂ ಇತ್ತು. ಅವಳು ತನ್ನ "ಪ್ರಾರ್ಥನೆಗಳಲ್ಲಿ" ಹೀಗೆ ಬರೆದಿದ್ದಾಳೆ :

"ದೇವರೇ, ನಿನ್ನ ಗುಚ್ಛದಲ್ಲಿರುವ ಎಲ್ಲ ಹೂವುಗಳನ್ನೂ ಒಂದುಗೂಡಿಸುವುದೇ ಪ್ರೇಮ—ಅದು ಮತ್ತಾವುದೂ ಅಲ್ಲ. ಅದು ಆಗ್ರಹದಿಂದ ತಲೆಹಾಕದ, ದಾಕ್ಷಿಣ್ಯಮಯವಾದ, ಅನಭಿಜ್ಞಾತವಾದ ಭಾವ.

ಅದರ ಪಾತ್ರ ಸಾರತಃ ಸ್ವಾರ್ಥರಹಿತ. ಅದರ ಈ ಅವ್ಯೆಕ್ತಿಕತೆ (ಅಶಾರೀರಿಕತೆ) ಯಲ್ಲಿಯೇ ಅದರ ಪ್ರಯೋಜನವೆಲ್ಲಾ ಇದೆ".

ಮುಂದೆ : " ದಿವ್ಯ ವಾತ್ಸಲ್ಯವನ್ನು ವ್ಯಕ್ತಪಡಿಸಲು ನೀನು ಅದನ್ನು ಸ್ವಾಗತಿಸಿ ಸ್ವೀಕರಿಸಲು ಶಕ್ತನಾಗಿರಬೇಕು. ಅದರ ಸಹಜಗತಿಗೆ ಮುಕ್ತಾವಕಾಶವನ್ನೀಯುವ ಸ್ವಭಾವವುಳ್ಳವರೇ ಅದನ್ನು ವ್ಯಕ್ತಗೊಳಿಸಬಲ್ಲರು." ಅವಳು ಸ್ವತಃ ಈ ದಿವ್ಯ ವಾತ್ಸಲ್ಯ ಸ್ವರೂಪದವಳಾಗಿದ್ದಾಳೆ. ಅದರಿಂದ ಅವಳು ಇದನ್ನು ವ್ಯಕ್ತಪಡಿಸಲೂ ವಿತರಿಸಲೂ ಬಲ್ಲಳು; ಇದರ ಪರಿಣಾಮಕತೆಯ ಬಗೆಗೆ ಅವಳಿಗೆ ನಿಶ್ಚಿತ ನಂಬಿಗೆಯಿದೆ.

"ಅದರ ಸರ್ವಶಕ್ತ ಕಾರ್ಯದೆದುರಾಗಿ ಯಾರು ಹೋರಾಡಬಲ್ಲರು? ಅದು ಎಲ್ಲವುದರ ಒಳಹೊಕ್ಕು ಎಲ್ಲ ಅಡಚಣೆಗಳನ್ನೂ ಹಾದುಹೋಗುವುದು—ಆ ಅಡಚಣೆಯು ಗುರುತರು ಅಜ್ಞಾನದ ಜಾಡ್ಯವಾಗಿರಲಿ ಇಲ್ಲವೆ ಅರ್ಥಮಾಡಿಕೊಳ್ಳದ ದುಃಸಂಕಲ್ಪದ ಪ್ರತಿಭಟನೆಯ ಸ್ವರೂಪದ್ದಾಗಿರಲಿ ....ಈ ಪ್ರಭಾ ವೈಭವವು ಹೆಚ್ಚು ಹೆಚ್ಚು ಶಕ್ತಿಯುತವಾಗುತ್ತ ಹೋಗಿ ಇಡಿ ಜಗತ್ತಿನ ಮೇಲೆ ತನ್ನ ಕಿರಣಗಳನ್ನು ಪಸರಿಸುತ್ತ ಹೋಗಿ ಪ್ರತಿಯೊಂದು ಚೇತನ (ಪ್ರಜ್ಞಾಸ್ತರ) ಗೂ ಪ್ರತ್ಯಕ್ಷವಾಗುವುದು........"

ಈ ದಿವ್ಯ ವಾತ್ಸಲ್ಯವನ್ನು ತುಂಬಿಕೊಂಡಿರುವುದರಿಂದಲೇ ಅವಳು ಸಂಪರ್ಕಮಾಧ್ಯಮವಾಗಿದ್ದಾಳೆ. ಮೇಲು-ಕೆಳಗುಗಳ ಹಾಗೂ ನಮ್ಮ ನಡುವಿನ, ಅರ್ಥಾತ್ ಪಾರ್ಥಿವ ಪದಾರ್ಥಗಳ ಹಾಗೂ ದೇವರ (ಈಶ್ವರನ) ನಡುವಿನ ಜೋಡಣೆಯ ಕೊಂಡಿಯಾಗಿದ್ದಾಳೆ. ಈ ಅನುರಾಗದ ಕೋಟೆಯನ್ನು ಕಟ್ಟಿಕೊಂಡ ಅವಳ ಜಡವೂ ಅಸ್ಪಷ್ಟವೂ ಆದ ಭೌತಪ್ರಪಂಚದ ಆಳದಲ್ಲಿ ಮುಳುಗಿದ್ದಾಳೆ; ನಮ್ಮ ಸಣ್ಣತನ, ಮಿಥ್ಯಾತ್ವ ಮತ್ತು ಅವಿದ್ಯೆಗಳಲ್ಲಿ ಹೊಕ್ಕಿದ್ದಾಳೆ. ಆ ಮೂಲಕ ಪಾರ್ಥಿವ ಪ್ರಜ್ಞೆಯನ್ನು ದೇವೋನ್ಮುಖಗೊಳಿಸುವುದು ಅವಳ ಬಯಕೆ.

ಅದು ಅವಳ ವ್ರತೋದ್ದೇಶ.

"ಮಾತೃಜ್ಯೋತಿಯಲ್ಲಿ" ಎಂಬ ತಮ್ಮ ಗ್ರಂಥದಲ್ಲಿ ಋಷಭಚಂದರು ಇದನ್ನು ವಿವರಿಸಿದ್ದಾರೆ.

"ಈ ಪ್ರೇಮವು ಅಕ್ಷರಶಃ ಮಾತೃಶ್ರೀಯಲ್ಲಿ— ಅವಳ ಇರವು, ವರ್ತನೆ. ಮಾತುಕತೆ, ಹಾವ-ಭಾವಗಳಲ್ಲಿ ಮತ್ತು ಅವಳ ಎಲ್ಲ ರೀತಿ-ನೀತಿಗಳಲ್ಲಿಯೂ ಮಾನವರೊಡನೆ ಮಾಡುವ ವ್ಯವಹಾರಗಳಲ್ಲಿಯೂ— ಮೂರ್ತಿಮತ್ತಾಗಿದೆ. ಆದುದರಿಂದ ಮಾತೃಶಬ್ದಕ್ಕೆ ವಾತ್ಸಲ್ಯವೆಂಬ ಅರ್ಥ ಬಂದಿದೆ. ಅವಳ ಹತ್ತಿರ ಇರುವುದೆಂದರೆ ದಿವ್ಯಪ್ರೇಮದ ಭೌತಿಕ ಉಪಸ್ಥಿತಿಯೊಡನಿರುವುದೆಂದೇ ಅರ್ಥ. ಅದು ಅಪ್ರಮೇಯ ವಿವೇಕದಿಂದೊಡಗೂಡಿದ ಮೂಲ ಪ್ರವೃತ್ತಿ; ಸರ್ವಶಕ್ತ ರಭಸದಿಂದೊಡಗೂಡಿ ಅದು ಸ್ಪಂದಿಸುತ್ತದೆ. ಈ ವಾತ್ಸಲ್ಯದ ಅದ್ಭುತ ರಹಸ್ಯದ ಆಳವನ್ನು ಮುಳುಗಿ ನೋಡಲು ಮಾನವನ ಮಾನಸಿಕ ಪ್ರಣಾಳಿಗಳು ಅಶಕ್ತ—ಅವು ಪ್ರಮಿತವಾಗಿರುವುದರಿಂದ. ಅವು ಇದಕ್ಕೆ ವಶವರ್ತಿಗಳಾಗಿ, ರೋಮಾಂಚಿತವಾಗಿ, ಪ್ರಕಾಶಿತವಾಗಿ ಮತ್ತು ಪ್ರಭಾವಿತವಾಗಿ ಮಾತ್ರ ನಿಲ್ಲಬಲ್ಲವು. ಇದು ತನ್ನ ಆಲೋಕ-ಆಹ್ಲಾದಗಳಿಂದ ನಮ್ಮ ಇರವನ್ನು ಹೊನಲಾಗಿ ತುಂಬಿಕೊಳ್ಳುತ್ತದೆ; ನಮ್ಮ ಎಲ್ಲ ದುರದೃಷ್ಟಗಳನ್ನೂ ಕಾಹಿಲೆಗಳನ್ನೂ ಗುಣಪಡಿಸುತ್ತದೆ; ನಮ್ಮ ಎಲ್ಲ ಬಂಧನಗಳನ್ನೂ ಮುರಿದು ಸಹಜ ಪಾವಿತ್ರ್ಯ-ಪೂರ್ಣತೆಗಳನ್ನು ಹೊಂದುವಂತೆ ಇದು ನಮ್ಮನ್ನು ಮುಕ್ತಗೊಳಿಸುತ್ತದೆ".

ಮಾತೃಶ್ರೀಯಲ್ಲಿ ದಿವ್ಯವಾತ್ಸಲ್ಯವು ಸಕಾಯವಾಗಿರುವುದು ಹೀಗೆ. ಇದರ ದೆಸೆಯಿಂದ ಆಕೆ ಎಲ್ಲವನ್ನೂ ಪ್ರೀತಿಸಬಲ್ಲಳು, ಎಲ್ಲವನ್ನು ಸಹಿಸಬಲ್ಲಳು, ಎಲ್ಲ ತಪ್ಪುಗಳನ್ನು ಕ್ಷಮಿಸಬಲ್ಲಳು. ಅವಳೆಂದೂ ಯಾರಿಂದಲೂ ಅಸಂತುಷ್ಟೆಯಾಗಳು; ವ್ಯಕ್ತವಾಗಿ ಅವಳನ್ನೆದುರಿಸಿ ತಂಟೆಮಾಡುವವರನ್ನೂ ಅವಳು ಕ್ಷಮಿಸುತ್ತಾಳೆ; ಅವರು ಹಾಗೆ ಮಾಡಿದಾಗಲೂ ತಿದ್ದಿಕೊಳ್ಳಲು ಅವರಿಗಾಕೆ ಅವಕಾಶ ಕೊಡುತ್ತಾಳೆ. ಅವಳ ಸಹನೆ ಅನಂತ, ಕರುಣೆ ಅಪ್ರಮಿತ— ಸರ್ವಶಕ್ತ ಭಗವಂತನಲ್ಲಿರುವ ಹಾಗೆ. ಏಕೆಂದರೆ ಅವಳು ದೇವರ (ಪರಮಾತ್ಮನ, ಭಗವಂತನ, ಈಶ್ವರನ) ಆನಂದ-ಶಕ್ತಿಸ್ವರೂಪಿಣಿ.

ಎಷ್ಟು ಉನ್ನತವಾದ ಮಾನವ್ಯಪ್ರೇಮವೂ ಈ ದಿವ್ಯವಾತ್ಸಲ್ಯವನ್ನು ಹೋಲದು. ಅವರಲ್ಲಿ ಇದರ ಗುಣಗಳು ಎಲ್ಲೋ ಒಳಗೆ ಅವಿತುಕೊಂಡಿರುವುದಷ್ಟು ನಿಜ. ಮಾತೃಶ್ರೀ ಹೇಳುವಂತೆ "ಮಾನವರಲ್ಲಿ ಸಹ ಅನುರಾಗದ ಪ್ರಥಮ ಸ್ಪರ್ಷವು ಇದರ ಪವಿತ್ರತರ ಸಾರಾಂಶವನ್ನು ಕೆಲವುಟ್ಟಿಗೆ ಭೂಲೋಕಕ್ಕೆ ಇಳಿಸಿ ತರುತ್ತದೆ; ಒಂದು ಕ್ಷಣ ಅವರು ತಮ್ಮನ್ನು ತಾವು ಮರೆಯ ಬಲ್ಲವರಾಗುತ್ತಾರೆ. ಆ ಕ್ಷಣದಲ್ಲಿ ಇದರ ದಿವ್ಯಸ್ಪರ್ಶವು ಸುಪ್ತಗರುಳ್ಳ ಎಲ್ಲವನ್ನೂ ಜಾಗರಿತಗೊಳಿಸಿ ಅತಿಶಯಿಸುತ್ತದೆ. ಆದರೆ ಆಮೇಲೆ ಮಾನವ ಸ್ವಭಾವವು ಮೇಲಕ್ಕೆ ಬರುತ್ತದೆ; ಅದರ ತುಂಬ ಅಪವಿತ್ರ ಬೇಡಿಕೆಗಳು ತುಂಬಿರುತ್ತವೆ. ಅದು ವಿನಿಮಯವಾಗಿ ಪ್ರತಿ ಪದಾರ್ಥವನ್ನು ಬೇಡುತ್ತದೆ— ತಾನು ಕೊಟ್ಟಿದ್ದಕ್ಕೆ ಬದಲಾಗಿ ಪ್ರತಿ ದಾನವನ್ನು ಬಯಸುತ್ತದೆ........"

ಅನೇಕ ಬಾರಿ ನಾವು ಮತ್ತೊಂದು ತಪ್ಪನ್ನೂ ಮಾಡುತ್ತೇವೆ: ಅದು ನನ್ನ, ನಿನ್ನ ಅಥವಾ ಅವನ ಪ್ರೀತಿಯೆಂದು ಆಲೋಚಿಸುತ್ತೇವೆ. ಅದರದು ಹಾಗಿಲ್ಲ. ಅದು ಯಾರ ವಿಶೇಷಣವೂ ಅಲ್ಲ, ಯಾರಿಂದ ಸೃಷ್ಟವಾದುದೂ ಅಲ್ಲ. ಅದು ಮೇಲಿಂದ ಬರುತ್ತದೆ. ಅದು ನಿಮ್ಮ ಪ್ರಜ್ಞೆಯೊಳ ಹೊಕ್ಕಾಗ ಅದು ನಿಜವಾಗಿ ಬಂದು ಉನ್ನತತರ ಶಕ್ತಿಯಾದರೂ ಅದು ನಿಮ್ಮೊಳಗಿನಿಂದಲೇ ಹುಟ್ಟಿ ಬೆಳೆದಂತೆ ನಿಮಗೆನ್ನಿಸುತ್ತದೆ

"ಪ್ರೇಮ ಅಥವಾ ವಾತ್ಸಲ್ಯವು ವಿಶ್ವಸಾಮಾನ್ಯವಾದ ಮಹಾಶಕ್ತಿಗಳಲ್ಲಿ ಒಂದು; ಅದು ತಾನೇ ತಾನಾಗಿರುತ್ತದೆ. ಅದು ನೆಲೆಸಿರುವ ಮತ್ತು ಹೊಕ್ಕು ಹೊರಡುವ ಪದಾರ್ಥಗಳಿಂದ ಅದರ ಗತಿ ಸ್ವತಂತ್ರ. ವ್ಯಕ್ತವಾಗಲು ಸಾಧ್ಯತೆ ದೊರಕಿದಲ್ಲೆಲ್ಲಾ ಸ್ವೀಕಾರಕತ್ವವಿರುವಲ್ಲೆಲ್ಲಾ ಬಾಳ ಹೋಗುವ ಅವಕಾಶ ವಿರುವಲ್ಲೆಲ್ಲಾ ಅದು ಆವಿರ್ಭವಿಸುತ್ತದೆ. ನೀವು ಪ್ರೇಮ, ಪ್ರೀತಿ ವಾತ್ಸಲ್ಯ ಎಂಬುದು— ಅದು ಖಾಸಗಿಯದು ಅಥವಾ ವೈಯಕ್ತಿಕವಾದುದು ಎಂದು ನೀವು ನಂಬುವುದು— ಈ ವಿಶ್ವಸಾಧಾರಣ ಶಕ್ತಿಯನ್ನು ಸ್ವೀಕರಿಸಿ ಅಭಿವ್ಯಕ್ತಗೊಳಿಸುವ ನಿಮ್ಮ ಸಾಮರ್ಥ್ಯ ಪರಿಮಾಣವಷ್ಟೇ ಆಗಿದೆ. ಅದು ವಿಶ್ವಸಾಧಾರಣ ಶಕ್ತಿಯಾಗಿರುವುದರಿಂದ

ಅವಿಜ್ಞಾತಲಕ್ಷಣವುಳ್ಳದ್ದಲ್ಲ; ಅದು ಅತ್ಯಂತ ಸುವಿಜ್ಞಾತವಾದ ಶಕ್ತಿ. ತನ್ನ ಅಭಿವ್ಯಕ್ತಿಗಾಗಿಯೂ ಭೂಲೋಕದಲ್ಲಿ ತನ್ನ ಸಾಕ್ಷಾತ್ಕಾರಕ್ಕಾಗಿಯೂ ಅದು ಸುವಿಜ್ಞಾತವಾಗಿ ಪ್ರಯತ್ನಿಸುತ್ತದೆ; ಸುವಿಜ್ಞಾತವಾಗಿಯೇ ಅದು ತನ್ನ ಪಾತ್ರಗಳನ್ನು ಆರಿಸಿಕೊಳ್ಳುತ್ತದೆ: ಪ್ರತಿಕ್ರಿಯೆಯನ್ನು ವ್ಯಕ್ತಪಡಿಸ ಬಲ್ಲವರನ್ನು ತನ್ನ ಸ್ಪಂದನದಿಂದ ಅದು ಜಾಗರಿತಗೊಳಿಸುತ್ತದೆ. ತನ್ನ ನಿತ್ಯ ಧ್ಯೇಯವನ್ನು ಅವರಲ್ಲಿ ಸಾಕ್ಷಾತ್ಕರಿಸಲು ಅದು ಪ್ರಯತ್ನಿಸುತ್ತದೆ. ಪಾತ್ರವು ಅನರ್ಹವೆಂದು ಕಂಡು ಬಂದಾಗ ಅದನ್ನು ಬಿಟ್ಟು ಇತರ ಪಾತ್ರ ಗಳನ್ನು ಹುಡುಕಿಕೊಂಡು ಹೋಗುತ್ತದೆ. ತಾವು ಒಮ್ಮೆಲೇ ಪ್ರೇಮಪಾಶ ದಲ್ಲಿ ಬಿದ್ದೆವೆಂದು ಜನರು ತಿಳಿದುಕೊಳ್ಳುತ್ತಾರೆ. ತಮ್ಮ ಪ್ರೀತಿಯು ಬರು ವುದನ್ನೂ ಬೆಳೆಯುವುದನ್ನೂ ಬಾಡಿ ಹೋಗುವುದನ್ನೂ ಅವರು ನೋಡು ತ್ತಾರೆ— ಅಥವಾ, ಅದು ದೀರ್ಘಗತಿಗೆ ವಿಶೇಷವಾಗಿ ಪಾತ್ರರಾದ ಕೆಲವರಲ್ಲಿ ಸ್ವಲ್ಪ ಹೆಚ್ಚು ಕಾಲ ಉಳಿಯಬಹುದು. ಆದರೆ ಅದರಲ್ಲಿ ಅವರಿಗಾದ ಖಾಸಗಿ ಅನುಭವವೆಂಬುದು ಒಂದು ಭ್ರಾಂತಿ. ಅದು ವಿಶ್ವಪ್ರೇಮದ ಶಾಶ್ವತಸಮುದ್ರದ ಒಂದು ಅಲೆ”.

ಇದು ಪ್ರೇಮದ ನಿಜಸ್ವರೂಪ. ಅದು ಪಾರ್ಥಿವವೂ ಮಾನವ್ಯವೂ ಆಗಿರುವಾಗ ಬೇಗನೆಯೋ ತಡವಾಗಿಯೋ ಬಾಡುತ್ತದೆ; ಅದು ದಿವ್ಯವಾ ಗಿರುವಾಗ ಉಳಿಯುತ್ತದೆ, ಬೆಳೆಯುತ್ತದೆ— ಏಕೆಂದರೆ ಅಲ್ಲಿ ಅದು ತನ್ನ ಉದ್ದೇಶವನ್ನು ಸಾಧಿಸಿಕೊಳ್ಳುತ್ತದೆ. ಆ ಉದ್ದೇಶವೆಂದರೆ ಸೃಷ್ಟಿಯನ್ನೂ ಸೃಷ್ಟಿಕರ್ತನನ್ನೂ ಒಂದಿಸುವುದು, ಮೂಲದ ಇಡಿಯನ್ನೂ ಅದರ ಬಿಡಿ ಗಳನ್ನೂ ಏಕೀಕರಿಸುವುದು, ದ್ಯಾವಾಪೃಥಿವಿಗಳಲ್ಲಿ ಸರ್ವಾಂಗೀಣ ಸಂಪರ್ಕ ವನ್ನುಂಟು ಮಾಡುವುದು.

ಮನುಷ್ಯರಲ್ಲಿಯೂ ದಿವ್ಯಪ್ರೇಮಕ್ಕೆ ಸ್ಥಾನವಿದೆ. ಅತಿ ಅಲ್ಪಸಂಖ್ಯಾ ತರಲ್ಲಿ ಅದು ಮೊಟ್ಟ ಮೊದಲಿನಿಂದಲೂ ಸ್ಪಷ್ಟವಾಗಿರುತ್ತದೆ. ಮಾತೃಶ್ರೀ ವಾಸ್ತವಿಕವಾಗಿ ಅದರೊಡನೆಯೇ ಹುಟ್ಟಿಬಂದವಳಾಗಿರುವುದು ನಿದರ್ಶನ. ಮತ್ತೆ ಕೆಲವರಲ್ಲಿ ಬಿಲ್ವಮಂಗಲನಿಗಾದಂತೆ ಅವರ ಮಾನವ್ಯ ಪ್ರೀತಿಯು ತನ್ನ ಸಣ್ಣತನಕ್ಕೆ ಆಶ್ಚರ್ಯಪಟ್ಟು ಒಮ್ಮಿಂದೊಮ್ಮೆ ಸುತ್ತ ತಿರುಗಿ ದಿವ್ಯಶಕ್ತಿ

ಗಾಗಿ ಮಾಡುವ ಪ್ರೇಮ(ಭಕ್ತಿ) ಅಥವಾ ದಿವ್ಯಪ್ರೇಮ ಎಂಬ ಎತ್ತರಕ್ಕೆ ಎತ್ತಲ್ಪಡುತ್ತದೆ. ಈ ಭಕ್ತಿ ಒಡಿದಾಗ ಅವರು ದೇವರಿಗಾಗಿ ಮಿಡಿಯ ದಿರರು— ಅಂದರೆ— ತಮ್ಮ ಉಚ್ಚ ಪ್ರಜ್ಞೆಯಲ್ಲಿ ಭಕ್ತಿರಸ ಪರಿಪೂರ್ಣ ವಾಗಿ ತುಂಬಿರುವಾಗ ಪಾರ್ಥಿವ ಜೀವಿಗಳಾದ ನಮ್ಮನ್ನವರು ಆಕರ್ಷಿಸುತ್ತಾರೆ ಮತ್ತು ಆ ಭಕ್ತಿಬಲದಿಂದ ಅವರು ನಮ್ಮ ಪ್ರಜ್ಞೆಯನ್ನು ಈಗಿರುವುದಕ್ಕಿಂತ ಉನ್ನತತರ ಮಟ್ಟಕ್ಕೆ ಬದಲಾಯಿಸುವರು. ಮಾತೃಶ್ರೀ ಮಾಡುತ್ತಿರು ವುದು ಇದನ್ನೇ.

ಅವಳಬಳಗಕ್ಕೆ ಇಷ್ಟೆಲ್ಲಾ ಜನರನ್ನು ಸೇರಿಸಿದ್ದು ಅವಳ ಈ ಪ್ರೇಮವೇ. ಇದೇ ಅವರಿಗೆ ನೆಲಸ್ನೂ ಕಾಪನ್ನೂ ಕೊಟ್ಟು ಉಚ್ಚತರ ಪ್ರಜ್ಞಾಸ್ತರದ ಹಾದಿಯಲ್ಲಿ ಕರೆದುಕೊಂಡು ಹೋಗುತ್ತಿರುವುದು. ಆಶ್ರಮದ ಹೊರಗೆ ದೂರದಲ್ಲಿರುವ ಸಾವಿರಾರು ಜನರು ಈ ಲಾಭವನ್ನು ಪಡೆಯುತ್ತಿ ದ್ದಾರೆ. ಅವಳೇ ಆಸೆಯನ್ನು ಎಂದೋ ವ್ಯಕ್ತಪಡಿಸಿದ್ದಳು: “ಓ ದೇವರೇ, ಹೆಚ್ಚುಹೆಚ್ಚಾಗಿ ಈ ಕೂಡುಕೊಂಡಿಯಾಗಲು, ನೆಂಟನ ಗಂಟಾಗಲು, ನಿನ್ನ ಚೆಲ್ಲಿ ಸುರಿದ ಚೈತನ್ಯದ ಚೂರುಗಳನ್ನು ಒಟ್ಟುಗೂಡಿಸಲು, ಉತ್ತಮ ಉತ್ತಮತರವಾಗಿ ಪುನಾರಚಿತವಾಗುವಂತೆ ಗುಂಪುಗೂಡಿಸಲು— ಅವರಲ್ಲೂ ಏಕ ಕಾಲದಲ್ಲಿ ಅವು ಏಕವೂ ಅನೇಕವೂ ಆಗಿರುವಂತೆ ಮಾಡಲು....”

ಅದೇ ನಾವಾಗಿದ್ದೇವೆ— ದಿವ್ಯಚೈತನ್ಯದ ಚೂರುಗಳು —ಇವನ್ನು ತೆಗೆದು ಅವಳು ಒಂದಲ್ಲಾ ಒಂದು ದಿನ ಇಡಿಯನ್ನಾಗಿ ಮಾಡುವಳು.

* * *

ಮಾತೃಶ್ರೀಯ ಆಶೀರ್ವಾದಗಳು

ಯಾರು ಬೇಡುವರೋ ಯಾರಿಗೆ ಅಗತ್ಯವೋ ಅವರೆಲ್ಲರಿಗೂ ಮಾತೃಶ್ರೀ ತನ್ನ ಆಶೀರ್ವಾದಗಳನ್ನು ಕೊಡುತ್ತಾಳೆ. ಹೂವುಗಳ ಮೂಲಕ ಆಶೀರ್ವಾದ ಕೊಡುವುದು ಅವಳದೇ ಆದ ವಿಶಿಷ್ಟ ವಿಧಾನ. ಅದು ದೇವರ ಸ್ವಂತದ ಕ್ರಮಗಳಲ್ಲಿ ಒಂದು— ಕ್ಲೇಶತಪ್ತವಾದ ಈ ಲೋಕಕ್ಕೆ ಅಸಾಂಖ್ಯಾತ ಜಾತಿಯ ಪುಷ್ಪಗಳನ್ನು ವರವಾಗಿ ಕಳಿಸಿಕೊಡುವುದು: ಅವುಗಳಿಗೆ ತಮ್ಮ ಸುಗಂಧ-ಸೌಂದರ್ಯಗಳಿಂದ ಜನರಿಗೆ ಸಂತಸ, ಪ್ರತ್ಯಾಶೆ, ಸಮಾಧಾನಗಳನ್ನು ತರುವುದನ್ನು ಬಿಟ್ಟರೆ ಬೇರೆಯ ಕೆಲಸವೇ ಇಲ್ಲ. ಅದರಿಂದಲೇ ದೇವರ ಆಶೀರ್ವಾದಗಳ ಉಚಿತ ವರಗಳೆನ್ನಿಸಿರುವ ಹೂವುಗಳು ನಮಗೆ ಎಲ್ಲೆಲ್ಲಿಯೂ ಸಿಕ್ಕುತ್ತವೆ.

ಮಾತೃಶ್ರೀಯೇ ಸ್ವತಃ ಹೂವುಗಳನ್ನು ಪೂಜಿಸುತ್ತಾಳೆ. ಪುಷ್ಪ ಸೇವೆಯ ಒಂದು ವಿಶಿಷ್ಟ ಶಾಖೆಯನ್ನೇ ಅವಳು ಸಂಸ್ಥಾಪಿಸಿರುತ್ತಾಳೆ. ಅನೇಕ ದೊಡ್ಡ ಹೂದೋಟಗಳು ಆಶ್ರಮದ ಆಸ್ತಿಯಾಗಿವೆ. ಅಲ್ಲಿ ಅನೇಕ ಬಗೆಯ ಗಿಡಗಳೂ ಹೂವಿನ ಏರಿಗಳೂ ಇವೆ. ಆಶ್ರಮಕ್ಕೆ ಸೇರಿದ ಪ್ರತಿ ಮನೆಗಳಲ್ಲಿ ಎಂಬಂತೆ ನೈದಿಲೆಯ ಕೊಳಗಳೂ ಇವೆ. ಆಶ್ರಮದ ಮುಖ್ಯ ಕಟ್ಟಡದಲ್ಲಿಯೇ ಗೋಡೆಬದಿಗಳಲ್ಲಿ ಮತ್ತು ಲಭ್ಯವಾದ ಮೂಲೆಗಳಲ್ಲಿ ಪೊದೆ, ಗಿಡ, ಬಳ್ಳಿಗಳು ಚಿತ್ರವಿಚಿತ್ರ ವರ್ಣಗಳ ಹೂವುಗಳಿಂದ ಇಡಿ ವರ್ಷ ತುಂಬಿರುತ್ತವೆ. ಶ್ರೀ ಅರವಿಂದರ ಸಮಾಧಿಗೂ ಮಾತೃಶ್ರೀಗೂ ದಿನವೂ ಬುಟ್ಟಿಯಲ್ಲಿ ತುಂಬಿದ ಹೂವುಗಳನ್ನು ಕಳಿಸಲಾಗುತ್ತದೆ; ಅವನ್ನೆ ಮಾತೃಶ್ರೀ ಆಶೀರ್ವಾದಗಳೆಂದು ಹಂಚುತ್ತಾಳೆ.

ತನ್ನ ವಿಶಿಷ್ಟ ವರ್ಣ ವಾಸನೆಗಳಿಂದ ವ್ಯಕ್ತಪಡಿಸುವ ಸ್ವಂತ ಭಾಷೆಯು ಪ್ರತಿಯೊಂದು (ಜಾತಿಯ) ಹೂವಿಗೂ ಇದೆ. ಅವರ ಬಾಳಿನಲ್ಲಿ ಸತ್ಯದ ಒಂದೇ ಒಂದು ಸಂದೇಶವಿರುತ್ತದೆ: ಅಪಾರ್ಥಕ್ಕೆಡೆಯೆಂದೂ ಉಂಟಾಗದಂತೆ ಅದು ಆ ಸಂದೇಶವನ್ನು ಚಿತ್ರಿಸುತ್ತದೆ. ಇಷ್ಟರಮೇಲೆ ಹೂವಿನ ಹೃದಯ ಯಾವಾಗಲೂ ತೆರೆದಿರುತ್ತದೆ. ಅದರಿಂದ ನೀವು ಅದಕ್ಕೆ ಯಾವ ವಿಶೇಷಾರ್ಥವನ್ನು ಬೇಕಾದರೂ ಕೊಡಬಹುದು. ಅದು ಆ ವಿಶೇಷಾರ್ಥ ವನ್ನು ಯಾರನ್ನು ಉದ್ದೇಶಿಸಿ ಕೊಡಲಾಗಿದೆಯೋ ಅವರಿಗದನ್ನು ಪ್ರಾಮಾಣಿಕವಾಗಿ ಒಯ್ದು ಮುಟ್ಟಿಸುತ್ತದೆ; ಅದೇ ಅರ್ಥವನ್ನದು ನೋಡಿ ದಾಗಲೆಲ್ಲಾ ಉದ್ದಿಷ್ಟವ್ಯಕ್ತಿಗಳಿಗೆ ಪುನರುಚ್ಚರಿಸುತ್ತದೆ. 'ನಿಮಗೆ ಹೇಳ ಬೇಕೆಂದಿರುವುದನ್ನೆಲ್ಲಾ ಹೂವುಗಳೊಡನೆ ಹೇಳಿರಿ' ಎಂದು ಅದಕ್ಕಾಗಿಯೇ ಹೇಳಲಾಗುತ್ತದೆ.

ಒಂದು ಹೂವಿನ ಮೂಲಕ ತನ್ನ ಪ್ರಜ್ಞೆಯನ್ನು ಹೆಚ್ಚು ಸುಲಭ ವಾಗಿ (ಜನರಿಗೆ) ತಿಳಿಸಬಹುದೆಂಬುದು ಮಾತೃಶ್ರೀಯ ಅನುಭವ. ಹೂವಿಗೆ ಮನಸ್ಸೆಂಬುದಿಲ್ಲವಾದರೂ ತನಗಿರುವ ಸ್ವೀಕಾರ ಶಕ್ತಿಯ ಮೂಲಕ ಅದು ನಿನ್ನ ಅಂತರ್ಮಾನಸಿಕ ಪ್ರಜ್ಞೆಯನ್ನು ಬೇಕಾದ ಹಾಗೆ ತೆಗೆದು ಕೊಳ್ಳಬಲ್ಲದು. ಜನರು ಬಂದು ಅವಳಿಗೆ ಹೂವುಗಳನ್ನು ಅರ್ಪಿಸಿದಾಗ ಅವರ ಸರಿಯಾದ ಮನಃ ಪ್ರಣಾಲಿಯನ್ನವು ಅವಳಿಗೆ ತಿಳಿಸುವುವು. ಅವಳೇ ಸ್ವತಃ ಅವರಿಗೆ ಹೂವುಗಳನ್ನಿತ್ತಾಗ ತನ್ನ ಅನುಕ್ತ ಆಶೀರ್ವಾದಗಳ ಪ್ರತ್ಯೇಕಾರ್ಥವನ್ನು ಅವಳು ಅವುಗಳ ಮೂಲಕ ತಿಳಿಸುತ್ತಾಳೆ. ಯೋಗ್ಯ ವಾದ ಸ್ವೀಕಾರ ಶಕ್ತಿಯುಳ್ಳವರು ಅದನ್ನು ತಿಳಿದುಕೊಂಡು ಅವುಗಳನ್ನು ಭಯ ಭಕ್ತಿಗಳಿಂದ ಇಟ್ಟುಕೊಂಡಿರುತ್ತಾರೆ.

ಹೂವುಗಳನ್ನು ಕೊಡುವುದರ ಮತ್ತು ಕಳಿಸುವುದರ ಅರ್ಥವೇನೆಂದರೆ– ಅವು ಮಹಾ ಮಾತೆಯ ಸರ್ವಸಾಧಾರಣವಾದ ಮಾಮೂಲು ಆಶೀರ್ವಾದ ಗಳನ್ನಲ್ಲದೆ, ಬಹಳ ಸಹಾಯಕಾರಿಯಾದ ಅಮೂಲ್ಯ ವಾರ್ತೆಗಳನ್ನೂ ಶಕ್ತಿಯನ್ನೂ ರೋಗನಾಶಕ ಗುಣವನ್ನೂ ಹೊತ್ತೊಯ್ಯುವುವು. ಶ್ರೀ ಅರವಿಂದರೇ ಸ್ವತಃ ಆ ಬಗ್ಗೆ ಬರೆದಿದ್ದಾರೆ: "ಅದರಿಂದಲೇ

ಮಾತೃಶ್ರೀಯು ಆಶೀರ್ವಾದವೆಂದಲ್ಲದೆ ಕಾಯಿಲೆಯಲ್ಲಿ ಸಹಾಯಕವೆಂದೂ ಹೂವುಗಳನ್ನು ಕೊಡುತ್ತಾಳೆ".

ಮಾತೃಶ್ರೀಯು ಹೂವುಗಳಿಗೆ ವಿಶಿಷ್ಟವಾದ ಆಧ್ಯಾತ್ಮಿಕ ಅರ್ಥವನ್ನು ಕೊಟ್ಟಿದ್ದಾಳೆ. ಹೂವುಗಳ ಬೇರೆ ಬೇರೆ ಬಗೆಗಳಿಗೆ ಅವಳು ಕೊಟ್ಟ ಅರ್ಥಗಳನ್ನು ತೋರಿಸುವ ಪುಸ್ತಿಕೆಯೊಂದನ್ನು ಪ್ರಕಟಿಸಲಾಗಿದೆ.

ಸಾಮಾನ್ಯ ಜಾತಿಗಳನ್ನು ನಾವಿಲ್ಲಿ ಕೊಡುತ್ತೇವೆ:

ಕೆಂಗುಲಾಬಿ—ದಿವ್ಯವಾತ್ಸಲ್ಯ.
ಬೆಳ್‌ಗುಲಾಬಿ—ಶುದ್ಧೀಕೃತ ಪ್ರೇಮ.
ಹಳದಿಗುಲಾಬಿ—ದೇವಜಿಜ್ಞಾಸೆ.
ಕೆಂದಾವರೆ—ಶ್ರೀ ಅರವಿಂದರ ಪ್ರತೀಕ.
ಬೆಳ್ದಾವರೆ—ದಿವ್ಯಾನುಗ್ರಹ, ದಿವ್ಯಪ್ರಸಾದ
ಜಾಜಿ—ಸಮಗ್ರ ಪಾವಿತ್ರ್ಯ.
ಕದಂಬ—ಅತಿಮಾನಸ ಸೂರ್ಯ.
ಸೇವಂತಿಗೆ—ಜೀವ ಶಕ್ತಿ
ದೊಡ್ಡ ಡೇರೆ ಹೂವು—ಸಹಿಷ್ಣುತೆ
ಸಣ್ಣ ಡೇರೆಹೂವು—ಅಂತರ್ಮಾನಸಿಕ ಗಾಂಭೀರ್ಯ.
ಸೂರ್ಯಕಾಂತಿ ಹೂವು—ಅತಿಮಾನಸೋನ್ಮುಖ ಪ್ರಜ್ಞೆ.
ದಾಸವಾಳ—ದೈವೈಕ್ಯಪ್ರಜ್ಞೆ.
ಲಿಂಬೊಹೂವು—ಪಾತಿವ್ರತ್ಯದಂಥ ನಿರ್ದೋಷ ನಿಷ್ಠೆ.
ಗ್ಲೈಲಾರ್ಡಿಯ—ಭಾವಿ ಜಯ.
ಹಯಾಂತಸ್—ಸಹಕಾರ
ಯುಫೋರಿಯ—ಏಕಾಗ್ರತೆ.
ಕಾಬಾಳೆ—ಭಾವನಾ ಕೇಂದ್ರ.
ಪೆಟೂನಿಯ—ಉತ್ಸಾಹ
ಬಿಗೋನಿಯ—ಸಮತೋಲ

ಕಾಡುಸಂಪಿಗೆ—ಜಾಗರ.
ಅಂಜೆಹಳದಿ ಹೂವು—ಮಾನಸಿಕ ಜಯ.
ಉನ್ಮತ್ತ(ಧತ್ತೂರ)—ತಪಸ್ಸು.
ಡೆಯಿಸಿ—ಸಮಗ್ರ ಸರಳತೆ.
ಶಿರೀಷ(ಬಾಗಳ)—ವಿವೇಕ.
ನೀರ್ನೈದಿಲೆ—ಐಶ್ವರ್ಯ
ಹುಲ್ಲುಹೂವು—ಪಶ್ಚಾತ್ತಾಪ.
ಕತ್ತಿಕಾಯಿಹೂವು....ಸಾಕ್ಷಾತ್ಕಾರ.
ಕಾಗದಹೂವು—ಕಾಪು, ರಕ್ಷಣೆ.
ಶೇಫಾಲಿಕೆ—(ಆಧ್ಯಾತ್ಮಿಕ) ಬಯಕೆ, ಸಾಧನೇಚ್ಛೆ.
ಆರ್ಕಿಡ್—ದೇವಸಂಗ.
ಜಿರೇನಿಯಂ—ಆಧ್ಯಾತ್ಮಿಕ ಸುಖ.
ಬಾಬುಲ್—ಜ್ಞಾನ.
ಪೊಪಿ—ವಿಶ್ರಾಮಶೀಲ.
ಮದರಂಗಿ ಹೂವು—ದೇವರಿಗಾಗಿ ಶಕ್ತಿ.
ಮಾಧವಿ—ಆಧ್ಯಾತ್ಮಿಕ ಜಯ.
ಮಾಲತಿ—ಉದಯ ತಾರೆ.
ಚಂಪೆ(ಸಂಪಿಗೆ)—ಅತಿಮಾನಸ ಸಾಕ್ಷಾತ್ಕಾರ.
ಚಂಡುಹೂವು(ಗೊಂಡೆ)—ನಮ್ರತೆ.
ಚೇಲ, ಯೂಥಿಕೆ, ಮಲ್ಲಿಗೆ, ಕಾಮಿನಿ—ಅಂತರ್ಮಾನಸಿಕ ಪಾವಿತ್ರ್ಯ
ದಾಳಿಂಬೆ ಹೂವು—ದಿವ್ಯವಾತ್ಸಲ್ಯ. ದಿವ್ಯಪ್ರೇಮ.
ತುಳಸಿ—ಭಕ್ತಿ ಮತ್ತು ಪ್ರಾರ್ಥನೆ.
ಬಿಲ್ವದಳ—ಪೂಜೆ

ಪ್ರತಿಯೊಬ್ಬರ ಜನ್ಮದಂದು ವಿಶೇಷತಃ ಅವಳು ಹೂವುಗಳನ್ನು ತೆಗೆದು ಕೊಳ್ಳುತ್ತಾಳೆ ಮತ್ತು ಕೊಡುತ್ತಾಳೆ. ಈ ವಿಶಿಷ್ಟ ಹರಕೆಯನ್ನವಳಿಂದ

ಪಡೆಯಲು ಹೊರಗಿನ ಬಹುದೂರದ ಊರುಗಳಿಂದ ಭಕ್ತರು ಆಶ್ರಮಕ್ಕೆ ಹೋಗುತ್ತಾರೆ.

ಅದಲ್ಲದೆ ವರ್ಷದ ನಾಲ್ಕು ದರ್ಶನ ದಿನಗಳಾದ ಫೆಬ್ರುವರಿ 21, ಏಪ್ರಿಲ್ 24, ಆಗಸ್ಟ್ 15 ಮತ್ತು ನವೆಂಬರ್ 24ರಂದು ಅವಳು ಎಲ್ಲರಿಗೂ ಹೂವುಗಳನ್ನು ಕೊಡುತ್ತಾಳೆ. ಕಾರ್ಯಕ್ರಮದಲ್ಲಿ ಪಾಲುಗೊಂಡು ಮಾತೃಶ್ರೀಯ ದರ್ಶನವನ್ನು ಪಡೆದುಕೊಂಡು ಹೋಗಲು ಅನೇಕಾನೇಕ ಜನರು ನೆರೆಯುತ್ತಾರೆ. ಅವರೆಲ್ಲರೂ ಬೇಕಾದಷ್ಟು ಹೂವುಗಳನ್ನು ಪಡೆಯುತ್ತಾರೆ. ಈ ಹೂವುಗಳನ್ನೊಯ್ದು ತಮ್ಮ ಗೆಳೆಯರ ಬಳಗಕ್ಕೆ ಹಂಚುತ್ತಾರೆ. ಆಶ್ರಮ ವಾಸಿಗಳೂ ತಮ್ಮ ಗೆಳೆಯರಿಗೂ ನೆಂಟರಿಗೂ ಕವರಿನಲ್ಲಿ ತುಂಬಿ ಹೂವುಗಳನ್ನು ಕಳಿಸುತ್ತಾರೆ. ಈ ಹೂವುಗಳೆಲ್ಲವೂ ಮಾತೃಶ್ರೀಯ ಹರಕೆಗಳನ್ನು ಹೊತ್ತೊಯ್ಯುತ್ತವೆ. ಅವಳ ಹರಕೆಗಳು ಈ ಪ್ರಕಾರ ಸುತ್ತಲೂ ಹಬ್ಬಿ ಪ್ರತಿಯೊಂದು ದೇಶವನ್ನೂ ಎಂಬಂತೆ ತಲುಪುತ್ತವೆ. ಅವಳು ಮನುಕುಲವನ್ನೇ ಹರಸುತ್ತಾಳೆ.

ಮಿಕ್ಕ ವಿಶೇಷ ಸಂದರ್ಭಗಳಲ್ಲಿಯೂ ಅವಳು ಹೂವುಗಳನ್ನು ಹಂಚುತ್ತಾಳೆ: ಶ್ರೀ ಅರವಿಂದರು ಪಾಂಡಿಚೇರಿಯನ್ನು ಬಂದು ಸೇರಿದ ಏಪ್ರಿಲ್ 4, ಅಷ್ಟಮಿ ಪೂಜೆಯ ದಿನ, ವಿಜಯದಶಮಿಯ ದಿನ, ಕಾಳೀ ಪೂಜೆಯ ದಿನ, ಲಕ್ಷ್ಮೀ ಪೂಜೆಯ ದಿನ, ಸರಸ್ವತೀ ಪೂಜೆಯ ದಿನ, ಕ್ರಿಸ್‌ಮಸ್ ಮತ್ತು ಯುಗಾದಿಯ ದಿನ.

ಮಾತೃಶ್ರೀ ಕೊಟ್ಟ ಹೂವುಗಳಲ್ಲಿ ಊರ್ಧ್ವಕ್ರಿಯಾತ್ಮಕ ಶಕ್ತಿ ಕೆಲಸ ಮಾಡುತ್ತಿರುತ್ತದೆ. ಆದರೆ ಅದರ ಪೂರ್ಣಲಾಭವನ್ನು ಪಡೆಯ ಬೇಕಾದರೆ ಮನುಷ್ಯನಿಗೆ ಶ್ರದ್ಧೆ-ಆತ್ಮವಿಶ್ವಾಸಗಳಿರಬೇಕು— ಆಗ ಮಾತ್ರ ಆ ಶಕ್ತಿ ಕೆಲಸ ಮಾಡುತ್ತದೆ.

* * *

ಮಾತೃಶ್ರೀಯ ಅನುಗ್ರಹ

'ಅನುಗ್ರಹ' ಎಂದರೇನು ? ನಮಗೆ ಗೊತ್ತಿರುವ ಹಾಗೆ ಅದು ತರ್ಕಾತೀತ. ನಿನಗೆ ಅರ್ಹತೆಯಿಲ್ಲದಿರುವಾಗಲೂ ಏಕಾಏಕಿ ದೇವರು ಕೊಟ್ಟ ವರವಾಗಿ ನಿನಗೆ ಪೂರ್ವಸೂಚನೆಯಿಲ್ಲದೆ ನಿನ್ನೆಡೆಗದು ಬಂದದ್ದನ್ನು ನೀನು ಕಾಣಬಹುದು. ಹಕ್ಕಿನಿಂದ ನೀನದನ್ನು ಪಡೆಯಲಾರೆ ಅಥವಾ ಏನಾದರೂ ಕಾರಣ ಕೊಟ್ಟು ಅದನ್ನು ಬೇಡಲಾರೆ. ಅದಕ್ಕೆ ಕೊಡಬೇಕಾದ ಕಾರಣವಿಲ್ಲ. ಮನುಷ್ಯ ಕೃತವಾದ ಯಾವ ನಿಯಮದಂತೆಯೂ ಅದು ವರ್ತಿಸದು. ಅದು ಸರ್ವ ವಿಧಿ ನಿಯಮಗಳಿಗೂ ಹೆಚ್ಚಿನದು.

ಅನುಗ್ರಹ ಅಥವಾ ಪ್ರಸಾದವು ವಾತ್ಸಲ್ಯಕ್ಕೆ ಸರಿದೊರೆ. ವಾತ್ಸಲ್ಯ ಮತ್ತು ಅನುಗ್ರಹ ಇರುವುದರಿಂದ ಈ ಜಗತ್ತಿನಲ್ಲಿಯ ನಮ್ಮ ಬಾಳು ಸಾರ್ಥಕ; ಇಲ್ಲವಾದರೆ ಇದು ಅಸಹನೀಯವಾಗಿಬಿಡುತ್ತಿತ್ತು.

ವಾತ್ಸಲ್ಯ-ಅನುಗ್ರಹಗಳ ಮೂಲ ಆಕರ ಮೇಲಿದೆ. ಆದರೆ ವಾತ್ಸಲ್ಯ-ಕರುಣೆಗಳಿಗಿಂತ ಅನುಗ್ರಹವು ಒಂದು ಹೆಜ್ಜೆ ಮುಂದಿದೆ. ಅದು ದಿವ್ಯ ಚೈತನ್ಯದ ಒಂದು ವಿಶಿಷ್ಟ ಶಕ್ತಿ. ಅದೇ ಮರ್ತ್ಯರಾದ ನಮ್ಮನ್ನು ಉಳಿಸಿ, ರಕ್ಷಿಸಿ, ಉದ್ಧರಿಸುವುದು.

ವಿಶ್ವಸಾಮಾನ್ಯವಾದ ನಿಸರ್ಗದ ನಿಯಮಗಳನ್ನು ಇಡಿ ಜಗತ್ತು ತಪ್ಪದೆ ಅನುಸರಿಸುತ್ತದೆ. ಪ್ರತಿಯೊಂದರಲ್ಲೂ ನಿಸರ್ಗ ತನ್ನ ಹಾದಿಯಲ್ಲೇ ಹೋಗುತ್ತದೆ. ದೇವರ ಅಥವಾ ಮಾತೃಶ್ರೀಯ ಅನುಗ್ರಹ ಒದಗಿ ಬಂದಾಗ ಮಾತ್ರ ಅದು ಎಲ್ಲ ನಿಯಮಗಳನ್ನೂ ಮೀರಿ ಅಪ

ಪಾಪವನ್ನು ನಿರ್ಮೂಲಿಸುತ್ತದೆ. ಆದುದರಿಂದಲೇ ಹಿಂದಿನ ಕಾಲದಿಂದ ದೈವಾನುಗ್ರಹವಾದಲ್ಲಿ ಮೂಕರು ಮಾತಾಡಬಲ್ಲರು, ಕುಂಟರು ಗುಡ್ಡವನ್ನು ದಾಟಬಲ್ಲರು ಎಂದು ಹೇಳುತ್ತ ಬಂದದ್ದುಂಟು. ಪಾಪಿಗೂ ಸ್ವೇಚ್ಛಾಚಾರಿಗೂ ದೇವರ ಅನುಗ್ರಹ ದೊರಕಬಹುದು. ಈ ಮಾತಿಗೆ ಬಿಲ್ವಮಂಗಲ, ಜಾಗೈಮಧೈ, ಸೇಂಟ್ ಆಗಸ್ಟೈನ್ ಮತ್ತು ಇತರ ಎಷ್ಟೋ ಜ್ಞಾತಾಜ್ಞಾತ ವ್ಯಕ್ತಿಗಳ ಉದಾಹರಣೆಗಳಿವೆ.

ಆದರೆ ಕಾರ್ಯಕರವಾಗಬೇಕಾದರೆ ದೈವಾನುಗ್ರಹಕ್ಕೆ ಕೆಲ ಆಂತರಿಕ ಉಪಾಧಿಗಳಿವೆ. ಅದಕ್ಕೆ ಪ್ರದಾತೃ-ಆದಾತೃಗಳಿರಬೇಕು. ಆದಾತೃವಿಗೆ ಎಲ್ಲಾದರೂ ಎಷ್ಟಾದರೂ ಸ್ವೀಕಾರಾರ್ಹತೆ ಇರಬೇಕು. ಈ ಉಪಾಧಿಗೆ 'ಅನುಗ್ರಹಾರ್ಹಸ್ಥಿತಿ' ಎಂದು ಹೆಸರು. ಎಷ್ಟೋ ಸಲ ವ್ಯಕ್ತಿಯಲ್ಲಿ ಈ 'ಅನುಗ್ರಹಾರ್ಹಸ್ಥಿತಿ' ಸಿದ್ಧವಾಗುವುದು ಮಾನಸಾತೀತವೂ ಬುದ್ಧ್ಯತೀತವೂ ಆದ ದಪ್ಪಪರದೆಗಳ ಹಿಂದೆ; ಅನುಗ್ರಹಾರ್ಹ ಸ್ಥಿತಿ ಬಂದಾಗ ಅನುಗ್ರಹವು ಸ್ವತಃ ಕೆಲಸಮಾಡುತ್ತದೆ'.

ಈ ಅನುಗ್ರಹವನ್ನು ಭೂತಲದಲ್ಲಿ ತಂದುಸಿಲ್ಲಿಸಲೆಂದೇ ಮಾತೃಶ್ರೀ ಇಲ್ಲಿಗೆ ಅವತರಿಸಿ ಬಂದಿದ್ದಾಳೆ. ಶ್ರೀ ಅರವಿಂದ ಉವಾಚಃ

"........ಇಲ್ಲಿ ಅವಳು ಶರೀರಸ್ಥೆಯಾಗಿ ಭೌತಿಕ ಪ್ರಪಂಚವನ್ನು ಪರಿವರ್ತಿಸುವುದರ ಸಲುವಾಗಿ ಈ ವರೆಗೂ ವ್ಯಕ್ತವಾಗದಿರುವ ಏನೋ ಒಂದನ್ನು ಇಲ್ಲಿಗೆ ತಂದಿಳಿಸಲು ಕೆಲಸ ಮಾಡುತ್ತಿದ್ದಾಳೆ— ಆ ಉದ್ದೇಶಕ್ಕಾಗಿ ದೇವತಾಶಕ್ತಿ ಇಲ್ಲಿಗೆ ಬಂದು ದುಡಿಯುತ್ತಿದೆ ಎಂದೇ ನೀವು ಅವಳ ಬಗೆಗೆ ತಿಳಿದುಕೊಳ್ಳಬೇಕು".

ಈ ದಿವ್ಯಾನುಗ್ರಹ ಕಾರ್ಯಕಾರಿಯಾಗುವಾಗ, ಏನಾಗುತ್ತದೆ? ಪರಿವರ್ತನ— ಇಡಿ ಬಾಳಿನ ಬದಲಾವಣೆ. ಅದು ಸ್ವಭಾವವನ್ನೂ ದೃಷ್ಟಿಕೋನವನ್ನೂ ಬದಲಾಯಿಸುವುದು; ಕ್ರಮಶಃ ಮನಸ್ಸಿನಲ್ಲಿ ಒಂದು ಬದಲಾವಣೆಯಾಗುವುದು; ಪ್ರಾಣಮಯ— ಅನ್ನಮಯ ಕೋಶಗಳಲ್ಲೂ

ಪರಿವರ್ತನವಾಗುವುದು. ಆದರೆ ಹೊರ ಪರಿಸರದಲ್ಲಿ ಒಮ್ಮೆ ಯಾವ ಬದಲಾವಣೆಯೂ ಉಂಟಾಗದಿರಬಹುದು— ಅದರಲ್ಲೊಮ್ಮೆ ಬಡತನ-ಕರ್ಕಶಕಾರ್ಪಣ್ಯಗಳು ತುಂಬಿರಬಹುದಾಗಿದೆ. ಆದರೆ ನಿನ್ನ ದೈವ ಬದಲಾಯಿಸಲಿರುವುದರಿಂದ, ನಿನ್ನ ಮನಃ ಪ್ರಣಾಲಿ ಬದಲಾಯಿಸುವುದು. ದಿವ್ಯಾನುಗ್ರಹದ ಬಲದಿಂದ ನೀನಾಯೆಲ್ಲವನ್ನೂ ಸುಲಭವಾಗಿ ಪೊಕ್ಕು ಹೊರ ಬೀಳುವೆ. ನೀನು ಎಲ್ಲ ಅಂಜಿಕೆ, ಉತ್ಕಂಠೆ, ದುಃಖಗಳಿಂದ ಮುಕ್ತನೂ ಸುರಕ್ಷಿತನೂ ಆಗುವೆ. "ದಿವ್ಯಮಾತೆ" ಎಂಬ ಗ್ರಂಥದಲ್ಲಿ ಶ್ರೀ ಅರವಿಂದರೆಂದದ್ದನ್ನು ಕಿವಿಗೊಟ್ಟು ಕೇಳಿರಿ:

"ದಿವ್ಯಮಾತೆಯ ಅನುಗ್ರಹವೂ ರಕ್ಷಣೆಯೂ ನಿಮಗೆ ದೊರಕಿರುವಾಗ ನಿಮ್ಮನ್ನು ಯಾರು ಮುಟ್ಟಿಯಾರು? ಯಾರಿಗೆ ನೀವು ಅಂಜ ಬೇಕಾದ್ದಿದೆ? ಅದರ ಅಲ್ಪಾಂಶವಿದ್ದರೂ ಸಾಕು— ಅದು ನಿಮ್ಮನ್ನು ಕಷ್ಟಗಳಿಂದ, ಅಡಚಣೆಗಳಿಂದ, ಅಪಾಯ-ಆಪತ್ತುಗಳಿಂದ—ಆ ಮೂಲಕ—ಪಾರು ಮಾಡುವುದು.... ಅದರ ಸ್ಪರ್ಶವು ಕಷ್ಟಕರ ಸಂನಿವೇಶಗಳನ್ನು ಸದವಕಾಶಗಳನ್ನಾಗಿ ಪರಿವರ್ತಿಸಬಲ್ಲದು— ಸೋಲನ್ನು ಗೆಲುವನ್ನಾಗಿಯೂ ದೌರ್ಬಲ್ಯವನ್ನು ಚಾಚೂತಪ್ಪದ ಬಲವನ್ನಾಗಿಯೂ ಬದಲಾಯಿಸಬಲ್ಲದು. ಏಕೆಂದರೆ ದಿವ್ಯಮಾತೆಯ(ಮಾತೃಶ್ರೀಯ) ಅನುಗ್ರಹವೆಂಬುದು ಪರಮಾತ್ಮನ ಅನುಮತಿ: ಅದು— ಇಂದಲ್ಲದಿದ್ದರೆ ನಾಳೆ— ಫಲಿಸಿಯೇ ತೀರುತ್ತದೆ— ಅದು ಆಜ್ಞಪ್ತ, ಅಪರಿಹಾರ್ಯ, ಅಪ್ರತಿಭಟನೀಯ".

ಭಯ-ಶಂಕೆಗಳೆಲ್ಲವುಗಳಿಂದ ಮುಕ್ತವಾಗಿ, ನೀವು ಬದಲಾದ ಮನುಷ್ಯರಾಗಿಬಿಡುವಿರಿ: ನೀವು ಶಾಂತಿ, ಸಂತೋಷ, ಸುಬೋಧ, ಆನಂದಗಳಲ್ಲಿ ಬಾಳುವಿರಿ. ಸಂಕುಚಿತವಾದ ಅಹಂಭಾವವೂ ಸ್ವಾರ್ಥಮತಿಯೂ ಅದೃಶ್ಯವಾಗುವುವು. ಏಕೆಂದರೆ, ನಿಮ್ಮನ್ನು ಸೇರಿಸಿಕೊಂಡು ಎಲ್ಲವೂ ದೇವರಿಗೆ ಸೇರಿದವುಗಳೆಂಬುದು ನಿಮಗೆ ಸಾಕ್ಷಾತ್ಕಾರವಾಗುವುದು.

ಸಾಮಾನ್ಯನಲ್ಲಿರಲಿ-ಸಾಧಕ ಕೂಡ ಇದನ್ನು ನಂಬುವುದು ಕಷ್ಟವೆಂಬುದು ಯಾರಾದರೂ ಒಪ್ಪಲೇಬೇಕು. ದೇವತಾನುಗ್ರಹ ಎಲ್ಲವನ್ನು

ಸಾಧುವುದಾದರೆ ನನ್ನ ವೈಯಕ್ತಿಕ ಶಕ್ತಿಗೂ ಪ್ರಯತ್ನಕ್ಕೂ ಯಾವ ಬೆಲೆಯಿದೆ? ಎಂದು ಕೇಳಬಹುದು. ನನಗೆ ವೈಯಕ್ತಿಕ ಶಕ್ತಿ-ಸಾಮರ್ಥ್ಯಗಳನ್ನೇಕೆ ದೇವರು ಕೊಟ್ಟ? ನನ್ನ ವೈಯಕ್ತಿಕ ಪ್ರಯತ್ನದಿಂದ ನನಗೇನೂ ಸಿಕ್ಕಲಾರದೇನು? ನನಗೆ ನನ್ನಲ್ಲಿ ವಿಶ್ವಾಸ ಇರಲೇಬಾರದೇ? ಎಂದೆಲ್ಲಾ ಕೇಳಿಯಾನು. ಇಂಥ ಎಲ್ಲ ಪ್ರಶ್ನೆಗಳಿಗೂ ಶ್ರೀ ಅರವಿಂದರು ಸ್ವಭಾವಸಹಜ ಉತ್ತರವನ್ನು ಕೊಟ್ಟಿದ್ದಾರೆ

“ಬಲ-ಅನುಗ್ರಹಗಳೆಂದು ನಾನು ಹೇಳುವುದರಲ್ಲಿ ಯಾವ ಅಂಶವೂ ಅರ್ಥವಾಗದಿರುವಂಥದಲ್ಲ. ಬಲಕ್ಕೆ ಆಧ್ಯಾತ್ಮಿಕ ಸಾಕ್ಷಾತ್ಕಾರದ ಪ್ರಯತ್ನದಲ್ಲಿ ಉಪಯುಕ್ತತೆಯಿದೆ. ಆದರೆ ಇನ್ನಾವುದರ ನೆರವೂ ಇಲ್ಲದೆ ಅದೊಂದೇ ಆಧ್ಯಾತ್ಮಿಕ ಸಾಕ್ಷಾತ್ಕಾರವನ್ನು ಮಾಡಬಲ್ಲದೆಂಬುದು ಘಾತಕವಾದ ಅತಿಶಯೋಕ್ತಿ. ಅತಿ ಒರಟಾದ ಅತ್ಯುಕ್ತಿ. ಅನುಗ್ರಹವು ಕಪೋಲಕಲ್ಪಿತವಲ್ಲ—ಅದು ಆಧ್ಯಾತ್ಮಿಕ ಅನುಭವಕ್ಕೆ ಸೇರಿದ ಒಂದು ವಾಸ್ತವಿಕ ಸಂಗತಿ. ವಿವೇಕಿಗಳಿಂದಲೂ, ಬಲಿಷ್ಠರಿಂದಲೂ ಶೂನ್ಯಾತ್ಮರೆಂದು ಗಣಿತವಾಗಬಹುದಾದವರು ಅನುಗ್ರಹವನ್ನು ಸಂಪಾದಿಸಿರುವರು. ಅನಕ್ಷರರೂ ಮಾನಸಿಕ ಶಕ್ತಿ-ತರಬೇತುಗಳಿಲ್ಲದವರೂ ಚಾರಿತ್ರ-ಸಂಕಲ್ಪ ದಾರ್ಢ್ಯವಿಲ್ಲದವರೂ ಅನುಗ್ರಹವನ್ನು ಬಯಸಿ ಒಮ್ಮೆಲೇ ಅಥವಾ ಬಹುಬೇಗ ಆಧ್ಯಾತ್ಮಿಕ ಸಾಕ್ಷಾತ್ಕಾರದೆತ್ತರಕ್ಕೆ ಬೆಳೆದದ್ದುಂಟು. ಅವರಲ್ಲಿ ಶ್ರದ್ಧೆಯಿತ್ತು ಅಥವಾ ಪ್ರಾಮಾಣಿಕತೆಯಿತ್ತು ಎಂಬ ಕಾರಣದಿಂದ. ಇವೆಲ್ಲಾ ಕಲ್ಪನಾವಿಲಾಸಗಳೆಂದು ತಿಳಿದು—ಈ ಸಾಮಾನ್ಯ ಆಧ್ಯಾತ್ಮಿಕ ಅನುಭವಗಳನ್ನು—ಇವು ಆಧ್ಯಾತ್ಮಿಕ ಇತಿಹಾಸದ ವಾಸ್ತವಿಕ ಸಂಗತಿಗಳಾಗಿರುವಾಗ—ಚರ್ಚಿಸಿ, ವಾದಿಸಿ ಏಕೆ ಅಲ್ಲವೆನ್ನಬೇಕೋ ನನಗೇನೂ ತಿಳಿಯದು.

“ಬಲವು ಆಧ್ಯಾತ್ಮಿಕವಾದುದೇ ಆದರೆ. ಆಧ್ಯಾತ್ಮಿಕ ಸಾಕ್ಷಾತ್ಕಾರದ ಒಂದು ಶಕ್ತಿಯೇ ಸರಿ: ಅದಕ್ಕೂ ಹೆಚ್ಚಿನ ಶಕ್ತಿಯೆಂದರೆ ಪ್ರಾಮಾಣಿಕತೆ; ಎಲ್ಲವುದಕ್ಕೂ ಹೆಚ್ಚಿನ ಶಕ್ತಿಯೆಂದರೆ ಅನುಗ್ರಹ. ಒಬ್ಬನು ಪ್ರಾಮಾಣಿಕನಾದರೆ ಎಷ್ಟು ವಿಳಂಬವಾದರೂ ಎಂಥ ಕಷ್ಟಗಳಿದ್ದಾ

ದರೂ ಅವನ್ನೆಲ್ಲಾ ದಾಟಿ ಅವನು ಗುರಿಯನ್ನು ಮುಟ್ಟುವನು" ಎಂದು ಎಷ್ಟೋ ಸಲ ನಾನು ಹೇಳಿದ್ದೇನೆ. ನಾನು ದೇವತಾನುಗ್ರಹವನ್ನು ಪದೇ ಪದೇ ಉಲ್ಲೇಖಿಸಿದ್ದೇನೆ. "ಅಳಬೇಡ—ನಾನು ನಿನ್ನನ್ನು ಎಲ್ಲ ಪಾಪ-ದೌರ್ಜನ್ಯಗಳಿಂದ ಮುಕ್ತಗೊಳಿಸುವೆನು" ಎಂಬ ಗೀತೋಕ್ತಿಯನ್ನು ಅನೇಕ ಬಾರಿ ಎತ್ತಿ ಹೇಳಿದ್ದೇನೆ".

ನಮ್ಮ ವೈಯಕ್ತಿಕ ಶಕ್ತಿ-ಪ್ರಯತ್ನಗಳಿಗಿಂತ ಅನುಗ್ರಹವು ಹೆಚ್ಚು ಹೆಚ್ಚು ಶಕ್ತಿಯುತವಾದುದು. ನಾವು ನಮ್ಮ ಬಲವನ್ನು ಬಳಸಬೇಕೆಂಬುದೇನೋ ನಿಜ. ಆದರೆ ಕೊನೆಯ ಪರಿಣಾಮಕ್ಕಾಗಿ ದೇವತಾನುಗ್ರಹವನ್ನು ಅವಲಂಬಿಸಬೇಕು. ಅದು ನಮ್ಮ ನೆರವಿಗೆ ಬಂದರೆ ಎಲ್ಲವನ್ನೂ ಸುಲಭಗೊಳಿಸುತ್ತದೆ. ಆದರೆ ನಮ್ಮ ಹಕ್ಕೆಂದು ಅದನ್ನು ಕೇಳಲಾರೆವು—ಅದಕ್ಕೆ ಯಾವ ಕಾಲದ ಮಿತಿಯನ್ನೂ ನಾವು ಹಾಕಲಾರೆವು. ಏಕೆಂದರದು ತನ್ನದೇ ಆದ ರೀತಿಯಿಂದ ಮತ್ತು ತನಗೆ ಬೇಕಾದ ಕಾಲದಲ್ಲಿ ಬರುವುದು.

ಆದರೆ ದೈವಾನುಗ್ರಹ ಅಥವಾ ಮಾತೃಶ್ರೀಯ ಅನುಗ್ರಹ ಹೇಗೆ ಬಂದು ಕೆಲಸ ಮಾಡುವುದು ? ಅದರ ಕಾರ್ಯದ ಕ್ರಮ ಯಾವುದು ? ಕೆಲ ವಿವರಗಳೊಂದಿಗೆ ಅರವಿಂದರು ಆ ಬಗ್ಗೆ ಬರೆದಿದ್ದಾರೆ :

"ನಾನು ದಿವ್ಯಾನುಗ್ರಹದ ಬಗ್ಗೆ ಸ್ವಲ್ಪ ಹೇಳಬಯಸುತ್ತೇನೆ—ಏಕೆಂದರೆ, ಮಾನವ ಬುದ್ಧಿ ಹೋಗುವ ಹಾದಿಯಿಂದ ಬಹಳ ಭಿನ್ನವಲ್ಲದ ಹಾದಿಯನ್ನು ಹಿಡಿದುಹೋಗುವ ಒಂದು ವಿಧದ ದಿವ್ಯ ಬುದ್ಧಿ ಅದು ಎಂದು ನೀವು ತಿಳಿದಿರುವಂತೆ ತೋರುತ್ತದೆ. ಆದರದು ಅದಲ್ಲ ... ಅದು ಎಲ್ಲ ನಿಯಮಗಳಿಗಿಂತ — ವಿಶ್ವನಿಯಮಕ್ಕಿಂತ — ಹೆಚ್ಚಿನದು. ಏಕೆಂದರೆ ಎಲ್ಲ ಆಧ್ಯಾತ್ಮಿಕ ದ್ರಷ್ಟಾರರೂ ವಿಶ್ವನಿಯಮವನ್ನು ಅನುಗ್ರಹದಿಂದ ಬೇರೆಯೆಂದು ವಿಂಗಡಿಸಿದ್ದಾರೆ. ಆದರೂ ಅದು ಅವಿವೇಕಿಯಲ್ಲ. ಅದರದೇ ಆದ ವಿವೇಕವೊಂದು ಅದಕ್ಕಿದೆ. ಆ ವಿವೇಕದ ಬಲದಿಂದ ಅದು ವಸ್ತು, ವ್ಯಕ್ತಿ, ಯುಕ್ತಾವಧಿ, ಯುಕ್ತ ಋತುಮಾನಗಳನ್ನು ಮಾನಸಿಕ

ಅಥವಾ ಇನ್ನಾವುದಾದರೂ ನೈಸರ್ಗಿಕ ದರ್ಶನಶಕ್ತಿಯಿಂದ ಭಿನ್ನವಾದ ದರ್ಶನಶಕ್ತಿಯಿಂದ ನೋಡುತ್ತದೆ.

"ಅದು ತನ್ನದೇ ಆದ ಅದ್ಭುತ ರಹಸ್ಯದ ರೀತಿಯಿಂದ ಕೆಲಸ ಮಾಡುತ್ತದೆ. ಮೊಟ್ಟಮೊದಲದು ಅವಗುಂಠನದೊಳಗಿನಿಂದ ಕೆಲಸಮಾಡುತ್ತದೆ; ವಸ್ತುಗಳನ್ನು ಸಿದ್ಧಗೊಳಿಸುತ್ತದೆ— ಆದರೆ ತಾನು ಪ್ರಕಟವಾಗುವುದಿಲ್ಲ. ಅನಂತರ ಅದು ಪ್ರಕಟವಾಗಬಹುದು. ಆದರೆ ತನ್ನಲ್ಲಿ ಏನಾಗುತ್ತಿದೆಯೆಂಬುವನ್ನು ಸಾಧಕ ಚೆನ್ನಾಗಿ ಅರಿಯಲಾರ: ಕೊನೆಯಲ್ಲಿ ಆ ಸಾಮರ್ಥ್ಯ ಅವನಲ್ಲಿ ತಲೆದೋರಿದಾಗ ಅವನು ಅನುಭವಿಸುತ್ತಾನೆ, ಅರ್ಥ ಮಾಡಿಕೊಳ್ಳುತ್ತಾನೆ ಅಥವಾ ಆ ಅನುಭವ— ಅರ್ಥಗ್ರಹಣಗಳನ್ನು ಆರಂಭಿಸುತ್ತಾನೆ...."

"ಆದರೆ ಯಾರೂ ಅನುಗ್ರಹವನ್ನು ತನ್ನ ಹಕ್ಕೆಂದೋ ಅಧಿಕಾರಕ್ಕೆ ವಶವರ್ತಿಯೆಂದೋ ಆಗ್ರಹಿಸಿ ಬೇಡಲಾರರು— ಅಂಥವರಿಗದು ಅನುಗ್ರಹವಾಗದು. ಕೂಗಿದ ಕೂಡಲೇ ಉತ್ತರ ಬರಬೇಕೆಂದು ಯಾರೂ ಹಕ್ಕು ಸಾಧಿಸಲಾರರೆಂಬುದನ್ನು ನೀವು ಬಲ್ಲಿರಿ. ಇಷ್ಟೇ ಅಲ್ಲ— ದೇವತಾನುಗ್ರಹ ಬರುವ ಮೊದಲು ಮತ್ತು ಅನಂತರ ಅದೃಷ್ಟವಾದ ಸುದೀರ್ಘ ಸಿದ್ಧತೆ ನಡೆದಿರುತ್ತದೆ; ಅನುಗ್ರಹೀತನು ತನಗೆ ದೊರೆತ ಅನುಗ್ರಹವನ್ನು ಉಳಿಸಿಕೊಳ್ಳಲು ಮತ್ತು ಬೆಳಸಿಕೊಳ್ಳಲು ಇನ್ನೂ ಬಹಳ ಕೆಲಸ ಮಾಡಬೇಕಾಗುತ್ತದೆ— ಎಂಬುದು ನನ್ನ ಅನುಭವ...."

"ದಿವ್ಯಾನುಗ್ರಹದ ಬಗೆಗೆ ಯಾವ ಸಂದೇಹವೂ ಇರಲಾರದು. ಪ್ರಾಮಾಣಿಕನು ದೇವರನ್ನು ಸೇರುತ್ತಾನೆ ಎಂಬುದೂ ಸಂಪೂರ್ಣ ಸತ್ಯವಾದ ಮಾತು".

ಶ್ರೀ ಅರವಿಂದರೂ ಮಾತೃಶ್ರೀಯೂ ದಿವ್ಯಾನುಗ್ರಹವು ಆಯ್ದ ಅಲ್ಪ ಸಂಖ್ಯಾತರಿಗಷ್ಟೇ ಮೀಸಲಲ್ಲ— ಅದು ಸರ್ವರಿಗೂ ಲಭ್ಯ—ಎಂದಿದ್ದಾರೆ. ಆದರೆ ನೀವು ಅದಕ್ಕೆ ಬೇಕಾದ ಸ್ವೀಕರ್ತೃತ್ವವನ್ನೂ ಸಾಮರ್ಥ್ಯವನ್ನೂ

ಸಂಪಾದಿಸಿರಬೇಕು; ನಿಮ್ಮಲ್ಲಿ 'ಅನುಗ್ರಹಾರ್ಹತೆ' ಇರಬೇಕು: ಅಂತಃಸಿದ್ಧತೆ ನಿಮಗಿರಲೇಬೇಕು.

ನಾನು ಹೇಗೆ ಅಂತಃಸಿದ್ಧತೆಯನ್ನು ಮಾಡಿಕೊಳ್ಳಬಲ್ಲೆ? ಎರಡೇ ಎರಡು ಅಪೇಕ್ಷೆ ಅಗತ್ಯ: ಉಜ್ವಲ ಬಯಕೆ ಮತ್ತು ಪ್ರಾಮಾಣಿಕತೆ. ನೀನು ಬಯಸಬೇಕು— ಗಂಭೀರವಾಗಿ ಬೇಡಬೇಕು— ದೇವರಿಗೆ ಅಥವಾ ಮಾತೃಶ್ರೀಗೆ ನಿನ್ನನ್ನು ಸಮರ್ಪಿಸಿಕೊಳ್ಳಬೇಕು ಮತ್ತು ಅನುಗ್ರಹವನ್ನು ಯಾಚಿಸಬೇಕು; ಇನ್ನಾವ ತಪಸ್ಸೂ ಅಗತ್ಯವಿಲ್ಲ. ಶ್ರದ್ಧೆ, ಭಕ್ತಿ, ಪ್ರೀತಿ, ದೇವತಾವಲಂಬನೆ, ದೈವಸಮರ್ಪಣ ಭಾವಗಳಾಗ ತಾವಾಗಿಯೇ ಉದಯಿಸುವುವು.

ಮೊಟ್ಟಮೊದಲು ಇರಬೇಕಾದವು ದೃಢ ವಿಶ್ವಾಸ ಮತ್ತು ಆತ್ಮಪ್ರತ್ಯಯ. ವಿಶ್ವಾಸವು ಭಕ್ತಿ, ಪ್ರೀತಿ ಮುಂತಾದ ಎಲ್ಲವನ್ನೂ ತರುತ್ತದೆ. ಸಮರ್ಪಣೆ ಎಂದರೆ ನಿರುಪಾಧಿಕವಾದ ಆತ್ಮತ್ಯಾಗ: 'ನಾನು ನಿನಗೆ ಎಲ್ಲವನ್ನೂ ಬಿಟ್ಟು ಕೊಡುತ್ತೇನೆ, ನೀನು ನನಗೆ ಬೇಕಾದುದನ್ನು ಮಾಡು' ಎಂದೋ ಶ್ರೀ ರಾಮಕೃಷ್ಣ ಪರಮಹಂಸರೆಂದಂತೆ, 'ಮಾರ್ಜಾರ ಕಿಶೋರದ ಹಾಗೆ' ತಾಯಿ ಬರುವ ವರೆಗೆ ಅವಳನ್ನು ಕರೆಯುತ್ತಾ ಹೋಗುವುದು' ಆತ್ಮತ್ಯಾಗ ಎನ್ನಿಸುತ್ತದೆ. ಅರವಿಂದರೂ ಈ ಅಂಶವನ್ನು ಒತ್ತಿ ಹೇಳಿದ್ದಾರೆ: ಮಾರ್ಜಾರ ಕಿಶೋರ ಮನಸ್ಕರಿಗೆ ಅನುಗ್ರಹವು ಬಹು ಸುಲಭವಾಗಿ ದೊರಕುತ್ತದೆ— ಎಂದು. ಸೂರ್ಯಪ್ರಕಾಶದ ಅವಲಂಬನ ಮಾರ್ಗವೆಂದು ಅದನ್ನವರು ಕರೆದಿದ್ದಾರೆ.

ಆದರೆ ಈ ಬಗೆಯ ಸಾಧನಮಾರ್ಗವನ್ನು ಹಿಡಿಯಬೇಕಾದರೆ, ನೀನು ಕುಳಿತಿರು, ಕೆಲಸಮಾಡುತ್ತಿರು, ಉಣ್ಣುತ್ತಿರು, ವಿಶ್ರಮಿಸುತ್ತಿರು ಅಥವಾ ಮಲಗಿರು, ಯಾವಾಗಲೂ ದೇವರನ್ನು ನೆನೆಯುತ್ತಿರಬೇಕು— ಅದೇ ಒಂದು ಅಭ್ಯಾಸವಾಗಬೇಕು. ಅಭ್ಯಾಸವಾಗಲು ಸ್ವಲ್ಪ ಕಾಲ ಬೇಕು, ಆದರೆ ಬಯಕೆ ದೃಢವಾದುದಾದರೆ ಅದು ತಾನಾಗಿಯೇ ಬರುತ್ತದೆ. ಧ್ಯಾನಕಾಲದಲ್ಲಿ ಅಥವಾ ವಿರಾಮಕಾಲದಲ್ಲಿ ಸುಮ್ಮನೆ ನೆನಪು ಮಾಡಿಕೊಳ್ಳುವುದು ಕೆಲಸಕ್ಕೆ

ಬರದು; ಧ್ಯಾನವು ಮನದಲ್ಲಿ ಯಾವಾಗಲೂ ಸಾಗುತ್ತಿರಬೇಕು—ಹೊರಗೆ ನೀನು ಯಾವುದರಲ್ಲಿ ಮಗ್ನವಾಗಿದ್ದರೂ ಸರಿಯೆ. ದೇವಾಹ್ವಾನ ಬಂದವರೆಲ್ಲರಿಗೂ ಅದು ಸ್ವಾಭಾವಿಕವಾಗಿಯೇ ಇರುತ್ತದೆ. ನಿನಗಾಕಡೆಯ ಒಲಿತವಿದ್ದರೆ ದೇವರ ಕರೆ ಬಂದಿದೆ ಎನ್ನಬೇಕು. ಶ್ರೀ ಅರವಿಂದರೆನ್ನುತ್ತಾರೆ: "ಅಪ್ರಮೇಯನನ್ನಾಯ್ದುಕೊಂಡವನನ್ನು ಅಪ್ರಮೇಯ ಆಯ್ದುಕೊಳ್ಳುತ್ತಾನೆ; ಮಾತೃಶ್ರೀ ಕೂಡ, "ಇದನ್ನೆಂದೂ ಮರೆಯದಿರು. ನಿನಗೆ ದೇವರ ಆಲೋಚನೆ ಬಂದ್ದಿರೆ ಅದು ದೇವರು ನಿನ್ನ ಬಗ್ಗೆ ಆಲೋಚನೆ ಮಾಡಿದುದರಿಂದ. ಒಮ್ಮೆ ನೀನು ದೇವವ್ರತನಾದರೆ ಸಾಕು— ನಿನ್ನ ಸಮಾಚಾರ ಖಾತ್ರಿಯಾದ ಹಾಗೆಯೇ ಸರಿ' ಎಂದಿದ್ದಾಳೆ".

ಆದುದರಿಂದ ಇದು ಒಮ್ಮುಖದ ಸಂಗತಿಯಲ್ಲ. ಅರವಿಂದರು ಸ್ಪಷ್ಟವಾಗಿ ಹೇಳಿದ್ದಾರೆ: ಎಲ್ಲ ಬಗೆಯ ಅಂಜಿಕೆಗಳಿಂದ ಅಪಾಯಗಳಿಂದ ಮತ್ತು ಅಪಘಾತಗಳಿಂದ ಕಾಪಾಡಿಕೊಳ್ಳಲೆಂದು ಅಂಗತ್ರಾಣಗಳನ್ನು ಧರಿಸಿ ಹೊರಡುವುದಾದರೆ ಅದಕ್ಕೆ ಎರಡು— ಯಾಗಲೂ ಒಟ್ಟಾಗಿ ಇರುವ ಎರಡು—ಅಂದರೆ— ಮಾತೃಶ್ರೀಯ ಅನುಗ್ರಹ ಮತ್ತು ನಿನ್ನೊಳಗೆ ಶ್ರದ್ಧೆ, ಪ್ರಾಮಾಣಿಕತೆ ಮತ್ತು ಸಮರ್ಪಣ ಭಾವ ಎಂಬ ತ್ರಿಪುಟಿ ಇರಬೇಕು".

ಆದುದರಿಂದ ಇದು ಪರಸ್ಪರಾಹ್ವಾನದ ಒಂದು ಪ್ರಕರಣ. ಒಂದು ಮೇಲಿಂದ, ಮತ್ತೊಂದು ಕೆಳಗಿನಿಂದ-- ಇಳಿಯುವುದು, ಹತ್ತುವುದು (ಅವರೋಹಣ, ಆರೋಹಣ).

ನಿನ್ನ ಕಡೆಯಿಂದ ಮಾಡಬೇಕಾದುದೆಂದರೆ, ಕ್ರಮಶಃ ನೀನು ನಿನ್ನೊಳಗೆ ಅಂತಃಸ್ಥಿತಿಯನ್ನು ರಚಿಸಿಕೊಳ್ಳುತ್ತ ಹೋಗಬೇಕು. ಅದನ್ನು ಗಡಿಬಿಡಿಯಿಂದ ಮಾಡಲು ಸಾಧ್ಯವಿಲ್ಲ; ದೀರ್ಘಾವಧಿಯ ಸಮಯೋಗದ ಪ್ರಯತ್ನ ಬೇಕಾದೀತು. ಆ ಪ್ರಯತ್ನದ ಮುಖ್ಯಾಂಗವೆಂದರೆ ಮನಸ್ಸನ್ನು ಮೌನಗೊಳಿಸುವುದು. ಮನಸ್ಸೇ ಸ್ವತಃ ಆಲೋಚನೆಗಳನ್ನು ಹುಟ್ಟಿಸುವುದು. ಮನಸ್ಸೆಂಬುದು ಅವಿರತ ಅಲೆಗಳನ್ನು ಹುಟ್ಟಿಸುವ ಆಲೋಚನೆಗಳೆಂಬ ಮಿಸ್ಟೆಲಿಗಳು ಬಂದು ಹೋಗುವ ಕೊಳ ಅಥವಾ ಛತ್ರಿಯಂತಿದೆ. ಈ

ಅವಿಶ್ರಾಂತ ಮನವನ್ನು ಸ್ವಲ್ಪಕಾಲವಾದರೂ ಶಾಂತಗೊಳಿಸಬೇಕು— ಆಗ ಅದು ನಿರ್ವಿಚಾರ (ನಿರಾಲೋಚನ) ವಾಗುವುದು. ನಿನ್ನ ಅಕ್ಷುಬ್ಧವೂ ಶಾಂತವೂ ಆದ ಕೋಳದಲ್ಲಿ ಸ್ವರ್ಗೀಯ ಚಂದ್ರಮನು ತನ್ನ ಅವಿಚ್ಛಿನ್ನ ಪ್ರತಿಮೆಯೊಡನೆ ಪ್ರತಿಬಿಂಬಿಸಲಿ. ಆಗ ಆ ಪ್ರತಿಫಲನವು ಪೂರ್ಣವೂ ನಿರ್ವಿಕಾರವೂ ಆಗುವುದು. ನಿನ್ನ ದೇವಾಲಯದ ಎಲ್ಲ ಹೊಲೆ-ಹೊಲಸುಗಳನ್ನು ತೆಗೆದು ಬಿಸಾಟು ಸ್ವಚ್ಛಗೊಳಿಸು. ಆಗ ನಿನ್ನ ದೇವರು ಅಲ್ಲಿ ಸುಲಭವಾಗಿ ಹೊಕ್ಕು ಉಳಿದುಕೊಳ್ಳುವನು. ನಿನ್ನ ಮನಸ್ಸು ನಿರ್ವಿಚಾರ ಸ್ವರೂಪದ ಸಮಾಧಿಯನ್ನು ಹೊಂದಿದಾಗ ಒಂದು ತಪ್ಪಿದ ವಿಚಾರವೊಂದೆರಡು ಹೊರ ಹೊರಗೆ ವ್ಯೈದೋರಿದರೂ ಅವುಗಳನ್ನು ಒಳಹೊಗಗೊಡಬೇಡ. ಎಲ್ಲವುಗಳಿಂದಲೂ ದೂರವಿರು. ಆಗ ಅವು ಮಿಂಚಿ ಮಾಯವಾಗುವ ಮೋಡಗಳಂತಾಗುವುವು. ಮನಸ್ಸು ಸ್ತಿಮಿತವೂ ಶಾಂತವು ಆದಾಗ ಮಾತೃಶ್ರೀಗೆ ಉನ್ಮುಖವಾಗಿ ಅದನ್ನು ತೆರೆದಿಡು ಮತ್ತು ಅವಳ ಕೃಪೆಯನ್ನು (ಅನುಗ್ರಹವನ್ನು) ಬೇಡು.

ಇದು ಕಠಿಣ; ಆದರೆ ಇದೇನೂ ಅಸಾಧ್ಯವಾದುದಲ್ಲ. ಅನುಗ್ರಹವು ನಿನ್ನೆಡೆಗೆ ಬರಲು ಸಿದ್ಧವಾದಾಗ ಈ ಸ್ಥಿತಿ ಬಹುಬೇಗ ಬರುವುದು, ಅಜ್ಞಾನಿ-ಅನಕ್ಷರ ದೈವಭಕ್ತರಲ್ಲೂ ಇದು ಸಂಭವಿಸುವುದು: ಹಾಗೆ ಸಂಭವಿಸುವುದು ತನ್ನುದೇ ಆದ ಮನಃ ಶಮನ ಮಾರ್ಗವು ಅವರಿಗೆ ಗೊತ್ತಿರುವುದರಿಂದ.

ಆದರೆ ಜಾಗರೂಕತೆಯಿಂದಿರಬೇಕಾದ ಇನ್ನೊಂದು ಅಂಶವಿದೆ: ನಿನ್ನ ಮನಸ್ಸು ನಿರ್ವಿಚಾರ ಸ್ಥಿತಿಯಲ್ಲಿರುವಾಗ ಯಾವುದಾದರೂ ಅದಿವ್ಯ (ದೈತ್ಯ) ಶಕ್ತಿಗಳು ಒಳಹೋಗಲು ಈ ಅವಕಾಶವನ್ನು ಬಳಸಿಕೊಂಡು ನಿನ್ನನ್ನು ಅಡ್ಡಹಾದಿಗೆಳೆಯಲು ಯತ್ನಿಸಬಹುದು. ಆದುದರಿಂದ ನೀನು (ಕಾವಲುಗಾರನಂತೆ) ಎಚ್ಚರದಿಂದಿದ್ದು ನಿನ್ನ ವಿವೇಚನ ಶಕ್ತಿಯನ್ನು ಉಪಯೋಗಿಸಬೇಕು. ಅನುಗ್ರಹಾಶೆಯು ಸಡಿಲವಾಗಬಾರದು— ಅದು ನಿತ್ಯನೂತನವೂ ಉಜ್ವಲವೂ ಆಗಿರಬೇಕು— ಏಕೆಂದರೆ, ದೇವರ ಕೃಪಾಕಟಾಕ್ಷ ನಿನ್ನ ಮೇಲೆ ಎಂದು ಬೀಳುವುದೆಂಬುದು ನಿನಗರಿಯದು. ಆದುದರಿಂದ ನೀನು ನಿನ್ನನ್ನು ಸದಾ ಸ್ವೀಕರ್ತೃತ್ವದಿಂದ ಸಿದ್ಧಗೊಳಿಸಿ ಇಟ್ಟು ಕೊಂಡಿರಬೇಕು.

ಕೊಡುವುದಕ್ಕೂ ತೆಗೆದುಕೊಳ್ಳುವುದಕ್ಕೂ ನಡುವೆ ಅಂತರವಿರುವುದೂ ಉಂಟೆಂಬುದನ್ನು ನೆನಪಿಟ್ಟುಕೊಳ್ಳಬೇಕು. ನಿನ್ನ ಅನುಗ್ರಹವನ್ನು ಕಳಿಸಿ ಕೊಡೆಂದು ಮಾತೃಶ್ರೀಯನ್ನು ಯಾಚಿಸಿ ಅವಳ ಕರುಣೆಯನ್ನು ಎಚ್ಚರಗೊಳಿಸುವುದು ಅಷ್ಟೇನೂ ಕಷ್ಟವಲ್ಲ, ಆದರೂ ಅದನ್ನು ಸ್ವೀಕರಿಸುವುದರಲ್ಲಿ ವಿಲಂಬ ವುಂಟಾಗಬಹುದು. ಏಕೆಂದರೆ ಪಾತ್ರ ಪಾತ್ರತೆಯನ್ನಿನ್ನೂ ಪಡೆದಿರುವುದಿಲ್ಲ. ಅವನಲ್ಲಿ ಇನ್ನೂ ಸ್ವಲ್ಪ ನ್ಯೂನತೆ. ಅಶುಚಿ. ಅಪ್ರಮಾಣಿಕತೆ ಅಡಗಿದ್ದು ಅದು ಸಂಕುಚಿತವಾಗಿರುವುದರಿಂದ. ನಿಕಟವಾದ ಶಾರೀರಿಕ ಸಂಪರ್ಕದಿಂದಷ್ಟೇ ಅನುಗ್ರಹವನ್ನು ಪಡೆಯಲು ಬರದು. ನಿತ್ಯವೂ ಶಾರೀರಿಕ ಸಂಪರ್ಕ ದೊರೆತಾಗಲೂ ಒಬ್ಬನಿಗೆ ಅನುಗ್ರಹ ದೊರಕದಿರಬಹುದು. ಹಾಗಲ್ಲದೆ, ಯಾವಾಗಲೂ ಒಳ ಸಂಪರ್ಕವನ್ನಿಟ್ಟುಕೊಂಡಾತ ಬಹಳ ದೂರದಲ್ಲಿದ್ದರೂ ಅವನಿಗೆ ಅವಳ ಅನುಗ್ರಹ ದೊರಕಬಹುದು.

ಆ ಅತರ್ಕ್ಯ ಅನುಗ್ರಹವನ್ನು ನೀನು ಪಡೆದಾಗ ಎಲ್ಲವೂ ಸುಲಭವಾಗುವುದು. ವಿಕಾಸದ ಇಡಿ ಪ್ರಕ್ರಿಯೆಯನ್ನದು ತ್ವರಿತಗೊಳಿಸುವುದು. ಜನ್ಮಾಂತರಗಳು ಕಳೆದಮೇಲೆ ಸಾಧಿಸಬಹುದಾದುದು ಇಂದೇ, ಈ ಬಾಳಿನಲ್ಲೇ. ಈ ಜನ್ಮದಲ್ಲೇ ಸಾಧ್ಯವಾಗುವುದು (ಸಿದ್ಧಿಸುವುದು). ಅನುಗ್ರಹವು ನಿನ್ನನ್ನು ನಿನ್ನ ಆತ್ಯಂತಿಕ ಗುರಿಗೆ ಒಯ್ದು ಮುಟ್ಟಿಸುವುದು. ನಡೆದುಕೊಂಡು ಹೋಗುವುದಕ್ಕೂ ವಿಮಾನ ಪ್ರಯಾಣದಿಂದ ಹೋಗುವುದಕ್ಕೂ ಇರುವ ವ್ಯತ್ಯಾಸವು ನಿರನುಗ್ರಹ-ಸಾನುಗ್ರಹ ವಿಕಾಸಸಿದ್ಧಿಗಳ ನಡುವೆ ಇದೆ.

ಆದರೆ ನೀನಿದನ್ನು ನೆನಪಿಟ್ಟುಕೊಳ್ಳಬೇಕು: ಅನುಗ್ರಹವು ನಿನ್ನ ವೈಯಕ್ತಿಕ ಲಾಭಕ್ಕಾಗಿ ಮಾತ್ರ ಅಲ್ಲ. ಅನುಗ್ರಸಂಪನ್ನನೂ ಅನುಗ್ರಹ ಸಮರ್ಥನೂ ಆದವನು ಮುಂದಕ್ಕೆ ಹೋಗಬೇಕು. ಮಾತೃಶ್ರೀಯ (ದೇವರ) ಕಾರ್ಯದಲ್ಲಿ ನೆರವಿಗನಾಗಬೇಕು: ದೇವರಿಗಾಗಿ ನಿನ್ನ ಹೊಸಶಕ್ತಿಯನ್ನು ಬಳಸಬೇಕು.

* * *

ಮಾತೃಶ್ರೀಯ ಸೇವಾಧರ್ಮವನ್ನು ಕುರಿತು

ಇಲ್ಲಿ ಕೆಲಸಮಾಡಲೆಂದು ನಾವೆಲ್ಲ ಇಲ್ಲಿ ಹುಟ್ಟಿದ್ದೇವೆ. ನಾವು ಕೆಲಸ ಮಾಡಲೇ ಬೇಕು. ಯಾವ ಕೆಲಸವೂ ಇಲ್ಲದೆ ಯಾರೂ ಬದುಕಲಾರರು. ಯಾವುದಕ್ಕಾಗಿ, ಯಾರಿಗಾಗಿ ನಾವು ಕೆಲಸ ಮಾಡಬೇಕು? ಕೇವಲ ನಮಗಾಗಿ ನಾವು ಕೆಲಸಮಾಡಬೇಕೇ ? ನನಗಾಗಿ ಮಾತ್ರವೇ ? ಈ ಜೀವನದ ಉದ್ದಕ್ಕೂ ನಾವು ಕೆಲಸ ಮಾಡಿ ಸಾಯುವೆವು. ಅನಂತರ ಇನ್ನೊಂದು "ನಾನಿ" ಗಾಗಿ ದುಡಿಯಲು ಹುಟ್ಟುವೆವು, ಎಂದಮೇಲೆ ನಾವು ದುಡಿಯುವುದು ಆ "ನನಗೆ", ಈ "ನನಗೆ" ಎಂಬುದು ಸುಳ್ಳು. ಹಾಗಾದರೆ ಈ ಎಲ್ಲ ಕೆಲಸದ ಉದ್ದೇಶವೇನು? ಯಾವಾಗಲೂ ಸಕ್ರಿಯವಾಗಿರುವ ಈ ಸೃಷ್ಟಿಯ ಉದ್ದೇಶವೇನು ? ಒಮ್ಮೆ ಎಚ್ಚಿಸಿದರೆ ಈ ಪ್ರಶ್ನೆಗಳಿಗೆ ಉತ್ತರ ಕೊಡುವುದು ಕಷ್ಟವಾಗುವುದು.

ವಿಜ್ಞಾನವು ಈ ವರೆಗೆ ಯಾವ ಸಮರ್ಪಕ ಉತ್ತರವನ್ನು ಕೊಟ್ಟಿಲ್ಲ. ಕ್ರಮಿಕ ಪ್ರಜ್ಞಾ ವಿಕಾಸವು (ಕ್ರಮಮುಕ್ತಿಯು) ಸೃಷ್ಟಿಯ ಉದ್ದೇಶವೆಂದು ಅರವಿಂದರು ಎತ್ತಿ ತೋರಿಸಿದ್ದಾರೆ. ಈ ಲೀಲೆಯನ್ನು ಮುಂಬರಿಸಿಕೊಂಡು ಹೋಗಲೆಂದು ಮೂಲಭೂತ ದಿವ್ಯಪ್ರಜ್ಞೆಯು (ಈಶ್ವರ) ಜಡ ಅಜ್ಞಾನ ದ್ರವ್ಯದಲ್ಲಿ ತನ್ನನ್ನು ತಾನೆ 'ಸಿಲುಕಿಸಿಕೊಂಡಿತು.' ದ್ರವ್ಯವೆಂದರೆ, ಸೂರ್ಯನಿಂದ ಹೇಗೋ ಹೊರದೂಡಲ್ಪಟ್ಟು ಅಪಕ್ಷಿಪ್ತವಾದ ಘನೀಭೂತ ಜ್ವಲತ್ ಸಾಮಗ್ರಿ. ಕ್ರಮೇಣ ತಣ್ಣಗಾದ ಈ ಉರಿವೊಡನೆಬಂಡಲು ಪೃಥಿವಿಯಾಗಿ ಪರಿಣಮಿಸಿತು. ಪ್ರಜ್ಞಾ (ಚೇತನೆ) ಲೀಲೆಗದು ರಂಗಸ್ಥಳವಾಗಬೇಕೆಂಬುದು ಉದ್ದೇಶ. ತಣಿದ ಈ ಪೃಥ್ವಿಯ ಮೇಲೆ ಮೊಟ್ಟಮೊದಲು ಹಸಿರು ಹಸಿರಾದ ಕಡಲುಗಳೆ ಮತ್ತು ಗಿಡಗಳು ಮೈದೋರಿದವು ಮತ್ತು

ಅವ್ಯಕ್ತ ಚೇತನೆಯ ಕೆಲ ಅಂಶಗಳೊಡನೆ ಸಸ್ಯಜಾತಿ ತಲೆದೋರಿತು. ಅನಂತರ ಕ್ರಮೇಣ ಪ್ರಾಣಿ ಜಾತಿಯು ಪ್ರೈದೋರತೊಡಗಿತು. ಅದರಲ್ಲಿ ವಿವಿಧ ಉಪಜಾತಿಗಳಿಗೆ ಸೇರುವ ಚಿಕ್ಕ ದೊಡ್ಡ ಪ್ರಾಣಿಗಳು ಹುಟ್ಟಿದವು. ಅವುಗಳಲ್ಲಿ ಚೇತನೆಯು (ಪ್ರಜ್ಞೆಯು, ಚೈತನ್ಯವು) ಪ್ರಮುಖವಾಯಿತು. ಆದರೆ ಅವುಗಳಲ್ಲಿ ಮನಸ್ಸು ಇರಲಿಲ್ಲ. ಆ ಮೇಲೆ ಮಾನವಕುಲ ಉದಯಿಸಿತು. ಅದಕ್ಕೆ ಜೀವಶಕ್ತಿ-ಮನಃ ಶಕ್ತಿಗಳೆರಡೂ ಇವೆ. ಇಲ್ಲಿಯವರೆಗೆ ನಾವು ಕ್ರಮವಿಕಾಸ ಪಥವನ್ನು ಅರ್ಥಮಾಡಿ ಕೊಳ್ಳಬಹುದು. ಆದರೆ ಈ ವಿಕಾಸ ಲೀಲೆ ಇಲ್ಲಿಗೆ ಮುಗಿದಿಲ್ಲ. ಮಾನವ ಮನಸ್ಸು ಕೊನೆಯ ಹಂತವಲ್ಲ. ಈ ಮಾನಸ ಮಾನವನಿಂದ ಒಂದು ವಿಧದ ಅತಿಮಾನಸವುಳ್ಳ ಅತಿಮಾನವ ಬೆಳೆದು ನಿಲ್ಲುತ್ತಾನೆ.

ಆದರೆ ಅವರು ಮತ್ತೆ ಹೇಳುತ್ತಾರೆ— ವಿವಿಧ ಶಕ್ತಿಗಳನ್ನುಳ್ಳ ಮನಸ್ಸನ್ನು ನಮಗೆ ದೇವರು ಕೊಟ್ಟಿದ್ದಾನೆ. ಚೈತನ್ಯದ ಮುಂದಿನ ವಿಕಾಸ ಲೀಲೆಯಲ್ಲಿ ನೆರವಾಗುವ ಶಕ್ತಿಯನ್ನೂ ಕೆಲ ಮಟ್ಟಿನ ವಿಕಲ್ಪವನ್ನೂ ಅವನು ನಮಗೆ ಕೊಟ್ಟಿದ್ದಾನೆ: ಆ ಮೂಲಕ ವಿಕಾಸ ಪ್ರಕ್ರಿಯೆಯನ್ನು ತ್ವರಿತಗೊಳಿಸಲಾಗುತ್ತದೆ. ಇದು ದೇವರ ಕೆಲಸದಲ್ಲಿ ಸೇರಿಕೊಳ್ಳಲು ನಮಗೆ ಅನನ್ಯ ಅವಕಾಶ. ಆದರೆ ಅವನು ಅದನ್ನು ಮಾಡಲು ಒತ್ತಾಯ ತರುವುದಿಲ್ಲ. ನಮ್ಮದೇ ಆದ ಹಾದಿಯಲ್ಲಿ ಹೋಗಲು ನಮಗೆ ಮುಕ್ತ ಆಯ್ಕೆಯ ಅವಕಾಶವನ್ನು ಕೊಟ್ಟಿದ್ದಾನೆ. ನಾವೇ ನಿರ್ಣಯ ಮಾಡಲು ಬೇಕಾದ ಬುದ್ಧಿಯನ್ನೂ ಅವನು ನಮಗೆ ಕೊಟ್ಟಿದ್ದಾನೆ.

ನಾವು ಇನ್ನೂ ಅಸ್ಪಷ್ಟವಾಗಿರುವ ಸುಪ್ತ ಚೇತನೆಯನ್ನು ಹೆಚ್ಚು ಹೆಚ್ಚಾಗಿ ಎಚ್ಚರಿಸಲು ಪ್ರಯತ್ನಿಸಿ ಮೂಲಭೂತ ಜಡತೆಯನ್ನು ದೂರೀಕರಿಸಬೇಕೆಂಬುದು ಅತಿ ಮುಖ್ಯವಾದ ಅಂಶವೆಂಬುದು ಮೇಲಿನ ಮಾತಿನಿಂದ ತಿಳಿದು ಬರುತ್ತದೆ. ಬಹುಶಃ ಅವಿಜ್ಞಾತವಾಗಿ ಕೆಲ ಮಟ್ಟಿಗೆ ಆ ಕೆಲಸವನ್ನು ನಾವು ಮಾಡುತ್ತಲೇ ಇದ್ದೇವೆ ಎಂಬುದು ನಿಜ ಸಂಗತಿ. ಬಾಲ್ಯದಿಂದ ಪ್ರೌಢತ್ವಕ್ಕೆ ಬೆಳೆದು ಬರುವಾಗ ನಾವು ವರ್ಷಕಳೆದ ಹಾಗೆ ಹೆಚ್ಚು ಹೆಚ್ಚು ಪ್ರಜ್ಞಾವಂತರಾಗುತ್ತ ಹೋಗುತ್ತೇವೆ. ಇದು ನಮ್ಮ ವೈಯಕ್ತಿಕ

ಲಾಭಕ್ಕಾಗಿ ಎಂದು ನಾವು ತಿಳಿಯುತ್ತೇವೆ— ಅಷ್ಟೆ. ನಮ್ಮ ಬುದ್ಧಿಯನ್ನು ಅತ್ತ ತಿರುಗಿಸುತ್ತೇವೆ, ವೈಯಕ್ತಿಕ ಲಾಭಕ್ಕಾಗಿ ನಮ್ಮ ಪ್ರಜ್ಞೆಯನ್ನು ಬಳಸಿಕೊಳ್ಳುತ್ತೇವೆ: ಆದರೆ ಬಹಳ ಸಲ ನಮ್ಮ ತರ್ಕವು ಸೋಲುವುದನ್ನು ನಾವು ಕಾಣುತ್ತೇವೆ.

ಈ ಅಹಂನಿಷ್ಠ ಅಥವಾ ವೈಯಕ್ತಿಕ ದೃಷ್ಟಿಕೋನವನ್ನು ಬದಲಾಯಿಸಬೇಕು. ವೈಯಕ್ತಿಲಾಭದ ವಿಚಾರವು ಮಿಥ್ಯೆ. ದೇವರ ಅಥವಾ ಮಾತೃಶ್ರೀಯ ಕೆಲಸ—ನಾವೆಲ್ಲ ಮಾಡುತ್ತಿರುವುದು. ನಮ್ಮ ಸಂಕಲ್ಪ ಶಕ್ತಿಯಿಂದ ನಾವು ನಿಜವಾಗಿ ಏನನ್ನೂ ಮಾಡುವುದಿಲ್ಲ; ಪರಿಸ್ಥಿತಿಯ ತಿರುಗಿನಿಂದ ನಾವು ಆ ಈ ಕೆಲಸವನ್ನು ಮಾಡಲು ಪ್ರಚೋದಿತರಾಗುವೆವು. ದೈವೇಚ್ಛೆಯಂತೆ ನಡೆಯಲೆಂದೇ ನಾವು ದೈವಸಂಕಲ್ಪದಿಂದ ನಿರ್ದೇಶಿಸಲ್ಪಡುತ್ತೇವೆ. ಉತ್ತೇಜನವು ಅಲ್ಲಿಂದ ಬರುತ್ತದೆ. ಆದರೆ ನಾವೇನೋ ನಮ್ಮ ಬುದ್ಧಿವಂತಿಕೆಯಿಂದ ಹಾಗೂ ಶಕ್ತಿಮತ್ತೆಯಿಂದಲೇ ಆ ಕೆಲಸವೆಲ್ಲ ಆಯ್ತೆಂದು ತಿಳಿದುಕೊಳ್ಳುತ್ತೇವೆ. ಅದೆಲ್ಲ ಬುಡವಿಲ್ಲದ ಕಲ್ಪನೆ: ಅದನ್ನು ಬಿಡಬೇಕು. ನಾವು ಏನಾದರೂ ಕೆಲಸ ಮಾಡತೊಡಗಿದರೆ— ಶ್ರಮ ಸಾಧ್ಯವಾದ ಕೆಲಸವನ್ನು ಮಾಡತೊಡಗಿದರೆ— ಅನಿರೀಕ್ಷಿತವಾಗಿ ನಮಗೆ ಆ ಕೆಲಸಕ್ಕೆ ಬೇಕಾದಷ್ಟು ಬಲ ಬರುತ್ತದೆ. ಅದೆಲ್ಲಿಂದ ಬರುತ್ತದೆ? ನಮ್ಮಿಂದ ಅಲ್ಲ. "ನಮ್ಮ ಬಲ ನಮ್ಮದಲ್ಲ; ಆಡಬೇಕಾದ ಆಟಕ್ಕೆ, ಮಾಡಬೇಕಾದ ಕೆಲಸಕ್ಕೆ ಅಗತ್ಯವಿರುವಷ್ಟನ್ನು ನಮಗೆ ಕೊಡಲಾಗಿದೆ. ಸರ್ವಶಕ್ತಿ ತತ್ವವು ನಮ್ಮ ಮೇಲಿದೆ, ಒಳಗಿದೆ, ಸುತ್ತಲೂ ಇದೆ. ನಮ್ಮ ಕೆಲಸಕ್ಕಾಗಿ ನಾವು ಅದನ್ನೇ ಅವಲಂಬಿಸಬೇಕು". ಅದು ದೇವರ ಕೆಲಸ ಮತ್ತು ದೇವರಿಂದ ಅಗತ್ಯವಾದ ಬಲವನ್ನು ಪಡೆಯುತ್ತೇವೆ.

ಆದುದರಿಂದ ನಿಜವಾದ ಸತ್ಯವನ್ನು ನಾವು ಸ್ವೀಕರಿಸಬೇಕು; ಮತ್ತು ನಮ್ರತೆಯಿಂದ ಮಾತೃಶ್ರೀಗೆ ನಮ್ಮನ್ನು ಸಮರ್ಪಿಸಿಕೊಳ್ಳಬೇಕು. ಎಲ್ಲವೂ ಅವಳ ಕೆಲಸವೇ— ನಮ್ಮದಲ್ಲ— ಎಂದು ಭಾವಿಸಿಕೊಳ್ಳಬೇಕು.

ತನ್ನ ಬಾಲ್ಯದಿಂದಲೇ ಮಾತೃಶ್ರೀ ಸ್ವತಃ ಅಂಥ ವಿಚಾರವನ್ನು ವ್ಯಕ್ತಪಡಿಸುತ್ತಿದ್ದಳು. ಅವಳು ತನ್ನ ದಿನಚರಿಯಲ್ಲಿ ಹೀಗೆ ಬರೆದಳು:

"ಪ್ರಭುವೇ, ನಿನ್ನನ್ನು ದಿನವೂ ಹೆಚ್ಚು ಚೆನ್ನಾಗಿ ತಿಳಿದುಕೊಳ್ಳುವುದೂ ಸೇವಿಸುವುದೂ ನನ್ನ ಮುಖ್ಯ ಬಯಕೆ. ಹೊರ ಪರಿಸ್ಥಿತಿ ಏನಾದರೇನು? ದಿನ ಹೋದಂತೆ ಅವೆಲ್ಲಾ ಹೆಚ್ಚು ಹೆಚ್ಚು ನಿಷ್ಫಲವೂ ಮಾಯಾಮಯವೂ ಆಗಿ ತೋರುತ್ತವೆ; ನನಗೆ ಹೊರ ಹೊರಗೆ ಆಗುವ ಎಲ್ಲವುದರಲ್ಲೂ ನಾನು ಕಡಿಮೆ ಕಡಿಮೆ ಆಸಕ್ತಿಯನ್ನು ವಹಿಸುತ್ತಲಿದ್ದೇನೆ. ನನಗೆ ಮುಖ್ಯವೆಂದು ತೋರುವ ಒಂದೇ ಒಂದರಲ್ಲಿ ಹೆಚ್ಚು ಹೆಚ್ಚು ಗಾಢವಾದ ಆಸಕ್ತಿಯುಳ್ಳವಳಾಗಿದ್ದೇನೆ: ನಿನ್ನ ಸೇವೆಯನ್ನು ಚೆನ್ನಾಗಿ ಮಾಡುವುದರ ಸಲುವಾಗಿ ನಿನ್ನನ್ನು ಹೆಚ್ಚು ಚೆನ್ನಾಗಿ ಅರಿತುಕೊಳ್ಳಬೇಕೆಂದಿದ್ದೇನೆ. ಹೊರ ಘಟನೆಗಳಲ್ಲಿಯೂ ಈ ಗುರಿಯತ್ತ ನನ್ನನ್ನು ಒಯ್ಯಬೇಕು—ಅದರತ್ತಲೇ ಒಯ್ಯಬೇಕು. ಅದಕ್ಕೆ ಅವುಗಳ ಬಗೆಗಿನ ನಮ್ಮ ಮನಃಪ್ರಣಾಲಿಯನ್ನೇ ಅವು ಅವಲಂಬಿಸಿವೆ. ಯಾವಾಗಲೂ ಎಲ್ಲವುದರಲ್ಲೂ ನಿನ್ನನ್ನು ಹುಡುಕುತ್ತಲೇ ಇರುವುದು, ನಿನ್ನನ್ನು ಪ್ರತಿ ಸಂದರ್ಭದಲ್ಲೂ ಹೆಚ್ಚು ಹೆಚ್ಚು ಚೆನ್ನಾಗಿ ಅಭಿವ್ಯಕ್ತಗೊಳಿಸಲು ಸಂಕಲ್ಪಿಸುತ್ತಲಿರುವುದು — ನನ್ನ ಮನಃಪ್ರಣಾಲಿ. ಈ ಮನಃಪ್ರಣಾಲಿಯಲ್ಲಿ ಪರಮಶಾಂತಿ, ಪೂರ್ಣ ಅಪ್ರಕ್ಷುಬ್ಧತೆ, ನಿಜವಾದ ತೃಪ್ತಿ ಕಂಡುಬರುತ್ತವೆ; ಅದರಲ್ಲಿ ಜೀವ ಅರಳುತ್ತದೆ, ಅಗಲವಾಗುತ್ತದೆ ಯಾವ ಬಿರುಗಾಳಿಯೂ ತೊಂದರೆ ಕೊಡಲಾರದಷ್ಟು ರಾಜಗಾಂಭೀರ್ಯದ ಉತ್ಸರ್ಜನಗಳನ್ನು ವೈಭವಪೂರ್ಣವಾಗಿ ಹರಡುತ್ತದೆ."

ಅಂಥ ಉದಾತ್ತ ಭಾವಗಳು ನಮ್ಮಲ್ಲಿ ಒಮ್ಮೆಲೇ ಹುಟ್ಟಿ ನಮ್ಮ ಸ್ಥಿರೀಕೃತ ಭಾವಗಳನ್ನೂ ಅಭ್ಯಾಸಗಳನ್ನೂ ಬದಲಾಯಿಸುವವೆಂದು ನಾವು ನಿರೀಕ್ಷಿಸಲು ಬರದು. ಆದರೆ ನಾವೀ ಮಾನಸಿಕ ಅಭ್ಯಾಸವನ್ನು ಬದಲಾಯಿಸಲು ನಿರ್ಧರಿಸಿ, ಈ ಹೊಸ ವಿಚಾರವನ್ನು ಪೋಷಿಸಲು ತೊಡಗಿದರೆ ಇದು ಕ್ರಮೇಣ ಸ್ಥಿರಪಡುವುದು. ಶ್ರೀ ಅರವಿಂದರು ಹೇಳಿದ್ದಾರೆ:

"ಮೊಟ್ಟ ಮೊದಲು ಮಾತೃಶ್ರೀಯ ಸಂಕಲ್ಪದಲ್ಲಿ ಸಾಧಕನು ತನ್ನ ಸಂಕಲ್ಪವನ್ನು ಐಕ್ಯಗೊಳಿಸಬೇಕು. ತನ್ನ ಸಂಕಲ್ಪವು ಕೇವಲ ಸಾಧನ, ಅದರ ಹಿಂದಿರುವ ಮಾತೃಶ್ರೀಯ ಸಂಕಲ್ಪವೇ ಪರಿಣಾಮವನ್ನುಂಟುಮಾಡಬಲ್ಲದು--ಎಂಬುದನ್ನು ಅರಿತಿರಬೇಕು. ಅನಂತರ ಪ್ರತಿಯೊಬ್ಬ ಪ್ರತ್ಯೇಕ ವ್ಯಕ್ತಿಗೂ ಪ್ರತ್ಯೇಕ ಕೆಲಸವೊಂದನ್ನು ನಿಶ್ಚಿತಗೊಳಿಸಲಾಗಿದೆ; ಆ ಒಂದು ಕೆಲಸವನ್ನು ಮಾತ್ರ ಆ ವ್ಯಕ್ತಿ ಮಾಡಬಲ್ಲದಲ್ಲದೆ ಇನ್ನೊಂದನ್ನಲ್ಲ. ಎಲ್ಲರಿಗೂ ಎಲ್ಲ ಕೆಲಸವನ್ನೂ ದೇವರು ನಿಶ್ಚಯಿಸಿಕೊಟ್ಟಿರುತ್ತಾನೆ.

ದೇವರ (ಮಾತೃಶ್ರೀಯ) ಕೆಲಸವೆಂದರೆ ಯಾವುದೋ ಅಪೂರ್ವ ಸ್ವರೂಪದ್ದು ಎಂದು ತಿಳಿಯಬಾರದು ಅದು ಸಾಮಾನ್ಯ ಜೀವನದಲ್ಲಿ ನಾವು ಮಾಡುವ ಕೆಲಸಕ್ಕಿಂತ ವಿಲಕ್ಷಣವಾದುವಲ್ಲ. ಈ ಸಾಮಾನ್ಯ ಚಟುವಟಿಕೆಗಳನ್ನು ನೀವು ಬಿಡಬೇಕೆಂದು ಭಾವಿಸಬೇಡಿರಿ. ಮಾತೃಶ್ರೀಗಾಗಿ ಯಾವುದಾದರೂ ನಿಜವಾದ ಕೆಲಸವನ್ನು ಮಾಡುವುದರ ಸಲುವಾಗಿ ಯುಕ್ತವಾದ ಸಾಧನವೆನ್ನಿಸಲು ಹಾಗೇನೂ ಬಿಡಬೇಕಾಗಿಲ್ಲ; ಈ ಎಲ್ಲವುದಕ್ಕಿಂತಲೂ ಹೆಚ್ಚಿನದೊಂದಿದೆಯೆಂದು ಎಣಿಸಬೇಕಾಗಿಲ್ಲ. ಅದು ಹಾಗಿರದು. ನೀವು ಸ್ವಲ್ಪ ಆಳವಾಗಿ ವಿಚಾರಮಾಡಿದರೆ, ನೀವು ಮಾಡುವ ಪ್ರತಿಯೊಂದು ಕೆಲಸವೂ ನಿಜವಾಗಿ ಮಾತೃಶ್ರೀಯ ಕೆಲಸವೇ ಆಗಬಲ್ಲದು ಮತ್ತು ಆಗಿರುತ್ತದೆ.

ನಿಮ್ಮ ಕುಟುಂಬವನ್ನು ಪೊರೆಯಲು ವ್ಯಕ್ತನಾಗಿ ನೀವು ದೈನಂದಿನ ಕಾರ್ಯಗಳನ್ನು ಮಾಡುವುದರಲ್ಲಿ ಮಗ್ನರಾಗಿರುವೆವೆಂದು ನೀವು ಹೇಳಬಹುದು. ಅವು ಮಾತೃಶ್ರೀಯ ಕೆಲಸಗಳೆಂತಾದಾವು ಎಂಬ ಪ್ರಶ್ನೆ ಏಳಬಹುದು. ಆದರೆ ನಿಮ್ಮ ಕುಟುಂಬವು ಮಾತೃಶ್ರೀಯ ಕುಟುಂಬವೇ. ಕುಲವನ್ನು ಮುಂಬರಿಸಿಕೊಂಡುಹೋಗಿ ತಲೆತಲಾಂತರದವರೆಗೆ ವಿಕಾಸ ಕಾರ್ಯವನ್ನು ಸಾಗಿಸಿಕೊಂಡು ಹೋಗಲು ಅವು ಬೇಕಾದಂಥವುಗಳು. ಅವುಗಳನ್ನು ನಡೆಸಿಕೊಂಡು ಹೋಗುವ ಹೊಣೆಯನ್ನು ನಿಮಗೆ ವಹಿಸಿಕೊಡಲಾಗಿದೆ. ಹೀಗೆ ನೋಡಿದಾಗ, ಕುಟುಂಬ ಪೋಷಣೆಯು ತಾಯಿಯ

ಕೆಲಸವೇ ಆಗಿರುವುದು ಕಂಡುಬರುತ್ತದೆ. ಈ ಮನಃಪ್ರಣಾಲಿಯನ್ನು ನಡೆಸಿದರೆ, ಕುಟುಂಬಕ್ಕೆ ಕಬ್ಬಿಣದ ಸರಪಳಿಯಿಂದ ನಿಮ್ಮನ್ನು ಕಟ್ಟಿಹಾಕಲಾಗಿದೆ. ಈ ಜನರನ್ನು ಸಾಕಲು ನೀವು ಕಷ್ಟಪಟ್ಟು ದುಡಿಯಬೇಕು ಎಂಬಂಥ ಆಲೋಚನೆಗಳೆಲ್ಲ ಮಾಯವಾಗುವುವು. ಆಗ ನಿಮಗೆ ಎಲ್ಲವನ್ನೂ ನೀವು ಮಾತೃಶ್ರೀಯ ಸೇವೆಯ ಅಂಗವಾಗಿ ಮಾಡುತ್ತಿದ್ದೀರಿ ಎಂಬುದು ಗೊತ್ತಾಗುತ್ತದೆ ಮತ್ತು ಅನುಭವಕ್ಕೆ ಬರುತ್ತದೆ.

ಅಥವಾ ನೀವು ಒಬ್ಬ ವಿಜ್ಞಾನಿ ಮತ್ತು ಸಂಶೋಧಕರಾಗಿದ್ದೀರಿ ಎಂದು ಇಟ್ಟುಕೊಳ್ಳಿರಿ. ಆ ಸಂಶೋಧನೆ ನಿಮ್ಮದೆಂದು ನೀವು ಭಾವಿಸುತ್ತೀರಿ. ಆದರೆ ಪ್ರಜ್ಞಾವಂತ ವಿಜ್ಞಾನಿ ಹಾಗೆಂದೂ ಹೇಳನು. ಸಂಶೋಧನೆಯ ಆಲೋಚನೆಯು ಆಕಸ್ಮಿಕವಾಗಿ ತನ್ನ ಮಿದುಳಿಗೆ ಹೊಳೆಯಿತೆಂದು ಅವನು ಹೇಳುತ್ತಾನೆ. ಅದು ಸತ್ಯವಾದ ಸಂಗತಿ. ನಿಸರ್ಗದ ರಹಸ್ಯಗಳ ಪ್ರಕಟಣೆಯಲ್ಲಿ ವಿಕಾಸ ಮಾರ್ಗದಲ್ಲಿ ಅಂಥ ಹೊಸ ಶೋಧಕ್ಕೆ ತಕ್ಕ ಕಾಲವೊದಗಿಬಂದಿತ್ತು; ಆದುದರಿಂದ ವಿಜ್ಞಾನಿಯ ಮಿದುಳಿನ ಮೂಲಕ ಅದು ಸೂಚಿತವಾಗಿ ಸತ್ಯವು ಸಂಶೋಧಿಸಲ್ಪಟ್ಟಿತು. ವಿಜ್ಞಾನಿ ಕೇವಲ ಕರಣ (ಸಾಧನ). ದೇವರು ಅಥವಾ ಮಾತೃಶ್ರೀ ಅದರ ಕರ್ತೃ.

ಅಥವಾ ನೀವೊಬ್ಬ ದೊಡ್ಡ ವ್ಯಾಪಾರಿಗಳು. ಸಾವಿರ ಜನರು ನಿಮ್ಮ ಕೆಳಗೆ ಕೆಲಸ ಮಾಡುತ್ತಿದ್ದಾರೆ. ಅವರ ಯಜಮಾನರು ಮತ್ತು ಪೋಷಕರು ನೀವೇ ಎಂದು ನೀವು ತಿಳಿಯುತ್ತೀರಿ. ಸತ್ಯವಾದ ಸಂಗತಿಯೆಂದರೆ ಅವರೆಲ್ಲರೂ ಮಾತೃಶ್ರೀಯ ಮಕ್ಕಳು; ಅವರನ್ನು ಪೊರೆಯಲು, ಅವರ ರಕ್ಷಕರಾಗಲು ನಿಮ್ಮನ್ನು ಆರಿಸಲಾಗಿದೆ.

ನೀವು ರಾಷ್ಟ್ರನಾಯಕರಾಗಿದ್ದರೆ, ದೇಶದ ಜನರಿಗಾಗಿ ನೀವು ಬಹಳ ಸ್ವಾರ್ಥತ್ಯಾಗ ಮಾಡುತ್ತಿರುವುದಾಗಿ ತಿಳಿದುಕೊಂಡಿರುವಿರಿ. ಆದರೆ ಅದೂ ಮಾತೃಶ್ರೀಯ ಕೆಲಸ; ಅದನ್ನು ಮಾಡಲು ನಿಮ್ಮನ್ನು ಆರಿಸಿಕೊಳ್ಳಲಾಗಿದೆ—ಅಷ್ಟೆ.

ನೀವು ಒಬ್ಬ ಉಳುಮೆಯವರಾದರೆ (ಹೂಡುವವರಾದರೆ) ಭೂಮಿಯನ್ನು (ಗದ್ದೆಯನ್ನು) ಉಳುತ್ತೀರಿ, ಬೀಜಗಳನ್ನು ಬಿತ್ತುತ್ತೀರಿ: ಕಾಳು ಬೆಳೆದಾಗ ನೀವದನ್ನು ಬೆಳೆದವರೆಂದು ಭಾವಿಸುತ್ತೀರಿ— ಆದರೆ ಮಾತೃಶ್ರೀಯೇ ಅದನ್ನು ತನ್ನ ಮಕ್ಕಳಿಗಾಗಿ ಬೆಳೆಸುತ್ತಾಳೆ— ನೀವು ಆ ಕೆಲಸದಲ್ಲಿ ನೆರವೀಯಲೆಂದಷ್ಟೇ ನಿಯುಕ್ತರಾಗಿದ್ದೀರಿ.

ನೀವು ಯಾರೇ ಆಗಿ ಇರಬಹುದು: ಉದ್ಯೋಗಿಗಳೋ ಕರಣಿಕರೋ, ಯಂತ್ರಶಿಲ್ಪಿಗಳೋ, ವೈದ್ಯರೋ, ಕೈಕಸಬುಗಾರರೋ— ಯಾರಾದರೂ ಸರಿಯೆ— ನಿಮ್ಮ ವೃತ್ತಿಯನ್ನು ದೇವರು ಆಯ್ದಿದ್ದು ಎಂಬುದನ್ನು ನೆನಪಿಟ್ಟುಕೊಳ್ಳಿರಿ. ಅದೆಲ್ಲವೂ ಮಾತೃಶ್ರೀಯ ಕೆಲಸ.

ಮಾತೃಶ್ರೀಯ ಎದುರು ಚಿಕ್ಕಕೆಲಸ, ದೊಡ್ಡಕೆಲಸ ಎಂಬ ಬೇಧವಿಲ್ಲ. ಆವಳಿಗೆ ಎಲ್ಲ ಕೆಲಸಗಳೂ ಒಂದೇ ತರದ ಪ್ರಾಮುಖ್ಯವುಳ್ಳವು. ನಿಮ್ಮ ಕೆಲಸ ಎಷ್ಟೋ ಸಣ್ಣದಾಗಿದ್ದರೂ ಅದು ಅನಾಮಧೇಯ (ಕಿಮ್ಮತ್ತಿಲ್ಲದ್ದು) ಎಂದು ತಿಳಿಯಬೇಡಿರಿ. ಮಾತೃಶ್ರೀಯ ದೃಷ್ಟಿಯಲ್ಲಿ ಅದಕ್ಕೆ ಪ್ರತ್ಯೇಕವಾದ ಒಂದು ಬೆಲೆ ಇದ್ದೇ ಇದೆ. ನೀವು ಮಾಡುತ್ತಿರುವ ಕೆಲಸ ಎಷ್ಟೇ ದೊಡ್ಡದಾಗಿರಲಿ ಅಥವಾ ಕೌಶಲ ಸಾಧ್ಯವಾದುದಾಗಿರಲಿ, ಅದರ ಬಗ್ಗೆ ಹೆಮ್ಮೆಪಟ್ಟುಕೊಳ್ಳಬೇಡಿರಿ. ಮಾತೃಶ್ರೀಯ ದೃಷ್ಟಿಯಲ್ಲಿ ಉಳಿದೆಲ್ಲರೂ ಮಾಡುವ ಕೆಲಸಗಳಿಗಿರುವಷ್ಟೇ ಬೆಲೆ ನಿಮ್ಮ ಕೆಲಸಕ್ಕೂ ಇದೆ— ಹೆಚ್ಚಿಲ್ಲ. ಕೆಲಸ ನಿಮ್ಮದೆಂದು ಭಾವಿಸಿದೊಡನೆಯೇ ಫಜೀತಿಯುಂಟಾಗುತ್ತದೆ ಆದ್ದರಿಂದ ಮಾತೃಶ್ರೀ ಹೇಳಿದ್ದಾಳೆ: "ತಮ್ಮ ಕೆಲಸ ಎಂಬ ಮಾತನ್ನು ಜನರು ನಿಲ್ಲಿಸಲು ಬಲ್ಲವರಾದರೆ, ಎಷ್ಟೋ ತೊಂದರೆಗಳು ಅದರಿಂದ ಪರಿಹಾರವಾದಾವು".

ಆಧ್ಯಾತ್ಮಿಕ ಜೀವನ ನಡೆಸಬೇಕಾದರೆ ಮದ್ದಿನೊಡನೆ ಯಾವ ಸಂಬಂಧವೂ ಇರಬಾರದು— ಎಂಬುದು ಜನಾಭಿಪ್ರಾಯ. ಮಾತೃಶ್ರೀಯ ಪ್ರಕಾರ ಹಾಗೇನೂ ಮಾಡಬೇಕಾಗಿಲ್ಲ: ನಿಮಗೆ ನೀವು ಸಂಪಾದಿಸುವುದೆ

ಲ್ಲವೂ ದೇವರಿಗಾಗಿ ಎಂಬ ಶ್ರದ್ಧೆ ಇದ್ದರೆ ಸರಿ. ನಿಮಗಾಗಿ ನೀವುಗಳಿಸುತ್ತಿದ್ದೀರಿ ಎಂಬ ಭಾವನೆ ಇಲ್ಲದಿದ್ದರೆ ಆಯಿತು. ನೀವು ಗಳಿಸುವುದೆಲ್ಲಾ ಮಾತೃಶ್ರೀಯ ಹಣ. ಆದುದರಿಂದ ಸರಿಯಾಗಿ ಲೆಕ್ಕ ಇಡಿರಿ ಮತ್ತು ಎಚ್ಚರ ತಪ್ಪಿ ಖರ್ಚುಮಾಡಬೇಡಿರಿ.

ನಿಮ್ಮನ್ನು ನೀವು ಮಾತೃಶ್ರೀಯ ಕೋಶಾಧಿಕಾರಿಗಳೆಂದು ತಿಳಿದು ಕೊಳ್ಳಿರಿ. ರಾಮಪ್ರಸಾದರು ಹಾಡಿದ್ದಾರೆ:

'ಮಾಡೆನ್ನ ನೀ ನಿನ್ನ ಕೋಶಾಧಿಕಾರಿಯನ್ನಾಗಿ
ನಾನೆಂದಿಗೂ ಮೋಸ ಮಾಡೆ(ನಾಗಿರೆ ಕರ್ಮಯೋಗಿ)'

ದುಡ್ಡುಗಳಿಸು; ನ್ಯಾಯವಾದ ಉದ್ದೇಶಗಳಿಗಾಗಿ ಖರ್ಚು ಮಾಡು; ಸುಂದರವಾದ ಮನೆಗಳನ್ನೂ ತೋಟಗಳನ್ನೂ ಕಟ್ಟಿಸು—ಬಹಳ ದುಡ್ಡಿದ್ದರೆ; ಆದರೆ ನೀನು ಮಹಾವೈಭವ ಸಂಪನ್ನನಾದ ಒಡೆಯ ಎಂದು ತಿಳಿದುಕೊಳ್ಳಬೇಡ. ಏಕೆಂದರೆ, ಇಡಿ ಜಗತ್ತು ಮಾತೃಶ್ರೀಯ ಆಸ್ತಿ; ಪ್ರಪಂಚದಲ್ಲಿರುವ ಎಲ್ಲವೂ ಅವಳಿಗೆ ಸೇರಿದ್ದು. ನೀನು ಗಳಿಸಿದರೆ ಅದು ಅವಳ ಆಸ್ತಿಯನ್ನು ಬೆಳೆಯಿಸಿದಂತೆಯೇ ಸರಿ. ನೀನೊಂದು ರಾಜ್ಯವನ್ನೇ ಸ್ಥಾಪಿಸಿದರೂ ಅದನ್ನು ಮಾತೃಶ್ರೀಯ ಹೆಸರಿಗೆ ಅಂಕಿತಗೊಳಿಸಬೇಕು. ಮಹಾರಾಜ ರಣಜಿತ್ಸಿಂಗನು ಗುರುನಾನಕನ ಹೆಸರಿನಲ್ಲಿ ಸಾಮ್ರಾಜ್ಯವನ್ನು ನಿರ್ಮಿಸಿದನು. ಅವನು ಅದನ್ನು ನೋಡಿಕೊಳ್ಳುವವ (ಸರ್ಕಾರ) ಮಾತ್ರ. ಮಹಾರಾಷ್ಟ್ರದ ಮಹಾನಾಯಕ ಶಿವಾಜಿ ಮಾಡಿದ್ದು ಹಾಗೇ. ಅವನು ಗುರುವಿನ ಹೆಸರಿನಲ್ಲಿ ಯುದ್ಧ ಮಾಡಿ ಗೆದ್ದನು. ಅದು ಸರಿಯಾದ ಮನಃಪ್ರಣಾಳಿ. ಶ್ರೀ ಅರವಿಂದರು ಹೇಳಿದಂತೆ, "ಶಾಂತವಾದ ಸಂತೃಪ್ತಿಯಿರಬೇಕು. ಕೆಲಸಕ್ಕೂ ಅದರ ಫಲಕ್ಕೂ ವೈಯಕ್ತಿಕ ಆಸಕ್ತಿಯನ್ನು ಇಟ್ಟುಕೊಂಡಿರಬಾರದು; ಆದರೆ ಅದೇ ಕಾಲಕ್ಕೆ ದೇವರ ಉದ್ದೇಶಕ್ಕಾಗಿ ತನ್ನ ಶಕ್ತಿ ಉಪಯುಕ್ತವಾಗುತ್ತಿದೆಯೆಂದು ಬಹಳ ಸಂತೋಷಪಡಬೇಕು".

ನಿಜವಾಗಿ ಹೇಳುವುದಾದರೆ ಈ ಸಂಗತಿಯು ಸರಿ ಅಥವಾ ತಪ್ಪು ಮನಸ್ಥಿತಿಗೆ ಸೇರಿದ್ದು. ಇದು ನಿನ್ನ ಬಾಳಿಂದಷ್ಟೇ ನೀನು ತಿಳಿಯು

ಕೊಳ್ಳುತ್ತೀಯೇ; ನಿನ್ನದೇ ಕುಟುಂಬ, ಮನೆ, ಕೆಲಸ, ಎಲ್ಲಾ ಎಂದು ಭಾವಿಸುತ್ತೀಯೆ. ಆದರೆ ಅದರ ಬದಲು ಈಗ ನೀನು ಬೇರೆ ವಿಧವಾಗಿ ಆಲೋಚಿಸಿದರೆ, ಯಾವುದೂ ನಿನ್ನದಲ್ಲವೆಂಬ ತೀರ್ಮಾನಕ್ಕೆ ನೀನು ಬರುವೆ. ಏಕೆಂದರೆ ಸರ್ವಶಕ್ತನ ಮಾತೃಶಕ್ತಿ ಜಗತ್ತನ್ನು ಸೃಷ್ಟಿಸಿದೆ— ನಮ್ಮನ್ನೆಲ್ಲಾ ಹುಟ್ಟಿಸಿದೆ ಮತ್ತು ಬದುಕಲು ಉಣ್ಣಬೇಕು, ಕೆಲಸ ಮಾಡಲು ಬದುಕಬೇಕು ಎಂದು ಆಜ್ಞಾಪಿಸಿದೆ. ಅದಕ್ಕಾಗಿ ಅವಳು ನಮಗಾಗಿ ಈ ಎಲ್ಲ ವಿವಿಧ ಕೆಲಸಗಳನ್ನು ಕೊಟ್ಟಿದ್ದಾಳೆ. ನೀನು ಮಾಡಿದರೂ ಸರಿ, ಬಿಟ್ಟರೂ ಸರಿ, ಕೆಲಸ ನಡೆದೇ ಹೋಗುವುದು. ಅದು ನಿನ್ನದೇ ಕೆಲಸವೆಂದು ಭಾವಿಸುವುದೂ ನೀನು ಅಪರಿಹಾರ್ಯನೆಂದು ತಿಳಿದುಕೊಳ್ಳುವುದೂ ಕೇವಲ ದಾಂಭಿಕತೆ. ನಮ್ಮ ತಂದೆ ತಾಯಿಗಳೂ ಆವರಣವೂ ಮಕ್ಕಳಾಟಿಕೆಯಿಂದ ಮಮಕಾರವನ್ನು ನಮ್ಮಲ್ಲಿ ಪ್ರವೇಶ ಗೊಳಿಸಿದ್ದಾರೆ. ಈ ಅಹಂಭಾವ ತಪ್ಪೆಂದು ಮೊದಲಿನಿಂದ ನಮಗೆ ತರಬೇತು ಕೊಟ್ಟಿದ್ದರೆ ನಾವು ಬೇರೆಯ ಮನಃಪ್ರಣಾಳಿಯೊಡನೆ ಬೆಳೆದು ಬರುತ್ತಿದ್ದೆವು. ಆಶ್ರಮದ ಮಕ್ಕಳಿಗೆ ಈ ಉಚಿತ ತರಬೇತು ಸಿಕ್ಕುತ್ತಿದೆ. ಅವು ದೊಡ್ಡವರಾದಮೇಲೆ ನಮಗಿಂತ ಭಿನ್ನವಾದವರಾದಾರೆಂದು ನಮ್ಮ ಪ್ರತ್ಯಾಶೆ.

ಆದರೆ ಈಗಲೂ ನಮ್ಮ ಮನಃ ಪ್ರಣಾಳಿಯನ್ನು ತಿದ್ದಬಹುದು. ಹಾಗೆ ಮಾಡಲು ಮಾತೃಶ್ರೀಯನ್ನು ಸದಾ ನೆನೆಯುತ್ತಾ ಹೊಸ ಬಗೆಯ ವಿವೇಕವನ್ನು ಅಳವಡಿಸಿಕೊಳ್ಳಬೇಕು. ಹಾಗೇ ಹೋಗುತ್ತ ಉದ್ದಕ್ಕೂ ಮಾತೃಶ್ರೀಯ ನೆರವು ಅಂಥ ಬದಲಾವಣೆಗೆ ದೊರಕುವುದೆಂದು ನಿರೀಕ್ಷಿಸಿದರೆ, ಕ್ರಮೇಣ ಮಾತೃಶ್ರೀಯ ಸಲಹೆಯೂ ಶಕ್ತಿಯೂ ಒಳಗೆ ಕೆಲಸ ಮಾಡುತ್ತಿದೆ ಎಂಬುದು ನಿನ್ನ ಅನುಭವಕ್ಕೆ ಬರುತ್ತದೆ. ನೀನು ಮಹಾತಾಯಿಯ ಕೆಲಸಕ್ಕೆ ಬೇಕಾದ ಒಂದು ಉಪಕರಣ ಮಾತ್ರ ಎಂಬುದು ನಿನ್ನ ತಿಳಿವಳಿಕೆಗೆ ಬರುತ್ತದೆ. ನೀನು ಅಹಂಕಾರಿಕ ಪ್ರೇರಣೆಗಳಿಂದ ಮುಕ್ತನಾಗುವೆ. ಸ್ವೇಚ್ಛೆ-ಸ್ವಾಗ್ರಹಗಳಿಂದ ಬಿಡುಗಡೆ ಹೊಂದುವೆ.

ಆಶ್ರಮದಲ್ಲಿ, ನಾವು ಹೇಳಿದಂತೆ, ಅದೇ ತತ್ತ್ವವನ್ನು ಅನುಸರಿಸಲಾಗುತ್ತದೆ. ಗಂಡಸಾಗಲಿ, ಹೆಂಗಸಾಗಲಿ— ಪ್ರತಿಯೊಬ್ಬರೂ ವಿನಾದ

ರೊಂದು ಕೆಲಸ ಮಾಡಬೇಕು. ಅದಾವುದೆಂಬುದನ್ನು ಮಾತೃಶ್ರೀ ಹೇಳುತ್ತಾಳೆ. ಅದನ್ನು 'ಮಾತೃಸೇವೆ' ಎಂದು ಸಂಬಳ ತೆಗೆದುಕೊಳ್ಳದೆ ಮಾಡಬೇಕು. ಅವರೆಲ್ಲರಿಗೂ ತಾವು ಮಾತೃಶ್ರೀಯ ಕೆಲಸವನ್ನು ಮಾಡುತ್ತೇವೆ ಎಂಬುದು ಗೊತ್ತು. ಆದರಿಂದ ಅವರೆಲ್ಲರೂ ಸುಖಿಗಳಾಗಿದ್ದಾರೆ. ಯಾರೂ ಸೋಮಾರಿಗಳಾಗಿಲ್ಲ.

ಅಜ್ಞಾತರಾಗಿದ್ದ ಜೋಗಾನಂದರು ಒಮ್ಮೆ ಪಾಂಡಿಚೇರಿಗೆ ಬಂದರು. ಅವರು ತಮ್ಮ ಬಾಲ್ಯದಿಂದ ಗುರೂಪದೇಶದಂತೆ ಸಾಧಕರಾಗಿದ್ದವರು. ಅವರು ಗಂಭೀರವಾದ ಜಪವನ್ನೂ ಕಠಿನ ಸಾಧನೆಯನ್ನೂ ಮಾಡುತ್ತಿದ್ದರು. ಅವರು ಆಶ್ರಮದಲ್ಲಿ ಸೇರಿಕೊಳ್ಳಬಯಸಿದರು. ಶ್ರೀ ಅರವಿಂದರು ಬರೆದರು: "ನಮ್ಮ ಆಶ್ರಮ ಬೇರೆ ಆಶ್ರಮಗಳಂತಿಲ್ಲ: ನಮ್ಮ ಗುರಿ ಸನ್ಯಾಸವಲ್ಲ, ನಮಗೆ ಮೋಕ್ಷ ಸಾಧನೆಯೂ ಅಲ್ಲ: ಕರ್ಮದ ಮೂಲಕ ಸಾಕ್ಷಾತ್ಕಾರ ಮಾಡಿಕೊಳ್ಳುವುದು ನಮ್ಮ ತತ್ವ. ಅದರ ಸಿದ್ಧತೆಗಾಗಿ ಕೆಲಸ ಮಾಡಬೇಕು— ಅದೇ ಇಲ್ಲಿಯ ನಿಯಮ: ಇಲ್ಲಿಯ ಕೆಲಸವು ಬೇಸರ ಬರಿಸುವಂಥದೂ ಆಸಕ್ತಿ ಹುಟ್ಟಿಸದಂಥದೂ ಆಗಿ ತೋರೀತು. ತನ್ನ ಪದ್ಧತಿಯನ್ನೆಲ್ಲಾ ಬಿಟ್ಟುಕೊಟ್ಟು ನಮ್ಮ ನಿಯಮಗಳಂತೆ ನಡೆದುಕೊಳ್ಳಲು ಸಿದ್ಧನಾದರೆ ಮಾತ್ರ ಆತನು ಇಲ್ಲಿರಬಹುದು— ಎಂದು ಅವನಿಗೆ ತಿಳಿಸಿರಿ." ಜೋಗಾನಂದರು ಅದಕ್ಕೆ ಒಪ್ಪಿ ಅಂದಿನಿಂದ ಈ ವರೆಗೂ ಆಶ್ರಮದಲ್ಲಿಯೇ ಇದ್ದಾರೆ.

ನಲಿನೀಕಾಂತ ಸರ್ಕಾರರು ಸಾಹಿತಿಗಳೂ ಸುಪ್ರಸಿದ್ಧ ಹಾಸ್ಯ ಕವಿತಾ ಗಾಯಕರೂ ಕುಟುಂಬಸ್ಥರೂ ಇಬ್ಬರು ಹೆಣ್ಣುಮಕ್ಕಳ ತಂದೆಯೂ ಆಗಿದ್ದರು. ಒಮ್ಮೆ ಅವರು ಕ್ರಾಂತಿಕಾರಿಗಳೂ ಆಗಿದ್ದರು. ಅವರು ಆಶ್ರಮದ ಆಸರೆಯನ್ನು ಪಡೆಯಲು ಆಶಿಸಿದ್ದರು. ದುಡಿಯಲು ಸಿದ್ಧರಾಗಿರಬೇಕೆಂಬ ಶರ್ತದ ಮೇರೆಗೆ ಶ್ರೀ ಅರವಿಂದರು ಅವರಿಗೆ ಆಶ್ರಯವನ್ನು ಕೊಟ್ಟರು. ಅವರೂ ಅವರ ಇಬ್ಬರು ಹೆಣ್ಣುಮಕ್ಕಳೂ ಆಶ್ರಮದ ಮುದ್ರಣಾಲಯದ ಕಠಿನ ಕೆಲಸವನ್ನು ಮಾಡುತ್ತಿದ್ದಾರೆ. ಅದರವರು ಸುಖಿಗಳಾಗಿದ್ದಾರೆ.

ಆಶ್ರಮದಲ್ಲಾಗಲಿ, ಹೊರಗಾಗಲಿ, ಕರ್ಮವು ಒಂದು ಪರಿಣಾಮಕಾರಿಯಾದ ಸಾಧನ— ಅದನ್ನು ಸರಿಯಾದ ಭಾವನೆಯಿಂದ ಮಾಡಿದರೆ, ಸಂಪೂರ್ಣ ಪ್ರಾಮಾಣಿಕತೆ ಇದ್ದರೆ, ಪದೇ ಪದೇ ಮಾತೃಶ್ರೀಯನ್ನು ನೆನೆಯುತ್ತಿದ್ದರೆ, ಅವಳ ಅನುಗ್ರಹಕ್ಕೆ ಎದೆಯನ್ನು ತೆರೆದಿಟ್ಟುಕೊಂಡಿದ್ದರೆ—ಮಾತೃಶ್ರೀಯ ಕೆಲಸ ಮಾಡುತ್ತಿದ್ದೇನೆ ಎಂಬ ಪ್ರಜ್ಞೆಯ ಮೂಲಕ ಕ್ರಮೇಣ ಉನ್ನತ ತರ ಪ್ರಜ್ಞೆ ಇಳಿದು ಬರುತ್ತದೆ ಮತ್ತು ಸಾಧಕನ ಇಡೀ ಬಾಳನ್ನು ಬದಲಾಯಿಸುತ್ತದೆ.

ಇಷ್ಟಲ್ಲದೆ, ಈ ಭಾವನೆಯನ್ನು ಇಟ್ಟುಕೊಂಡಿದ್ದರೆ ಇನ್ನೊಂದು ರೀತಿಯಿಂದ ಪಡೆಯಲಾರದ ವಿಶಿಷ್ಟ ಲಾಭವನ್ನು ಸಾಧಕ ಪಡೆಯುವನು. ಅವುಗಳಲ್ಲಿ ಕೆಲವು ಇಂತಿವೆ :

ಲೋಭ, ಈರ್ಷ್ಯೆ, ಅಸೂಯೆ, ಸೇಡು, ದುರ್ಭಾವನೆ ಮತ್ತು ಕೆಲಸ-ಧಂದೆಗಳಿಗೆ ಸಂಬಂಧಿಸಿದ ಸ್ಪರ್ಧಾತ್ಮಕ ಆತುರಗಳಿಗೆ ಉನ್ಮುಖವಾದ ಪ್ರವೃತ್ತಿಯು ಸಾಧಕನಲ್ಲಿ ಮಾಯವಾಗಿಬಿಡುವುವು. ಏಕೆಂದರೆ, ವೈಯಕ್ತಿಕ ಲಾಭ-ನಷ್ಟಗಳ ಪ್ರಶ್ನೆಯೇ ಇರದು. ಶಕ್ತಿಗೆ ತಕ್ಕಷ್ಟು ಮಾತೃಕಾರ್ಯವನ್ನು ಸಾಧಕ ಮಾಡುವನು. ಜಗಳವಂತೂ ಇಲ್ಲವೇ ಇಲ್ಲ.

ಜಯಾಪಜಯಗಳ ಬಗೆಗೆ ಸಂತೋಷ-ಅಸಂತೋಷಗಳಿಲ್ಲ. ಎರಡರಿಂದಲೂ ಸಾಧಕನು ಮುಕ್ತ. ಏಕೆಂದರೆ ಅದೆಲ್ಲ ವಿಶ್ವ ಮಾತೃಕಾರ್ಯವೆಂಬುದು ಅವನ ಅನುಭವ. ಸಾಧಕ ಯಥಾಶಕ್ತಿ ದುಡಿದಿದ್ದಾನೆ ಎಂಬುದು ಮಾತೃಶ್ರೀಗೆ ಗೊತ್ತು. ಜಯಾಪಜಯಗಳು ಅವಳನ್ನು ಅವಲಂಭಿಸಿವೆ. ಸಾಧಕನಿಗೆ ಅಕ್ಷುಬ್ಧವಾದ ಸಮ ಮನಸ್ಕತೆ ಇರುತ್ತದೆ.

ಲಾಭವಾದೀತೆಂದು ಆಲೋಚಿಸಿ ಸಾಮಾನ್ಯವಾಗಿ ಜನರು ಮೋಸ, ದಗ, ದುರ್ವ್ಯವಹಾರಗಳಿಗೆ ಕೈಹಾಕುತ್ತಾರೆ. ಸಾಧಕ ಎಂದೂ ಆ ಒಂದಕ್ಕೂ ಕೈಹಾಕನು. ಮಾತೃಶ್ರೀ ಒಪ್ಪಳೆಂಬುದನ್ನು ಅಂಥ ಕೆಲಸದತ್ತ ಪ್ರಲುಬ್ಧನಾದಾಗ ಸಾಧಕ ನೆನೆದುಕೊಂಡು ಅದರಿಂದ ವಿಮುಖನಾಗುತ್ತಾನೆ.

ಅವನು ಋಜುವೂ ಪ್ರಮಾಣಿಕನೂ ಆಗಿರುವನಲ್ಲದೆ ಎಂದೂ ಸುಳ್ಳುಗಾರನಾಗನು.

(ಇಂಥ ಸಾಧಕತ್ವದಿಂದ) ನಿಮಗೆ ಜೀವನದ ನಿಜವಾದ ಅರ್ಥವೂ ಗುರಿಯೂ ಗೊತ್ತಾಗುವುದು. ಸಾಮಾನ್ಯ ಜೀವನದಲ್ಲಿ— ಬಿಡುವಿಲ್ಲದೆ ದಿನವೂ ದುಡಿಯುವುದರಿಂದ ಪ್ರಯೋಜನವೇನು? ಇದರಿಂದ ಆತ್ಯಂತಿಕವಾಗಿ ಯಾವ ಲಾಭ ದೊರಕುತ್ತದೆ? ಯಾರು ಇದರ ಫಲಭೋಕ್ತಾರರು? ಯಾರು ಇದಕ್ಕಾಗಿ ನನಗೆ ಕೃತಜ್ಞರಾಗಿರುತ್ತಾರೆ? ಮುಂತಾದ ಪ್ರಶ್ನೆಗಳಿಗೆ ಉತ್ತರ ದೊರಕದೆ ನೀವು ಆಶ್ಚರ್ಯಪಡುವುದು ಸರ್ವಸಾಧಾರಣ. ಆದರೆ ನಿಮಗೆ ನೀವು ಮಾಡುತ್ತಿರುವುದೀಗ ಮಾತೃಕಾರ್ಯ, ಅದು ಮಾತೃಶ್ರೀಗಾಗಿ, ಮತ್ತಾರಿಗಾಗಿಯೂ ಅಲ್ಲ. ಅದನ್ನು ಮಾಡಲೆಂದೇ ನೀವಿಲ್ಲಿದ್ದೀರಿ— ಎಂಬುದು ಖಾತ್ರಿಯಾಗುತ್ತದೆ.

ಮರಣಭಯ ಮಾಯವಾಗುತ್ತದೆ ಮಾತೃಶಕ್ತಿ ನಿಮ್ಮನ್ನು ಸಲಹುತ್ತದೆ ಎಂಬುದು ನಿಮಗೆ ಗೊತ್ತಾಗುತ್ತದೆ. ಮಾತೃಕಾರ್ಯಕ್ಕೆ ಬೇಕಾಗಿರುವಷ್ಟರವರೆಗೆ ನೀವೆಂದೂ ಸಾಯಲಾರಿರಿ. ಜ್ಯೋತಿಷಿಗಳೂ ಅವರ ಜಾತಕಗಳೂ ಏನು ಹೇಳಿದರೂ ಅವು ನಿಮಗೆ ತಟ್ಟಲಾರವು —ಮಾತ್ರಿಚ್ಛೆ ಹಾಗಿದ್ದರೆ. ಆದುದರಿಂದ ಮರಣದ ಬಗೆಗಿನ ಎಲ್ಲ ದೌರ್ಬಲ್ಯ, ನರಬಡಿತ, ಗಾಬರಿಗೆಡಿಸುವ ವಿಚಾರಗಳೂ ಓಡಿಹೋಗುವುವು. ನೀವುಮಾತೃ ಕಾರ್ಯವೊಂದನ್ನಲ್ಲದೆ ಸಾವನ್ನೆಂದೂ ಚಿಂತಿಸದಿರುವಿರಿ. ದುರ್ಬಲಗೊಳಿಸುವ ರೋಗದ ಭಯವೂ ಅದೃಶ್ಯವಾಗುವುದು.

ಆದರೆ ಅಂಥ ಮನಃ ಪ್ರಣಾಲಿಯನ್ನು ಅಲ್ಪಕಾಲದಲ್ಲಿ ರೂಪಿಸಿಕೊಳ್ಳಲು ಸಾಧ್ಯವಾಗದು; ಸತತ ಪ್ರಯತ್ನ ಅದಕ್ಕೆ ಬೇಕಾದೀತು. ಕೇವಲ ಮಾನಸಿಕ ನಿರ್ಧಾರ ಅಥವಾ ಸಕಾಲಿಕ ಅಸ್ತವ್ಯಸ್ತ ಪ್ರಯತ್ನಗಳು ಫಲಿಸವು. ಮರೆಯದಿರಬೇಕಾದರೆ, ಅದನ್ನು ಪದೇ ಪದೇ ನೀವು ನೆನೆದುಕೊಳ್ಳಬೇಕು— ಒಮ್ಮೆ ಕಾಲಾಂತರ ಉಂಟಾದರೂ ಹೊಸದಾಗಿ ನೆನೆದುಕೊಂಡು ನಿಮ್ಮ ತಪ್ಪನ್ನು ನೀವು ತಿದ್ದಿಕೊಳ್ಳಬಹುದು. ಅತಿ ಚಿಕ್ಕ ಕೆಲಸ

ವನ್ನು ಕೂಡ ನೀವು ಮಾತೃಶ್ರೀಗೆ ಅರ್ಪಿಸಲು ಕಲಿಯಬೇಕು. ಆಗ ಕ್ರಮೇಣ ಅವಳ ಉಪಸ್ಥಿತಿಯೂ ಸಲಹೆಯೂ ನಿಮ್ಮ ಅನುಭವಕ್ಕೆ ಬರುವುದು.

"ನಿಮ್ಮ ಶಕ್ತಿ ಪರಿಮಿತವಾಗಿದ್ದರೂ ನಿಮ್ಮ ಕೆಲಸ ಅಲ್ಪವಾಗಿದ್ದರೂ ಅಡ್ಡಿಯಿಲ್ಲ. ನೀವು ಸಣ್ಣ ಮನುಷ್ಯರಾಗಿ ಸಣ್ಣ ವ್ಯವಹಾರ ಮಾಡುತ್ತಿದ್ದರೂ ಪರವಾಯಿಲ್ಲ. ನೀವು ನಿಮ್ಮ ಕಾರ್ಯದಲ್ಲಿ ಪ್ರಾಮಾಣಿಕರಾಗಿದ್ದರೆ, ಶಕ್ತಿಗೆ ತಕ್ಕಂತೆ ದುಡಿದರೆ— ಅದೇ ಸಾಕು. ನಿಮಗೆ ಕೊಡಲು ಸಾಧ್ಯವಿಲ್ಲದುದನ್ನು ಮಾತೃಶ್ರೀ ಬಯಸಳು: ಹಾಗೇ ಸಾಧ್ಯವಾದುದಕ್ಕಿಂತ ಕಡಿಮೆಯನ್ನೂ ಬಯಸಳು. ಕೆಲಸದ ಬೆಲೆಯನ್ನು ಅದರ ಗುಣ-ಪರಿಮಾಣಗಳಿಂದ ಅವಳು ಅಳೆಯಳು. ಮಾತೃಶ್ರೀಯೆ ಹೇಳುವಹಾಗೆ— ಅದನ್ನು ಒಂದು ಸತತವೂ ಸರ್ವಸಾಧಾರಣವೂ ಆದ ವಿಧಿಯಿಂದ ಅಥವಾ ಮನಃಪ್ರಣಾಲಿಯಿಂದ ಅಳೆಯಲಾಗುವುದು— ಅದನ್ನು ಕುಟ್ಟಕದಿಂದ ವ್ಯಕ್ತಪಡಿಸಲು ಬರದು— ಅದನ್ನು ಅನುಭವಿಸಿಯೆ ತಿಳಿದುಕೊಳ್ಳಬೇಕು.... ಆಗ ಪೂರ್ಣವಾದ ವೈಯಕ್ತಿಕ ಅನಾಸಕ್ತಿಯನ್ನು ಆಧರಿಸಿದ ವರ್ತನಾನಿಯಮಗಳಿಂದ ಕಾರ್ಯಗಳ ಬೆಲೆ ನಿರ್ಧರಿಸಲ್ಪಡುವುವು".

ಈಗ ನೀವು ಮುಂದೆ ನೋಡಿರಿ. ನಿಮ್ಮ ಕಣ್ಣೆದುರಿಗೆ ಪತ್ತ್ವ ಪೂರ್ಣವೂ ಸಜೀವವೂ ಆದ ಉದಾಹರಣೆಯು ಮಾತೃಶ್ರೀಯ ರೂಪದಲ್ಲಿ ಸಶರೀರವಾಗಿ ಇದೆ ಅವಳಿಗೀಗ ವಯಸ್ಸಾಗಿದೆ. ಆದರೂ ಅವಳು ಕೆಲಸಮಾಡುತ್ತಿದ್ದಾಳೆ. ಅವಳ ಕೆಲಸ ಹಗಲಿರುಳೂ ಅವಿಶ್ರಾಂತವಾಗಿ ನಡೆಯುತ್ತಿದೆ. ಅವಳಿಗಾಗಿ ಅಲ್ಲ – ಹೆಸರುಗಳಿಸಲೆಂದೂ ಅಲ್ಲ— ಎಲ್ಲ ಸಂಘಟನೆಯಲ್ಲಿಯೂ ಶ್ರೀ ಅರವಿಂದರ ಹೆಸರನ್ನದು ಮುಂದೆ ತರುತ್ತಾಳೆ— ತನ್ನದನ್ನಲ್ಲ. ಅವಳ ಶ್ರಮವೆಲ್ಲಾ ನಿಮಗಾಗಿಯೇ. ಇದನ್ನು ಅರಿತುಕೊಳ್ಳಲು ಕಲಿಯಿರಿ. ಅವಳನ್ನನುಸರಿಸಲು ಕಲಿಯಿರಿ. ಅವಳೊಡನೆ ಕೆಲಸಕ್ಕೆ ಸೇರಿರಿ ಮತ್ತು ನಿಮ್ಮ ಪ್ರಜ್ಞೆ ಅದರಂತೆ ನೆರವೇರಿರಿ.

ಇವಾದಾಗ ವರ್ತಮಾನ ಪರಿಸ್ಥಿತಿಯು ಬದಲಾಗುವುದು; ಹೊಸ ಬೆಳಕು ಮೂಡುವುದು; ಭೂಮಿಯು ಸ್ವರ್ಗದಂತಾಗುವುದು.

ಆ ಬದಲಾವಣೆಯನ್ನು ಹತ್ತಿರ ಹತ್ತಿರಕ್ಕೆ ತರಲೆಂದೇ ಮಾತೃಶ್ರೀ ಇಲ್ಲಿದ್ದಾಳೆ.

ಮಾತೃಶ್ರೀಗೆ ಜಯವಾಗಲಿ!

* * *

ಮಾತೃಶ್ರೀಯ ವಚನಗಳು

1. ಆದದರ ಕಾಲಕ್ಕೆ ಸರಿಯಾಗಿ ಎಲ್ಲವೂ ಬರುತ್ತದೆ: ಶ್ರದ್ಧಾಮಯವಾದ ಸಹನೆಯನ್ನಿಟ್ಟುಕೊಳ್ಳಿರಿ— ಆಗ ಎಲ್ಲವೂ ಸರಿಯಾಗುವುದು.

2. ಆಗಬೇಕಾದಂತೆ ಆಗದಿರುವಾಗಲೂ ಚಿಂತೆಯಿಂದೂ ಕೆಲಸವನ್ನು ಉತ್ತಮಗೊಳಿಸಲು ನೆರವೀಯದು. ಶಾಂತ ಆತ್ಮವಿಶ್ವಾಸವೊಂದೇ ಶಕ್ತಿಯ ಆಕರ.

3. ನಿಮ್ಮ ದೇಹದಲ್ಲಿ ಹೆಚ್ಚಿನ ಶಾಂತಿಯನ್ನೂ ಅಕ್ಷೋಭವನ್ನೂ ನೆಲೆ ನಿಲ್ಲಿಸಿಕೊಳ್ಳಿರಿ. ಅದು ನಿಮಗೆ ಕಾಹಿಲೆಯನ್ನು ಅಥವಾ ಇತರ ಪ್ರಹಾರಗಳನ್ನು ತಡೆಯಲು ತಕ್ಕ ಶಕ್ತಿಯನ್ನು ಕೊಡುತ್ತದೆ.

4. ಅಜ್ಞಾನ, ಅಜಾಗರಿಕತೆ ಮತ್ತು ಅಹಂಭಾವದ ಇತಿಮಿತಿಗಳ ತ್ಯಾಗವನ್ನು ಮಾತ್ರ ನಾನು ಕೇಳುತ್ತೇನೆ—ಆದರೆ ಅದಕ್ಕೆ ಬದಲಾಗಿ ನಿಮಗೆ ಎಂಥ ಅದ್ಭುತ ಲಾಭ ದೊರಕುತ್ತದೆ!

5. ದೇವರ ಕೈಗಳಲ್ಲಿ ವಿಶ್ರಾಂತಿ ತೆಗೆದುಕೊಳ್ಳುವುದರಿಂದ ಎಲ್ಲ ಸಮಸ್ಯೆಗಳೂ ಪರಿಹಾರವಾಗುವುವು: ಈ ಕೈಗಳು ಯಾವಾಗಲೂ ಪ್ರೇಮದಿಂದ ನಮ್ಮನ್ನು ಕಾಯಲು ತೆರೆದಿರುವುವು.

6. ಅಕ್ಷುಬ್ಧ ಸುಖಿಗಳಾಗಿರುವುದಕ್ಕಿಂತ ಹೆಚ್ಚಿನ ಕೃತಜ್ಞತಾ ಸಮರ್ಪಣೆಯ ಮಾರ್ಗ ಇನ್ನೊಂದಿಲ್ಲ.

7. ದೇವರು ನಿಮಗೆ ಕೊಟ್ಟಿದ್ದನ್ನು ಯಾವಾಗಲೂ ಸಂತೋಷದಿಂದ ಸ್ವೀಕರಿಸಿರಿ.

8. ಹಗೆಯತ್ತ ಮುಗುಳ್ನಗುವುದು ಅವನನ್ನು ನಿರಾಯುಧನನ್ನಾಗಿ ಮಾಡಿದ ಹಾಗೆ.

9. ಸ್ವಪ್ರಭುತ್ವವು ಮಹಾ ವಿಜಯ. ಅದು ಬಹುಕಾಲ ಇರುವ ಸುಖಕ್ಕೆ ಆಧಾರ.

10. ನಮ್ಮ ಸುಖದ ಬಗೆಗೆ ಎಚ್ಚರಿಕೆ ವಹಿಸುವುದೆಂಬುದು ಸುಖಿಗಳಾಗಲು ಅತ್ಯಂತ ಖಾತ್ರಿಯಾದ ಮಾರ್ಗ.

11. ನಮ್ಮ ದೇಹದ ಕಣ ಕಣಗಳಲ್ಲಿ ಶಾಂತಿಯನ್ನು ತರಬಲ್ಲವರಾದಾಗ ನಾವು ರೋಗ ಮುಕ್ತರಾಗುವೆವು.

12. ಸುಖವೂ ಸರಿಯಾದ ಆರೋಗ್ಯವೂ ಜಗತ್ತಿನಲ್ಲಿ ಇನ್ನೂ ಸಾಮಾನ್ಯ ಸಮಸ್ಥಿತಿಯೆನ್ನಿಸಿಲ್ಲ. ಅವುಗಳ ಹಗೆಗಳಿಂದ ಅವುಗಳನ್ನು ನಾವು ಬಹು ಎಚ್ಚರಿಕೆಯಿಂದ ಕಾಪಾಡಬೇಕು.

13. ದೇವರ ಮೇಲಿನ ನಮ್ಮ ನಂಬಿಗೆಯು ಹೊರ ಪರಿಸ್ಥಿತಿಗಳನ್ನು ಆಧರಿಸಿರಬಾರದು.

14. ದೇವರನ್ನು ಅರಿತುಕೊಳ್ಳಬೇಕಾದರೆ ನಾವು ಅವಕ್ಕಿಂತ ಇದು ಬೇರೆ ಎಂಬ ಭಾವವನ್ನಿಟ್ಟುಕೊಳ್ಳಬಾರದು.

15. ದೇವರನ್ನೇ ಧ್ಯಾನಿಸು: ಆಗ ದೇವರು ನಿನ್ನೊಡನಿರುವನು.

16. ದೇವರಿಗಾಗಿ ಕೆಲಸ ಮಾಡುವುದೆಂದರೆ ದೇಹದ ಮೂಲಕ ಪ್ರಾರ್ಥಿಸುವುದೆಂದರ್ಥ.

17. ನಾವು ನಿಷ್ಕೃಷ್ಟವಾದ ಆಧ್ಯಾತ್ಮಿಕ ಪ್ರಗತಿಯನ್ನು ಸಾಧಿಸಿದ ಮೇಲೆ ದೇವರ ಅದೃಶ್ಯ ಶತ್ರುಗಳು ಸೇಡು ತೀರಿಸಿಕೊಳ್ಳಲು ಯತ್ನಿಸುವುವು. ಆತ್ಮಕ್ಕೆ ಹಾನಿಯನ್ನುಂಟು ಮಾಡಲಾರದಾದಾಗ ಅವು ದೇಹಕ್ಕೆ ಹೊಡೆತ ಹಾಕುವುವು. ದೇವರ ಅನುಗ್ರಹ ನಮ್ಮ ಮೇಲಿರುವುದರಿಂದ ಅವುಗಳ ಪ್ರಯತ್ನಗಳೆಲ್ಲಾ ನಿಷ್ಫಲವಾಗಿ ಕೊನೆಗೆ ಅಪಜಯ ಹೊಂದುವುವು.

18. ದೇವರಲ್ಲಿ ನಾವಿಟ್ಟ ಶ್ರದ್ಧೆಗೂ ದೇವರ ಅನುಗ್ರಹ (ನಮಗಾಗಿ) ಕೆಲಸಮಾಡಿ ನೆರವೀಯುವುದಕ್ಕೂ ಆನುಪಾತಿಕ ಸಂಬಂಧವಿದೆ.

19. ಪರ್ವತಮಾರ್ಗವು ಯಾವಾಗಲೂ ಇಮ್ಮೊಗವುಳ್ಳದ್ದು — ಮೇಲ್ಮೊಗ ಮತ್ತು ಕೆಳಮೊಗ. ಅದೆಲ್ಲಾ ನಮ್ಮ ಹಿಂದೆ ನಾವೇನನ್ನಿಟ್ಟುಕೊಳ್ಳುವೆವೋ ಅದನ್ನವಲಂಬಿಸಿದೆ.

20. ಅಸ್ಪಷ್ಟವಾದ ಭೌತಿಕ ನಿಸರ್ಗದ ಮೇಲೆ ನಾವು ಪಡೆದ ಒಂದೊಂದು ಗೆಲುವೂ ಅದಕ್ಕೂ ಹೆಚ್ಚಿನ ಮುಂಬರುವ ವಿಜಯದ ಆಶ್ವಾಸನೆ.

21. ಒಂದು ಆಸೆಯನ್ನು ಪೂರಯಿಸುವುದಕ್ಕಿಂತ ಗೆಲ್ಲುವುದು ಹೆಚ್ಚು ಸಂತಸವನ್ನು ತರುವುದು.

22. ನಮ್ಮಲ್ಲಿರುವ ಪ್ರದರ್ಶನ ಶೀಲವನ್ನು ಪ್ರೋತ್ಸಾಹಿಸುವ ಎಲ್ಲವನ್ನೂ ತಪ್ಪಿಸಲು ನಾವು ಯಾವಾಗಲೂ ಬಹಳ ಜಾಗರೂಕರಾಗಿರೋಣ.

23. ನಮ್ಮ ದೋಷಗಳನ್ನು ನಾವು ಗುರುತಿಸುವುದು ಅತ್ಯುದಾತ್ತವಾದ ಧೀರತೆ.

24. ಇತರರು ನಮಗೆ ಮಾಡುವ ತಪ್ಪುಗಳನ್ನು ಅವಮಾನಗಳನ್ನು ಮೀರಿರುವುದು ನಮ್ಮನ್ನು ನಿಜವಾಗಿ ದೊಡ್ಡಸ್ತಿಕೆಗೇರಿಸುತ್ತದೆ

25. ಯಾವಾಗಲೂ ಸತ್ಯವನ್ನು ಹೇಳುವುದು ಔದಾತ್ಯದ ಅತ್ಯುನ್ನತ ಗುರುತು.

26. ಸದಭಿರುಚಿಯು ಕಲೆಯ ಕುಬೇರ ಪ್ರಭುತ್ವ.

27. ಜಗತ್ತಿನ ಅದ್ಭುತಗಳಿಗೆ ಕೊನೆಯಿಲ್ಲ. ನಮ್ಮ ಸಣ್ಣ ಅಹಂತ್ವದ ಇತಿಮಿತಿಗಳಿಂದ ನಾವು ಹೆಚ್ಚು ಹೆಚ್ಚು ಮುಕ್ತರಾಗುತ್ತ ಹೋದಹಾಗೆ ಈ ಅದ್ಭುತಗಳು ತಾವಾಗಿಯೇ ಹೆಚ್ಚು ಹೆಚ್ಚಾಗಿ ನಮ್ಮೆದುರು ಮೈದೋರುತ್ತಾ ಹೋಗುವುವು.

28. ಪ್ರತಿಯೊಂದು ಹೊಸ ಮುಂಬೆಳಗೂ ಹೊಸ ಪ್ರಗತಿಯ ಸಾಧ್ಯತೆಯನ್ನು ತರುತ್ತದೆ.

29. ಗಡಿಬಿಡಿಯಿಲ್ಲದೆ ನಾವು ಮುನ್ನಡೆಯುತ್ತೇವೆ. ಏಕೆಂದರೆ ನಮಗೆ ನಮ್ಮ ಭವಿಷ್ಯವು ಖಾತ್ರಿಯಾಗಿರುತ್ತದೆ.

30. ನಾವು ಮೆಚ್ಚಿಕೊಂಡದ್ದರಂತೆಯೇ (ಪ್ರೀತಿಸುವವರಂತೆಯೇ) ಆಗುವೆವು.

31. ನಾವು ಆಲೋಚಿಸುವ ವಸ್ತುಗಳಿಂದಲೇ ಯಾವಾಗಲೂ ನಾವು ಆವೃತವಾಗಿರುವೆವು.

32. ನಮ್ಮ ಚೇತನೆಯು (ಪ್ರಜ್ಞೆಯು) ಒಂದು ಚಿಕ್ಕ ಹಕ್ಕಿಯ ಹಾಗಿದೆ. ಅದು ತನ್ನ ರೆಕ್ಕೆಗಳನ್ನು ಬಳಸಲು ಕಲಿಯಬೇಕು.

33. ಹಗಲಿರುಳೂ ದೇವರು ಉಪಸ್ಥಿತನಾಗಿರುತ್ತಾನೆ. ಸುಮ್ಮನೆ ನಾವು ಅಂತರ್ಮುಖರಾದರೆ ಸಾಕು ; ನಮಗದು ಗೊತ್ತಾಗುವುದು.

34. ಪ್ರಾಮಾಣಿಕತೆಯಲ್ಲಿಯೇ ಜಯದ ನಿಶ್ಚಿತತೆಯಿದೆ. ಪ್ರಾಮಾಣಿಕತೆ. ಪ್ರಾಮಾಣಿಕತೆ ! ನಿನ್ನ ಉಪಸ್ಥಿತಿಯ ಪಾವಿತ್ರ್ಯವೆಷ್ಟು ಮಧುರ !

35. ಸರಳತೆಯಲ್ಲೊಂದು ಮಹಾಸೌಂದರ್ಯವಿದೆ.

36. ಕಾದಿರುವುದು ಹೇಗೆಂಬುದನ್ನು ತಿಳಿದಿರುವುದು ಕಾಲವನ್ನು ನಿನ್ನ ಕಡೆಗೆ ತಿರುಗಿಸಿಕೊಂಡ ಹಾಗೆ. ಸಹನೆಯಿಂದ ಯಾರಾದರೂ ಗುರಿಯನ್ನು ಮುಟ್ಟಿಯೇ ಮುಟ್ಟುತ್ತಾರೆ. ಸತತ ಪ್ರಯತ್ನವು ಎಲ್ಲ ವಿಘ್ನಗಳನ್ನು ದಾಟುವುದು.

37. ಕ್ಷಣಿಕ ಉತ್ತೇಜನಕ್ಕೊಳಗಾಗಿ ಏನನ್ನೂ ಮಾಡಹೋಗಕೂಡದು. ಕ್ಷಣಿಕ ಭಾವಪ್ರೇರಿತನು ಆತ್ಮಸಂಯಮವಿಲ್ಲದವನು. ಅವನ ಜೀವನ ಅಸ್ತವ್ಯಸ್ತ.

38. ಪೂರ್ಣತೆಯು ಪರಾಕಾಷ್ಠೆಯೂ ಅಲ್ಲ. ಪರಾಂತವೂ ಅಲ್ಲ. ಅದು ಸಮತೋಲ, ಸಮ ಶ್ರುತಿಕರಣ.

39. ಕೃತಜ್ಞತಾ ಶಕ್ತಿಯಿಂದ ಒಬ್ಬನ ಉಪಾತ್ತತೆ ಅಳಿಯಲ್ಪಡುತ್ತದೆ.

40. ಸಮಚಿತ್ತತೆಯು ಯಾರಿಗೂ ಎಂದೂ ಹಾನಿ ಮಾಡಿಲ್ಲ.

41. ಕೆಲಸಕ್ಕೆ ಬಾರದ ಶಬ್ದಗಳಿಂದ ಜಗತ್ತಿನ ಕಿವಿ ಕಿವುಡಾಗಿದೆ.

42. ದೇವರೇ, ಇರುವ ಹಾಗೂ ಆಗುವ ಎಲ್ಲವುಗಳ ಆಳದಲ್ಲಿ ನಿನ್ನ ದಿವ್ಯವೂ ಅಪರಿವರ್ತನೀಯವೂ ಆದ ಮುಗುಳ್ನಗೆಯಿದೆ.

43. ಸಹಿಸಿಕೋ, ಆಗ ನೀನು ಗೆಲ್ಲುವೆ. ದೇವರು ನಿನ್ನ ಬೆಂಬಲಕ್ಕಿದ್ದಾನೆ.

44. ಪ್ರೇಮವು ಆತ್ಯಂತಿಕ ವಿಜಯಿ.

45. ನೋಡಿದ್ದನ್ನು ಯಾ ಕೇಳಿದ್ದನ್ನು ಒಬ್ಬ ಪ್ರೀತಿಸನು. ಆಕೃತಿ ಮತ್ತು ಶಬ್ದಗಳ ಮೂಲಕ ಪ್ರತಿಯೊಬ್ಬನೂ ಪ್ರೀತಿಯನ್ನು ಪ್ರೀತಿಸುವನು. ದೇವರ ಪ್ರೀತಿಯೇ ಅತ್ಯಂತ ಪ್ರೀತ್ಯಾಸ್ಪದವೂ ಪೂರ್ಣವೂ ಆದ ಪ್ರೀತಿ.

47. ನಿತ್ಯಸತ್ಯ ಪ್ರೇಮಿಗಳನ್ನು ದೇವರು ಪ್ರೀತಿಸುತ್ತಾನೆ: ಅವನ ಶಕ್ತಿಯು ಅವರನ್ನು ಗೆಲ್ಲಿಸುತ್ತದೆ.

47. ಸಿಂಹಗಳು ನಿಜವಾಗಿಯೂ ಚೆನ್ನಾಗಿರುತ್ತವೆ. ನನ್ನ ಹತ್ತಿರ ಯಾವಾಗಲೂ ಒಂದಾದರೂ ಸಿಂಹವಿದ್ದೇ ಇರುತ್ತದೆ. ಆದರೆ ಆ ಸಿಂಹ ಭೌತಿಕವಾದುದಲ್ಲ. ಏಕೆಂದರೆ ಭೌತಿಕ ಸಿಂಹವನ್ನು ಕಂಡು ಜನರು ಬಹಳ ಹೆದರುವುದರಿಂದ ಎಲ್ಲಾ ಗಲಿಬಿಲಿಯಾಗಿಬಿಡುತ್ತದೆ.

48. ಪರಿಸ್ಥಿತಿ ಕೆಟ್ಟಷ್ಟೂ ದೇವರ ಪ್ರೀತಿ ಹೆಚ್ಚು ಹೆಚ್ಚಾಗುವುದು. ದೇವರನ್ನಷ್ಟೇ ಚಿಂತಿಸು, ಅವನನ್ನಷ್ಟೇ ಧ್ಯಾನಿಸು. ಅವನೊಡನಿರುವುದು ಎಲ್ಲ ದುಃಖಗಳಿಂದಾದ ನಷ್ಟವನ್ನೂ ತುಂಬಿಕೊಟ್ಟಂತೆನ್ನಿಸುವುದು. ಭೌತಿಕ ನಷ್ಟ ಕೂಡ ಭರ್ತಿಯಾದ ಅನುಭವ ನಿನಗೆ ಬರುವುದು.

49. ಸಾಧ್ಯವಾದ ಅತ್ಯುತ್ತಮ ಪರಿಸ್ಥಿತಿಯುಂಟಾಗುವುದು. ಇಡೀ ಜಗತ್ತು ತನ್ನ ಬಂಗಾರದಂಥ ಪರಿವರ್ತನದತ್ತ ಸಾಧ್ಯವಾದಷ್ಟು ಬೇಗ ಸಾಗುತ್ತಿದೆ.

50. ಒಂದು ಸಂಗತಿಯನ್ನು ನೀನು ತಿಳಿದುಕೊಂಡಿರಬೇಕು ಹಾಗೂ ಎಂದೂ ಮರೆಯದಿರಬೇಕು — ಅದೆಂದರೆ, ನಿಜವೂ ಪ್ರಾಮಾಣಿ

ಕವೂ ಆದ ಎಲ್ಲವೂ ಉಳಿಯುವುದು— ಬರಿ ಅಸತ್ಯವೂ ಅಪ್ರಾಮಾಣಿಕವೂ ಆದಂಥವು ಅಳಿಯುವುವು.

51. ನಾವು ಗೆದ್ದೇ ಗೆಲ್ಲುವೆವು, ಗೆಲ್ಲಲೇ ಬೇಕು — ಮತ್ತೆ ಮತ್ತೆ ಹೋರಾಡಬೇಕಾಗಿ ಬಂದರೂ ಸರಿಯೆ. ನಾನೆಂದೂ ನಿರುತ್ಸಾಹಿತೆಯಾಗಲಿಲ್ಲ— ನೀನೂ ಆಗಬೇಡ ಎಂದು ಹೇಳುತ್ತೇನೆ. ಏಕೆಂದರೆ, ದೇವರ ಅಂತ್ಯಜಯವು ಖಚಿತ.

52. ನನ್ನ ಯಾವ ಮಗುವೂ ಸೊನ್ನೆಯಾಗದು. ನನ್ನ ಮಕ್ಕಳಲ್ಲಿ ಪ್ರತಿಯೊಂದಕ್ಕೂ ಅದದರ ಸ್ಥಾನವಿದೆ, ಸಾಧಿಸಬೇಕಾದ ವಿಶಿಷ್ಟ ಧ್ಯೇಯವಿದೆ. ನಾನವುಗಳೆಲ್ಲವನ್ನೂ ಸಮಾನವಾಗಿ ಪ್ರೀತಿಸುತ್ತೇನೆ. ಅದದರ ಯೋಗಕ್ಷೇಮಕ್ಕೂ ಪ್ರಗತಿಗೂ ಅಗತ್ಯವಾದುದನ್ನು ನಾನು ಮಾಡುತ್ತೇನೆ. ಅವುಗಳಲ್ಲಿ ನನಗೆ ಪ್ರಾಥಮ್ಯವೂ ಇಲ್ಲ, ಪಕ್ಷಪಾತವೂ ಇಲ್ಲ. ಅವುಗಳಿಗೆ ಬೇಕಾದ ಯೋಜಿತಗಳು ಸುದೀರ್ಘಕಾಲದವು. ಕೂಡಲೇ ಅವನ್ನು ನಿಲ್ಲಿಸಲು ಸಾಧ್ಯವಾಗದಿರಬಹುದು. ಆದರೆ ಒಂದಲ್ಲ ಒಂದು ದಿನ ಅವು ನಿಲ್ಲಲೇ ಬೇಕು. ಈ ನಡುವೆ ಅವುಗಳನ್ನು ಚಿಕ್ಕವುಗಳನ್ನಾಗಿಯೂ ಕಡಿಮೆ ನೋಯಿಸುವಂಥವುಗಳನ್ನಾಗಿಯೂ ಮಾಡಬಹುದು. ಹಾಗೆ ಮಾಡಲು ನೀವು ನನ್ನ ಆಶ್ವಾಸನೆಯಲ್ಲಿ ಶ್ರದ್ಧೆಯಿಡಬೇಕು. ಯಾವಾಗಲೂ ಲಭ್ಯವಾಗಿರುವ ನನ್ನ ನೆರವನ್ನು ಬೇಡಬೇಕು.

53. ಜಗತ್ತು ಇರುವ ಹಾಗೆ ಇದೆ — ಸಣ್ಣತನ, ಅಸ್ವಸ್ಥತೆಗಳಿಂದ ತುಂಬಿಹೋಗಿದೆ. ದೇವರೊಬ್ಬನೇ ದೀಪ್ತಿ. ದೇವರೊಬ್ಬನೇ ವ್ಯಾಪ್ತಿ— ಅವನೇ ನಿತ್ಯ ಸತ್ಯ, ನಿಜಕರುಣೆ. ಆದುದರಿಂದ ದೇವರನ್ನು ಶರಣುಹೋಗು. ಜಗತ್ತಿನ ಕ್ಷುದ್ರತೆಯನ್ನು ಗಮನಿಸಬೇಡ. ಅದು ನಿನ್ನ ಶಾಂತಿಯನ್ನು ಕದಡದಂತೆ ನೋಡಿಕೋ. ಅಕ್ಷೋಭ-ಶಾಂತಿಗಳಿಂದ ಕೂಡಿದ ದೇವತಾ ಸಾನ್ನಿಧ್ಯವನ್ನು ಮಾತ್ರ ಇಟ್ಟುಕೋ.

54. ಹಗೆಯನ್ನು ಬಿಡಬೇಡ. ವಿರುದ್ಧ ಶಕ್ತಿಗಳೇ ಹಗೆಗಳು. ಅವನ್ನು ತಡೆ. ಸಮರದಲ್ಲಿ ನಾನು ನಿನ್ನೊಡನಿರುವೆ. ನಾವು ಗೆಲ್ಲಲೇ ಬೇಕು.

55. ದೇವರು ಹೇಗೆ ಒಬ್ಬನೇ ಒಬ್ಬನೊ ಸತ್ಯವೂ ಹಾಗೇ ಒಂದೇ ಒಂದು.

56. ನನ್ನ ಕೃಪೆಯ ನೆರಳಿನಲ್ಲಿರು. ಅದು ನಿನಗೆದುರಾಗುವ ಎಲ್ಲವುದರಿಂದಲೂ ನಿನ್ನನ್ನು ಉಳಿಸುತ್ತದೆ. ನನ್ನ ನೆರವಿಗಾಗಿ ನಿನ್ನ ಎದೆಯನ್ನು ತೆರೆದಿಟ್ಟುಕೋ— ಅದೆಂದೂ ಬಾರದಿರದು.

57. ಅರಮ್ಯ ವಿಚಾರ ಹಾಗೂ ಕೀಳು ಭಾವನೆಗಳು ಮನಸನ್ನು ಹೊಲಸುಗೊಳಿಸಿ ನನ್ನ ಕಾಪಿನ ಹೊರಗೆ ಅವನ್ನೊಯ್ಯದಂತೆ ನೋಡಿಕೋ.

58. ಒಂದು ಶಬ್ದವನ್ನು ಬರೆಯುವುದೇನೂ ದೊಡ್ಡದಲ್ಲ. ನಾನೀಯುವ ನಿಜವಾದ ಸಹಾಯವನ್ನು ನಾನು ಮೌನವಾಗಿ, ಉಪಸ್ಥಿತಿಯಾಗಿಯೋ ಅನುಪಸ್ಥಿತಿಯಾಗಿಯೋ, ಈಯುತ್ತಿದ್ದೇನೆ. ಆ ಕೆಲಸವು— ಜನರಿಗೆ ಗೊತ್ತಾಗಿರಲಿ, ಇಲ್ಲದಿರಲಿ— ಅವರು ಮನ್ನಿಸಲಿ, ಮನ್ನಿಸದಿರಲಿ— ಅತ್ಯಂತ ಪರಿಣಾಮಕಾರಿ.

59. ರೋಗ. ಮುಪ್ಪು. ಸಾವು. ನಿಸರ್ಗ (ಪ್ರಕೃತಿ)ದ ಯೋಗಾಭ್ಯಾಸದಿಂದ ಸಂಪೂರ್ಣವಾಗಿ ಬದಲಾಗಬಲ್ಲದು. ದೈವಾನುಗ್ರಹಕ್ಕೆ ಯಾವುದೂ ಅಸಾಧ್ಯವಲ್ಲ. ಸಂಪೂರ್ಣ ಅಸಾಧ್ಯವೆನ್ನಿಸಿದ್ದೆಲ್ಲವನ್ನೂ ಸಾಧ್ಯಗೊಳಿಸುವುದಲ್ಲದೆ, ಮಾಡಿ ಮುಗಿಸುವ ಮೂಲಕ ಸಂಪೂರ್ಣವಾಗಿ ಅದು ಒಬ್ಬನ ಇರವನ್ನು ಬದಲಾಯಿಸಬಲ್ಲದು. ಅನುಗ್ರಹವಲ್ಲ ಬದಲಾವಣೆಗಾಗಿ ಕೆಲಸ ಮಾಡುತ್ತಿರುತ್ತದೆ.

60. ಅತಿ ಹೆಚ್ಚಾದ ದೈಹಿಕ ನೋವು ಕೂಡ ಅಕ್ಷುಬ್ಧತೆಯಿಂದ ಶಾಂತವಾಗಿ ಎದುರಿಸಿದರೆ ಕಡಿಮೆಯಾಗುತ್ತಾ ಹೋಗಿ ಸಹ್ಯತೆಗಿಳಿಯುವುದು- ಮರ್ಮ ಭೇದಕ ವೇದನೆಯನ್ನೂ ನಾವು ದೇವರ ಮೇಲೆ ಭಾರಹಾಕಬಹುದು ಮತ್ತು ದೇವರು ನಮ್ಮ ವೇದನೆಯನ್ನು ಸಂತೋಷವನ್ನಾಗಿ ಪರಿವರ್ತಿಸಬಲ್ಲ.

61. ನಿನ್ನೆದೆಯ ಬಾಗಿಲನ್ನು ಪ್ರೀತಿಯ ಮಾಧುರ್ಯ ಬರುವಾಗ ಮುಚ್ಚಬೇಡ. ಅದೊಂದೇ ದುಃಖವೆಲ್ಲವನ್ನೂ ಪರಿಹರಿಸಬಲ್ಲದು ಮತ್ತು ಅವರ ಜಾಗದಲ್ಲಿ ಸತತವೂ ಶಾಂತವೂ ಆದ ಸುಖವನ್ನು ತಂದಿಡಬಲ್ಲದು

62. ಹೆದರಬೇಡ— ವಿರುದ್ಧ ಶಕ್ತಿಗಳು ಬರಲು ಹೆದರಿಕೆ ನೆರವೀಯುತ್ತದೆ. ಶಂಕೆ ಪಡಬೇಡ— ಶಂಕೆ ಅವು ಬರಲವಕಾಶ ಕೊಡುತ್ತದೆ. ನೀನು ಹಾಗೆ ಹೀಗೆ ಎಂದು ಪರೀಕ್ಷಿಸಬೇಡ. ಪರೀಕ್ಷೆ ಅವನ್ನು ಬರಗೊಡುತ್ತವೆ. ನನ್ನನ್ನೇ ಧ್ಯಾನಿಸು ಮತ್ತು ಬರಲಿರುವ ಜಯದ ಮೇಲೆ ಮನಸ್ಸಿಡು. ಅವನ್ನು ಯಾವಾಗಲೂ ಬೆನ್ನಟ್ಟಿ ಹೋಗಲು ಅದು ಬಲಿಷ್ಠ ಆಯುಧ. ಧೈರ್ಯ-ಶ್ರದ್ಧೆಗಳನ್ನಿಡು; ನಾನು ನಿನ್ನೊಡನಿರುವೆನು.

61. ಧೈರ್ಯ. ಪ್ರತ್ಯಾಶೆ. ಶ್ರದ್ಧೆ! ಸುರಂಗದ ತುದಿಯಲ್ಲಿ ಬೆಳಕಿದೆ; ಅಗ್ನಿ ಪರೀಕ್ಷೆಯ ನಂತರ ಗೆಲುವು.

62. ದೇವರ ಬಗ್ಗೆ ಲಕ್ಷ್ಯ ಹಾಕಿದ ಕೂಡಲೇ ನಿನಗೆ ಕಾಹಿಲಿ ಬರುತ್ತದೆ— ಮನುಷ್ಯನ ಪ್ರಕೃತಿಯೇ ಹೀಗೆ. ನಿನ್ನ ಹೃದಯ ಮತ್ತು ಭಾವನೆಗಳತ್ತ ನೀನು ಲಕ್ಷ್ಯ ಹಾಕಿದಾಗ ನಿನಗೆ ಅಸುಖವಾಗುತ್ತದೆ. ಮನಸ್ಸಿನತ್ತ ಲಕ್ಷ್ಯ ಹಾಕಿದಾಗ ಗಲಿಬಿಲಿಯುಂಟಾಗುತ್ತದೆ.

63. ಅತಿದುರ್ಬಲ ದೌರ್ಬಲ್ಯದ ಹಿಂದೆ ದೈವಶಕ್ತಿಯ ಪರಮ ಸಾಮರ್ಥ್ಯವಿರುತ್ತದೆ.-

64. ನನ್ನ ಹೆಸರಿನಿಂದ ಭಯವನ್ನು ದೂರ ಕಳಿಸು. ಭಯ ಅತ್ಯಂತ ಕೆಟ್ಟದ್ದು. ನನ್ನ ಮಗು ಎಂದೂ ಭಯ ಪಡಬಾರದು.

65. ಕಷ್ಟಗಳೂ ಅನಾಹುತಗಳೂ ಸತ್ಯ ಪರೀಕ್ಷೆಗಳು; ಅದನ್ನು ದೇವರ ಅನುಗ್ರಹವೆಂದು ತಿಳಿದುಕೊಳ್ಳಬೇಕು— ಆಗ ಅವು ಹಾಗಾಗುವುವು ಮತ್ತು ಬೇಗನೆ ನಿನ್ನನ್ನು ನಿನ್ನ ಗುರಿಯತ್ತ ಒಯ್ಯುವುವು.

66. ಜಾತಕಕ್ಕಿಂತ ಬಲಿಷ್ಠನಾಗಲು ನೀನು ದೇವರನ್ನು ಬಿಡಲೊಲ್ಲೆಯಾ ? ಮಹಾದೇವನಿಗೆ ಯಾವ ಜಾತಕವೂ ಅನಿವಾರ್ಯ ಪರಿಣಾಮಕತೆಯುಳ್ಳದ್ದಲ್ಲ. ದೇವರ ಮಡಿಲಲ್ಲಿ ನಂಬಿಗೆಯಿಡು; ಆಗ ಎಲ್ಲವೂ ಬದಲಾಗಬಲ್ಲದು, ಬದಲಾಗುವುದು.

|| ಓಂ ತತ್ ಸತ್ ||

ಭಕ್ತಕೋಟಿಗೀ ಜಗನ್ಮಾತೆ -ಕೊ
ಟ್ಟಾಶ್ವಾಸನಗಳಿಗೆ
ಯುಕ್ತ ಪಾತ್ರನೋಽಗಸಾದಾನೇ
ಬಾಶೆಯುಳ್ಳ ನನಗೆ
ಶಕ್ತಿ ಕೊಡಲಿ ಸಚ್ಚಿದಾನಂದಸತಿ
ಶಾಂತಿಸ್ಥಾಪನೆಯು
ರಿಕ್ತಪುಣ್ಯರಳು ಬಾಳಿನಲ್ಲಿ ಈ
ನಾಡಿನ ಮನೆಮನೆಯ !

— ಬಿ. ಹೆಚ್. ಶ್ರೀಧರ
(ಅನುವಾದಕಾರ)

Original : "ON THE MOTHER DIVINE"
by PASUPATI

First Edition : April 1968

Published by Sri Pharibhusan Nath,
Matri Mandir, Prafullanagar,
P. O. Kalyangarh, 24 Paraganas,
West Bengal and Printed by
M. K. Mukerji at Temple Press,
2, Nagaratna Lane,
CALCUTTA-4